

N77

# ಹರಿದ ಹೊನಲು

(ಸಾಮಾಜಿಕ ಕಾದಂಬರಿ)

ಉಷಾ ನವರತ್ನರಾವ್

*

ರಾಜಲಕ್ಷ್ಮೀ ಪ್ರಕಾಶನ
ಬಳೇಪೇಟೆ ಚಾಕ · ಬೆಂಗಳೂರು 53

HARIDA HONALU—A Social Novel by Smt. Usha Navaratna Ram, I Edn.: Dec. 1977; Published by Rajalakshmi Prakashana, Balepet Square, Bangalore 53, All rights reseved by the Author; Price: Rs. 4-00.-

ಪ್ರಥಮ ಮುದ್ರಣ : ಡಿಸೆಂಬರ್ 1977
ಹಕ್ಕುಗಳು : ಲೇಖಕಿಯದು

ಕಾದಂಬರಿ

ಅಧಿಕೃತ ಮಾರಾಟಗಾರರು :
ಗೀತಾ ಏಜನ್ಸೀಸ್
ಸಗಟು ಪುಸ್ತಕ ವ್ಯಾಪಾರಿಗಳು
ಬಳೇಪೇಟೆ ಚೌಕ, ಬೆಂಗಳೂರು-560053
(ದೂರವಾಣಿ : 24226)

ಬೆಲೆ: ರೂ. 4·00

ಕೆ. ಎಮ್. ಹೆಚ್. ಎಸ್. ಎಸ್. ಪ್ರಿಂಟರ್ಸ್
178, ನಾಲ್ಕನೇ ಮುಖ್ಯ ರಸ್ತೆ, ಚಾಮರಾಜಪೇಟೆ, ಬೆಂಗಳೂರು—560018
(ದೂರವಾಣಿ: 63123)

# ಮುನ್ನುಡಿ

"ಹರಿದ ಹೊನಲು" ಮಿನಿ ಕಾದಂಬರಿ ರೂಪದಲ್ಲಿ "ಕಾದಂಬರಿ" ಮಾಸಪತ್ರಿಕೆಯಲ್ಲಿ ಹರಿದು ಬಂದಾಗ ಅಸಂಖ್ಯಾತ ಓದುಗರು ತೋರಿದ ಅಭಿಮಾನ–ಮೆಚ್ಚಿಗೆಗಳಿಗೆ ನಾನು ಚಿರ ಋಣಿ.

ಇದೀಗ ಇದನ್ನು ಪುಸ್ತಕವಾಗಿ ಹೊರತರುತ್ತಿರುವ ರಾಜಲಕ್ಷ್ಮೀ ಪ್ರಕಾಶನದವರಿಗೂ, ಅಂದವಾಗಿ ಮುದ್ರಿಸಿಕೊಟ್ಟ ಕೆ. ಎಂ. ಹೆಚ್. ಎಸ್. ಎಸ್. ಪ್ರಿಂಟರ್ಸ್, ಚಾಮರಾಜಪೇಟೆ, ಬೆಂಗಳೂರು ಇದರ ವ್ಯವಸ್ಥಾಪಕರಾದ ಶ್ರೀಮತಿ ಬಿ. ಎಸ್. ಶಾಂತಾಬಾಯಿ ಅವರಿಗೂ, ಮುಖಚಿತ್ರವನ್ನು ಸೊಗಸಾಗಿ ರೂಪಿಸಿದ ಶ್ರೀ ಹುಬ್ಳೀಕರ್ ಅವರಿಗೂ, ಗೀತಾ ಏಜನ್ಸೀಸ್‌ನ ಮಾಲಿಕರಾದ ಶ್ರೀ ಕೆ. ರಾಮಚಂದ್ರಯ್ಯನವರಿಗೂ ನನ್ನ ವಂದನೆಗಳು.

ಬೆಂಗೂಳೂರು, ಉಷಾ ನವರತ್ನರಾಮ್

15-12-77

# ಹರಿದ ಹೊನಲು

# ೧

"ಕಾವೇರಮ್ಮನೋರೇ....ಇದ್ದೀರಾ ?" ಹೊರಲಾರದೆ ಮೈ ಭಾರವನ್ನೆತ್ತಿಕೊಂಡು ಒಂದೊಂದೇ ಮೆಟ್ಟಿಲುಗಳನ್ನು ಪ್ರಯಾಸದಿಂದ ಏರುತ್ತಾ ಬಂದಾಗ ವರಾಂಡದಲ್ಲಿ ಮಣೆಯ ಮೇಲೆ ಅರಳನ್ನಾರಿಸುತ್ತಿದ್ದ ಕಾವೇರಮ್ಮ ಧ್ವನಿಯ ಗುರುತು ಹಿಡಿದು ತಲೆಯೆತ್ತದೆ ಕೂಗಿದರು.

"ಬನ್ನಿ ಮಣಿಯಮ್ಮ....ಈಚೀಚೆಗೆ ಬಹಳ ಅಪರೂಪ ಆಗೋದ್ರೀ....!"

ಮೆಟ್ಟಿಲೇರಿ ಬಂದ ಆಯಾಸದಿಂದ ಉಬ್ಬಸಪಡುತ್ತಾ ಮಣಿಯಮ್ಮನ ಮುಂದೆ ಉಸ್ಸೆಂದು ಕುಳಿತರು.

"ಶ್ರೀರಾಮಾ, ಭಗವಂತ....ಸೀತಾಪತಿ" ನಿಟ್ಟುಸಿರಿಟ್ಟರು.

ಅವರ ಸ್ಥೂಲಕಾಯದ ಆಯಾಸ ತಗ್ಗುವವರೆಗೂ ಕಾವೇರಮ್ಮ ತಮ್ಮ ಕೆಲಸದಲ್ಲೇ ಮಗ್ನರಾಗಿದ್ದರು. ಮಣಿಯಮ್ಮ ಮನೆಗೆ ಬರಬೇಕಾದರೆ ಬಲವಾದ ಕಾರಣವಿರಲೇಬೇಕೆಂದು ಅವರಿಗೆ ಅರಿವಾಗಿತ್ತು.

ಮಣಿಯಮ್ಮ ಸೆರಗಿನಿಂದ ಹಣೆ, ಮುಖ, ಕತ್ತು ಒರೆಸಿಕೊಂಡರು. "ಹಾಳು ಬಿಸಿಲೂಂದ್ರೆ ಬಿಸಿಲು, ಬೆಳಿಗ್ಗೆ ಬರೋಣಾಂದ್ರೆ ಹಾಳು ಮನೆಕೆಲ್ಸ— ನಿಮ್ಮನ್ನ ನೋಡ್ಲೇಬೇಕೂಂತ ಊಟದ ಶಾಸ್ತ್ರ ಮುಗೀತ್ಲೂ ಬಂದ್ಬಿಟ್ಟೆ." ಮನೆಯ ಸುತ್ತಲೂ ನಿರುಕಿಸಿದರು. "ಮನೇಲಿ ಯಾರೂ ಇಲ್ವೇ ?"

ಆರಿಸಿದ ಅರಳನ್ನು ಮೊರಕ್ಕೆ ತುಂಬಿ ಕಾವೇರಮ್ಮ ಗೋಡೆಗೊರಗಿ ಕಾಲು ಚಾಚಿಕೊಂಡು ಕುಳಿತರು.

"ಇಷ್ಟೊತ್ನಲ್ಲಿ ಯಾರಿರ್ತಾರೆ ? ನಮ್ಮ ವಿಶ್ವ ಆಫೀಸ್ಗೆ ಹೊರಟು ಹೋಗ್ತಾನೆ. ಇವರು ಶೆಟ್ಟರ ಅಂಗಡೀಲಿ ಲೆಕ್ಕ ಬರ್ಯೋಕೆ ಹೊರಟು

ಹೋಗ್ತಾರೆ. ಇನ್ನು ಇರೋಳು ನಿರ್ಮಲ....ಅವಳು ಹೊಲಿಗೆ ಕ್ಲಾಸಿಗೆ ಹೊರಟು ಹೋಗ್ತಾಳೆ, ಅಂದ್ಹಾಗೇ ಏನ್ಸಮಾಚಾರ–ಬಹಳ ದಿನಗಳ ಮೇಲೆ ಬರ್ತಾ ಇದ್ದೀರಿ ?"

"ಏನಿಲ್ಲಾ....ಹೀಗೆ....ಮಾತಾಡ್ಸಿಕೊಂಡು ಹೋಗೋಣಾಂತ ಬಂದೆ-ಅಂದ್ಹಾಗೆ ನಿಮ್ಮ ನಿರ್ಮಲಂಗೆ ಇನ್ನೂ ಯಾವ್ದೂ ಸರಿಯಾದ ಕಡೆ ಗೊತ್ತಾಗಿಲ್ವ ?"

ಕಾವೇರಮ್ಮನ ಮುಖ ವಿವರ್ಣವಾಯಿತು. "ಏನು ಮದ್ವೇನೊ ಏನು ಮುಂಜೀನೋ....ಯಾಕೊ ಬೇಜಾರೂರೀ....ನಾನು ಹುಡ್ಕೋ ತಂಟೆಗೇ ಹೋಗಿಲ್ಲ. ಇವರೂ ಪ್ರಪಂಚದ ರೀತಿ ನೋಡಿ ಬೇಜಾರಾಗಿ ಹೋಗಿದೆ...."

"ಹಾಗಂದ್ರೇ ಹೇಗ್ರೀ ಕಾವೇರಮ್ಮ, ವಯಸ್ಸಿಗೆ ಬಂದ ಹುಡುಗೀನ ಎಷ್ಟು ದಿನಾಂತ ಇಟ್ಕೊಂಡಿರ್ತೀರಿ ? ಇವೆಲ್ಲಾ ಸೆರಗ್ನಲ್ಲಿ ಕೆಂಡ ಮುಂಚಿಟ್ಕೊಳ್ಳೋ ಸಮಾಚಾರ, ಇಬ್ಬರು ಹೆಣ್ಣು ಮಕ್ಳು ಹಾಗಾದ್ರೂಂತ ಇವ್ರೂ ಹಾಗೇ ಆಗುತ್ತೇನೋ ? ಎಲ್ಲಾ ಅವರವರ ಹಣೆಬರಹ ಅಷ್ಟೆ."

ಕಾವೇರಮ್ಮ ಎದ್ದು ನಿಂತರು. "ಒಂದ್ನಿಮ್ಷ ಇರಿ ಮಣಿಯಮ್ಮ. ಬಿಸಿಲಲ್ಲಿ ಬಂದಿದ್ದೀರಿ, ತಣ್ಣಗೆ ನಿಂಬೆಹಣ್ಣಿನ ಪಾನಕ ಮಾಡಿ ತರ್ತೀನಿ." ಒಳಗೆ ನಡೆದಾಗ ಮಣಿಯಮ್ಮ ಸೆರಗಿನಲ್ಲೇ ಗಾಳಿ ಹಾಕಿಕೊಳ್ಳುತ್ತಾ ಕುಳಿತರು.

ಪಾಪ ! ಕಾವೇರಮ್ಮನಿಗೆ ಹಾಗೆನಿಸಿದುದು ತಪ್ಪೇನಿಲ್ಲ. ಮೊದಲ ಮಗಳಿಗೆ ಬೇಕಾದಷ್ಟು ಖರ್ಚು ಮಾಡಿ ಮದುವೆ ಮಾಡಿದ್ದರು. ಮಂಗಳ ತಾಯಿಗೆ ಮೊದಲ ಮಗಳಾಗಿ ಮನೆಗೆ ಮಂಗಳಾಂಗಿಯಾಗಿ ಬೆಳೆದವಳು, ಅತ್ತೆ ಮನೆ ಸೇರಿದ ಮೇಲಾಯಿತು, ಅತ್ತೆಯ ಮನೆಯಲ್ಲಿ ಐಕ್ಯವಾಗಿಹೋಗಿದ್ದಳು. ಅಳಿಯ ಕೇಳಿದ ಸ್ಕೂಟರಿನ ಹಣ ಕೊಡಲಿಲ್ಲವೆಂಬ ಕಾರಣದಿಂದ ಮಂಗಳೆಯನ್ನು ತೌರಿಗೆ ದೂರವಾಗಿಟ್ಟಿದ್ದರು. ಅಪ್ಪಿ ತಪ್ಪಿ ತೌರಿಗಾಗಿ ಮಂಗಳ ಹಂಬಲಿಸಿದಾಗ ದೂರ್ವಾಸ ಮುನಿಯಂತಿದ್ದ ಮಾವ ಗುಡುಗುತ್ತಿದ್ದರು : "ಅಲ್ಲಿಗೇನಾದರೂ ಹೋದರೆ ಮತ್ತೆ ಬರಬೇಡಾ" ಮಂಗಳೆ ತೌರಿನ ಹಂಬಲ ತೊರೆದು ಅತ್ತೆಮನೆಯ ತೊತ್ತಾಗಿ ಹೋಗಿದ್ದಳು. ಕಾವೇರಮ್ಮನ ಪತಿ ರಂಗನಾಥಯ್ಯನವರು ಮಗಳ ಮೇಲಿನ ಮಮತೆಯಿಂದ ಲಗ್ನವಾಗಿ ಎರಡು ವರ್ಷಗಳ ಮೇಲೆ ಹೋದಾಗ ಬೀಗರ ಕೈಯಲ್ಲಿ ಛೀಮಾರಿ ಹಾಕಿಸಿಕೊಂಡು

ಹಿಂತಿರುಗಿ ಬಂದಿದ್ದರು. ಹೊಸದಾಗಿ ಹುಟ್ಟಿದ ಮೊಮ್ಮಗನ ಮುಖವನ್ನು ನೋಡಲಾಗಿರಲಿಲ್ಲ, "ಸಧ್ಯ! ಅತ್ತೆ ಮನೆಯಲ್ಲಿ ಗಂಡನ ಜೊತೆ ಇದ್ದಾಳಲ್ಲಾ ಸಾಕು. ಎಲ್ಲೋ ಅಂತೂ ಗಂಡ ಹೆಂಡ್ತಿ ಸುಖವಾಗಿದ್ರೆ ಸಾಕು. ನಮಗೆ ಬೇಕಾಗಿರೋದು ಅಷ್ಟೆ," ಎಂದು ಎಲ್ಲರ ಮುಂದೆ ಹೇಳಿಕೊಂಡರೂ ಮನಸ್ಸಿಗೆ ಆದ ಆಘಾತ ಆಳವಾಗಿತ್ತು.

ಮೊದಲನೆಯ ಮಗಳ ಬಾಳು ಹಾಗಾಯಿತೆಂದು ಎರಡನೆಯ ಮಗಳು ಶ್ಯಾಮಲಳ ಮದುವೆ ಕೊಂಚ ತಡವಾಗಿ ಮಾಡಿ ಅತ್ತೆ, ಮಾವ, ಮಗ ಮೂವರೇ ಇದ್ದ ಸಂಸಾರಕ್ಕೆ ಮನೆತುಂಬಿಸಿಕೊಟ್ಟು ನಿರಾಳವಾಗಿ ಉಸಿರಾಡಿದ್ದರು. ಅತ್ತೆ, ಮಾವ, ಗಂಡನ ಕಣ್ಣೊಂಬೆಯಾಗಿದ್ದ ಶ್ಯಾಮಲೆಯ ಬದುಕು ಕಾವೇರಮ್ಮನಿಗೆ ಮೊದಲ ಮಗಳ ಕಹಿನೆನಪನ್ನು ಕೊಂಚ ಮಾಗಿಸಿತು. ಆದರೆ ಬಹಳ ದಿನಗಳ ಕಾಲ ಆ ನಲಿವು ಉಳಿಯಲಿಲ್ಲ. ಮೊದಲ ಹೆರಿಗೆಗೆ ತವರಿಗೆ ಬರುವ ಮುನ್ನವೇ ವೈಯಿಳಿದು, ಅದೇ ದೊಡ್ಡದಾಗಿ ಆಸ್ಪತ್ರೆಯಲ್ಲೇ ಅತ್ತೆ ಮಾವ, ಗಂಡ ಅವರೆಲ್ಲರೆದುರಿಗೆ ಅಸುನೀಗಿದ್ದಳು. ಅವಳನ್ನು ವಧುವಿನಂತೆ ನೋಡಿದ್ದ ಕಾವೇರಮ್ಮ ಅವಳ ಕಳೇಬರ ಕಂಡು ಸಂಕಟದಿಂದ ನರಳಿದ್ದರು. ಶ್ಯಾಮಲ ಗತಿಸಿದ ಒಂದು ವರ್ಷ ಮುಗಿದ ಮೇಲೆ ಅವಳ ಗಂಡನಿಗೆ ಮರುಮದುವೆಯಾಗಿತ್ತು.

ಇನ್ನು ಮೂರನೆಯವನಾದ ವಿಶ್ವನಾಥ ತನ್ನ ಅಕ್ಕಂದಿರ ಬದುಕಿನ ಕಹಿ ಕಂಡ ಗಂಭೀರ ವ್ಯಕ್ತಿ. ತನ್ನ ತಂಗಿ ನಿರ್ಮಲಳನ್ನು ಸುಖ ಸಂಸಾರಕ್ಕೆ ಸೇರಿಸುವತನಕ ಮದುವೆಯಾಗೆನೆಂದು ಹಟಹಿಡಿದು ಕುಳಿತಿದ್ದ. ನಿರ್ಮಲ ಓದಿನಲ್ಲೇ ಮಗ್ನಳಾಗಿದ್ದರಿಂದ ತನ್ನ ಮನೆಯ ವಾತಾವರಣದ ಬಿಸಿ ಅಷ್ಟಾಗಿ ತಟ್ಟಿರಲಿಲ್ಲ. ಕಾಲೇಜು ಓದು ಮುಗಿದುಹೋದರೂ ಮಗಳನ್ನು ಮುಚ್ಚಟೆಯಾಗಿ ಮನೆಯಲ್ಲೇ ಇರಿಸಿಕೊಂಡು ಕಣ್ಣಲ್ಲಿ ಕಣ್ಣಾಗಿ ನೋಡಿಕೊಳ್ಳುತ್ತಿದ್ದರು.

ನಿರ್ಮಲ, ಮಂಗಳೆ, ಶ್ಯಾಮಲರಷ್ಟು ಬಿಳುಪಿನ ಚೆಲುವೆಯಲ್ಲದಿದ್ದರೂ ಮುಖದಲ್ಲಿ ಏನೋ ಆಕರ್ಷಣೆಯಿತ್ತು. ನಕ್ಕರೆ ಕಣ್ಣಿನ ಬೆಳಕು ಇಮ್ಮಡಿಯಾಗುತ್ತಿತ್ತು. ಮಾತನಾಡಿದರೆ ಮತ್ತೆ ಕೇಳುವ ಹಂಬಲವಾಗುತ್ತಿತ್ತು. ಮನೆಯಲ್ಲಿ ಓಡಾಡುತ್ತಿದ್ದರೆ ಮತ್ತೆ ಮತ್ತೆ ನೋಡುವ ಬಯಕೆಯಾಗುತ್ತಿತ್ತು. ಎಣ್ಣೆಗೆಂಪಿನ ನಿರ್ಮಲ ತುಂಬು ಯೌವನದ ಆಕರ್ಷಕ ತರುಣಿಯಾಗಿದ್ದಳು.

ಮದುವೆ ಎಂದರೆ ಕಾವೇರಮ್ಮ ರಂಗನಾಥಯ್ಯ ಹಿಂಜರಿಯುತ್ತಿದ್ದರು. ಎರಡು ಬಾರಿ ಕೈಸುಟ್ಟುಕೊಂಡ ಅವರಿಗೆ ನಿರ್ಮಲಳ ಮದುವೆಯ ವಿಷಯ ಬೇಡ ವಾಗಿತ್ತು.

"ತೊಗೊಳ್ಳಿ ಮಣಿಯಮ್ಮ, ಸಕ್ರೆ ಬೇಕಾದ್ರೆ ಇನ್ನೊಂದು ಚೂರು ಹಾಕ್ತೀನಿ." ಕಾವೇರಮ್ಮ ಗಾಜಿನ ಲೋಟವಲ್ಲಿ ನಿಂಬೆಯ ಪಾನಕ ಕೈಗಿತ್ತಾಗ ಮಣಿಯಮ್ಮ ತಮ್ಮ ಕಾರ್ಯಕ್ಕೆ ಪೀಠಿಕೆ ಹಾಕಲು ಹವಣಿಸಿದರು.

"ಲಲಿತಮ್ಮನ ಮಗಳು ರೇಖಾಗೆ ಮದ್ವೆ ಗೊತ್ತಾಯ್ತು. ನಾನೇ ಸಂಬಂಧ ತಿಳಿಸಿದ್ದು. ರಾವ್ ಸಾಹೇಬ್ರ ಮನೆಯ ಸುಧಾಗೆ ನಾನೆಂತಹ ಸಂಬಂಧ ತೋರ್ಸಿದ್ದೀನಿ ಗೊತ್ತಾ ?...." ಪಾನಕ ಹೀರಿ ಖಾಲಿಯಾದ ಗಾಜಿನ ಲೋಟವನ್ನು ಕೆಳಗಿಟ್ಟರು. "ನಿಮಗೊಂದು ಮಾತು ತಿಳಿಸಲು ಬಂದೆ. ನಮ್ಮ ಗುಬ್ಬೂರು ಮಂಜುನಾಥಯ್ಯ ಗೊತ್ತಲ್ಲಾ....ಅದೇ ಅಮಲ್ದಾರ ರಾಗಿದ್ರಲ್ಲಾ ಅವರ ತಮ್ಮ ಅವರ ಹೆಂಡ್ತಿ ಕಡೆ ಸಂಬಂಧ ಅಂತ....ಹುಡುಗ ಎಂ. ಇ., ಮಾಡಿದ್ದಾನಂತೆ. ಬೆಂಗಳೂರಲ್ಲಿ ಒಳ್ಳೆ ಕೆಲಸದಲ್ಲಿದ್ದಾನಂತೆ. ತಂದೆ–ತಾಯಿ ಇಲ್ಲ, ತಮ್ಮಂದಿರು, ಒಬ್ಬ ಅಣ್ಣ ಇಷ್ಟೇ ಜನಾಂತೆ. ತಲೇ ಮೇಲೆ ತುಳಸಿ ದಳ ಇಟ್ಟು ಧಾರೆಯೆರೆದು ಕೊಟ್ರೆ ಸಾಕಂತೆ. ಅವರಿಗೆ ಹುಡುಗಿ ಓದಿರ್ಬೇಕೂ....ತಮ್ಮ ಮನೆಗೆ ಯಜಮಾನಿಯಾಗಿ ಬಾಳ್ಬೇಕೂಂತ ಅಷ್ಟೇ. ಹುಡುಗಿ ಲಕ್ಷಣವಾಗಿದ್ರೇ ಸಾಕೂಂತಾರೆ....ನೋಡಿ ಕಾವೇರಮ್ಮ–ಅದು ಕೇಳ್ತೋತ್ಲೂ ನಂಗೆ ನಿಮ್ಮ ನಿರ್ಮಲನ ಜ್ಞಾಪಕ ಬಂದ್ಬಿಡ್ತು. ಅತ್ತೆ ಕಾಟ, ನಾದಿನಿ ಕಾಟ ಇಲ್ಲ–ಹುಡುಗ ಕೈ ತುಂಬಾ ಸಂಪಾದಿಸ್ತಾನೆ. ದೊಡ್ಡ ಮನೆ, ಬಾಳು ಬದುಕಿದವ್ರು. ಮನೆಗೆಲ್ಲಾ ಇವಳೇ ಯಜಮಾನಿ. ಇನ್ನೇನು ಬೇಕ್ರೀ....?" ಕಾವೇರಮ್ಮನ ಹುಬ್ಬು ಗಂಟಿಕ್ಕಿತು. "ಬೇಡಾ, ಮಣಿಯಮ್ಮ. ನಂಗ್ಯಾಕೋ ಮದ್ವೆ ವಿಚಾರ ಮಾತಾಡೋಕೆ ಬೇಜಾರು. ನಾನೇನೂ ಮಾಡ್ಬಾರ್ದೂ, ದೇವರು ಮಾಡಿಸಿದ್ದಾಗ್ಲೀ ಅಂದ್ಕೊಂಡ್ಬಿಟ್ಟಿದ್ದೀನಿ......" ಮಣಿಯಮ್ಮ ತಮ್ಮ ಪಟ್ಟು ಬಿಡಲಿಲ್ಲ. "ಹಾಗಂದ್ರೇನೂ ಕಾವೇರಮ್ಮ.... ನಿಮ್ಗೆ ಬೇಡವಾಗಿರ್ಬೋದೂ, ಬೆಳೆದ ಹುಡುಗಿ ನಿರ್ಮಲಂಗೆ ಏನೇನು ಆಸೆ ಇದ್ಯೋ ಕೇಳಿದ್ದೀರಾ ? ಮದ್ವೇನೇ ಇಲ್ದೇ ಎಷ್ಟು ದಿನ ನಿಮ್ಮನೇಲಿ ಇಟ್ಕೊಂಡಿರ್ತೀರಿ ? ನೀವೂ, ನಿಮ್ಮೆಜಮಾನ್ರೂ ಇರೋತನ್ಕ ಸರಿ. ಆಮೇಲೆ...."

ಕಾವೇರಮ್ಮ ನಿರುತ್ತರರಾದರು. ಮಣಿಯಮ್ಮನ ಮಾತು ಸರಿಯೆನಿಸಿದರೂ ಅದನ್ನು ಒಪ್ಪಿಕೊಳ್ಳಲು ಮನಸ್ಸಿರಲಿಲ್ಲ. "ನಾನು ಹೇಳೋದು ಕೇಳಿ-ಅವ್ರೇ ಬಂದು ನೋಡ್ಲಿ....ನೀವೂ ನೋಡಿ ಒಪ್ಪಿಗೆ ಆದ್ರೆ ಮಾತು ಮುಂದು ವರಿಸೋಣ, ಇಲ್ದಿದ್ರೆ ಬೇಡ ...ನಂಗೇನು ನಿರ್ಮಲ ಹೊರಗಿನವಳೇ ? ನನ್ನ ಕಣ್ಮುಂದೆ ಬೆಳೆದವಳು. ಅವ್ಳು ಒಳ್ಳೇ ಮನೇ ಸೇರಲಿ. ಚೆನ್ನಾಗಿ ಬಾಳಿ ಬದುಕಲೀಂತ ನಂಗೂ ಆಸೆ ..." ಕಾವೇರಮ್ಮ ಮೌನವಾಗಿದ್ದದ್ದು ಕಂಡ ಮಣಿಯಮ್ಮ ಉತ್ತೇಜಿತರಾದರು.

"ಮನುಷ್ಯಯತ್ನ ಇದು....ದೈವೇಚ್ಛೆ ಏನಿದೆಯೋ ಏನೋ. ಯಾರಿಗೆ ಗೊತ್ತು? ಎಲ್ಲಿ ನಿಮ್ಮ ನಿರ್ಮಲನ ಜಾತಕ ಇದ್ರೆ ಕೊಡಿ...ನಾನು ಹೊರಡ್ತೀನಿ. ಇನ್ನು ಮನೆಗೆ ಮಗ ಬರೋ ಹೊತ್ತಾಯ್ತು..." ಮಣಿಯಮ್ಮ ಎದ್ದು ನಿಂತಾಗ ಕಾವೇರಮ್ಮ ನಿಟ್ಟುಸಿರಿಟ್ಟರು.

"ಯೋಚ್ನೆ ಮಾಡ್ಬೇಡಿ....ಒಳ್ಳೆ ಮನಸ್ಸಿನಿಂದ ತಂದ್ಕೊಡಿ. ದೇವ್ರು ಒಳ್ಳೇದು ಮಾಡ್ತಾನೆ." ಮಣಿಯಮ್ಮ ಒತ್ತಾಯ ಮಾಡಿದಾಗ ಕಾವೇರಮ್ಮ ಒಲ್ಲದ ಮನಸ್ಸಿನಿಂದ ನಿರ್ಮಲಳ ಜಾತಕ ತಂದು ಕೊಟ್ಟರು.

"ಬರ್ತೀನಿ ಕಾವೇರಮ್ಮ. ಯಾವ್ದಕ್ಕೂ ಬಂದು ತಿಳಿಸ್ತೀನಿ, ನಮ್ಮ ಕಿಟ್ಟಿ ಕೈಲಿ ಹುಡುಗನ ಜಾತಕ ಕಳಿಸ್ತೀನಿ. ನೀವೂ ತೋರ್ಸಿ...."

ಕಾವೇರಮ್ಮ ಕೊಟ್ಟು ಕುಂಕುಮ ಹಚ್ಚಿಕೊಂಡು ಮಣಿಯಮ್ಮ ಹೊರಟಾಗ ಕಾವೇರಮ್ಮ ಬಾಗಿಲ ಬಳಿ ನಿಂತು ಮರೆಯಾಗುತ್ತಿದ್ದ ಮಣಿಯಮ್ಮ ನನ್ನು ನೋಡಿದರು. ಅವರು ಹೇಳಿದ್ದ ಮಾತಿನಲ್ಲಿ ಸತ್ಯಾಂಶವಿರುವುದು ಅವರಿಗೆ ಅರಿವಾಗಿತ್ತು.

## ೨

ಮಣಿಯಮ್ಮನ ಮನೆಯಲ್ಲಿ ಇಳಿದುಕೊಂಡಿದ್ದ ಭಾವೀ ಬೀಗರನ್ನು ನೋಡಿ ಬರಲು ರಂಗನಾಥಯ್ಯನವರೂ, ವಿಶ್ವನಾಥ ಇಬ್ಬರೂ ಹೋಗಿದ್ದರು. ಕಾವೇರಮ್ಮ ಸಂಜೆ ಮಗಳನ್ನು ನೋಡಲು ಬರುವವರಿಗಾಗಿ ತಿಂಡಿಗಳ ಸಿದ್ಧತೆ

ಯಲ್ಲಿದ್ದರು. ನಿರ್ಮಲ ಸಿಲ್ಕಿನ ಸೀರೆಯೊಂದಕ್ಕೆ ಕಸೂತಿಹಾಕುತ್ತಾ ಕುಳಿತಿದ್ದಳು. ತನ್ನನ್ನು ನೋಡಲು ಯಾರೋ ಬರುವ ವಿಷಯ ತಿಳಿದಿತ್ತು. ಹದಿನೈದು ದಿನಗಳಿಂದ ಜಾತಕಗಳ ಓಡಾಟ. ತಂದೆಯ, ತಾಯಿಯ ಸಡಗರ-ಮಣಿಯಮ್ಮನ ಓಡಾಟ ಎಲ್ಲವೂ ತಿಳಿದಿದ್ದರೂ ಯಾವುದನ್ನೂ ಪ್ರಶ್ನಿಸುವ ಗೊಡವೆಗೇ ಹೋಗಿರಲಿಲ್ಲ.

ಕಾಲೇಜಿನ ದಿನಗಳಲ್ಲಿ ರಜಿನಿ, ಉಮಾ, ಸಂಧ್ಯಾ ಎಲ್ಲರೂ ಅವರವರ 'ಬಾಯ್ ಫ್ರೆಂಡ್ಸ್' ವಿಚಾರ ಮಾತಾಡಿಕೊಳ್ಳುತ್ತಿದ್ದಾಗ ನಿರ್ಮಲ ನಿರ್ಲಿಪ್ತಳಾಗಿ ಅವರುಗಳ ಮಾತುಗಳನ್ನು ಕೇಳುತ್ತಿದ್ದಳು. ಗೌರಿಯಂತೆ ಕುಳಿತಿರುತ್ತಿದ್ದ ಅವಳನ್ನು ಅವರೇ ಹಾಸ್ಯ ಮಾಡುತ್ತಿದ್ದುದುಂಟು. "ಅವೊತ್ತು ಆಟೋದಲ್ಲಿ ಯಾರ ಜೊತೆಯೇ ಹೋಗ್ತಾ ಇದ್ಯಲ್ಲಾ, ಯಾರೇ ಅದು ? ನೋಡೋಕೆ ತುಂಬಾ ಹ್ಯಾಂಡ್‌ಸಮ್ ಆಗಿದ್ದ....?" ಎಂದು ಬೇಕಾಗಿ ಕೇಳಿದಾಗ ನಿರ್ಮಲ ನಗುತ್ತಿದ್ದಳು, "ಯಾರೂಂತ ಹೇಳ್ಲಿ ? ನಂಗಿರೋ ನೂರಾರು ಬಾಯ್‌ಫ್ರೆಂಡ್ಸ್‌ನಲ್ಲಿ ಎಲ್ಲರೂ ಹ್ಯಾಂಡ್ಸಮ್ಮೇ." ಅವಳನ್ನು ರೇಗಿಸಲಾಗದೇ ಅವರೇ ಸುಮ್ಮನಾಗುತ್ತಿದ್ದರು.

ಮನೆಯಲ್ಲಿ ತಾರುಣ್ಯದ ಹೊಂಗನಸುಗಳನ್ನು ಕಾಣುತ್ತಾ ಮಲಗಿದಾಗ ಅವಳ ಕಣ್ಮುಂದೆ ತಾನು ಆಗಾಗ ಕಾಣುತ್ತಿದ್ದ ಕಾಲೇಜಿನ ಅನೇಕ ಮಂದಿ ಯುವಕರನ್ನು ಕಣ್ಮುಂದೆ ನಿಲ್ಲಿಸಿಕೊಂಡು ಅವರ ಬಗೆಗೆ ಯೋಚಿಸಲು ಹವಣಿಸುತ್ತಿದ್ದಳು. ಆದರೆ ಆ ಕನಸೆಲ್ಲಾ ನೀರ್ಗುಳ್ಳೆಗಳಂತೆ ಹೊಳೆದು ಕಾಮನಬಿಲ್ಲನ್ನು ಮೂಡಿಸಿ ಅನುಭವಕ್ಕೆ ಬರುವ ಮುನ್ನ ಒಡೆದು ಮರೆಯಾಗುತ್ತಿತ್ತು.

ಯಾವಾಗಲೂ ಮೌನವಾಗಿರುತ್ತಿದ್ದ ತಂದೆ, ಆಗಾಗ ಏನಾದರೊಂದನ್ನು ನೆನಪಿಕೊಂಡು ಕಣ್ಣೀರಿಡುವ ತಾಯಿ, ಮನೆಯನ್ನೇ ಸೇರದಿದ್ದ ಅಣ್ಣ, ಹೀಗಾಗಿ ನಿರ್ಮಲಳಿಗೆ ಒಮ್ಮೊಮ್ಮೆ ತಾನೊಬ್ಬ ಏಕಾಂಗಿಯೆನಿಸುತ್ತಿತ್ತು. ತಾಯಿ, ತಂದೆ ತನ್ನ ಮದುವೆಯ ವಿಷಯ ಬಂದಾಗ ಮಾತು ಜಾರಿಸಲು ಯತ್ನಿಸಿದಾಗ ಅವಳಿಗೆ ಕೋಪ ಬರುತ್ತಿತ್ತು. ತನ್ನಕ್ಕಂದಿರ ಬಾಳು ಹಾಳಾಯಿತೆಂದು ತನಗೂ ಬಾಳಿನಲ್ಲಿ ನಲಿವಾಗಲೀ ಸುಖವಾಗಲೀ ಬೇಡವೇ ? ಯಾರ ತಪ್ಪಿಗೆ ಯಾರಿಗೆ ಶಿಕ್ಷೆ ? ತಮ್ಮ ದುಃಖವನ್ನೇ ಸಾಗರದಷ್ಟು ದೊಡ್ಡದು ಮಾಡಿಕೊಂಡು ನವ ವಸಂತದ ಹೂವಾಗಿದ್ದ ತನಗೆ ಸುಖಕ್ಕೆ ಕೊರತೆಯೇ?

ವಿಶ್ವನಾಥ ಮನೆಯ ಹೊರಗೇ ಕಾಲ ಕಳೆಯುತ್ತಿದ್ದುದು ಇದಕ್ಕೇ ಎಂದು ಅವಳ ಅನಿಸಿಕೆ. ಆದರೆ ತಂದೆ ತಾಯಿಯ ಮುಂದೆ ಅದನ್ನು ಹೇಳುವ ಧೈರ್ಯವಿರಲಿಲ್ಲ. ಹಬ್ಬ ಹರಿದಿನಗಳನ್ನೂ ನಗುನಗುತ್ತಾ ಆಚರಿಸದೆ, ಕಣ್ಣಲ್ಲಿ ನೀರು ಹಾಕಿಕ್ಕೊಂಡು, "ನಮ್ಮ ಮಂಗಳೆ ಇದ್ರೆ ಚೆನ್ನಾಗಿರ್ತಿತ್ತು, ನಮ್ಮ ಶ್ಯಾಮಲ ಇರ್ಬೇಕಿತ್ತು ಇಂತಾ ದಿನ...." ಎನ್ನುತ್ತ ಹಬ್ಬಕ್ಕಾಗಿ ಸಜ್ಜಿತಳಾದ ತಾನು ಕಣ್ಮುಂದೆ ಬದುಕಿರುವುದನ್ನು ಮರೆಯುತ್ತಿದ್ದುದು ಅವಳಿಗೆ ಅಸಹನೀಯವಾಗುತ್ತಿತ್ತು. ತಾನು ಮದುವೆಯಾಗಿ ಈ ದುಃಖ ಆಲಾಪ ಗಳಿಂದ ದೂರ ಹೋಗಿಬಿಡಬೇಕೆಂಬ ಹೆಬ್ಬಯಕೆ ಹೆಡೆಯೆತ್ತಿ ನಿಲ್ಲುತ್ತಿತ್ತು. ಮನೆಯ ಬೇಸರ ನೀಗಲು ಬೆಳಿಗ್ಗೆ ಟೈಪ್‌ರೈಟಿಂಗ್, ಮಧ್ಯಾಹ್ನ ಹೊಲಿಗೆ ಕ್ಲಾಸು, ಸಂಜೆ ಮಹಿಳಾ ಕ್ಲಬ್‌ಗಳಿಗೆ ಮೀಸಲಾಗಿಟ್ಟು ಮಿಕ್ಕ ಅಷ್ಟಿಷ್ಟು ಹೊತ್ತನ್ನು ಆದಷ್ಟು ತಂದೆ ತಾಯಿಗಳಿಂದ ದೂರ ಇಟ್ಟು ತನ್ನ ಜಗತ್ತಿನಲ್ಲಿ ತಾನು ವಿಹರಿಸುತ್ತಿದ್ದಳು.

ಅವಳ ಓದು ಮುಗಿದ ಮೇಲೆ ಕೆಲಸಕ್ಕೆ ಸೇರಲು ಕಾವೇರಮ್ಮ ವೃಥಾ ಒಪ್ಪಿರಲಿಲ್ಲ. "ನೀನೇನೂ ದುಡೀಬೇಕಾಗಿಲ್ಲಾ. ಅಪ್ಪಾ, ನಾನು ಇಬ್ರೂ ಬದ್ಕಿದ್ದೀವಿ ನಿನ್ನ ಸಾಕೋಕ್ಕೆ, ಏನೂ ಬೇಕಾದ್ರೂ ಹೇಳು, ನಿಂಗೇನು ಕಡಿಮೆ !" ಎನ್ನುತ್ತಿದ್ದ ಅಣ್ಣ ವಿಶ್ವ. ಮಿಕ್ಕೆಲ್ಲರಂತೆ ಹಾಯಾಗಿ ನಗು ನಗುತ್ತಾ ಕುಣಿಯುತ್ತಾ, ಬದುಕನ್ನು ಸುಂದರ ಮಾಡಿಕೊಳ್ಳುವ ಆಸೆ ತನಗೆ. ಕೊನೆಗೆ ಮಣಿಯಮ್ಮನ ಒತ್ತಾಯಕ್ಕೆ ಮಣಿದು ತನ್ನ ಮದುವೆಯ ಮಾತುಕತೆ ನಡೆದಾಗ ನಿರ್ಮಲ ಮನಸ್ಸಿನಲ್ಲೆ ಮಣಿಯಮ್ಮನನ್ನು ವಂದಿಸಿ ದ್ದಳು. ಮನೆಯ ಉಸಿರು ಕಟ್ಟುವ ವಾತಾವರಣದಿಂದ ಅವಳಿಗೆ ವಿಮುಕ್ತಿ ಬೇಕಾಗಿತ್ತು.

ಅಡಿಗೆಯ ಮನೆಯಲ್ಲಿ ಪಾತ್ರೆಗಳ ಸದ್ದು, ತೆಂಗಿನಕಾಯಿ ತುರಿಯುವ ಸದ್ದು ಕೇಳಿ ತಾಯಿಯೊಬ್ಬಳೇ ಕೆಲಸ ಮಾಡುತ್ತಿದ್ದಾಗ ತಾನು ಸುಮ್ಮನೆ ಕುಳಿತಿರುವುದು ತರವಲ್ಲವೆಂದು ಕಸೂತಿಯ ಕೆಲಸವನ್ನು ಅಲ್ಲಿಯೇ ಬಿಟ್ಟು ಅಡುಗೆ ಮನೆಯತ್ತ ಹೆಜ್ಜೆ ಹಾಕಿದಳು.

"ಕೊಡಮ್ಮಾ, ನಾನು ಕಾಯಿ ತುರಿದುಕೊಡ್ತೀನಿ."

"ಬೇಡ....ಆಗ್ಲೇ ಅರ್ಧ ತುರಿದಾಯ್ತು. ಒಂದಿಷ್ಟು ಎಲಕ್ಕಿ ಬಿಡಿಸಿ

ಪುಡಿಮಾಡಿ ಕೊಡು. ಸಕ್ಕರೆಯ ಡಬ್ಬದಿಂದ ಸಕ್ಕರೆ ತಗೊಂಡ್ಬಾ...." ಕಾವೇರಮ್ಮ ಹೇಳಿದಾಗ ನಿರ್ಮಲ ಅಡಿಗೆ ಮನೆಯಲ್ಲಿದ್ದ ಡಬ್ಬಗಳತ್ತ ಕಣ್ಣು ಹಾಯಿಸಿದಳು. ಒಂದೊಂದು ಸಲ ಒಂದೊಂದು ಡಬ್ಬದಲ್ಲಿ ಸಕ್ಕರೆ ಹಾಕುತ್ತಿದ್ದಳು ತಾಯಿ. 'ಒಂದೇ ಡಬ್ಬದಲ್ಲಿ ಇಟ್ರೆ ಇರುವೆ ಬರುತ್ತೆ' ಎಂದು. ಇರುವೆಗಳಿಗೆ ಮೋಸಮಾಡಿ ಬೇರೆ ಡಬ್ಬದಲ್ಲಿ ಇಡುವ ಯೋಚನೆ ! ಏಲಕ್ಕಿ ಎಲ್ಲಿ ಇಟ್ಟಿರುವಳೋ ತಿಳಿಯದು !

"ಅಮ್ಮಾ, ಸಕ್ಕರೆ, ಏಲಕ್ಕಿ ಯಾವ ಡಬ್ಬದಲ್ಲಿದೆ ?"

"ನೋಡೇ ಅಲ್ಲಿ, ಆ ನೀಲಿ ಅಮುಲ್ ಡಬ್ಬದಲ್ಲಿ ಸಕ್ಕರೆ ಇದೆ....ಸಣ್ಣ ಜಾಡೀಲಿ ಏಲಕ್ಕಿ ಹಾಕಿದ್ದ ಜ್ಞಾಪಕ !"

"ಅಷ್ಟೊಂದು ನೀಲಿ ಅಮುಲ್ ಡಬ್ಬಗಳಲ್ಲಿ ಯಾವುದು ಸಕ್ಕರೆಯೋ ?" ನಿರ್ಮಲ ಕೇಳಿದಾಗ ಕಾವೇರಮ್ಮ ಸಿಡಿಮಿಡಿಗೊಂಡರು.

"ಅದಕ್ಕೇ ಹೇಳಿದ್ದು ನಾನು ಕಾಯಿ ತುರ್ಕೊಡ್ತೀನಿ, ನೀನೇ ಅದೆಲ್ಲಾ ಹುಡುಕ್ಕೋ" ನಿರ್ಮಲ ಹೇಳಿದಾಗ ಅವರ ಸಹನೆ ಮೀರಿತು.

"ಶ್ಯಾಮಲ ಅಂತೂ ಕೆಲ್ಸದಲ್ಲಿ ಎಷ್ಟು ಜಾಣೆಯಾಗಿದ್ಲೋ--ತಾನೇ ಎಲ್ಲಾ ಮಾಡಿಟ್ಟು ನನ್ನ ಸುಮ್ಮನೇ ಕೂಡ್ಸುತಿದ್ಲು, ಬಂದೋರ್ಮುಂದೆ ಅವ್ಳೇ ಮಾಡಿದ್ಲೂಂತ ಹೇಳ್ಬಾರ್ದೂಂತ ಸುಮ್ನಿದ್ದೆ. ಅವಳ ಕೆಲ್ಸದ ಅಚ್ಚುಕಟ್ಟು ಯಾರ್ಗೂ ಕಾಣೆ....ಪಾಪ...ನಂಗಂತೂ ಅವ್ಳು ಇನ್ನೂ ಕಣ್ಮುಂದೆ ನಿಂತಿರೋ....ಹಾಗಿದೆ...." ಕಾವೇರಮ್ಮ ಸೆರಗಿನಿಂದ ಮೂಗು ಒರೆಸಿಕೊಂಡಾಗ ನಿರ್ಮಲಳಿಗೆ ಮನಸ್ಸು ಕಹಿಯಾಯಿತು.

"ಇವತ್ತೊಂದು ದಿನವಾದ್ರೂ ಆ ವಿಷ್ಯ ಎತ್ತದೇ ಇರಬಾರ್ದಾ ? ನೀನು ಬೇಜಾರು ಮಾಡ್ಕೊಂಡು ನಂಗೂ ಬೇಜಾರು ಮಾಡ್ತೀ. ನಂಗೆ ಬುದ್ಧಿ ತಿಳ್ದಾಗಿಂದ ಮಂಗಳಾ ಹಾಗಿದ್ಲು, ಶ್ಯಾಮಲ ಹೀಗಿದ್ಲೂಂತ ಕೇಳಿ ಕೇಳಿ ಸಾಕಾಗಿಹೋಗಿದೆ....ಬಂದು ಹೋದ ಹೆಂಗ್ಸರ್ಮುಂದೆ ಅತ್ತು ಅವರ್ನೂ ಅಳ್ಸಿ....ಏನಮ್ಮಾ ಹಿಂದಿನದು ಕೊಂಚ ಮರ್ತುಬಿಟ್ಟು ನಾಲ್ಕು ದಿನ ಹಾಯಾಗಿರ್ಬಾರ್ದಾ ?" ನಿರ್ಮಲ ಕಳಕಳಿಯಿಂದ ಹೇಳಿದಾಗ ಕಾವೇರಮ್ಮ ಗದ್ಗದರಾಗಿಯೇ ಗದರಿದರು. "ನಿನ್ನ ನ್ಯಾರು ಇಲ್ಲಿ ಬಾ ಅಂತ ಕರೆದ್ರು ? ನಿನ್ಕೆಲ್ಸ ನೀನು ನೋಡ್ಕೋ ಹೋಗು. ಹುಡ್ಗಿ ಒಪ್ಪಿದ್ರೆ ಹೆಂಗಸರು ಅಳು,

ಕಣ್ಣೀರು, ಬವಣೆ ಯಾವ್ದೂ ಇಲ್ದೇ ಇರೋ ಮನೆ ಸೇರ್ತೀ, ಹಾಯಾಗಿರು ವಂತೀ--ನಮ್ಮ ಕಷ್ಟ ನಮ್ಗೆ. ಹೆತ್ತ ಕರುಳಿನ ಸಂಕಟ ನಿಂಗೇನ್ಗೊತ್ತು !"

ನಿರ್ಮಲನಿಗೆ ತಾಯಿಯ ಬಿರುನುಡಿಯಿಂದ ಮನಸ್ಸಿಗೆ ನೋವುಂಟಾದರೂ ತೋರ್ಪಡಿಸದೇ ತುಟಿಗಳಿಗೆ ನಗುವಿನ ಲೇಪ ಮಾಡಿಕೊಂಡಳು.

"ಸಧ್ಯ ಹಾಗೇ ಆದ್ರೆ ಸಾಕಲ್ವೇನಮ್ಮಾ.... ಅತ್ಗೇ, ನಾದ್ನಿ, ಯಾರ್‍ದಾಕಟಾನೂ ಇಲ್ದೆ ಹಾಯಾಗಿರ್‍ಬೋದೂ... ನಾನು ಸಂತೋಷವಾಗಿರೋದ್ನೋಡಿ ನೀನೂ ಅಪ್ಪಾ ನಗ್ತಾ ನಗ್ತಾ ಇರ್‍ಬೋದೂ ಇನ್ಮೇಲೆ...." ನಿರ್ಮಲ ಅಡಿಗೆ ಮನೆಯಿಂದ ಹೊರಗೆ ಹೋದಾಗ ಅವಳ ಕಣ್ಣುಗಳು ತುಂಬಿದ್ದುದು ಕಾವೇರಮ್ಮನ ಕಣ್ಣಿಗೆ ಕಾಣಿಸಲಿಲ್ಲ. ಅವಳ ಮನಸ್ಸಿನ ಕಹಿಯ ಅನುಭವ ವಾಗಲಿಲ್ಲ.

ಮಧ್ಯಾಹ್ನ ಮೂರು ಗಂಟೆಗೆ ಮಣಿಯಮ್ಮ ಹಾಜರಾದರು. ಅವರ ಕೈಯಲ್ಲಿ ಹೂವಿನ ಕುಚ್ಚು, ವೀಳೆಯದೆಲೆ ಇತ್ತು. ಕುರ್ಚಿಯ ಮೇಲೆ ಕುಳಿತು ಕೈಯಲ್ಲಿ ಟ್ರಾನ್ಸಿಸ್ಟರ್ ಹಿಡಿದು ಹಾಡೊಂದನ್ನು ಕೇಳುತ್ತಿದ್ದ ನಿರ್ಮಲಳನ್ನು ಕಂಡು ಮಣಿಯಮ್ಮ ಹುಬ್ಬುಗಂಟಿಕ್ಕಿದರು. "ಇದೇನು ನಿರ್ಮಲಾ, ಹಾಗೇ ಇದ್ದೀಯ. ಅಲಂಕಾರ ಗಿಲಂಕಾರ ಏನು ಬೇಡ್ವಾ ? ನಾನು ನಮ್ಮುಡುಗಿ ತುಂಬಾ ಚೆನ್ನಾಗಿದ್ದಾಳೇಂತ ಅಂತ ಹೇಳ್ಕೊಂಡಿದ್ದೇನೆ ....ಹೀಗೆ ತಲೆ ಕೆದರ್‍ಕೊಂಡು ಹಳೇ ಸೀರೆ ಉಟ್ಕೊಂಡು ಕೂತ್ಕೊಂಡ್ರೇ ಹೇಗೇಂತಾ...ತೊಗೋ, ಹೂವು ತಂದಿದ್ದೇನೆ. ತಲೆ ಬಾಚ್ಕೊಂಡು ಮುಡ್ಕೋ..." ನಿಂತಲ್ಲಿಂದಲೇ ಕೂಗಿದರು-"ಏನ್ರಿ ಕಾವೇರಮ್ಮ, ನಿರ್‍ಮಲ ಏನು ಇನ್ನೂ ಹೀಗೆ ಕೂತಿದ್ದಾಳೆ, ಬುದ್ಧಿ ಹೇಳ್ಬಾರ್‍ದಾ ?" ಕಾವೇರಮ್ಮ, ಒಳಗಿನಿಂದಲೇ ಕೂಗಿದರು. "ನಾನು ಬೆಳಗ್ನಿಂದ್ಲೇ ಹೇಳ್ತಾ ಇದ್ದೀನಿ....ಬೆಳ್ದು ಓದು, ಬುದ್ಧಿ ಕಲಿತೋಳು ನನ್ನ ಮಾತು ಕೇಳ್ತಾಳಾ ?"

ನಿರ್ಮಲ ಟ್ರಾನ್ಸಿಸ್ಟರ್ ನಿಲ್ಲಿಸಿ ಎದ್ದು ನಿಂತಳು, "ಅಬ್ಬಾ ಅಬ್ಬಾ, ಸಾಕಪ್ಪ ಸಾಕು. ಎಲ್ರೂ ಲೆಕ್ಚರ್ ಮಾಡೋವ್ರೆ....! ಐದು ಗಂಟೆಗೆ ಅವರು ಬರೋದು, ನಾನು ಮೂರ್‍ಗಂಟೇಯಿಂದ್ಲೂ ನವರಾತ್ರಿ ಬೊಂಬೆ ಹಾಗೆ ಅಲಂಕರಿಸಿಕೊಂಡು ಕೂತ್ಕೊಳ್ಲಾ ?"

ರೂಮಿನಲ್ಲಿ ಮಲಗಿದ್ದ ವಿಶ್ವನಾಥನಿಗೆ ಮಣಿಯಮ್ಮ ತನ್ನ ತಾಯಿ,

ತಂಗಿಯವರ ಮಾತು ಕಿವಿಗೆ ಬಿದ್ದಿತ್ತು. ಅವಳು ರೇಗಿದಾಗ ರೂಮಿನಿಂದಲೇ ಕೂಗಿದನು.

"ಲೇ ನಿಮ್ಮೂ, ಬಾ ಇಲ್ಲಿ...."

"ನೀನೊಬ್ಬು ಬಾಕಿ ಇದ್ದೆ ಲೆಕ್ಚರ್ ಕೊಡೋಕೆ....ಬಂದೇ ತಾಳು.... ಕೆಟ್ಟ ಧೈರ್ಯ ಮಾಡ್ಕೊಂಡು ಬರ್ತೀನಿ."

ನಿರ್ಮಲ ವಿಶ್ವನಾಥನ ರೂಮಿಗೆ ಬಂದಾಗ ವಿಶ್ವ ನಗುತ್ತಿದ್ದನು. "ಲೇ ನಿಮ್ಮಿ, ನಿನ್ನ ನಾಲಿಗೆ ಇನ್ನೂ ಹರಿತವಾದ್ರೂ ತಡ್ಯತ್ತೆ. ಬೆಳಿಗ್ಗೆ ಹೋಗಿದ್ದೆ. ಐದು ಜನ ಅಣ್ಣತಮ್ಮಂದಿರು ..ದ್ರೌಪದಿ ಅವತಾರ ನೀನು. ದೊಡ್ಡೋನು ಧರ್ಮರಾಯ. ಎರಡ್ನೆಯವನೇ ಮತ್ಸ್ಯಯಂತ್ರದ ಪರೀಕ್ಷೆಗೆ ಬರೋನು, ಭೀಮ, ನಕುಲ, ಸಹದೇವ, ಎಲ್ರೂ ಇದ್ದಾರೆ. ಕುಂತಿದೇವಿ ಇದ್ದಿದ್ರೆ ಪಾಂಚಾಲಿಯಾಗ್ಬೋದಾಗಿತ್ತು."

"ಸಾಕು ಬಿಡೋ, ನನ್ನ ಪಾಂಚಾಲಿ, ದ್ರೌಪದಿ ಅನ್ನೋಕೆ ನಾನೇನು ರಣಚಂಡಿಯಾಗಿರೋದು ? ಮತ್ಸ್ಯಯಂತ್ರ ಭೇದಿಸೋಕೆ ಸಾಯಂಕಾಲ ಬರ್ತಾ ಇರೋ ಅರ್ಜುನನ್ನ ನೋಡ್ತೀನಿ. ದೃಷ್ಟದ್ಯುಮ್ನನ ಹಾಗೆ ಅಲ್ಲಿ ಯಾರೂ ಇರ್ಲಿಲ್ವೇ ?"

"ಲೇ, ಪಾಂಚಾಲಿ – ಹಾಗಾದ್ರೇ ಸಾಯಂಕಾಲ ಐದು ಗಂಟೆಗೆ ಸಂಧಿಸೋಣ. ಈಗ ಹೋಗಿ ನಿನ್ನ ಅಸ್ತ್ರಗಳ್ನ, ವಸ್ತ್ರಗಳ್ನ ಧರಿಸ್ಕೋ ಹೋಗೂ... ಅವಳು ಹೊರಟಾಗ ಮೆಲ್ಲನುಸುರಿದ. "ಲೇ ನಿಮ್ಮೂ-ಯಾರ್ಮಾತೂ ಕಿವಿಗೆ ಹಾಕ್ಕೋಬೇಡ, ನಿಂಗೆ ಹೇಗ್ಬೇಕೋ ಹಾಗಿರೂ ಹೋಗೂ."

ನಿರ್ಮಲ ತನ್ನ ಕೊಠಡಿಗೆ ಹೊರಟಾಗ ಮಣಿಯಮ್ಮ,ಕಾವೇರಮ್ಮ, ರಂಗನಾಥಯ್ಯ ಮೆಲುದನಿಯಲ್ಲಿ ಮಾತನಾಡಿಕೊಳ್ಳುತ್ತಿದ್ದುದು ಕೇಳಿಸಿತು.

"ಅನಂತಂಗೇ ಕೇಳ್ಬೋದಿತ್ತು. ಆದ್ರೆ ಅವ್ನು ಒಂದು ತರಹಾ ಸನ್ಯಾಸಿಯಂತಹ ಮನುಷ್ಯ, ಅದಕ್ಕೆ ಅಶೋಕನಿಗೆ ಕೇಳಿದ್ದು. ಅರವಿಂದ, ಅಜಯ್, ಅಮರೇಶ ಮೂರು ಜನಕ್ಕೂ ನಮ್ಮ ನಿರ್ಮಲಾನೇ ನೋಡಿ ಮದ್ವೆ ಮಾಡ್ಲೀ."

ಆ ಮಾತಿಗೆ ರಂಗನಾಥಯ್ಯ ನಸುನಕ್ಕರು. "ನಿರ್ಮಲಾ ಮಾಡಿದ್ಲು, ಆಯ್ತು—" ನಿರ್ಮಲ ಕಿಡಿನೋಟ ಹರಿಸಿ ಒಳಗೆ ನಡೆದಳು.

ಕನ್ನಡಿಯ ಮುಂದೆ ತಲೆ ಬಾಚಿಕೊಳ್ಳುತ್ತಿದ್ದ ನಿರ್ಮಲಳಿಗೆ ಐವರು

ಅಣ್ಣತಮ್ಮಂದಿರು ತನ್ನನ್ನು ನೋಡುವುದಕ್ಕೆಬರುತ್ತಿರುವುದು ಕೇಳಿ ವಿಚಿತ್ರ ವೆನಿಸಿದರೂ ಅವರುಗಳನ್ನು ನೋಡುವ ಕುತೂಹಲ ಅವಳಿಗೂ ಇತ್ತು.

ಹೊರಗಡೆ ಹಜಾರದಲ್ಲಿ ಮಾತು ಕತೆ, ನಗು ಕೇಳಿ ನಿರ್ಮಲಳ ಹೃದಯ ಬಡಿದುಕೊಂಡಿತು. ಹೊಸ ದನಿಗಳನ್ನೆಲ್ಲಾ ಕಿವಿಗೊಟ್ಟು ಆಲಿಸಿ ದಳು. ಇದರಲ್ಲಿ ಯಾರ ದನಿ ತನ್ನನ್ನು ನೋಡಲು ಬಂದಿರುವವನದಿರಬಹುದು ? "ಅಮ್ಮ, ತಾಯಿ, ನಿರ್ಮ್ಮ ಬಾಮ್ಮಾ–" ರಂಗನಾಥಯ್ಯ ಕರೆದಾಗ ನಿರ್ಮಲ ಉಟ್ಟ ಬಿಳಿಯ ಪ್ರಿಂಟೆಡ್ ಸಿಲ್ಕಿನ ಸೀರೆಯ ನೆರಿಗೆಯನ್ನು ಸರಿಪಡಿಸಿಕೊಂಡಳು. ಕನ್ನಡಿಯಲ್ಲಿ ಕಂಡ ಪ್ರತಿಬಿಂಬವನ್ನು ನೋಡಿ ನಸುನಕ್ಕಳು. "ಪಾಂಚಾಲೀ ....ನಿನ್ನ ಪಂಚ ಪಾಂಡವರನ್ನು ನೋಡಿ ನಡಿ...." ಎಂದು ವಿಶ್ವನಾಥ ರೂಮಿಗೆ ಬಂದು ಹೇಳಿ ಹೋದ.

ಮುಡಿಯಲ್ಲಿದ್ದ ಹೂವನ್ನು ಸರಿಮಾಡಿಕೊಂಡಳು. ಇದ್ದ ಕುಂಕುಮ ವನ್ನು, ಮತ್ತೂ ಗುಂಡಗೆ ಮಾಡಿಕೊಂಡಳು. ಕಾಡಿಗೆ ಹಚ್ಚಿದ್ದ ಸೋಗೆ ಕಣ್ಣನ್ನು ಅರಳಿಸಿ ನಕ್ಕಳು.

ಮಣಿಯಮ್ಮ ಮತ್ತೆ ಕೂಗಿದರು. "ನಿರ್ಮಲಾ ಬಾಮ್ಮಾ." ನಿರ್ಮಲ ಧೈರ್ಯಮಾಡಿ ಹೆಜ್ಜೆ ಮುಂದಿಟ್ಟು ನಡೆದಳು.

ವಿಶ್ವನಾಥನ ಇಕ್ಕೆಲದಲ್ಲಿ ಕುಳಿತಿದ್ದ ಐವರತ್ತ ಅರೆಕ್ಷಣ ನೋಟ ಹರಿಸಿ ಕಣ್ಣು ಕೆಳಗೆ ಮಾಡಿದಳು. ಇವರಲ್ಲಿ ತನ್ನನ್ನು ಮದುವೆಯಾಗಲು ಬಯಸಿ ರುವವನು ಯಾರು ? ವಿಶ್ವನ ಎಡದಲ್ಲಿ ಕುಳಿತಿದ್ದವನು ದೊಡ್ಡವನಿರಬೇಕು. ಅವನ ಪಕ್ಕದಲ್ಲಿ ಕುಳಿತವನ ಮುಖ ಎಲ್ಲರಿಗಿಂತ ಎಳಸಾಗಿರುವುದರಿಂದ ಅವನೇ ಕೊನೆಯವನಿರಬಹುದು. ಬಲಗಡೆ ಕುಳಿತು ಮೂವರೂ ಒಂದೇ ಓರಗೆಯವ ರಂತಿದ್ದರು. ಎಲ್ಲರೂ ಬಾಚಿದ್ದ ಕ್ರಾಪು, ಗರಿಮುರಿಯಾದ ಬಿಳಿಯ ಷರಟು, ಕಿರುಮೀಸೆ, ಹೊಳಪುಗಣ್ಣಿನ ಯುವಕರು. ಹಾಕಿದ್ದ ಪ್ಯಾಂಟುಗಳು ಮಾತ್ರ ಬೇರೆ ಬೇರೆಯ ಬಣ್ಣದ್ದು.

ಕಾವೇರಮ್ಮ ಮಗಳನ್ನು ತಮ್ಮ ಪಕ್ಕಕ್ಕೆ ಕರೆದರು. ತಾಯಿಯ ಪಕ್ಕ ದಲ್ಲಿ ಕುಳಿತಾಗ ಮಣಿಯಮ್ಮನ ಪಕ್ಕದಲ್ಲಿ ಮತ್ತೊಬ್ಬ ವಯಸ್ಸಾದ ಮುತ್ತೈದೆ ಯೊಬ್ಬರು ಬಂದಿರುವುದೂ ತಿಳಿಯಿತು. ರಂಗನಾಥಯ್ಯ, ವಿಶ್ವ, ಗಂಡು ಹುಡುಗರ ಜೊತೆ ಮಾತುಕತೆಯಾಡುತ್ತಿದ್ದರು. ನಿರ್ಮಲಳಿಗೆ ತಲೆಯೆತ್ತಿ

ತನ್ನ ಪತಿಯಾಗುವವನು ಯಾರೆಂದು ಅರಿಯಬೇಕೆಂಬ ಆಸೆ, ಆದರೆ ಪಕ್ಕದಲ್ಲಿ ತಾಯಿ !

"ನಮ್ಮ ಅನಂತ ದೊಡ್ಡೋನೂ. ಅವ್ನೇ ನಿಂತು ಎಲ್ಲಾ ಮಾಡೋದು. ನಾನು ದೊಡ್ಡೋರು, ಹೆಂಗಸರೊಬ್ಬರು ಇರ್‍ಬೇಕೂಂತ ಜೊತೆಗೆ ಬಂದೆ-ಅಣ್ಣ ಮದ್ವೆ ಆಗ್ಲೀಂತ ತಮ್ಮ,ತಮ್ಮ ಮದ್ವೆ ಆಗ್ಲೀಂತ ಅಣ್ಣ-ಹೀಗಾಗಿ ಅಶೋಕನ ಮದ್ವೆ ಮಾತು ಎರಡು ವರ್ಷಗಳಿಂದ ನಿಂತುಹೋಗಿತ್ತು. ಕೊನೆಗೆ ಮೊನ್ನೆ ರಜಕ್ಕೆ ಮಕ್ಕಳ್ನ ನೋಡ್ಕೊಂಡು ಹೋಗೋಣಾಂತ ಬಂದಾಗ ನಿಮ್ಮನೆ ಸಮಾಚಾರ ತಿಳ್ದು ನಾನು ಹಟ ಮಾಡಿ ಅಶೋಕನ್ನ ಒಪ್ಪಿಸಿದೆ." ಮುತ್ತೈದೆ ಹೇಳಿದರು. "ನೋಡಿ, ಎಷ್ಟಾದ್ರೂ ಅಣ್ಣನ ಮಕ್ಳು. ಚಿಕ್ಕವಯಸ್ನಲ್ಲಿ ತಾಯೀನ ಕಳ್ಕೊಂಡ್ವು. ನಾನೇ ಎತ್ತಿ ಇಳಿಸಿ ಬೆಳೆಸ್ದೆ. ನಮ್ಮಣ್ಣ ಹೋಗೋತನ್ಕ, ಮೂರು ವರ್ಷ ಆಯ್ತೂಂತ ಇಟ್ಕೊಳ್ಳಿ, ಇವರ್ನೆಲ್ಲಾ ನೋಡ್ಕೊಳ್ಳೋಕೆ ನಾನ್ಬೇಗಿರ್ಲಿ? ನನ್ಮಗ್ಳು ಬಾ ಅಂತ ಬರೀತಿದ್ಲು, ಅವ್ಳೋ ದೂರದಲ್ಲಿದ್ದಾಳೆ. ಒಬ್ಬಂಟಿಗ್ಳು, ಗಂಡಂಗೆ ತಿಂಗಳಿಗೆ ಇಪ್ಪತ್ತು ದಿನ ಟೂರು-ಅಲ್ಲೇ ಇರೋಣಾಂತ ಇವರಿಗೆ ಊಟ ತಿಂಡಿ ನೋಡ್ಕೊಳೋಕೆ ಅಡಿಗೆಯವರನ್ನು ನೇಮಿಸಿ, ಹೊರಟ್ಬಿಟ್ಟೆ. ಪದ್ದಮ್ಮ ಪರವಾಗಿಲ್ಲ. ಮಾಡ್ಕೊಂಡು ಹೋಗ್ತಾಳೆ....ಎಲ್ಲಾ ದೊಡ್ಡೋರಾದ್ರು, ನೋಡ್ಕೋತಾರೆ. ಒಂದ್ಹೆಣ್ಣೊಂತಾ ಮನೆಗ್ಬಂದ್ರೆ ಚೆನ್ನ. ನಾಲ್ಕೈದ್ಕಡೆ ನೋಡಿದ್ವಿ-ಯಾಕೋ ಹುಡುಗಿಯರು ಸರಿಬೀಳಲಿಲ್ಲ ನಂಗೆ." ಆಕೆಯ ಮಾತು ನಡೆದಿತ್ತು. "ನಮ್ಮ ನಿರ್ಮಲ ಚಿನ್ನದಂತ ಹುಡುಗಿ. ಕೈಹಿಡಿಯೋನು ಪುಣ್ಯಮಾಡಿರ್ಬೇಕೂ. ಎಲ್ಲಾ, ಕೆಲ್ಸದಲ್ಲೂ ಜಾಣೆ." ಮಣಿಯಮ್ಮ ಹೇಳಿದಾಗ ಕಾವೇರಮ್ಮನೂ ದನಿಗೂಡಿಸಿದರು. "ಹಾಡು ಹಸೆ ಹೇಳ್ಸಿಲ್ಲಮ್ಮಾ-ಏನೋ ರೇಡಿಯೋದಲ್ಲಿ ಬರೋ ಹಾಡೆಲ್ಲಾ ಹೇಳ್ಕೋತಾ ಇರ್‍ತಾಳೆ."

ಮಾತು ಹನುಮಂತನ ಬಾಲದಂತೆ ಬೆಳೆಯುತ್ತಿದ್ದುದು ಕಂಡು ವಿಶ್ವ ಅದಕ್ಕೆ ತಡೆ ಹಾಕಿದನು.

"ಅಮ್ಮಾ ಎಲ್ಲಿ, ತಿಂಡಿ ಕಾಫಿ ಮುಗೀಲಿ, ಆಮೇಲೆ ಹುಡ್ಗಿ ವಿಷಯ. ಬರೀ ಹೊಟ್ಟೇಲಿ ಆ ವಿಷ್ಯ ಮಾತಾಡ್ಬಾರ್ದು...."

"ಅಯ್ಯೊ ನನ್ನ ಮರೆವಿಗಿಷ್ಟು !" ಕಾವೇರಮ್ಮ ಎದ್ದಾಗ ಅವರ ಹಿಂದೆ

ಮಣಿಯಮ್ಮನೂ ಹೊರಟರು. ನಿರ್ಮಲ ಸೆರಗಿನ ತುದಿಯನ್ನು ಬೆರಳಿಗೆ ಸುತ್ತಿಕೊಂಡಾಗ ವಿಶ್ವ ಗಮನಿಸಿದ.

"ಮೊದ್ಲು ಒಬ್ಬರನ್ನೊಬ್ಬರು ಇಂಟ್ರಡ್ಯೂಸ್ ಮಾಡ್ಕೊಳ್ಳೋಣ.... ಅಷ್ಟೇನಪ್ಪಾ" ರಂಗನಾಥಯ್ಯ ಹೌದೆನ್ನುವಂತೆ ತಲೆಯಲ್ಲಾಡಿಸಿದರು. "ನಿರ್ಮಲ ಇಲ್ಬಾ, ಎಲ್ರಿಗೂ ಇಂಟ್ರಡ್ಯೂಸ್ ಮಾಡ್ತೀನಿ....ಇವರು ಅನಂತ್ ಅಂತ. ಪ್ರೈವೇಟ್ ಫರ್ಮ್‌ನಲ್ಲಿ ಲೀಗಲ್ ಅಡ್ವೈಸರ್....ನಂ. ಒನ್, ಅವರ ಪಕ್ಕದಲ್ಲಿರೋವ್ರು, ಅಮರೇಶ್, ಮೆಡಿಕಲ್ ಕಾಲೇಜ್ನಲ್ಲಿ ಫೈನಲ್ ಇಯರ್.... ನಂ. ಫೈವ್ ....ಇವರು. ಅರವಿಂದ್ ಅಂತ, ಕಾಲೇಜ್ನಲ್ಲಿ ಇಂಗ್ಲೀಷ್ ಲೆಕ್ಚರರ್....ನಂ. ಥ್ರೀ....ಅಜಯ್ ಆರ್ಕಿಟೆಕ್ಟ್... ನಂ. ಫೋರ್. ನೋಡಮ್ಮಾ ಇವ್ರೇ ಅಶೋಕ್....ಇಂಜನಿಯರ್, ಪಿ. ಡಬ್ಲ್ಯು. ಡಿ. ನಲ್ಲಿದ್ದಾರೆ ಇವ್ರು ನಂ. ಟೂ. ಇವ್ಳು ನನ್ತಂಗಿ ನಿರ್ಮಲಾ....ಬಿ. ಎ. ಪಾಸ್ ಮಾಡಿದ್ದಾಳೆ. ಸೀನಿಯರ್ ಟೈಪ್‌ರೈಟಿಂಗ್ ಆಗಿದೆ, ಟೇಬಲ್ ಟೆನ್ನಿಸ್ ಚೆನ್ನಾಗಿ ಆಡ್ತಾಳೆ. ಟೈಲರಿಂಗ್ ಕ್ಲಾಸಿಗೆ ಹೋಗ್ತಾಳೆ...." ನಿರ್ಮಲ ಎಲ್ಲರಿಗೂ ಕೈ ಮುಗಿದಳು, ಕಂದು ಬಣ್ಣದ ಪ್ಯಾಂಟು ಹಾಕಿರುವವನು ಹಾಗಾದರೆ ಅಶೋಕ ! ಅವನತ್ತ ಕುಡಿನೋಟ ಹರಿಸಿದಳು. ಅವನೂ ಅವಳನ್ನೇ ನೋಡುತ್ತಿದ್ದುದು ಅವಳಿಗೆ ಅರಿವಾಗಿತ್ತು. ದೃಷ್ಟಿ ಸಮಾಗಮವಾದಾಗ ನಿರ್ಮಲಳ ಮೈ ಬಿಸಿ ಯಾಯಿತು. ಅವಳ ಕೆಂಪಾದ ಮುಖವನ್ನು ಹತ್ತು ಕಣ್ಣುಗಳು ನೋಡು ತ್ತಿದ್ದುದೂ ತಿಳಿಯಿತು.

"ನಿರ್ಮಲಾ ತೊಗೊ, ಎಲ್ರಿಗೂ ಕೊಡು...." ಕಾವೇರಮ್ಮನ ದನಿ ಕೇಳಿ ನಿರ್ಮಲ ಅಲ್ಲಿಂದ ಸರಿದಳು. ಎಲ್ಲರ ಮುಂದೆ, ಕೊಬ್ಬರಿ ಮಿಠಾಯಿ, ಈರುಳ್ಳಿ ಉಪ್ಪಿಟ್ಟು, ಹೀರೇಕಾಯಿ ಬೋಂಡವನ್ನು ಹಿಡಿದಳು. ವಿಶ್ವ ಎಲ್ಲರಿಗೂ ಕಾಫಿಯ ಲೋಟಗಳನ್ನಿತ್ತನು. ಸೋದರತ್ತೆಯೆನಿಸಿದ ವೆಂಕಮ್ಮ ಮಡಿಯೆಂದು ಕೊಬ್ಬರಿ ಮಿಠಾಯಿ, ಕಾಫಿ ಬಿಟ್ಟು ಮತ್ತೇನನ್ನೂ ತೆಗೆದು ಕೊಳ್ಳಲಿಲ್ಲ.

ಅವರೆಲ್ಲರೂ ಕಾಫಿ ತಿಂಡಿ ತೆಗೆದುಕೊಳ್ಳುತ್ತಿದ್ದ ಸಮಯ ನೋಡಿ ನಿರ್ಮಲ ಸಮಯ ಸಾಧಿಸಿ ಒಳಗೆ ನಡೆದಳು. ಸೊಂಟದವರೆಗಿದ್ದ ದಟ್ಟ

ಕೂದಲಿನ ಒಂದು ಜಡೆ, ಬಡನಡು ಬಳುಕಿಸುತ್ತಾ ತಾನು ನಿರ್ಗಮಿಸುತ್ತಿದ್ದು ದ್ದನ್ನು ಎಲ್ಲರೂ ನೋಡುತ್ತಿರುವುದು ಅನಳಿಗೆ ತಿಳಿದಿತ್ತು.

ವಧು ಪರೀಕ್ಷೆಯಲ್ಲಿ ಉಂಟಾಗಿದ್ದ ಉದ್ವೇಗ, ಆವೇಶಗಳನ್ನು ತಡೆ ಹಿಡಿದಿದ್ದ ನಿರ್ಮಲ ತನ್ನ ಕೊಠಡಿಯಲ್ಲಿ ಕುರ್ಚಿಯೊಂದನ್ನೊರಗಿ ಎದುರಿಗಿದ್ದ ಕಥೆ ಪುಸ್ತಕ ಒಂದರಿಂದ ಗಾಳಿ ಹಾಕಿಕೊಂಡಳು. ತಲೆಗೆ ಭಾರವಾಯಿ ತೆಂದು ಮಣಿಯಮ್ಮ ತಂದುಕೊಟ್ಟಿದ್ದ ಸೇವಂತಿಗೆಯ ಹೂವನ್ನು ತೆಗೆದು ಟೇಬಲ್ಲಿನ ಮೇಲಿಟ್ಟಳು. ಆಗತಾನೆ ಕಂಡುಬಂದಿದ್ದ ಅಶೋಕನ ಮುಖ ವನ್ನು ಸ್ಮೃತಿಪಟಲದ ಮೇಲೆ ಚಿತ್ರಿಸಿಕೊಳ್ಳಲು ಕಣ್ಮುಚ್ಚಿ ಕುಳಿತಳು. ಕಂದು ಬಣ್ಣದ ಪ್ಯಾಂಟು, ಬಿಳಿಯ ಷರಟು, ತೆರೆದಿದ್ದ ಷರಟಿನ ಮುಂಭಾಗ ದಲ್ಲಿ ಕಾಣುತ್ತಿದ್ದ ರೋಮ ತುಂಬಿದ್ದ ಹರವಾದ ಎದೆ. ಕಂದುಗೆಂಪು ಬಣ್ಣ, ಕತ್ತಿನವರೆಗಿದ್ದ ಹೊಳೆಯುತ್ತಿದ್ದ ಕ್ರಾಪು, ಕಿರಿದಾದ, ಪ್ರಜ್ವಲಿ ಸುತ್ತಿದ್ದ ಕಪ್ಪು ಕಣ್ಣು, ದಟ್ಟವಾದ ಕಿರುಮೀಸೆ, ಕಿರುನಗು ಹೊತ್ತ ತುಟಿ. ಅದಕ್ಕೆ ಮುಂದೆ ಅವಳಿಗೆ ಯೋಚಿಸಲಾಗಲಿಲ್ಲ. ಅವನು ಕತ್ತಿನವರೆಗೆ ಕ್ರಾಪು ಬಿಟ್ಟಿದ್ದನೋ ಇಲ್ಲವೊ, ಅರವಿಂದನಿರಬೇಕು ಕತ್ತಿನವರೆಗೆ ಕ್ರಾಪಿದ್ದ ವನು. ದಟ್ಟ ಕರಿಮೀಸೆ ಇದ್ದುದು ಅಜಯನಿರಬೇಕು, ಅಶೋಕನಾಗಿರ ಲಾರದು. ನಗುತ್ತಿದ್ದ ತುಟಿ ಹೊತ್ತವನೂ ಅಜಯನಿರಬೇಕು. ಅಶೋಕ ತನ್ನನ್ನು ನೇರವಾಗಿ ದಿಟ್ಟಿಸಿದ್ದಷ್ಟೇ ಜ್ಞಾಪಕ, ಎದೆಯ ತುಂಬ ರೋಮ ವಿದ್ದುದು ಅರವಿಂದನಿಗಿರಬೇಕು. ಅವಳು ಅಶೋಕನ ರೂಪವನ್ನು ಚಿತ್ರಿಸಿ ಕೊಳ್ಳಲಾಗದೆ ಗೊಂದಲಕ್ಕೀಡಾದಳು.

"ನಿಮ್ಮೊ, ನಿಂಜೊತೆ ಸ್ವಲ್ಪ ಮಾತಾಡ್ಬೇಕಂತೆ!" ವಿಶ್ವ ಬಂದು ಹೇಳಿದಾಗ ನಿರ್ಮಲ ಬೆಚ್ಚಿದಳು. ತಾನು ಅವರನ್ನು ಚಿತ್ರಿಸಿಕೊಳ್ಳುತ್ತಿರು ವಾಗ ಎದುರಿಗೇ ಬಂದು ನಿಂತರೆ...ತಾನೀಗ ಕಣ್ತುಂಬಾ ನೋಡಬಹುದು! ನಿರ್ಮಲ ಸರಕ್ಕನೆದ್ದು ಸೆರಗು, ನೆರಿಗೆ ಸರಿಮಾಡಿಕೊಂಡಳು. ಎದುರಿಗೇ ಬಂದು ನಿಂತುಬಿಟ್ಟರೆ! ಅವಳಿಗೆ ನಾಚಿಕೆಯಿಂದ ತಲೆಯೆತ್ತಲಾರದಾಯಿತು. ಹೆಬ್ಬೆರಳಿನಿಂದ ನಿಂತ ನೆಲ ಕೆರೆಯುತ್ತಿದ್ದಾಗ ಕರಿಯ ಶೂಸುಗಳ ಎರಡು ಕಾಲುಗಳು ಕಂಡವು. ಗಂಟಲು ಸರಿಮಾಡಿಕೊಂಡ ಸದ್ದು.

"ನಿಮ್ಮಪತ್ರ ಬಂದಾಶೂ" ದನಿ ಕೇಳಿ ನಿರ್ಮಲಳ ಅಂಗೈ, ಹಣೆ ಬೆವರಿ

ಟ್ಟಿತು. "ಹೇಳಿ ಪರ್ವಾಗಿಲ್ಲ...." ಮಾತು ಹೊರಡುವಷ್ಟರಲ್ಲಿ ನಿರ್ಮಲಳಿಗೆ ಅರ್ಧ ಜೀವ ಹೋಗಿ ಮತ್ತೆ ಬಂದಂತಾಯಿತು.

"ನನ್ನ ತಮ್ಮ ನಿಮಗೆ ಒಪ್ಪಿಗೇನಾ ? ನಿಸ್ಸಂಕೋಚವಾಗಿ ಹೇಳಬೇಕು!" ನಿರ್ಮಲಳ ಎದೆ ಬಡಿತ ಒಮ್ಮೆಗೇ ನಿಂತಂತಾಯಿತು. ತಲೆಯೆತ್ತಿ ಅಚ್ಚರಿಯಿಂದ ಎದುರಿಗಿದ್ದ ವ್ಯಕ್ತಿಯನ್ನು ದಿಟ್ಟಿಸಿದಳು. ಕೆಂಪಾಗಿದ್ದ ಮುಖ ಬಿಳಿಚಿಕೊಂಡಿತು. ಒಮ್ಮೆಗೇ ಉರಿಯುತ್ತಿದ್ದ ದೀಪಕ್ಕೆ ತಣ್ಣೀರೆರಚಿದಂತಾಗಿತ್ತು.

ಗಂಭೀರವಾದ ಮುಖ, ನಿರ್ಮಲವಾದ ಸ್ನಿಗ್ಧ ನಯನಗಳು, ಎತ್ತಿ ಬಾಚಿದ್ದ ಕ್ರಾಪಿನಲ್ಲಿ ಅಲ್ಲಲ್ಲಿ ಕಾಣುತ್ತಿದ್ದ ಒಂದೆರಡು ಬಿಳಿಯ ಕೂದಲು, ನೀಳವಾದ ಮೂಗು, ಬಲಗೆನ್ನೆಯ ಮೇಲಿದ್ದ ಅವರೇಕಾಳಿನಷ್ಟು ಸುಟ್ಟ ಗಾಯದ ಕಲೆ, ಏರಿಳಿಯುತ್ತಿದ್ದ ಹರವಾದ ಎದೆ, ಕರಿಯ ಪ್ಯಾಂಟು, ಬಿಳಿಯ ಸಿಲ್ಕಿನ ಷರಟು, ವಿಶಾಲವಾದ ಹಣೆಯಲ್ಲಿದ್ದ ಗೆರೆಗಳು. ತಮ್ಮನ ಮದುವೆಯ ಭಾರ ಹೊತ್ತರೆ ಹೊರಲಿ, ಗಂಡು-ಹೆಣ್ಣಿನ ಒಪ್ಪಿಗೆಯೂ ಇವನಿಂದಲೇ ಆಗಬೇಕೆ ? ಎಂದರೆ ತಮ್ಮಂದಿರೆಲ್ಲಾ ಇವನ ಕೈಗೊಂಬೆಯಿರಬೇಕು. ತಾನು ಅಶೋಕನನ್ನು ಮದುವೆಯಾದರೆ ಅನಂತನಿಗಾಗಿ, ಅಣ್ಣನಿಗಾಗಿ ! ಕ್ರೋಧ ಒಳಗೆ ಹೊಗೆಯಾಡಿತು, ಕಣ್ಣುಗಳು ತೀಕ್ಷ್ಣವಾಯಿತು. ನೋಡಿದ ಕೂಡಲೆ ಒಪ್ಪಿಗೆ ಕೊಡಲು ಸಾಧ್ಯವಿಲ್ಲ. ತಾನು ಯೋಚಿಸಬೇಕು, ಅಣ್ಣನ ದಬ್ಬಾಳಿಕೆಯಲ್ಲಿರುವ ತಮ್ಮನನ್ನು ಮದುವೆಯಾಗುವುದೇ ?

ಅವಳ ಮುಖಭಾವವನ್ನು ಗಮನಿಸುತ್ತಿದ್ದ ಅನಂತ ಗಂಭೀರವಾಗಿ ಉತ್ತರಿಸಿದನು. "ಸಾರಿ, ನಿಮ್ಮನ್ನ ತಕ್ಷಣ ಕೇಳುವುದೂ ತಪ್ಪು, ಆದರೆ ಸಂದರ್ಭ ಹಾಗಿದೆ. ನಾವು ಊರಿಗೆ ಹಿಂತಿರುಗಿದರೆ ಹೀಗೆ ಪರ್ಸನಲ್ ಆಗಿ ನಿಮ್ಮನ್ನ ಕೇಳುವಹಾಗಿಲ್ಲ, ಅದಕ್ಕೆ...." ನಿರ್ಮಲ ಕೋಪ ನುಂಗಿ ಉತ್ತರಿಸಿದಳು. "ಯೋಚಿಸದೇ ಹೇಗೆ ತಕ್ಷಣ ಉತ್ತರ ಕೊಡ್ಲಿ ? ನನ್ನ ತಂದೆ, ತಾಯಿ, ಅಣ್ಣ ಎಲ್ರೂ ಒಪ್ಪಬೇಡ್ವೇ ?"

"ಅವರು ಒಪ್ಪಿಗೆ ಕೊಟ್ಮೇಲೆ ತಾನೆ ನಿಮ್ಮನ್ನ ಒಂದು ಮಾತು ಕೇಳಲೇಬೇಕೆಂದು ನಾನು ಹಟಮಾಡಿ ಬಂದು ಕೇಳ್ತಾ ಇದ್ದೀನಿ." ಅನಂತ ನಯವಾಗಿ ಹೇಳಿದಾಗ ನಿರ್ಮಲ ಅಪ್ರತಿಭಳಾದಳು. ತಂದೆ, ತಾಯಿ, ಅಣ್ಣ

ಒಪ್ಪಿಯಾಗಿದೆ. ತನ್ನ ಒಪ್ಪಿಗೆಗೂ ಮನ್ನಣೆ ಕೊಡುತ್ತಿರುವ ಇವರಿಗೆ ತಾನು ಒರಟಾಗಿ ಉತ್ತರಿಸಬಹುದೇ ? ತಮ್ಮ ಒಪ್ಪಿರುವರೋ ಇಲ್ಲವೋ ? ಇವರು ಒಪ್ಪಿ, ತಮ್ಮ ಒಪ್ಪಿರಬಹುದೆಂದು ಬಂದಿರಬಹುದು.

"ನನ್ನ ಒಪ್ಪಿಗೆ ಸರಿ, ನಿಮ್ಮ....ನಿಮ್ಮ—" ನಿರ್ಮಲಳ ನಾಲಿಗೆ ತಡವರಿಸಿತು. ಅವಳ ಮಾತಿಗೆ ಅನಂತ ಮುಗುಳ್ನಕ್ಕನು, "ನೀವು ಬಂದಾಗಿಂದ ಎದ್ದು ಹೋಗುವವರೆಗೂ ತಿಂದುಬಿಡುವಂತೆ ನೋಡುತ್ತಿದ್ದ ಅಶೋಕ. ಅದನ್ನ ನೀವು ಗಮನಿಸಲಿಲ್ಲಾಂತ ಕಾಣ್ಸತ್ತೆ. ಅದನ್ನು ನೋಡಿಯೇ ನಾನು 'ಆಗಲಿ' ಎಂದದ್ದು. ನಿಮ್ಮನ್ನು ನೋಡಿದ ಮೇಲೆ ಅವನು ಮಾತಾಡುವ ಸ್ಥಿತಿಯಲ್ಲಿಲ್ಲ—"

ನಿರ್ಮಲಳಿಗೆ ಮುಖದ ಮೇಲೆ ಹೊಡೆದಂತಾಯಿತು. ತಮ್ಮನ ಪರವಾಗಿ ಇವರು ಮಾತನಾಡುತ್ತಿರುವರೇ ? ಅವರಿಬ್ಬರನ್ನೇ ಅಲ್ಲಿ ಬಿಟ್ಟು ಒಳಗೆ ಹೋಗಿದ್ದ ವಿಶ್ವ ಬಂದನು.

"ಏನಮ್ಮಾ ನಿಮ್ಮೂ, ನಿನ್ನ ಒಪಿನಿಯನ್ ಹೇಳ್ಬಿಡು. ಅವ್ರೆಲ್ಲಾ ನಾಳೆ ಬೆಳಗ್ಗೇನೇ ಹೊರಟುಹೋಗ್ತಾ ಇದ್ದಾರೆ—"

ನಿರ್ಮಲ ಬಣ್ಣ ಬದಲಿಸುತ್ತಿದ್ದ ಮುಖವನ್ನು ಅವರಿಬ್ಬರಿಂದ ತಿರುಗಿಸಿ ಹೇಳಿದಳು, "ಎಲ್ಲರೂ ಒಪ್ಪಿದರೆ ನಂದೂ ಒಪ್ಪಿಗೆ" ಮೊಟಕಾಗಿ ಉತ್ತರ ಬಂದಾಗ ವಿಶ್ವ ಅನಂತ ಒಬ್ಬರ ಮುಖ ಒಬ್ಬರು ನೋಡಿಕೊಂಡರು. ವಿಶ್ವ ನಸುನಕ್ಕನು.

ಮಣಿಯಮ್ಮ ತಾಂಬೂಲ ತೆಗೆದುಕೊಂಡು ಹೋದಾಗ ಸಂಜೆ ಏಳರ ಮೇಲಾಗಿತ್ತು. ವೆಂಕಮ್ಮ, ಮತ್ತಿತರರು ಮೊದಲೇ ಹೊರಟುಹೋಗಿದ್ದರು. ಅಶೋಕ ತನ್ನೊಡನೆ ಒಂದು ಮಾತೂ ಆಡಲಿಲ್ಲವೆಂಬ ಕೊರಗು ನಿರ್ಮಲಳಿಗಿತ್ತು. ಅವರತ್ತ ಹೋದ ಮೇಲೆ ಕಾಲಿಗೆ ಚಪ್ಪಲಿ ಮೆಟ್ಟಿ ತಾಯಿಯ ಬಳಿ ಬಂದಳು. "ಅಮ್ಮಾ, ನಾನು ಸ್ವಲ್ಪ ಉಮನ ಮನೆಗೆ ಹೋಗ್ಬಿಟ್ಟು ಬರ್ತೀನಿ"

"ಈಗ್ತಾನೆ ಬಂದು ಇಷ್ಟೊತ್ನಲ್ಲಿ ಉಮನ ಮನೇಲಿ ಏನ್ಕೆಲ್ಸ ? ಸುಮ್ನೇ ಮನೇಲೇ ಇರು." ಕಾವೇರಮ್ಮ ರೇಗಿದಾಗ ಮಣಿಯಮ್ಮನೇ ಅವಳ ಪರವಾಗಿ ಮಾತನಾಡಿದರು.

"ಹೋಗ್ಲಿ ಬಿಡ್ರೀ, ಏನೋ ಸ್ನೇಹಿತಳ ಮನೆಗೆ ಹೋಗ್ತೀನೀಂತಾಳೆ. ಏನು ಮಾತಾಡ್ಕೋಬೇಕೋ, ಹೋಗ್ಲೀ ಬಿಡಿ ಪಾಪ...."

"ಬೇಗ ಬನ್ಬಿಡೇ, ತುಂಬಾ ಹೊತ್ತು ಮಾಡ್ಬೇಡ" ಕಾವೇರಮ್ಮ ಹೇಳಿದಾಗ ನಿರ್ಮಲ ಅವರಿಗುತ್ತರಿಸದೇ ಗೆಳತಿಯ ಮನೆಗೆ ಹೊರಟಳು. ಉಮಳ ಮುಂದೆ ಅಂದು ತನಗಾದ ಅವಮಾನವನ್ನೆಲ್ಲಾ ಹೇಳಿಕೊಂಡಾಗ ಹೃದಯ ಹಗುರವೆನಿಸಿತು.

"ಸಾಕು ಬಿಡೇ ...ನೀನೇನೂ ಆ ಅಣ್ಣನ್ನ ಮದ್ವೆ ಆಗ್ತಿಲ್ವಲ್ಲ. ಮದ್ವೆ ಆದ್ಮೇಲೆ ಸ್ವಲ್ಪ ಬುದ್ಧಿ ಕಲ್ಸು ಗಂಡಂಗೆ, ಅದೆಲ್ಲಾ ನಿನ್ಕೈಲಿರೋದೇ....!" ಉಮ ಹೇಳಿದಾಗ ನಿರ್ಮಲಳಿಗೆ ನಿಜವೆನಿಸಿತು.

ನಿರ್ಮಲ, ಅಶೋಕರ ವಿವಾಹ ನಿರಾಡಂಬರವಾಗಿ ಯಾವ ಹೆಚ್ಚು ಗದ್ದಲ ಗಲಾಟೆಯಿಲ್ಲದೆ ನಡೆದುಹೋಯಿತು. ಹಸೆಮಣೆಯ ಮೇಲೆ ಅಶೋಕನ ಪಕ್ಕದಲ್ಲಿ ಕುಳಿತಾಗಲೇ ನಿರ್ಮಲ ಅವನನ್ನು ಸರಿಯಾಗಿ ನೋಡಿದ್ದು, ಮಾತನಾಡಿಸಿದ್ದು, ಲಾಜಾಹೋಮದ ಹೊತ್ತಿನಲ್ಲಿ ಹೊಗೆ ಮುತ್ತಿ ಕಣ್ಣಲ್ಲಿ ಮೂಗಲ್ಲಿ ನೀರು ಸುರಿದಾಗ ಅಶೋಕ ತನ್ನ ಬಳಿಯಿದ್ದ ಕರವಸ್ತ್ರವನ್ನಿತ್ತಿದ್ದನು.

"ಇಷ್ಟೊಂದು ಅತ್ಕೊಂಡು ಅಗ್ನಿಸಾಕ್ಷಿಯಾಗಿ ಕೈಹಿಡಿದಿದ್ರೆ ಏನು ಕಡಿದುಹೋಗ್ತಿತ್ತೊ ? ಇದೆಲ್ಲಾ ಅರ್ಥವಿಲ್ಲದ ಶಾಸ್ತ್ರ!" ಅವಳಿಗೆ ಕೇಳುವಂತೆ ಗೊಣಗಿದ್ದ. ನಿರ್ಮಲ ಅವನ ಕರವಸ್ತ್ರದಲ್ಲಿ ಕಣ್ಣೊರಸಿಕೊಂಡು ಅವನ ಕೈಗೇ ಇತ್ತಿದ್ದಳು.

ಮದುವೆಯ ಮೇಲ್ವಿಚಾರಣೆ , ಮಧ್ಯಸ್ಥಿಕೆಯೆಲ್ಲಾ ಮಣಿಯಮ್ಮನದೇ. ತನ್ನ ಮಗಳಿಗೆ ಒಳ್ಳೆಯ ಕಡೆ ಗಂಡು ಗೊತ್ತುಮಾಡಿ ಕೊಟ್ಟಿದ್ದಕ್ಕಾಗಿ ಕಾವೇರಮ್ಮ ಕಡ್ಡಿ ಜರಿಯಿದ್ದ ಹಸಿರು ಸೀರೆಯೊಂದನ್ನು ಅವರಿಗೆ ತೆಗೆದಿದ್ದರು. ಎರಡು ಕಡೆಗೂ ಓಡಾಡಿಕೊಂಡಿದ್ದ ಅವರಿಗೆ ಅನಂತನು ಒಂದು ಸೀರೆ ತೆಗೆದಿದ್ದ. ಅದನ್ನು ಕಂಡ ವಿಶ್ವ ಮಣಿಯಮ್ಮನನ್ನು ರೇಗಿಸಿದ್ದನು.

"ಏನ್ರೀ, ಈ ಮದ್ವೇಲಿ ಎರಡ್ಸೀರೆ ! ಪರ್ವಾಗಿಲ್ಲ, ಕ್ಯಾಪಿಟಲ್ ಇಲ್ದೇ ಹಾಯಾಗಿ ಪ್ರಾರಂಭಿಸ್ಬೋದು ಈ ಬಿಸಿನೆಸ್. ತಿಂಗಳಿಗೊಂದು ಮದ್ವೆ ಗೊತ್ತುಮಾಡ್ಕೊಟ್ರೇ ಒಂದು ಡಜ಼ ಸೀರೆ ! ಅದೃಷ್ಟವಂತರು !"

"ಸಾಕಪ್ಪಾ ತಮಾಷೆ, ನಿಂಗೂ ಒಂದು ಹೆಣ್ಣು ಹುಡುಕ್ಕೊಡ್ತೀನಿ. ನಂಗೆ ಭಾರಿ ಸೀರೆ ಕೊಡ್ಸು !" ಮಣಿಯಮ್ಮ ನಕ್ಕಿದ್ದರು.

ವೆಂಕಮ್ಮನ ಮಗಳು, ಅಳಿಯಾನೇ ಧಾರೆ ಎರೆಸಿಕೊಂಡಿದ್ದರು. ಅನಂತನೆ ತಮ್ಮನ ಮದುವೆಗೆ ಖರ್ಚು ಮಾಡಿದ್ದನು. ಐದು ಭಾರಿ ಸೀರೆಗಳು, ಚಿನ್ನದಲ್ಲಿ ಸುತ್ತಿದ್ದ ಕರಿಮಣಿ, ಕೈಗೆ ಒಂದು ಜೊತೆ ಬಳೇ ಕೊಂಡು ತಂದಿದ್ದನು. ಸಾಲದ್ದಕ್ಕೆ ಗತಿಸಿದ್ದ ತಾಯಿಯ ಒಡವೆಗಳನ್ನು ನಿರ್ಮಲಳ ಮುಂದೆ ವರಪೂಜೆಯ ದಿನ ತಂದಿರಿಸಿದ್ದನು.

"ಈ ಒಡವೆಗಳಲ್ಲಿ ನಿಮಗ್ಯಾವುದು ಬೇಕೋ ತೊಗೊಳ್ಳಿ, ಮಿಕ್ಕಿದ್ದು ನಮ್ಮ ಅಜಯ, ಅರವಿಂದ ಅಮರೇಶನ ಹೆಂಡತಿಯರಿಗಿಟ್ಟರಾಯಿತು." ನಿರ್ಮಲ ಆ ಹಳೆಯ ಒಡವೆಗಳ ಮೇಲೆ ಕಣ್ಣು ಹಾಯಿಸಿದಳು. ಅಡ್ಡಿಕೆ, ನಾಗಮುರಿಗೆ, ಹವಳ ಮುತ್ತಿನ ಎರಡೆಳೆಯ ಸರ, ಕಾಫಿ ಬೀಜದ ಎರಡೆಳೆಯ ಸರ, ಎಣ್ಣೆ ಕೂತಿದ್ದ ವಜ್ರದೋಲೆ, ಎರಡು ಚಿನ್ನದುಂಗುರಗಳು ಒಂದು ಗೆಜ್ಜೆ ಡಾಬು, ಅವಳಿಗೆ ಅದರಲ್ಲಿ ಯಾವುದನ್ನೂ ಆರಿಸಿಕೊಳ್ಳಲಾಗಲಿಲ್ಲ. ಅಲ್ಲೇ ಇದ್ದ ವೆಂಕಮ್ಮನ ಮಗಳು ದಮಯಂತಿ ಹೇಳಿದಳು, "ಪಾಪ ! ಅವ್ಳೇ ಹೇಗೆ ಆರಿಸ್ಕೊಳ್ತಾಳೆ-ನಾಳೆ ಇನ್ನು ಮಿಕ್ಕ ಸೊಸೆಯರು ಎಲ್ಲಾ ಇವ್ಳೆ ಎತ್ಕೊಂಡ್ಬಿಟ್ಳು ಅಂದಾರೂ... ಅಶೋಕನ್ನೇ ಆರಿಸ್ಕೊಡೂನ್ನೂ !" ಎಂದಾಗ ಅನಂತ ಅಶೋಕ ನನ್ನು ಕರೆದನು. ಆಶೋಕ ವಿಷಯ ತಿಳಿದು ತಲೆಯಲ್ಲಾಡಿಸಿದನು: "ಈ ವಿಚಾರ ಎಲ್ಲಾ ನಂಗೊತ್ತಿಲ್ಲ....ನೀನೇ ಆರಿಸ್ಬಿಡೋ ಅನಂತ."

ಅನಂತ ವಜ್ರದೋಲೆ, ಹವಳ ಮುತ್ತಿನ ಎರಡೆಳೆ ಸರ ತೆಗೆದು ನಿರ್ಮಲಳ ಕೈಗಿತ್ತನು. "ಇವು ಯಾವಾಗ್ಲೂ ನಮ್ಮ ತಾಯಿ ಮೈಮೇಲೆ ಇದ್ದೋವು. ಮನೆಗೆ ದೊಡ್ಡ ಸೊಸೆ ನೀವು. ನೀವು ಹಾಕ್ಕೊಳ್ಳೋದೇ ಸರಿ."

ಅಶೋಕ ಆರಿಸಿಕೊಡಲಿಲ್ಲವೆಂಬ ಅತೃಪ್ತಿ ಮನಸ್ಸಿನಲ್ಲಿದ್ದರೂ ನಿರ್ಮಲ ಅದನ್ನು ತೋರ್ಪಡಿಸಿಕೊಳ್ಳಲಿಲ್ಲ.

ಮದುವೆಯಾದ ತಕ್ಷಣ ತಮ್ಮ ಜೊತೆಗೆ ಹೆಣ್ಣನ್ನೂ ಕರೆಯೊಯ್ಯು

ಬೇಕೆಂದು ವೆಂಕಮ್ಮ ಹೇಳಿದಾಗ ಮಣಿಯಮ್ಮ ಒಪ್ಪಲಿಲ್ಲ. "ಅಲ್ಲಾರೀ.... ತಾಯಿ ಮನೆಯಿಂದ ಮದ್ವೆ ಆದ ತಕ್ಷಣ ಕರ್‍ಕೊಂಡು ಹೊರಟುಹೋದ್ರೇ ಹೇಗೆ...ನೀವೂ ಮದ್ವೆ ಗಲಾಟೆಯಿಂದ ಚೇತರಿಸ್ಕೊಳ್ಳಿ. ನಾವೂ ಚೇತರಿಸ್ಕೊಂಡು ಮುಂದಿನ್ವಾರ ಒಳ್ಳೆಯ ದಿನ ನೋಡಿ ಕರ್‍ಕೊಂಡ್ಬಂದು ಬಿಡ್ತೀವಿ" ಎಂದು ಹಟ ಹಿಡಿದಾಗ ವೆಂಕಮ್ಮ ಒಪ್ಪಿಕೊಳ್ಳಬೇಕಾಯಿತು; ಆದರೆ ಅನಂತನಿಗೆ ಬಹಳ ಅಸಮಾಧಾನವಾಯಿತು. ಮಾತಿನಲ್ಲಿ ತೋರ್ಪಡಿಸಿಕೊಳ್ಳದಿದ್ದರೂ ಮುಖ ಬಹಳ ಗಂಭೀರವಾಗಿತ್ತು.

ಹೊಸ ಹೆಂಡತಿಗೆ ಹೇಳಿ ಹೋಗಲು ಬಂದ ಅಶೋಕನಿಗೆ ಅಣ್ಣನ ಅಸಮಾಧಾನದ ಪರಿಚಯದಿಂದ ಕೆರಳಿದ್ದರಿಂದ ಅವನಿಗೂ ಸಹನೆ ತಪ್ಪಿತು. "ಯಾರೂ ಅದೂ, ಆ ಮುದುಕಮ್ಮ ಬಹಳ ಮಾತಾಡ್ತಾರೆ. ನಮ್ಮ ಸೋದ್ರತ್ತೆಗೆ ಗೊತ್ತು. ನಿಮ್ಗೂ ಅವರ್‍ಗೂ ಬಹಳ ಬಹಳಾಂತ ಕಾಣ್ಸತ್ತೆ. ಮುದ್ಕಮ್ಮಂಗೆ ಮದ್ವೆ ಆಗಿ ಬಾಳ ವರ್ಷಗಳಾಗಿ ಹೋಗಿರ್‍ಬೇಕೂ....ಅದಕ್ಕೆ ಹೊಸ ಗಂಡ ಹೆಂಡ್ತಿ ವಿಷಯ ಏನೂ ಜ್ಞಾಪಕ ಇಲ್ಲ...." ಗೊಣಗಿದಾಗ ನಿರ್ಮಲನಿಗೆ ನಗು ಬಂದಿತ್ತು. "ಅವಳಿಗ್ಯಾರೂ ಮಕ್ಳು ಮರಿ, ಗಂಡ ಯಾರೂ ಇಲ್ವಾ ?" ಅಶೋಕ ಕೇಳಿದಾಗ ನಿರ್ಮಲ ನಗುತ್ತಾ ಹೇಳಿದಳು. "ಗಂಡ ಚಿಕ್ಕವಯಸ್ನಲ್ಲೇ ಬಿಟ್ಟು ಹೊರಟುಹೋದ. ಗಂಡ ಇನ್ನೂ ಇದ್ದಾನೆ ಅನ್ನೋ ನಂಬಿಕೆಯಿಂದ ಮುತ್ತೈದೆಯಾಗೇ ಇದ್ದಾಳೆ. ಇನ್ನು ಮಕ್ಳೆಲ್ಲಿ ಬರ್‍ಬೇಕು ? ಅಲ್ಲಿ, ಇಲ್ಲಿ ಏನಾದ್ರೂ ಕೆಲ್ಸ ಮಾಡ್ತಾರೆ. ದೂರದ ಸಂಬಂಧದಿಂದ ಹುಡುಗನೊಬ್ಬನನ್ನ ಸಾಕ್ಕೊಂಡು ಅವನೇ ಮಗ ಅನ್ಕೊಂಡಿದ್ದಾರೆ."

"ಅದಕ್ಕೇ ನಮ್ಮ ಕಷ್ಟ ಗೊತ್ತಾಗೊಲ್ಲಾ." ಅಶೋಕ ಹೇಳಿದ.... "ನೋಡು ನಿರ್ಮಲ, ನಮ್ಮ ಜೊತೆಗೇ ಬಂದಿದ್ರೆ ಚೆನ್ನಾಗಿರೋದೂ. ವೆಂಕತ್ತೆ ನಿಂಗೆ ಮನೆ ವಿಷ್ಯ ಎಲ್ಲ ತಿಳಿಸಿ ಹೊರಟುಹೋಗ್ತಾ ಇದ್ಲು. ಈಗ ಅವ್ಳು ಹೊರಟುಹೋದ್ರೇ ನಿಂಗೆ ಸ್ವಲ್ಪ ಕಷ್ಟ ಆಗ್ಬೋದೂ....ನಮ್ಮನೇಲಿ ಒಬ್ಬೊಬ್ರು ಒಂದೊಂದು ತರಹ....ಅಲ್ದೇ ಎಲ್ಲಕ್ಕಿಂತ ಬಿಸಿಯಾಗಿದ್ದಾಗ್ಲೇ ತಿನ್ನೋದು ಚೆನ್ನಾ ಅಲ್ವಾ ?" ನಿರ್ಮಲಳ ಕೆನ್ನೆ ಹಿಂಡಿದಾಗ ನಿರ್ಮಲ ಕೆಂಪಗಾದಳು.

"ಒಂದು ವಾರದಲ್ಲಿ ನಾನೇನೂ ಹಳಸಿಹೋಗೋಲ್ವಲ್ಲಾ !"

"ನೀನು ತುಂಬಾ ಚೆನ್ನಾಗಿ ಮಾತಾಡ್ತೀ....ನಿನ್ನಂಡ್ರೆ ಅನಂತಂಗೂ

ತುಂಬಾ ಇಷ್ಟಾಂತ ಕಾಣ್ಸತ್ತೆ !" ಅಶೋಕ ಅವಳ ಕೆನ್ನೆಗೆ ತುಟಿ ತಂದಾಗ ಅವಳ ಕೆಂಪು ಕೆನ್ನೆ ಬೆಳ್ಳಗಾಯಿತು. ರಸನಿಮಿಷದಲ್ಲಿ ಅನಂತನ ನೆನಪೇ ! ಅನಂತನಿಗೆ ತನ್ನನ್ನು ಕಂಡರೆ ಇಷ್ಟವಿದ್ದರೆಷ್ಟು, ಬಿಟ್ಟರೆಷ್ಟು !

"ನೀವೆಲ್ಲಾ ನಿಮ್ಮ ಅಣ್ಣ ಹೇಳಿದ ಹಾಗೇ ಕೇಳ್ತೀರಲ್ಲಾ ?" ಜಡೆಯ ತುದಿಯನ್ನು ಬೆರಳಿಗೆ ಸುತ್ತುತ್ತಾ ಕೇಳಿದಾಗ ಅಶೋಕನ ಮುಖ ಗಂಭೀರ ವಾಯಿತು.

"ಹೌದು, ನಾವುಗಳ್ಯಾರೂ ಅವನನ್ನು ಯಾವ ವಿಧದಲ್ಲೂ ಬೇಸರಪಡಿಸು ವುದಿಲ್ಲ."

"ಅದೇಕೆ ಅವರು ಮದುವೆಯಾಗಲಿಲ್ಲ ?" ನಿರ್ಮಲ ಕೇಳಿದಾಗ ಅಶೋಕ ಮಾತು ಬದಲಿಸಿದನು.

"ಹಾಗಾದರೆ ಮುಂದಿನ ವಾರದತನಕ ಕಾಯಿ ಅಂತೀಯಾ ನನ್ನ ?"

ಅವನಿಗೆ ತನ್ನ ಪ್ರಶ್ನೆಗೆ ಉತ್ತರಿಸಲು ಇಷ್ಟವಿಲ್ಲದಿರುವುದನ್ನರಿತು ನಿರ್ಮಲ ಸುಮ್ಮನಾದಳು.

"ಒಂದು ವಾರ ತಾನೇ ? ಹರ್ವಾಗಿಲ್ಲ, ದಿನಗಳು ಓಡಿಬಂದುಬಿಡುತ್ವೆ !"

"ನಿನ್ನಷ್ಟು ತಾಳ್ಮೆ ನನಗಿಲ್ಲವಲ್ಲ !" ಅಶೋಕ ಅವಳ ಜಡೆಯನ್ನು ಕೈಗೆ ಸುತ್ತಿಕೊಂಡನು.

"ಅಭ್ಯಾಸ ಆಗ್ತಾ ಆಗ್ತಾ ಬರುತ್ತೆ." ನಿರ್ಮಲ ಜಡೆಯನ್ನು ಬಿಡಿಸಿ ಕೊಳ್ಳುತ್ತಾ ಹೇಳಿದಾಗ ಅಶೋಕ ಅವಳ ಮುಖ ಕೈಯಲ್ಲಿ ಹಿಡಿದು ಕೇಳಿದ. "ಅಂದ್ರೆ ಇಂತಹ ಅಭ್ಯಾಸಗಳ್ನ ನಾನು ಎದುರಿಸ್ಬೇಕೂ ಇನ್ಮೇಲೆ ಆಗಾಗ ಅನ್ನು." ನಿರ್ಮಲ ಅವನ ಕಣ್ಣಲ್ಲಿ ಕಣ್ಣಿಟ್ಟು, "ಈಗ್ಲೇ ಅದ್ನೆಲ್ಲಾ ಹೇಗೆ ಹೇಳಲಿ ?" ಎಂದಾಗ ಅಶೋಕ ಅವಳ ನಗುವನ್ನು ತುಟಿಯಲ್ಲೇ ತಡೆದನು.

ಮದುವೆಯಲ್ಲಿ ಕಂಡಿದ್ದು ಮಾತಾಡಿದ್ದು ಬಿಟ್ಟರೆ ಅಶೋಕನೊಂದಿಗೆ ಹೆಚ್ಚು ಮಾತನಾಡಲು ನಿರ್ಮಲನಿಗೆ ಅವಕಾಶ ದೊರೆತಿರಲಿಲ್ಲ. ಆದರೂ ಅವರೆಲ್ಲಾ ಊರಿಗೆ ಹೊರಟುನಿಂತಾಗ ಅವಳಿಗೆ ಎದೆ ಭಾರವಾಗಿ, ಗಂಟಲುಬ್ಬಿ, ಕಣ್ಣಲ್ಲಿ ನೀರು ತುಂಬಿತು. ಅರವಿಂದ, ಅಜಯ್, ಅಮರೇಶ ಮೂವರೂ ಅವಳಿಗೆ ಅಪರಿಚಿತರಂತೆ ಕೈ ಮುಗಿದು ಹೇಳಿದ್ದರು.

"ಅತ್ತಿಗೆ....ಹೋಗ್ಬಿಟ್ಟು ಬರ್ತೀವಿ."

"ಒಳ್ಳೆಯದು." ನಿರ್ಮಲ ಅಷ್ಟೇ ನಿರ್ವಿಕಾರವಾಗಿ ಉತ್ತರಿಸಿದ್ದಳು.

"ನಾವು ಹೋಗಿಬರ್ತೀವಿ, ನಿರ್ಮಲಾ...." ಎಂದು ಅನಂತ ಹೇಳಿದಾಗ ನಿರ್ಮಲಳಿಗೆ ಕೋಪವೇ ಬಂತು. ಇವನೇನು ತನ್ನ ಹೆಸರು ಹಿಡಿದು ಸಂಬೋಧಿಸುವುದು ?

ವೆಂಕಮ್ಮ ನಿರ್ಮಲಳ ತಲೆ ಸವರಿ ಹೇಳಿದ್ದರು. "ನೋಡಮ್ಮಾ, ಇವತ್ತಿಂದ ಆ ಮನೆ ನಿಂದು. ನಮ್ಮ ಅರು, ಅಜಯ, ಅಮರ, ಅನಂತ ಎಲ್ಲರೂ ಅಶೋಕನ ಹಾಗೆ ನಿನಗೆ ಸೇರಿದವರು. ನೀನು ಬರುವಾಗ ನಾನಲ್ಲಿ ಇರೊಲ್ಲ, ಎಲ್ಲಾ ಹುಷಾರಾಗಿ ನೋಡ್ಕೊಮ್ಮ. ಪದ್ಮಮ್ಮ, ಶಿವಮ್ಮ, ಆ ದೋಬಿ ವೆಂಕಟಪ್ಪ ಎಲ್ರ ಮೇಲೂ ಕಣ್ಣಿರ್ಲಿ. ಅನಂತನ ಬಿಟ್ರೆ ಎಲ್ರೂ ಹುಡುಗ ಮುಂಡೇವೇ ! ಅವರಮ್ಮ ಅವರ್ಗೆ 'ಪಂಚಪುಂಡರೂ' ಅಂತ್ಲೇ ಕರೀತಾ ಇದ್ದಿದ್ದು, ಏನು ತಿಳಿದೇ ಇದ್ರೂ ನಮ್ಮ ಅನಂತನ್ನ ಕೇಳಿದ್ರೆ ಹೇಳ್ತಾನೆ... ಬರ್ಲಾ ಮ್ಮಾ ? ದೀಪಾವಳಿ ಹೊತ್ಗೆ ಆದ್ರೆ ಬಂದು ನೋಡ್ಕೊಂಡು ಹೋಗ್ತೀನಿ."

ಅಶೋಕ ಕಣ್ಣಿನಲ್ಲಿ ಅವಳಿಗೆ ಹೇಳಿ ಹೊರಟಿದ್ದನು. ಅವರೆಲ್ಲರೂ ಮನೆ ಬಿಟ್ಟು ಹೊರಟುಹೋದಾಗ ಮನೆಯೆಲ್ಲಾ 'ಬಿಕೋ' ಎನ್ನಿಸಿತು. ಹಾಳು ಮಣಿಯಮ್ಮ ಹೇಳದಿದ್ದರೆ ತಾನೂ ಅವರ ಜೊತೆ ಹೊರಟುಬಿಡಬಹುದಿತ್ತು. ಬೇಸರದಿಂದ ಮುಖ ಸಪ್ಪಗೆ ಮಾಡಿಕೊಂಡು ಕುಳಿತಿದ್ದ ಅವಳನ್ನು ನೋಡಿ ನೋಡಿ ವಿಶ್ವ ಒಳಗೊಳಗೇ ನಕ್ಕನು.

"ನಿಮ್ಮೀ, ಬರ್ತೀಯೇನೇ, ಯಾವ್ದಾದ್ರು ಪಿಕ್ಚರ್ರಿಗೆ ಹೋಗೋಣ ?" ಎಂದು ಕೇಳಿದಾಗ ನಿರ್ಮಲ ತಲೆಯಲ್ಲಾಡಿಸಿದಳು.

"ಇಲ್ಲಾ ಬರೋಲ್ಲ, ತಲೇನೋವು."

"ಇಲ್ಲಿ ಅಷ್ಟೊಂದು ತಲೆನೋವು ಬರೋ ಹಾಗಿದ್ರೆ ಅವರುಗಳ ಜೊತೇಗೆ ನೀನು ಹೊರಟುಹೋಗ್ಬೇಕಿತ್ತಮ್ಮ. ಇನ್ಮೇಲೆ ಎಷ್ಟಾದ್ರೂ ನಾವು ಪರಕೀಯರೇ!"

"ಹೋಗೋ, ನನ್ನ ಸುಮ್ನೇ ಕೀಟಲೆ ಮಾಡ್ಬೇಡಾ."

"ಹೋಗ್ತೀನಮ್ಮಾ ಹೋಗ್ತೀನಿ." ವಿಶ್ವ ಹೊರಟಾಗ ಒಬ್ಬಳೇ ಕುಳಿತು

ಬೇಸರವಾಯಿತು. ಅವನ ಜೊತೆ ತಾನೂ ಪಿಕ್ಚರಿಗೆ ಹೋಗಿದ್ರೆ ಚೆನ್ನಾಗಿತ್ತು ಎನಿಸಿತು.

ಬೇಸರ ನೀಗಲು ಕಾಲಿಗೆ ಚಪ್ಪಲಿ ಮೆಟ್ಟಿಕೊಂಡು ತನ್ನ ಗೆಳತಿ ಉಮನ ಮನೆಗೆಂದು ಹೊರಟಾಗ ಕಾವೇರಮ್ಮ ಮಗಳನ್ನು ಗದರಿದರು.

"ಇನ್ನೂ ಮೈಯಿನ ಅರಿಸಿನದ ನೀರಿನ್ನೂ ಆರಿಲ್ಲ, ಆಗ್ಲೇ ಹೊರಗೆ ಹೊರಡ್ತೀಯಾ ? ಎಲ್ಲೂ ಹೋಗ್ಬೇಡಾ !"

"ಬೇಜಾರಮ್ಮ....ಮನೇಲಿ."

"ಚೆನ್ನಾಯ್ತು, ನಾಳೆ ಹೋಗ್ತಾನೇ ಸಂಸಾರದ ಭಾರ ಹೊರ್ಬೇಕೂ, ಈಗ್ಲಿಂದ್ಲೇ ಅಭ್ಯಾಸ ಮಾಡ್ಕೋ, ಅಲ್ಲಿ ಉಗ್ರಾಣದ ತುಂಬಾ ಮದ್ವೆ ಮನೆ ತಿಂಡಿ ಬಿದ್ದಿದೆ. ಕಾಗದದ ಚೀಲಗಳಿಗೆ ಹಾಕಿಡು. ಅವರಿವರ ಮನೆಗಾದ್ರೂ ಕಳಿಸಿಕೊಡೋಣ...." ಕಾವೇರಮ್ಮ ಹೇಳಿದಾಗ ನಿರ್ಮಲ ಹುಬ್ಬುಗಂಟಿಕ್ಕಿದಳು.

"ಹೇಗಿದ್ರೂ ಮಾಡೋದಿದೇಂತ ಯಾವಾಗ್ಲೂ ಮಾಡ್ತಾನೇ ಇರ್ಬೇಕಾ? ಅದೂ ಬೇಜಾರು ನಂಗೆ!"

"ಈಗ್ಲೇ ಎಲ್ಲಾ ಬೇಜಾರೂಂದ್ರೇ ಹೆಗೆ ? ಚೆನ್ನಾಗಿದೆ." ಕಾವೇರಮ್ಮ ಗೊಣಗಿಕೊಂಡರು.

ನಿರ್ಮಲ ಮತ್ತೆ ತನ್ನ ಕೊಠಡಿಗೆ ಬಂದಳು. ಮದುವೆಯಲ್ಲಿ ಅವಳಿಗೆ ಬಂದಿದ್ದ ಉಡುಗೊರೆಗಳು,ಅವರೂ ಇವರು ಕೊಟ್ಟಿದ್ದ ಸೀರೆ ಬಟ್ಟೆಗಳೂ ಹಾಗೇ ಇದ್ದವು. ಒಂದೊಂದನ್ನೇ ತೆಗೆದು ನೋಡುತ್ತಾ ಕುಳಿತಳು. ತನ್ನ ಗೆಳತಿಯರು ಕೊಟ್ಟ ಸ್ಟೀಲಿನ ತಟ್ಟೆ ಲೋಟಗಳು–ವಿಶ್ವನ ಗೆಳೆಯರು ಕೊಟ್ಟಿದ್ದ ಬ್ರೆಡ್ ಟೋಸ್ಟರ್....ತಂದೆಯ ಸ್ನೇಹಿತರಾದ ಸೀನಯ್ಯನವರು ಕೊಟ್ಟಿದ್ದ ಬೆಳ್ಳಿಯ ಅರಿಸಿನ ಕುಂಕುಮದ ಬಟ್ಟಲು-ಹಾಗೆ ನೋಡುತ್ತಾ ನೋಡುತ್ತಾ ಕೆಂಪು ಲೆದರ್ ಪರ್ಸೊಂದು ಕಣ್ಣಿಗೆ ಬಿತ್ತು. ಅಂಚಿನಲ್ಲಿ ನೆರಿಗೆ ಕಟ್ಟಿದ್ದ ಅರ್ಧಗೋಳಾಕಾರದ ಪರ್ಸು ಅವಳಿಗೆ ಬಹಳ ಚೆನ್ನಾಗಿ ಕಾಣಿಸಿತು. ತನಗೆ ಯಾರು ಕೊಟ್ಟಿರಬಹುದು ? ಉಡುಗೊರೆಗಳ ರಾಶಿಯಲ್ಲಿ ಯಾರು ಯಾವುದು ಕೊಟ್ಟರು, ತಾನೇನು ತೆಗೆದುಕೊಂಡೆ ಎಂಬುದರ ಅರಿವಿರಲಿಲ್ಲ. ವಿಶ್ವ–ಉಮ ಇಬ್ಬರೂ ಅದನ್ನು ತೆಗೆದು ಸರಿಯಾಗಿಡಿಸಿದ್ದರು.

ಕೆಂಪು ಪರ್ಸನ್ನು ಕೈಯಲ್ಲಿ ಹಿಡಿದು ತಿರುಗಿಸಿ ನೋಡಿದಳು: ಅದರ ಬಾಯಿ ತೆರೆದು ನೋಡಿದಳು—ನಾಲ್ಕೈದು ಭಾಗಗಳಿದ್ದವು. ಮಧ್ಯದ ಜಿಪ್ಪನ್ನು ತೆಗೆದಾಗ ಅದರಲ್ಲೊಂದು ಪುಟ್ಟ ಚೀಟಿಯಿದ್ದಿತು. ಅದನ್ನು ತೆಗೆದು ನೋಡಿದಾಗ "ಪ್ರೀತಿಯ ಅತ್ತಿಗೆಗೆ, ಅರವಿಂದ" ಎಂದಿದ್ದುದು ಕಂಡು ಅವಳಿಗೆ ಆಶ್ಚರ್ಯವಾಯಿತು. ತನ್ನೊಡನೆ ಮಾತನಾಡದಿದ್ದರೂ ಅವನು ತನಗೆ ಉಡುಗೊರೆ ಕೊಡಲು ಕಾರಣವೇನು ? ತನ್ನ ಗಂಡನನ್ನು ಬಿಟ್ಟರೆ ಮಿಕ್ಕ ನಾಲ್ವರಲ್ಲಿ ಅರವಿಂದನಿಗೇ ತನ್ನನ್ನು ಕಂಡರೆ ಇಷ್ಟವಿರಬಹುದು. ನಯವಾಗಿ ಪರ್ಸನ್ನು ಸವರಿದಳು. ತಾನು ಕಂಡಂತೆ ಅಮರೇಶ ಲಗ್ನದ ಹೊತ್ತಿನಲ್ಲೂ ಹೊರಗೆ ಸಿಗರೇಟು ಸೇದುತ್ತಾ ನಿಂತಿದ್ದು ಕಂಡಿತ್ತು. ಅಜಯ್, ತಾನೂ, ತನ್ನ ಗಂಡನೂ ಇಬ್ಬರೂ ಹಿರಿಯರಿಗೆ ನಮಸ್ಕಾರ ಮಾಡಲು ಹೊರಟಾಗ ಎದುರಿಗೆ ಬಂದ ಅಜಯನನ್ನು ತಾನು ನೋಡಿ ಮುಗುಳ್ನಕ್ಕಾಗ ನೋಡಿಯೂ ನೋಡದಂತೆ ತಲೆತಿರುಗಿಸಿ ನಡೆದಿದ್ದನು. ಅನಂತ ನಿರ್ಲಿಪ್ತನಾಗಿ ಕುರ್ಚಿಯೊರಗಿ ಕುಳಿತಿದ್ದನು. ಅರವಿಂದನೊಬ್ಬನೇ ತಮ್ಮಿಬ್ಬರನ್ನೂ ನೋಡಿ ನಗೆಗಣ್ಣು ಅರಳಿಸಿ ಹೂನಗು ಬೀರಿದ್ದನು.

ತನ್ನ ಅಳಿದ ಅತ್ತೆಯ ಒಡವೆಗಳಾದ ಮುತ್ತು ಹವಳದ ಸರವನ್ನೂ, ವಜ್ರದೋಲೆಯನ್ನೂ ತೆಗೆದು ನೋಡಿದಳು. ತನ್ನ ಅತ್ತೆ ಹೇಗಿದ್ದಿರಬಹುದು ? ಐವರು ಗಂಡುಮಕ್ಕಳಲ್ಲಿ ಯಾರು ತಾಯಿಯನ್ನು ಹೋಲುತ್ತಿರಬಹುದು ? ಯಾರೂ ತನಗೆ ಅತ್ತೆ-ಮಾವನ ಫೋಟೋ ತೋರಿಸಿರಲಿಲ್ಲ. ಮನೆಯಲ್ಲಿರಬಹುದು. ಅವರ ತಾಯಿ ಹಾಕಿಕೊಳ್ಳುತ್ತಿದ್ದ ಆಭರಣಗಳನ್ನು ತಾನು ಹಾಕಿಕೊಂಡು ಹೋದರೆ ಇವರಲ್ಲಿ ಯಾರು ಏನೆಂದುಕೊಳ್ಳಬಹುದು? ತಾಯಿಗೆ ಹೇಳಿ ಸರಕ್ಕೆ ಮೆರಗು ಹಾಕಿಸಿಕೊಂಡು ವಜ್ರದೋಲೆಯಲ್ಲಿ ಕುಳಿತಿದ್ದ ಎಣ್ಣೆ ತೆಗೆಸಬೇಕು. ಅವುಗಳನ್ನು ಕೈಯಲ್ಲಿ ಹಿಡಿದು ತಾಯಿಯ ಬಳಿಗೆ ಬಂದಳು.

"ಅಮ್ಮಾ, ಸರಕ್ಕೆ ಪಾಲಿಶ್ ಹಾಕಿಸ್ಕೊಡೂ, ಈ ಓಲೆಯನ್ನು ಕ್ಲೀನ್ ಮಾಡಿಸಿಕೊಡು, ಅಲ್ಲಿಗೆ ಹೋದಾಗ ಇದನ್ನೆ ಹಾಕ್ಕೊಂಡು ಬರ್ಬೇಕೂಂತಾ ಇವರು ಹೇಳಿದ್ದಾರೆ...." ಅಳಿಯ ಹೇಳಿದನೆಂದರೆ ತಾಯಿ ಏನೂ ಹೇಳುವುದಿಲ್ಲವೆಂದು ನಿರ್ಮಲಳಿಗೆ ಗೊತ್ತು.

"ಅಗ್ಲಿ, ನಾಳೆ ಚಿದಂಬರಯ್ಯನ್ನ ಮನೆಗೇ ಕರ್‍ಸಮಾಡ್ಕೊಳ್ಳೋಣ–ಜೋಪಾನ ವಾಗಿಟ್ಟಿರು...."

ಅಂದು ರಾತ್ರಿ ಅವಳ ಕಣ್ಣಿಗೆ ಬೇಗ ನಿದ್ರೆ ಹತ್ತಲಿಲ್ಲ.

೪

ನಿರ್ಮಲ, ರಂಗನಾಥಯ್ಯ, ಕಾವೇರಮ್ಮ, ಮಣಿಯಮ್ಮ ನಾಲ್ವರೂ ಟ್ಯಾಕ್ಸಿಯಿಂದ ಇಳಿದಾಗ ಎದುರುಗೊಳ್ಳಲು ಅನಂತನೇ ಮೊದಲು ಬಂದದ್ದು.

"ಪರ್ವಾಗಿಲ್ಲ, ಟ್ರೈನು ಸರಿಯಾದ ಟೈಂಗೇ ಬಂದ್ಬಿಡ್ತೂಂತ ಕಾಣ್ಸುತ್ತೆ.... ಬನ್ನಿ" ಅವನ ಹಿಂದೆಯೇ ಬಂದ ಅಶೋಕ ನಿರ್ಮಲಳ ಕಣ್ಸೆರೆ ಹಿಡಿದು ಕಣ್ಣು ಮಿಟುಕಿಸಿ ಹೇಳಿದ, "ಅಂತೂ ನಮ್ಮನೆಗೆ ಬರೋ ದೊಡ್ಮನಸ್ಸು ಮಾಡ್ಬಿಟ್ರೀ...."

ಬಣ್ಣ ಬಣ್ಣದ ಲುಂಗಿ, ಅದರ ಮೇಲೊಂದು ನೆಟ್‌ಬನಿಯನ್ನು ಹಾಕಿಕೊಂಡು, ಅದರ ಮೇಲೊಂದು ಟವಲು ಹಾಕಿಕೊಂಡು ಬಂದ ಅರವಿಂದ ಮುಗುಳ್ನಕ್ಕನು. "ಅತ್ತಿಗೆಯ ಮನೋವೇಗದಿಂದ ಟ್ರೈನೂ ಬೇಗ ಬಂದ್ಬಿಟ್ಟಿರ್ಬೇಕೂ....ಅಥ್ವಾ ಅತ್ಗೆ ಮುಖ ನೋಡಿದ್ರೇ ಅಲ್ಲಿಂದ ಇಲ್ಲಿವರ್‍ಗೂ ಟ್ರೈನ್ನ ತಳ್ಕೊಂಡೇ ಬಂದಿರ್‍ಬೇಕೂ...." ನಿರ್ಮಲ ಅವನತ್ತ ನೋಡಿ ನಕ್ಕಳು. ಅಮರೇಶ್, ಅಜಯ್ ಕಾಣಲಿಲ್ಲ.

"ಅದೇನು ಶಾಸ್ತ್ರನೋ ನಮಗ್ಯಾರ್‍ಗೂ ತಿಳ್ಯೋಲ್ಲ. ಅದೇನ್ಮಾಡ್ಬೇಕೋ ಹೇಳಿದ್ರೆ ಮಾಡ್ತೀವಿ..." ಅನಂತ ಹೇಳಿದಾಗ ಮಣಿಯಮ್ಮ ಸಡಗರದಿಂದ ಒಳಗೆ ಹೋದರು. ಸೇರಿನ ತುಂಬಾ ಅಕ್ಕಿ ಬೆಲ್ಲ ತಂದಿಟ್ಟರು. ಕೈಯಲ್ಲಿ ಆರತಿ ತಟ್ಟೆ ಹಿಡಿದು ಬಂದರು

"ಬಲಗಾಲು ಮೊದಲಿಟ್ಟು ಬಲಗಾಲಿಂದ ಅದ್ನ ಒದ್ಬಿಟ್ಟು ಬಾ ನಿರ್ಮಲ....ಅದ್ಸರಿ ನಂಜೊತೆಗೆ ಆರ್‍ತಿ ಎತ್ತೋಕೆ ಯಾರೂ ?"

"ನಾನು ಬರ್‍ತೀನಿ ಬನ್ನಿ." ಅರವಿಂದ ಮುಂದೆ ಬಂದ–"ಪರ್ವಾಗಿಲ್ಲ

ತಾನೇ....?" ಎಲ್ಲರಿಗೂ ನಗು ಬಂದಿತು. "ನಮ್ಮಲ್ಲಿ ಎಲ್ಲರಿಗಿಂತ ಹೆಂಗರುಳು ಅವನಿಗೇ, ಅವನೇ ನಮ್ಮನೆ ಹೆಣ್ಮಗಳು." ಅನಂತ ಹೇಳಿದಾಗ ಮಣಿಯಮ್ಮ ನಕ್ಕರು.

"ಬಾರಪ್ಪಾ, ಬಾ. ನಾನೂ ನೀನೇ ಆರತಿ ಎತ್ತ್ಗೋಣ."

ಅರವಿಂದ ಮಣಿಯಮ್ಮ ಆರತಿಯೆತ್ತಿ ಆರತಿಯ ನೀರನ್ನು ಚೆಲ್ಲಿ ಬಂದಾಗ ನಿರ್ಮಲ ಬಲಗಾಲು ಮುಂದಿಟ್ಟು ಮನೆಯೊಳಗೆ ಕಾಲಿಟ್ಟಳು. ತಕ್ಷಣ ಬೆಲೂನೊಂದು ಒಡೆದು ಅವಳ ತಲೆಯ ಮೇಲೆ ಫಳಫಳ ಹೊಳೆಯುತ್ತಿದ್ದ ಜಿಗಣದ ಪುಡಿ ಉದುರಿತು. ಅರವಿಂದ ಅಶೋಕನ ಬೆನ್ನು ತಟ್ಟಿ ಕೇಳಿದ.

"ಹೇಗಿದೆ ನನ್ನ ಪ್ಲಾನೂ....ನೀನೂ ಅತ್ಗೇ ಜೊತೆಗೇ ಬಂದಿದ್ರೆ ನಿಂಗೂ ಆ ಪುಷ್ಪವೃಷ್ಟಿಯಾಗ್ತಾ ಇತ್ತು!"

ಅನಂತ ನಯವಾಗಿ ಗದರಿದನು."ಅರೂ ಸಾಕು, ಒಳ್ಗೋಗಿ ಪದ್ದಮ್ಮಂಗೆ ಹೇಳಿ ಕಾಫಿ ತಿಂಡಿ ತೊಗೊಂಡ್ಬಾ–ಎಲ್ಲಿ ಅಮರೇಶ್, ಅಜಯ್....? ಕರೀ ಅವರ್ನ. ನಿರ್ಮಲನ ಸಾಮಾನೆಲ್ಲ ಅಶೋಕನ ರೂಮಿನಲ್ಲಿಡ್ಲಿ."

"ಮುಂಚೆ ಹೊಟ್ಟೆ ಸೇವೆ ಆಗ್ಲಿ. ಆಮೇಲೆ ನಾನೇ ಸಾಮಾನೆಲ್ಲಾ ಎತ್ತಿ ಇಡ್ತೀನಿ....ಅಮರೇಶ್ ನಿನ್ನೆ ರಾತ್ರಿ ನೈಟ್ ಶೋದಿಂದ ಬಂದಾಗ ಒಂದ್ಗಂಟೆ–ಅವನಿಗಿನ್ನೂ ಬೆಳಗಾಗಿಲ್ಲ. ಅಜಯ್ ಮನೇಲಿಲ್ಲ-ಸ್ಕೂಟರ್ ಹಾಕ್ಕೊಂಡು ಎಲ್ಲೋ ಹೋದ..."

"ಪರ್ವಾಗಿಲ್ಲ....ನಾನು ತೊಗೊಂಡ್ಹೋಗಿ ಇಡ್ತೀನಿ" ಅಶೋಕ ಹೇಳಿದ, "ನೀನು ಮುಂಚೆ ಬಚ್ಚಲು ಮನೆ ತೋರ್ಸು...."

ಅಷ್ಟರಲ್ಲಿ ಅಡಿಗೆಯ ಪದ್ದಮ್ಮ ತಲೆ ಮೇಲಿನ ಸೆರಗು ಸರಿ ಮಾಡಿಕೊಂಡು ಹೊರಬಂದರು.

"ಬನ್ನಿ...ನಾನು ತೋರಿಸ್ತೀನಿ. ಬಂದ ತಕ್ಷಣ ನನ್ನ ಅವಲಕ್ಷಣದ ಮುಖ ಯಾಕೆ ತೋರಿಸ್ಲೀಂತ ಬರ್ಲಿಲ್ಲ."

ಅನಂತ, ರಂಗನಾಥಯ್ಯ, ಮಾತನಾಡುತ್ತಾ ಕುಳಿತರು. ಮಣಿಯಮ್ಮ ಕಾವೇರಮ್ಮ, ಪದ್ದಮ್ಮನ ಜೊತೆ ಅಡಿಗೆ ಮನೆ ಸೇರಿದ್ದರು. ಅಶೋಕ ಅರವಿಂದ ಇಬ್ಬರೂ ನಿರ್ಮಲನ ಸಾಮಾನುಗಳನ್ನು ಅಶೋಕನ ರೂಮಿಗೆ ಸಾಗಿಸಿದ್ದರು. ಅರವಿಂದ ಒಂದು ತಟ್ಟೆಯಲ್ಲಿ ಕೇಸರಿಭಾತು ಇನ್ನೊಂದು ತಟ್ಟೆಯಲ್ಲಿ ಹೊಗೆ ಯಾಡುತ್ತಿದ್ದ ಇಡ್ಲಿಯನ್ನು ತಂದು ಮುಂದಿಟ್ಟನು.

"ತಗೊಳ್ಳಿ ಅತ್ಗೆ, ಇವೆರ್ಡೂ ನಮ್ಮ ಪದ್ದಮ್ಮಂಗೆ ಬರೋ ಎರ್ಡೇ ತಿಂಡಿಗಳು."

ನಿರ್ಮಲ ಕೇಸರಿಭಾತನ್ನು ಅರ್ಧ ಇಡ್ಲಿ ತಟ್ಟೆಗೆ ಹಾಕಿ. ಒಂದೇ ಇಡ್ಲಿಯನ್ನು ತೆಗದು ತನ್ನ ತಟ್ಟೆಗೆ ಹಾಕಿಕೊಂಡಳು.

"ಥ್ಯಾಂಕ್ಸ್, ಇಷ್ಟು ಸಾಕು; ತುಂಬಾ ಜಾಸ್ತಿಯಾಗುತ್ತೆ."

ಅರ್ಧ ಕೇಸರಿಭಾತನ್ನೂ ಇಡ್ಲಿಯನ್ನೂ ಅಶೋಕನಿಗಿತ್ತನು. "ತೊಗೋಪ್ಪಾ, ನಂಗೊಂದು ನಿಂಗೊಂದೂಂತ ಇಟ್ಟುಕೊಟ್ಟಿದ್ದಾರೆ ಅಥಾರ್ಂಗಿ..."

ನಿರ್ಮಲಳಿಗೆ ಮನೆಯ ವಾತಾವರಣ ಬಹಳ ಶಿಥಿಲವೆನಿಸಿತು. ತಾನು ಬರುವುದು ತಿಳಿದೂ ಅಮರೇಶ ಎದ್ದಿಲ್ಲ. ಅಜಯ ಮನೆಯಲ್ಲಿಲ್ಲ. ಅನಂತ ನಿರ್ಲಿಪ್ತ. ಅಶೋಕ, ಅರವಿಂದ ಇಬ್ಬರಿಗೇ ತಾನು ಬೇಕಾಗಿರುವುದು. ನಾಲಿಗೆಯ ಮೇಲಿದ್ದ ಕೇಸರಿಭಾತು ಕಹಿಯೆನಿಸಿತು.

ಅಡಿಗೆ ಮನೆಯಲ್ಲಿ ಪದ್ದಮ್ಮ ಮಾತಿನ ಹೊಳೆ ಹರಿಸಿದ್ದರು. "ಎಲ್ಲಾ ಹುಡುಗಪಾಳ್ಯ, ಹೇಳೋರಿಲ್ಲ. ಕೇಳೋರಿಲ್ಲ. ಮನೆಗೊಂದು ಹೆಣ್ಣು ದಿಕ್ಕು ಬಂದ್ರೇ ಸಾಕಾಗಿತ್ತು ಸಂತೋಷ, ಮನೆ ಸೊಸೆ ತುಂಬಾ ಲಕ್ಷಣವಾಗಿದ್ದಾಳೆ. ನಂಗೂ ಗಂಡು ಹುಡುಗರತ್ರ ಏಗಿ ಸಾಕಾಗಿಹೋಗಿದೆ."

ಅನಂತ, ರಂಗನಾಥಯ್ಯನವರಿಗೆ ಹೇಳುತ್ತಾ ಇದ್ದನು. "ಹಾಗಂದ್ರೆ ಹೇಗೆ........ಸಾಯಂಕಾಲಾನೇ ಹೊರಡೋಣಾಂದ್ರೇ ಹೇಗೆ?.........ನಾಳೆ ಹೋದ್ರಾಯ್ತು."

"ಇಲ್ಲಪ್ಪಾ, ಮನೇಲಿ ವಿಶ್ವ ಒಬ್ನೇ....ಆಫೀಸ್ಗೆ ರಜ ಎಲ್ಲಿ ? ಮನೆ ಬೀಗ ಹಾಕಿ ಬಂದ್ಬಿಟ್ರೆ ಕಳ್ಳರ ಭಯ. ನಾನೊಬ್ನೇ ಕರ್ಕೊಂಡ್ಬಂದುಬಿಡೋಣಾಂತಾನೇ ಇದ್ದಿದ್ದು. ಮೊದಲ್ನೇ ಸಲಾಂತ ಇವ್ರು ಹೊರಟ್ರು. ಮೂರು ಜನ ಆಯ್ತೂಂತ ಮಣಿಯಮ್ಮನ್ನೂ ಕರ್ಕೊಂಡ್ಬಂದಾಯ್ತು—ದಯವಿಟ್ಟು ಸಾಯಂಕಾಲಾನೇ ಹೊರಡೋಕೆ ಅಪ್ಪಣೆ ಕೊಡ್ಬೇಕೂ..."

ತಟ್ಟೆ ಲೋಟಗಳನ್ನು ತೊಳೆಯಲು ಎತ್ತಿಕೊಳ್ಳಲು ನಡುವಯಸ್ಸಿನ ಗಟ್ಟಿಮುಟ್ಟಾದ ಹೆಂಗಸೊಬ್ಬಳು ಬಂದಳು. ಬಿಗಿಯಾಗಿ ಬಾಚಿ ಕಟ್ಟಿದ್ದ ತುರುಬಿನಲ್ಲಿ ಅರ್ಧ ಒಣಗಿದ ಹೂವು-ಬಿಳಿಯ ಬಣ್ಣವೆನಿಸಿಕೊಳ್ಳಲು ಅನುಮಾನಿಸುತ್ತಿದೆ. ಹಸಿರಂಚಿನ ಬಿಳಿಯ ಕೈಮಗ್ಗದ ಸೀರೆ, ಹಣೆಯಲ್ಲಿ

ಅಗಲವಾದ ಕುಂಕುಮ ಕೈ ತುಂಬಾ ಬಣ್ಣ ಬಣ್ಣದ ಗಾಜಿನ ಬಳೆ. ಹತ್ತಿರ ಬಂದರೆ ಬರುತ್ತಿದ್ದ ಹರಳೆಣ್ಣೆಯ ಮಣಕಿನ ವಾಸನೆ....ಅಶೋಕ ಮುಖ ಹಿಂಡಿದನು.

"ಇವಳು ಮನೆಯೊಳಗೆ ಬಂದರೆ ಈವನಿಂಗ್ ಇನ್ ಪ್ಯಾರೀಸ್ ಇದ್ದಾಗಿರುತ್ತೆ !"

"ಸ್ನಾನ ಮಾಡ್ತೀರ ಅತ್ಗೆ--ನಮ್ಮ ಅಮರೇಶ ಬಚ್ಚಲು ಮನೆಗೆ ಹೋಗಿಬಿಟ್ರೆ ಆಯ್ತು-- ಊರ್ಮಿಳಾದೇವಿಯ ಅವರಾವತಾರ. ಬನ್ನಿ ಮುಂಚೆ ನೀವು ಸ್ನಾನ ಮಾಡ್ಬಿಡಿ." ಅರವಿಂದ ಹೇಳಿದಾಗ ನಿರ್ಮಲ ಸಾಮಾನುಗಳನ್ನು ತೆಗೆದುಕೊಳ್ಳಲು ಅಶೋಕನ ರೂಮಿನತ್ತ ನಡೆದಳು. ಅಶೋಕ ಅವಳನ್ನು ಹಿಂಬಾಲಿಸಿದನು.

ಬಾಗಿಲಲ್ಲಿ ನಿಂತು ರೂಮಿನ ಸುತ್ತ ಕಣ್ಣಾಡಿಸಿದಳು—ದೊಡ್ಡ ಮಂಚ, ಅದರ ಮೇಲೆ ತಿಳಿ ನೀಲಿಯ ಹಾಸುಗಳು—ಮೇಲ್ಛಾವಣಿಯಿಂದ ಜೋತು ಬಿದ್ದಿದ್ದ ಗಾಜಿನ ತೂಗು ದೀಪ, ಮಂಚದ ಛಾವಣಿಯಿಂದ ಇಳಿಬಿದ್ದಿದ್ದ ಬಣ್ಣ ಬಣ್ಣದ ಕಾಗದದ ಎಳೆಗಳು, ಒಂದು ಕಡೆ ಗಾಡ್ರೇಜ್ ಬೀರುವೊಂದು, ಮತ್ತೊಂದು ಕಡೆ-ಮರದ ಬೀರು. ಅವಳ ಸಾಮಾನೆಲ್ಲಾ ಬೀರುವಿನ ಹತ್ತಿರ ಇಡಲ್ಪಟ್ಟಿತ್ತು. ಬಾಗಿಲಿಗೆ ಹಾಕಿದ್ದ ಮಾಸಲು ನೀಲಿಯ ಪರದೆ ಅದರ ಇಳಿ ವಯಸ್ಸನ್ನು ಹೇಳುತ್ತಿತ್ತು.

ಒಳಗೆ ನಡೆದಾಗ, ಅಶೋಕ ಬಾಗಿಲು ಮುಂದೆ ಮಾಡಿದನು. "ಏನು ಬಂದಾಗಿನಿಂದ ಮೈದುನನ ಪ್ರೀತಿಯೇ ಜಾಸ್ತಿ-ನಾನು ನಿನ್ನ ಗಂಡಾಮ್ಮ-ನಂಗೂ ಕೊಂಚ ಉಳಿಸೂ...." ಅವಳ ಬಡನಡು ಬಳಸಿ ಹೇಳಿದಾಗ ನಿರ್ಮಲ ಅವನೆದೆಗೆ ಒರಗಿದಳು. "ನಿಮ್ಮ ಅರವಿಂದ ತುಂಬಾ ಒಳ್ಳೆಯವನು."

"ಅಂದ್ರೆ ನಾನು ಕೆಟ್ಟೋನಾ ?" ಅಶೋಕ ಅವಳ ಬೈತಲೆಗೆ ತುಟಿ ತಾಗಿಸಿದನು.

"ನೀವೂ, ಅರವಿಂದ ಇಬ್ರೂ ಒಂದೇನಾ ?"

"ಒಂದು ದಿನಾನೇ ಎಲ್ರಿಗೂ ನಿನ್ನ ಪ್ರೀತೀನ ಸ್ವೀಟ್ಸ್ ಹಂಚಿದ್ದಾಗೆ ಹಂಚ್ಬಿಟ್ರೆ ನಂಗೇನುಳೀತ್ತೆ ?" ಅಶೋಕ ಕೇಳಿದಾಗ ನಿರ್ಮಲ ಅವನ ಕ್ರಾಪಿನಲ್ಲಿ ಕೈಯ್ಯಾಡಿಸಿದಳು. "ನಿಮ್ಗೆ ಗೊತ್ತೇದು ನಾನು....!" ಅಶೋಕ ಬೆರಳಿನಿಂದ

ಅವಳ ತುಟಿಯನ್ನು ಸವರಿದನು. "ನಾನು ಅನ್ನೇಡಾ, ಇನ್ಮೇಲೆ ನಿಮ್ಮನ್ನು ಅನ್ನು. ಗೊತ್ತಾಯ್ತಾ ?"

ತಲೆಗೆ ಸ್ನಾನ ಮಾಡಿ ಕೂದಲನ್ನು ಒರೆಸಿಕೊಳ್ಳುತ್ತಾ ಬಂದಾಗ ಮಣಿಯಮ್ಮ ಬಂದರು.

"ನಿರ್ಮಲ, ದೇವರಿಗೆ ಎರಡು ದೀಪ ಹಚ್ಚಿಡು-ಇವರ್ಮನೆ ದೇವ್ರು ಇನ್ನೇಲೆ ನಿನ್ನ ದೇವ್ರು."

ನಿರ್ಮಲ ಹಸಿ ಕೂದಲನ್ನೇ ಕತ್ತಿನ ಮೇಲೆ ಅಳ್ಳಕವಾಗಿ ಗಂಟು ಹಾಕಿಕೊಂಡು ಅಡಿಗೆ ಮನೆಯ ಮೂಲೆಯಲ್ಲಿದ್ದ ದೇವರಿಗೆ ಎರಡು ದೀಪ ಗಳನ್ನು ಹಚ್ಚಿದಳು. ಹಿತ್ತಾಳೆಯ ನಂದಾದೀಪ ಕಮಟು ಹಿಡಿದು ಮೂಲೆ ಸೇರಿತ್ತು.

ಅರಸಿನ ಕುಂಕುಮ ಹಿಡಿದು ಹಿತ್ತಲಲ್ಲಿದ್ದ ತುಳಸಿಯ ಕಟ್ಟೆಗೆ ಪೂಜೆ ಮಾಡಲು ಬಂದಾಗ ಅರವಿಂದ ಕೈತುಂಬಾ ಹೂವು ಹಿಡಿದು ನಿಂತಿದ್ದವನು ಹಾಗೆಯೇ ಅವಳತ್ತ ದೀರ್ಘವಾಗಿ ನೋಡಿದನು. ಅವನ ಕಣ್ಣು ಮಿಂಚಿತು, ಮೃದುವಾದ ಮಂದಹಾಸ ಮುಖದಲ್ಲಿ ಮಿನುಗಿತು.

"ಅತ್ತಿಗೇ, ಈ ಹೂವು ದೇವರಿಗೆ ಹಾಕ್ಬಿಡಿ. ಈಗ ನಿಮ್ಮನ್ನ ನೋಡಿ ದಾಗ ನಂಗ್ಯಾಕೋ ನಮ್ಮಮ್ಮನ ನೆನಪಾಯ್ತು...."

ಅರೆಕ್ಷಣ ನಿರ್ಮಲಳ ಕೈ ಕತ್ತಿಗೆ ಹಾಕಿದ್ದ ಮುತ್ತು ಹವಳದ ಸರದ ಮೇಲಾಡಿತು. ಅವಳ ಕಿವಿಯಲ್ಲಿದ್ದ ಓಲೆ ಕಣ್ಣು ಕೋರೈಸುವಂತೆ ಮಿನುಗಿತು.

"ಕೊಡಿ, ಹಾಕ್ತೀನಿ...." ನಿರ್ಮಲ ಕೈ ನೀಡಿದಾಗ ಅವರಿಂದ ಹೂವನ್ನು ಅವಳ ಕೈಗಿತ್ತನು.

"ನನ್ನ-ಬನ್ನಿ ಹೋಗೀಂತ ಮಾತಾಡಿಸ್ಬೇಡಿ, ಬಾ ಹೋಗು ಅಂದ್ರೆ ಸಾಕು...."

ನಿರ್ಮಲ ತುಳಸೀ ಪೂಜೆ ಮಾಡುತ್ತಿದ್ದುದನ್ನೇ ಗಮನಿಸುತ್ತಾ ನಿಂತಿದ್ದನು ಅರವಿಂದ. ಪೂಜೆ ಮುಗಿಸಿ ಒಳಗೆ ಹೆಜ್ಜೆಯಿಟ್ಟಾಗ ಅನಂತ ಎದುರಾದನು.

"ನಿರ್ಮಲಾ....ಮನೆ ಯಜಮಾನಿ ಈಗ ನೀವು....ನೀವೇ ನಿಮ್ಮ ತಂದೆ, ತಾಯಿ,ಬಂದಿರೋರ್ನ ವಿಚಾರ್ಸಿಕೊಳ್ಳಬೇಕು....ಸಾಯಂಕಾಲಾನೇ ಹೊರಡ್ತೀವಿ

ಅಂತಾರೆ. ಅದ್ಹೇಗೆ ನೀವು ಅವರಿಗೆ ಒಪ್ಪಿಗೆ ಕೊಟ್ರಿ?" ಅನಂತ ಗಂಭೀರವಾಗಿ ಕೇಳಿದರೂ ಕಣ್ಣುಗಳು ನಗುತ್ತಿದ್ದವು.

"ಅಗ್ಲೀ.......ನಾನು ವಿಚಾರ್ಸಿಕೊಳ್ತೀನಿ........ ಮನೆಯ ಸಂದರ್ಭ ಗೊತ್ತು, ಅದಕ್ಕೆ ನಾನು ಸಂಜೆ ಹೊರಡುತ್ತೇವೆಂದು ಹೇಳಿದಾಗ ನಾನು ಬಲವಂತ ಮಾಡಲಿಲ್ಲ." ನಿರ್ಮಲ ಕೊಂಚ ಒರಟಾಗಿಯೇ ಉತ್ತರಿಸಿದಳು. ಅನಂತ ತನಗೆ ತನ್ನ ಕರ್ತವ್ಯದ ನೆನಪುಮಾಡಿ ಕೊಟ್ಟಿದ್ದು ಸರಿಬರಲಿಲ್ಲ

ಆಗತಾನೇ ಸ್ನಾನ ಮುಗಿಸಿ ಹೊರಬಂದ ಅಶೋಕ ಅಲ್ಲಿಯೇ ನಿಂತನು.

"ಏನೂ? ಏನ್ಸಮಾಚಾರ?"

"ಏನಿಲ್ಲ....ಬಂದವರ್ನ ವಿಚಾರಿಸ್ಕೊಳ್ಳಿ, ನೀವೇ ಈಗ ಮನೆ ಯಜಮಾನಿತಿ ಅಂದ್ರು. ಅಗ್ಲಿ ಅಂದೆ, ಅಷ್ಟೇ!" ನಿರ್ಮಲ ಅಷ್ಟನ್ನೇ ಮೊಟಕಾಗಿ ಹೇಳಿ ಒಳಗೆ ನಡೆದಳು. ಅರವಿಂದನೊಡನಿದ್ದಾಗ ಅರಳಿದ ಮನಸ್ಸು ಬಾಡಿತು.

"ಮಗಳಿಗೆ ಅಡಿಗೆ ಗಿಡಿಗೆ ಕಲಿಸಿದ್ದೀರಾ? ಓದಿದ ಹುಡುಗಿಯರೂ ಅಂದ್ರೇ, ಅಡ್ಗೆ ಮನೆ ಕೆಲ್ಸಗಳು ಅಷ್ಟು ಚೆನ್ನಾಗಿ ಬರೋಲ್ಲ...." ಪದ್ಮಮ್ಮ ಒಳಗೆ ಬಂದ ನಿರ್ಮಲಳನ್ನು ನೋಡಿ ಕೇಳಿದಾಗ ಕಾವೇರಮ್ಮ ಮಣಿಯಮ್ಮನ ಕಡೆ ನೋಡಿದರು. ನೀವು ಅಡಿಗೆಗೆ ಇರ್ಬೇಕಾದ್ದೇ, ನನಗ್ಯಾಕೆ ಅದರ ಯೋಚನೆ ಎನ್ನುವ ಮನಸ್ಸಾಯಿತು ನಿರ್ಮಲಳಿಗೆ, ಆದರೂ ಬಂದ ದಿನವೇ ಹಾಗೆ ದುಡುಕಬಾರದೆಂದು ನಾಲಿಗೆ ಕಚ್ಚಿ ಸುಮ್ಮನಾದಳು.

"ನಮ್ಮ ನಿರ್ಮಲಂಗೆ ಬರ್ದೇ ಇರೋ ಕೆಲ್ಸಾನೇ ಇಲ್ಲ...." ಮಣಿಯಮ್ಮ ಹೇಳಿದಾಗ ಕಾವೇರಮ್ಮ ನೀಳವಾಗಿ ನಿಟ್ಟುಸಿರಿಟ್ಟರು.

ಅಶೋಕ ಕರೆದನೆಂದು ನಿರ್ಮಲ ಹೊರಬಿದ್ದಳು. ಅವಳಿಗೆ ಮಣಿಯಮ್ಮ ಜೊತೆಗೆ ಬಂದದ್ದು ಸರಿಬಿದ್ದಿರಲಿಲ್ಲ. ಮದುವೆಯನ್ನೇ ಗೊತ್ತುಮಾಡಿ ಕೊಟ್ಟಿದ್ದರು. ಅದೊಂದೇ ಕಾರಣಕ್ಕಾಗಿ ಎಲ್ಲ ವಿಷಯಗಳಿಗೂ ತಲೆ ಹಾಕಿ ಕೊಂಡು ಬರುವುದು ಸರಿಬೀಳುತ್ತಿರಲಿಲ್ಲ.

"ಏನು ಅಮ್ಮಾವರು ಬಹಳ 'ಗರಂ' ಆಗಿರೋ ಹಾಗಿದೆ?" ಅಶೋಕ ನಿರ್ಮಲಳ ನವಿರಾದ ಹುಬ್ಬುಗಂಟನ್ನೂ ಗಂಭೀರವಾದ ಮುಖವನ್ನೂ ನೋಡಿ ಕೇಳಿದ.

"ಲೈಫ್‌ನಲ್ಲಿ 'ಗರಂ' ಆಗಿದ್ರೇ ಚೆನ್ನ....ಐಸ್ ಹಾಗಿದ್ರೇ ಏನು

ಚಿನ್ನ ?" ನಿರ್ಮಲ ಬಾರದ ನಗು ಬರಿಸಿಕೊಂಡಾಗ ಅಶೋಕನು ಸುಮ್ಮ ನಾದನು. ಅವನು ಮೈ ಒರೆಸಿಕೊಂಡಿದ್ದ ಟವಲನ್ನು ಕೈಗೆತ್ತಿಕೊಳ್ಳುತ್ತಾ ಹೇಳಿದಳು.

"ನೋಡೀಂದ್ರೆ, ಅಮ್ಮಾ ಅಪ್ಪಾ ಇವೊತ್ತು ಹೋಗ್ತಿನೀಂದ್ರೆ ಹೋಗ್ಲಿ ಬಿಡಿ. ಮನೆ ತಾಪತ್ರಯ ನಿಮ್ಗೆಲ್ಲಾ ಅರ್ಥ ಆಗೊಲ್ಲ-ನಿಮ್ಮಣ್ಣ ಸುಮ್ಗೇ ಅವರ್ನ ಉಪಚಾರ ಮಾಡ್ತಾರೆ."

"ಏನೋ ಅಣ್ಣನ ಇಷ್ಟ....ನಾನು ಆ ಮಾತಿಗೆ ಬರೋಲ್ಲ ... ನೀನೇ ಹೇಳ್ಬಿಡು". ಅಶೋಕ ಹೇಳಿದಾಗ ನಿರ್ಮಲ ಉಗುಳು ನುಂಗಿದಳು.

ಅಷ್ಟರಲ್ಲಿ ಹೊರಗಡೆ ಸ್ಕೂಟರ್ ಸದ್ದು ಕೇಳಿದಾಗ ಅಶೋಕ ಕಿಟಕಿಯ ಪರದೆ ಸರಿಸಿ ನೋಡಿದ, "ಅಜಯ್ ಬಂದಾಂತ ಕಾಣ್ಸುತ್ತೆ...."

"ಅದೇನು ಬೆಳಿಗ್ನಿಂದ ಮನೇಲಿ ಕಾಣ್ಲೇ ಇಲ್ಲ..." ನಿರ್ಮಲ ಕನ್ನಡಿಯಲ್ಲಿ ಕಾಣುತ್ತಿದ್ದ ಅಶೋಕನ ಪ್ರತಿಬಿಂಬ ನೋಡುತ್ತಾ ಕೇಳಿದಳು.

"ಅವನು ಬಹಳ ರಿಸರ್ವ್ಡ್....ಕೆಲ್ಸದಲ್ಲಿ ಬಹಳ ಸಿನ್ಸಿಯರ್....ಯಾವ್ದೋ ಮನೆ ಡೆಕೊರೇಷನ್ ಪ್ಲಾನ್ ನೋಡೋಕ್ಕೆ ಹೋಗಿದ್ದಾಂತ ಕಾಣ್ಸುತ್ತೆ."

ಅವನು ಮನೆಯೊಳಗೆ ಬಂದಾಗ ನಿರ್ಮಲ ಅವನು ತನ್ನನ್ನು ಮಾತನಾಡಿ ಸುವನೆಂದು ಕಾದಳು. ಆದರೆ ಬರಲಿಲ್ಲ. ಅಶೋಕನ ಬೆರಳುಗಳೊಡನೆ ಆಡುತ್ತಾ ಹೇಳಿದಳು. "ನಿಮ್ಮ ತಮ್ಮ ಅಜಯನಿಗೆ ತುಂಬಾ ಜಂಬಾರೀ .... ನನ್ನ ಮಾತಾಡಿಸ್ಲೇ ಇಲ್ಲ...." ಕೆನ್ನೆಯುಬ್ಬಿಸಿದಳು.

"ಅಲ್ಲಾ ಚಿನ್ನ, ಇಲ್ಲಿ ನೀನು ನನ್ನೆದೆಗೆ ಒರಕ್ಕೊಂಡು ನನ್ನ ಒಲವಿನ ಧಾರೆ ಸವೀತಾ ಕೂತಿರ್ಬೇಕಾದ್ರೇ ಅವನು ಬಂದು ನಿನ್ನ ಡಿಸ್ಟರ್ಬ್ ಮಾಡಿದ್ರೆ ಸುಮ್ಮನಿರ್ತೀಯಾ ? 'ಆಗ ಏನೂಂದ್ರೇ ಅವನಿಗೆ ಕೊಂಚ ಕೂಡ ಮ್ಯಾನರ್ಸ್ ಇಲ್ಲಾ' ಅಂತ ನೀನೇ ಅಂತೀಯಾ!" ಅಶೋಕ ಅವಳ ಉಬ್ಬಿದ ಕೆನ್ನೆಗೆ ಬಾಗಿ ಮುತ್ತಿಟ್ಟ. "ನೀನು ಇವೊತ್ತು ಮನೆಗೆ ಬರ್ತೀಂತ ಅಣ್ಣ ಅವರೆಲ್ಲರಿಗೂ ರಜ ತೊಗೊಳ್ಳೋಕೆ ಹೇಳಿದ್ದಾನೆ, ಗೊತ್ತಾ ?"

"ಅದ್ರೂ...ನಾನು ಈ ಮನೆಗೆ ಬಂದಿರೋದು ಅವರ್ಯಾರ್ಗೂ ಇಷ್ಟಾ ಇಲ್ಲಾಂತ ಕಾಣ್ಸತ್ತೆ !" ನಿರ್ಮಲ ಅವನಿಂದ ದೂರ ಸರಿದಾಗ ಅಶೋಕ ನಕ್ಕು ಬಿಟ್ಟನು.

"ಅವಕ್ಕೇ ಸ್ತ್ರೀ ಬುದ್ಧಿಃ ಪ್ರಳಯಾಂತಕ ಅನ್ನೋದು....ಅಲ್ಲಾ ನಿಮ್ಮ, ಅವರ್ಗೆ ಹಿದುವರ್ಗೂ ಪದ್ದಮ್ಮ ಶಿವಮ್ಮ ಅತ್ತೆ ಎಲ್ಲಾ ಮುದಕ್ರೇ....ಆ ಹೆಂಗಸರ ಜೊತೆ ಇದ್ದು ಅಭ್ಯಾಸ ಅಷ್ಟೆ....ಇದೇ ಮೊದ್ಲು ಅಲ್ವಾ ನಿನ್ನಂತಹ ವಳು ಬರ್ತಾ ಇರೋದು....? ಗಿವ್ ದೆಮ್ ಟೈಂ...! ನಾನು ಇವೊತ್ತು ಈಗ ಇಲ್ಲಿರೋದು ಸುಳ್ಳೋ ನಿಜವೋ ಅನ್ನೋಷ್ಟು ಭ್ರಾಂತು ನನಗೇ ಇದೆ ! ಇನ್ನು ಅವರ್ಗೆ...."

ನಿರ್ಮಲ ಚಾಚಿದ ಅವನ ಕೈಗೆ ಸಿಗದೇ ಹೊರಗೆ ಬಂದಾಗ ಅಜಯ್ ಅಂದಿನ ಪೇಪರ್ ಹಿಡಿದು ಕುಳಿತಿದ್ದನು. ಅವನೆದುರಿಗೆ ರಂಗನಾಥಯ್ಯ ಯಾವುದೋ ಪುಸ್ತಕ ತಿರುವಿಹಾಕುತ್ತಿದ್ದರು. ತನ್ನ ತಂದೆಯ ಜೊತೆ ಯಲ್ಲಿ ಮಾತನಾಡಲು ಬಿಂಕವೆ ? ಅವಳ ಬಳೆಯ ಸದ್ದು ಕೇಳಿ ಅಜಯ್ ಪೇಪರ್‌ನಿಂದ ತಲೆ ಎತ್ತಿ ಅವಳತ್ತ ನೋಡಿ "ಹಲೋ" ಎಂದಾಗ ನಿರ್ಮಲ ಳಿಗೆ ಎಲ್ಲಿಲ್ಲದ ಕೋಪ ಬಂತು. ತಾನು ಅವನ ಅತ್ತಿಗೆ, ಇಷ್ಟು ನೀರಸ ವಾಗಿಯೇ ತನ್ನನ್ನು ಸ್ವಾಗತಿಸುವುದು ?

ಸಣ್ಣಗೆ ಸಿಳ್ಳು ಹಾಕಿದ ದನಿ ಕೇಳಿ ತಿರುಗಿದಾಗ ಅಮರೇಶ ರಾತ್ರಿ ಉಡುಪಿನಲ್ಲಿ ಕೈಯಲ್ಲಿ ಟೂತ್‌ಬ್ರಷ್ ಹಿಡಿದು ಸಿಳ್ಳೆ ಹಾಕುತ್ತಾ ಬರುತ್ತಿದ್ದನು. ನಿರ್ಮಲಳನ್ನು ನೋಡುತ್ತಲೇ ಕಣ್ಣುಜ್ಜಿಕೊಂಡು ನೋಡಿದ.

"ಹಾಯ್...ಅತ್ಗೆ....ವೆಲ್‌ಕಂ, ಹೋಂ..." ಅಪ್ರತಿಭಳಾದ ನಿರ್ಮಲ ಳನ್ನು ನೋಡಿ ನಕ್ಕನು. "ಇಷ್ಟೊತ್ಗೆ, ಎದ್ರೆ ಪದ್ದಮ್ಮ ಕಾಫಿ ಕೊಡಲ್ಲ.... ದಯವಿಟ್ಟು ನಾನು ಮುಖ ತೊಳ್ಕೊಂಡು ಬರೋದ್ರಲ್ಲಿ ಕಾಫಿ ತಂದ್ಕೊ ಡ್ತೀರಾ ?" ಅಮರೇಶ ಕೇಳಿದಾಗ ನಿರ್ಮಲಳಿಗೆ ಏನು ಉತ್ತರಿಸುವುದೆಂದು ತಿಳಿಯಲಿಲ್ಲ. ರಂಗನಾಥಯ್ಯ ಮಗಳನ್ನೂ ಇಬ್ಬರು ಮೈದುನರನ್ನೂ ನೋಡಿದರು.

"ಲರ್ನ್ ಗುಡ್ ಬಿಹೇವಿಯರ್....ಅಮರ್....ಅತ್ಗೆ....ಇವೊತ್ತು ತಾನೆ ಬರ್ತಾ ಇದ್ದಾರೆ....ಅವರ್ನ ನೀನು ಹಾಗೆ ಕೇಳ್ಬಾರ್ದು....ಅದೆಲ್ಲಾ ಚೆನ್ನಾಗಿ ರೊಲ್ಲ." ವಿಜಯ ಪೇಪರಿನಿಂದ ತಲೆಯೆತ್ತದೇ ಹೇಳಿದಾಗ ನಿರ್ಮಲ ಸೆರಗನ್ನು ಸೊಂಟಕ್ಕೆ ಕಟ್ಟಿದಳು.

"ಪರ್ವಾಗಿಲ್ಲ....ನೀವು ಮುಖ ತೊಳ್ಕೊಂಡ್ಬನ್ನಿ....ನಾನು ಕಾಫಿ ತಂದ್ಕೊ ಡ್ತೀನಿ."

"ಥ್ಯಾಂಕ್ಸ್ ಅತ್ತಿಗೆ...." ಅಮರೇಶ ಮತ್ತೆ ಸಿಳ್ಳೆ ಹಾಕುತ್ತಾ ಬಚ್ಚಲ ಮನೆಯತ್ತ ನಡೆದನು.

ನಿರ್ಮಲ ಪದ್ಮಮ್ಮನವರಿಗೆ ಹೇಳಿ ಎರಡು ಲೋಟ ಕಾಫಿಯನ್ನು ಮಾಡಿಸಿ ತಂದಾಗ ಅಮರೇಶ ರೇಡಿಯೋ ತಿರುಗಿಸಿ ಆಂಗ್ಲ ಸಂಗೀತ ಕೇಳುತ್ತಾ ಕುಳಿತಿದ್ದನು.

ನಿರ್ಮಲಳ ಕೈಯಿಂದ ಕಾಫಿ ತೆಗೆದುಕೊಂಡು ಅವಳ ಕಡೆ ನೋಡಿ ಕಿರು ನಕ್ಕನು.

"ಥ್ಯಾಂಕ್ಸ್ ಅತ್ಗೆ....ಗಾಡ್ ಬ್ಲೆಸ್‌ಯೂ."

ಇನ್ನೊಂದು ಲೋಟ ಕಾಫಿಯನ್ನು ಅಜಯನ ಮುಂದೆ ಹಿಡಿದಳು.

"ಕಾಫಿ ಬೇಕಾ ? ನಿಮ್ಗೂ ತಂದಿದ್ದೀನಿ."

"ಸುಮ್ನೆ ತೊಂದರೆ ತೊಗೊಂಡ್ರಿ....ಥ್ಯಾಂಕ್ಸ್, ಅಜಯ್ ಅವಳತ್ತ ನೋಡದೆ ತಲೆ ತಗ್ಗಿಸಿಯೇ ಕಾಫಿಯ ಲೋಟ ಕೈಯಲ್ಲಿ ತೆಗೆದುಕೊಂಡನು. ರಂಗನಾಥಯ್ಯನವರು ಮನಸ್ಸಿನಲ್ಲೇ ನಕ್ಕರು.

ಅಂದು ಭರ್ಜರಿ ಹಬ್ಬದ ಊಟ. ಎಲ್ಲರೂ ಒಟ್ಟಿಗೆ ಕುಳಿತು ಊಟ ಮಾಡುತ್ತಿದ್ದಾಗ ಐವರು ಅಣ್ಣತಮ್ಮಂದಿರೂ ಅವರ ಜತೆಗೆ ಅಶೋಕನ ಪಕ್ಕದಲ್ಲಿ ಕುಳಿತಿದ್ದ ನಿರ್ಮಲಳನ್ನೂ ನೋಡಿ ಕಾವೇರಮ್ಮ ಹೆಮ್ಮೆಯಿಂದ ಉಬ್ಬಿದರು. ಕೊನೆಗೆ ತಮ್ಮ ಮಗಳು ಒಳ್ಳೆಯ ಕಡೆ ಸೇರಿದಳೆಂದು ಹಿಗ್ಗಿದರು. ಪದ್ಮಮ್ಮ ಅನ್ನಕ್ಕೆ ಮೊಸರು ಬಡಿಸಲು ಬಂದಾಗ ಅನಂತ ರಂಗನಾಥಯ್ಯನವರಿಗೆ ಹೇಳಿದನು. "ಇವೊತ್ತಿದ್ದು ಹೋಗೀಂದ್ರೆ ನೀವು ಕೇಳಲಿಲ್ಲ...."

"ಇನ್ನೊಂದ್ಸಲ ಬಂದಾಗ ಒಂದ್ವಾರ ಇದ್ದು ಹೋಗ್ತೀವಿ .. ಇವೊತ್ತು ಅಪ್ಪಣೆ ಕೊಟ್ಬಿಡಿ" ರಂಗನಾಥಯ್ಯ ಮೊಸರನ್ನ ಬಾಯಿಗಿಟ್ಟುಕೊಂಡರು. "ನಮ್ಮನೆ ಮಗಳನ್ನೇ ನಿಮ್ಮನೆಗೆ ಕೊಟ್ಬಿಟ್ಟಿದ್ದೀನಿ!"

ಅನಂತನ ಬಾಯಿ ಕಟ್ಟಿತು. ಅಶೋಕ ಯಾರಿಗೂ ಕಾಣದಂತೆ ನಿರ್ಮಲಳ ತೊಡೆ ಚಿವುಟಿದನು.

ಎಲ್ಲರೂ ಊಟ ಮಾಡಿ ಅದ್ದಾದರು. ನಿರ್ಮಲ ಅಶೋಕನ ಕೊಠಡಿಯತ್ತ ಹೊರಟಾಗ ಅಮರೇಶ್ ಬಂದನು.

"ಅತ್ಗೇ, ಒಂದು ಫೇವರ್ ಮಾಡ್ತೀರಾ ? ನಿಮ್ಗೆ ಪುಣ್ಯ ಬರುತ್ತೆ."

ನಿರ್ಮಲ ಏನೆನ್ನುವಂತೆ ಹುಬ್ಬೆತ್ತಿದಳು.

"ಅಶೋಕನ್ಗೆ ಹೇಳಿ ಅವನ ಸ್ಕೂಟರ್ ಕೊಡಿಸ್ತೀರಾ ? ಅಜಯ್ ಅವನ್ದನ್ನ ನನ್ಕೈಲಿ ಮುಟ್ಸೋಲ್ಲಾ ! ಸಾರಿ....ನೀವೆಲ್ಲೂ ಹೋಗ್ತಾ ಇಲ್ಲಾ ತಾನೇ ?" ಅಮರೇಶ ಪ್ಯಾಂಟಿನ ಜೇಬಿನಿಂದ ನೀಲಿಯ ಬಾಚಣಿಗೆಯನ್ನು ತೆಗೆದು ತಲೆ ಬಾಚಿಕೊಂಡನು.

"ಗೊತ್ತಿಲ್ಲ....ಕೇಳ್ತೀನಿ, ಕೊಡ್ತಾರೋ ಇಲ್ವೋ ನಂಗೊತ್ತಿಲ್ಲ...." ನಿರ್ಮಲ ಹೇಳಿದಾಗ ಅಮರೇಶ ಅವಳತ್ತ ಕುಡಿನೋಟ ಬೀರಿದ.

"ಏನತ್ಗೆ, ನೀವ್ಹೇಳಿದ್ರೆ ಅವ್ನು ಕೊಡೋಲ್ಲಾಂತಾನಾ ? ಎಲ್ರಿಗೂ ನನ್ಕಂಡ್ರೆ ಒಂದು ತರಹಾ ಅಪನಂಬಿಕೆ. ನಾನು ಹಾಳು ಮಾಡ್ಬಿಡ್ತೀನೀಂತ. ಅರವಿಂದ್ ಅವನ ಮೋಟಾರ್ ಸೈಕಲ್ ಮುಟ್ಸೋಲ್ಲ....ಕಿಕ್ ಸ್ಟಾರ್ಟರ್ ಹಾಳು ಮಾಡ್ಬಿಡ್ತೀನಂತೆ ನಾನು–ಅಜಯ್‌ಗೇ ಅವನ ಸ್ಕೂಟರ್ ಕೋಲಾರದ ಚಿನ್ನದ ಗಣಿ ಅಂದ್ಕೊಂಡಿದ್ದಾನೆ. ಅನಂತನ ಕಾರನ್ನು ನಾವ್ಯಾರೂ ಮುಟ್ಟೋಲ್ಲ ...ಇನ್ನು ಅಶೋಕನೇ ವಾಸಿ....ನನ್ಕಂಡ್ರೆ ಒಳ್ಳೇ ಒಪಿನಿಯನ್ ಇದೆ–ನಾನು ಮನುಷ್ಯ ಅಂದ್ಕೊಂಡಿದ್ದಾನೆ....ಪ್ಲೀಸ್ ಅತ್ಗೆ !"

ಅಮರೇಶನನ್ನು ಮೆಚ್ಚಿಸುವ ಆಸೆ ಮೂಡಿಬಂತು. ನಿರ್ಮಲ ಮೆಲ್ಲನೆ ಅಶೋಕನ ರೂಮಿನೊಳಗೆ ಕಾಲಿಟ್ಟಳು. ಅವನು ಹಾಸಿಗೆಯೊರಗಿ ಪುಸ್ತಕ ವೊಂದನ್ನು ಹಿಡಿದು ಕುಳಿತಿದ್ದನು. ನಿರ್ಮಲ ಒಳಗೆ ಬಂದ ತಕ್ಷಣ ಪುಸ್ತಕ ವನ್ನ ನೆಲದ ಮೇಲೆಸೆದು ಕೈ ಚಾಚಿದನು. ನಿರ್ಮಲ ಅವನ ಬಾಹುಗಳತ್ತ ನಡೆದಳು.

ಕೊಂಚ ಹೊತ್ತಾದ ಮೇಲೆ ಅವನ ಕೆನ್ನೆಗೆ ಕೆನ್ನೆಯೊರಗಿಸಿ ಕೇಳಿದಳು.

"ನಾವೆಲ್ಲಾದ್ರೂ ಹೋಗ್ತಿದ್ದೀವಾ ಸಾಯಂಕಾಲ ?"

"ಎಲ್ಲಿಗ್ಹೋಗೋದು ಚಿನ್ನಾ–ನಿಮ್ಮ ತಂದೆ ತಾಯಿ ಊರಿಗೆ ಹೊರಟ್ಟಿ ದ್ದಾರೆ. ಅವರು ಹೋದ್ಮೇಲೆ ಬೇಕಾದ್ರೆ ಹೋಗೋಣ."

"ನಿಮ್ಹತ್ರ ಸ್ಕೂಟರಿದೆ ಅಲ್ವಾ? ನಂಗ್ಯಾಕೋ ಸ್ಕೂಟರ್ ಅಂದರೆ ಬೇಜಾರು. ನಡ್ಕೊಂಡು ಎಲ್ಲಾದ್ರು ಒಂದು ರೌಂಡು ಹೋಗಿಬರೋಣ.... ಮದ್ವೆ ಗೊತ್ತಾದ ದಿನದಿಂದ ನನಗೆ ಕೈಕಾಲೇ ಆಡಿಸಲು ಅಮ್ಮ ಬಿಟ್ಟಿಲ್ಲ."

"ಹಾಗೇ ಆಗ್ಲಿ; ರಾಣಿ ಸಾಹೇಬರ ಹುಕುಂ !" ಅಶೋಕ ಅವಳ ಕೆನ್ನೆಗೆ ತುಟಿಯೊತ್ತಿದನು.

"ನಾನೊಂದು ಕೇಳ್ತೀನಿ....ಹೂಂ ಅಂತೀರಾ ?"

"ಒಂದಲ್ದೇ ಇದ್ರೇ ಹತ್ಕೇಳು–ಇಲ್ಲಾ ಅಂತೀನಾ?" ಅಶೋಕ ಅವಳನ್ನು ಬಿಗಿಯಾಗಿ ಅಪ್ಪಿದನು.

"ಪಾಪ ! ಅಮರೇಶನಿಗೆ ಯಾರೂ ಸ್ಕೂಟರ್, ಮೋಟರ್ ಸೈಕಲ್ ಕೊಡ್ತಾ ಇಲ್ವಂತೆ. ಅವನು ಅರ್ಜೆಂಟಾಗಿ ಎಲ್ಲೋ ಹೋಗ್ಬೇಕಂತೆ .... ಪ್ಲೀಸ್, ಅವನ್ಗೆ ನಿಮ್ಮ ಸ್ಕೂಟರ್ ಕೊಟ್ಬಿರ್ತೀರಾ? " ಅಶೋಕನ ಆಲಿಂಗನ ಸಡಿಲವಾಯಿತು. ಮುಖ ಗಂಭೀರವಾಯಿತು.

"ರ್‍ಯಾಸ್ಕಲ್....ನಿನ್ನ ಹಿಡಿದ್ನಾ ಈಗ ? ಬೇಡಾ ನಿಮ್ಮಿ–ನಿಂಗೊತ್ತಿಲ್ಲ –ಸಿಕ್ಕಿ ಸಿಕ್ಕಿದ್ಕಡೆ ಓಡಾಡುತ್ತಾನೆ. ಸಿಕ್ಕಾಪಟ್ಟೆ ಸ್ಪೀಡ್ ಹೊಡೀತಾನೆ.... ಅವನ್ಗೆ ರೆಸ್ಪಾನ್ಸಿಬಿಲಿಟಿ ಇಲ್ಲ–ಹೇಗಿದ್ರೂ ನಾಲ್ಕು ಜನ ಅಣ್ಣಂದಿರು ಸಂಪಾದಿಸ್ತಾರೆ ಮಜಮಾಡೋಣಾಂತ–ಅವ್ನು ಸರ್‍ಯಾಗಿ ಓದಿದ್ರೆ ಇಷ್ಟೊತ್ತಿಗೆ ಡಾಕ್ಟರಾಗಿ ಎರಡು ವರ್ಷ ಆಗ್ಬೇಕಾಗಿತ್ತು. ನೀನು ಅವನ್ಗೆ ಎನ್ಕರೇಜ್ ಮಾಡ್ಬೇಡಾ...."

"ಇವತ್ತೊಂದು ದಿನಾರಿ ...ಗಂಡುಹುಡುಗರು ಆ ವಯಸ್ನಲ್ಲಿ ಹಾಗೇ.... ಆಮೇಲೆ ಸರಿಹೋಗ್ತಾರೆ...." ನಿರ್ಮಲ ಅವನ ಮುಖದ ಹತ್ತಿರ ತಂದು ದೈನ್ಯದಿಂದ ಕೇಳಿದಾಗ ಅಶೋಕನ ಮುಖ ಮೃದುವಾಯಿತು.

"ನೀನು ಬಹಳ ಗಂಡು ಹುಡುಗರ್ನ ಕಂಡಿರೋದು....ಇನ್ನೊಂದ್ಸಲ ಅವನು ಹೇಳಿದ್ಹಾಗೆ ಕೇಳ್ಬೇಡಾ...ಡ್ರಾಯರ್‌ನಲ್ಲಿ ಸ್ಕೂಟರ್ ಕೀ ಇದೆ ಕೊಡು–ಐದು ಲೀಟರ್ ಪೆಟ್ರೋಲ್ ಹಾಕ್ಸೂನ್ನು...."

"ನೀವು ತುಂಟಾ ಒಳ್ಳೇವ್ರು ಕಣ್ರೀ...." ನಿರ್ಮಲ ಅವನ ಮೂಗಿನ ತುದಿಗೆ ಮುತ್ತಿಟ್ಟಳು. "ಒಳ್ಳೇವ್ನೊ ಕೆಟ್ಟವ್ನೋ, ಕೊಟ್ಬಿಟ್ ಬಾ, ತೋರಿಸ್ತೀನಿ" ಅಶೋಕ ಹೇಳಿದ. ಎದ್ದು ಸ್ವಿಚ್‌ಕೀ ತೆಗೆದುಕೊಂಡು ಹೊರಗೆ ಕಾದಿದ್ದ ಅಮರೇಶನ ಕೈಗಿತ್ತಳು. "ಐದು ಲೀಟರ್ ಪೆಟ್ರೋಲ್ ಹಾಕಿಸ್ಬೇಕಂತೆ."

"ತುಂಬಾ ಥ್ಯಾಂಕ್ಸ್ ಅತ್ತಿಗೆ"–ಅಮರೇಶ್ ಸ್ವಿಚ್‌ಕೀ ಹಿಡಿದು ಹೊರಗೆ ಹೋದನು.

ಅಶೋಕನ ಬಾಹುಗಳಲ್ಲಿ ಮಲಗಿದ್ದ ನಿರ್ಮಲಳಿಗೆ ಎಚ್ಚರವಾದಾಗ ನಾಲ್ಕು ಗಂಟೆಯಾಗಿತ್ತು. ಅಶೋಕ ಇನ್ನೂ ಸಿಹಿ ನಿದ್ದೆಯಲ್ಲಿದ್ದನು. ಅವನನ್ನು ಎಬ್ಬಿಸಲು ಮನಸ್ಸು ಬಾರದೇ ತನ್ನನ್ನಪ್ಪಿದ್ದ ಕೈಗಳನ್ನು ಮೆಲ್ಲಗೆ ಬಿಡಿಸಿಕೊಂಡು ಎದ್ದಳು. ರೂಮಿನಿಂದ ಕಣ್ಣು ಹೊಸಕಿಕೊಂಡು ಹೊರ ಬಂದಾಗ ಹಜಾರದಲ್ಲಿ ಅನಂತ ರೇಗಾಡುತ್ತಿದ್ದನು.

"ಎಲ್ಲಿ ಹಾಳಾಗಿಹೋದ ಅವ್ನು--ಒಂದು ಕೆಲ್ಸಕ್ಕೂ ಸಿಕ್ಕೊಲ್ಲ.... ನಿಮ್ಗೆಲ್ಲಾ ಹೇಳ್ತೀನಿ–ವೆಹಿಕಲ್ ಕೊಡ್ಬೇಡ್ರೋ ಅವನ ಕೈಗೇಂತಾ....ನೀವೂ ಕೇಳೋಲ್ಲ" ಅಲ್ಲೇ ನಿಂತಿದ್ದ ಅರವಿಂದ, ಅಜಯ್ ಒಬ್ಬರ ಮುಖ ಒಬ್ಬರು ನೋಡಿಕೊಂಡರು.

"ನಾವ್ಯಾರೂ ಕೊಡ್ಲಿಲ್ವಲ್ಲ—ಅಶೋಕಂದು ತೊಗೊಂಡ್ಹೋದಾಂತ ಕಾಣುತ್ತೆ !" ಅಜಯ್ ಹೇಳಿದಾಗ ಅನಂತ ಹುಬ್ಬುಗಂಟಿಕ್ಕಿದನು.

ಅಶೋಕ ಹಾಗೆಲ್ಲಾ ಕೊಡೋಲ್ವಲ್ಲಾ ! ಹೆಲ್ಮೆಟ್ಟಿಲ್ದೇ ಹೋಗ್ತಾ ಇದ್ದಾಂತ ಎರಡ್ಸಲ ಫೈನ್ ಕಟ್ಟಿದ್ದೀನೂ ಅವನೇ ...ಯಾರ್ದೋ ಕಾರಿನ ಮೇಲೆ ಬಿಟ್ಟಾಗ಼್ೂ ಕಾಂಪೆನ್ಸೇಷನ್ ಕೊಟ್ಟಿದ್ದೀನೂ ಅವ್ನೇ. ಅದ್ಹೇಗೆ ಇವೊತ್ತು ಕೊಟ್ಟ ?"

ಮೂವರ ಕಣ್ಣುಗಳೂ ಬರುತ್ತಿದ್ದ ಆಕಳಿಕೆಯನ್ನು ತಡೆಯುತ್ತಿದ್ದ ನಿರ್ಮಲಳತ್ತ ತಿರುಗಿದವು. ನಿರ್ಮಲಳ ಮುಖ ಕೆಂಪಾಯಿತು. ಇದೇನು ತಾನು ಇವರೆಲ್ಲರ ಒಪ್ಪಿಗೆಯಿಲ್ಲದೆ ಏನು ಮಾಡಬಾರದೇ ? "ಬಿಡಣ್ಣಾ, ಇವೊತ್ತೊಂದು ದಿನ. ಇನ್ನೊಬ್ಬರ ಒಳ್ಳೆಯತನಾನ ದುರುಪಯೋಗಪಡಿಸಿ ಕೊಳ್ಳೋ ಬುದ್ಧಿ ಬಿಡಿಸ್ಬೇಕೂ ಅಷ್ಟೇ" ಅರವಿಂದ ಅವಳ ಪರ ವಹಿಸಿ ಮಾತ ನಾಡಿದನು.

"ಹೀಗಾದ್ರೆ ಅವನು ಕೈಗೆ ಹತ್ತೊಲ್ಲ--" ಅನಂತ ಗೊಣಗುತ್ತಾ ತನ್ನ ಕೊಠಡಿಗೆ ಹೊರಟನು. ಅಜಯ್ ಕೈಯಲ್ಲಿ ಸ್ಪ್ಯಾನರ್ ಸೆಟ್ ಹಿಡಿದು ಹೊರಗೆ ಹೊರಟನು.

"ನಿದ್ದೆ ಆಯ್ತಾ ಅತ್ಗೆ ? ಕಾಫಿ ಕುಡೀತೀರಾ, ತಂದ್ಕೊಡ್ಲಾ ?"

ಅರವಿಂದ ಹಸನ್ಮುಖನಾಗಿ ಕೇಳಿದಾಗ ನಿರ್ಮಲ ಒಣಗಿದ ತುಟಿಯ ಮೇಲೆ ನಾಲಿಗೆಯಾಡಿಸಿ ಹೇಳಿದಳು. "ಬೇಡಾ, ಇವರು ಏಳಲಿ, ಆಮೇಲೆ ತೊಗೋ ತೀನಿ."

ಸಂಜೆ ಆರು ಗಂಟೆಗೆ ರಂಗನಾಥಯ್ಯ, ಕಾವೇರಮ್ಮ, ಮಣಿಯಮ್ಮ ಹೊರಟು ನಿಂತಾಗ ಯಾವುದಕ್ಕೂ ಹೆದರದ ನಿರ್ಮಲಳಿಗೆ ಇದ್ದಕ್ಕಿದ್ದಹಾಗೆ ಭಯವಾಯಿತು. ಈ ಮನೆಯಲ್ಲಿ ಅರವಿಂದನೊಬ್ಬನನ್ನು ಬಿಟ್ಟರೆ ತನಗೆ ಆಗುವವರು ಯಾರೂ ಇಲ್ಲ. ತನ್ನ ಗಂಡನು ಮುನಿದರೆ ತನ್ನ ಗತಿ !

ಮಗಳ ಕಣ್ಣಲ್ಲಿ ನೀರು ಕಂಡಾಗ ಕಾವೇರಮ್ಮ ಮಗಳ ತಲೆ ತಡವಿದರು. "ಅಳೋದ್ಯಾಕೇ ! ನಿಮ್ಮು ! ಒಳ್ಳೆ ಮನೆ ಸೇರಿದೆ, ಮನೆ ಬೆಳಕು ನೀನೆ...ನೋಡು, ಐದು ಜನ ಅಣ್ಣತಮ್ಮಂದಿರೂ ಚೆನ್ನಾಗಿದ್ದಾರೆ. ಯಾವ ಮಾತಿಗೆ ಆಗ್ಲಿ ಅವರನ್ನು ಬೇರೆ ಮಾಡೋಕೆ ಹೋಗ್ಬೇಡಾ. ಮನೆ ಒಗ್ಗಟ್ಟು ನೀನೆ ಕಾಪಾಡ್ಬೇಕಮ್ಮ....ನಾನು ಹೀಗೆ ಹೇಳ್ತೀನೀಂತ ಕೋಪ ಮಾಡ್ಕೊ ಬೇಡಾ....ನೀನು ಸ್ವಲ್ಪ ದುಡುಕು. ಅದಕ್ಕೇ ಹೇಳ್ತಾ ಇರೋದೂ....ಬರ್ಲಾ ನಿಮ್ಮು, ಹುಷಾರು." ಕಾವೇರಮ್ಮ ಟ್ಯಾಕ್ಸಿ ಹತ್ತಿದರು.

"ಬರ್ತೀನಿ....ನಿರ್ಮಲಾ, ಮುಂದಿನ್ವರ್ಷದೊಳ್ಗೆ ಮಗನೋ ಮಗಳೋ ಬರ್ಲಿ...." ಮಣಿಯಮ್ಮ ಅವರ ಹಿಂದೆಯೇ ಟ್ಯಾಕ್ಸಿ ಹತ್ತಿದರು.

"ಬರ್ತೀನಿ ತಾಯಿ....ಕಾಗ್ದಗಳ್ನ ಮಾತ್ರ ತಪ್ದೇ ಬರಿ...." ರಂಗನಾಥಯ್ಯ ನವರೂ ಹತ್ತಿದರು.

ನಿರ್ಮಲಳ ಕಣ್ಣೀರು ಕಂಡು ಅಶೋಕ ದಿಙ್ಮೂಢನಾಗಿದ್ದನು. ಅಜಯ್ ಪ್ಯಾಂಟಿನ ಜೇಬಿನೊಳಗೆ ಕೈತೂರಿಸಿ ಎತ್ತಲೋ ನೋಡುತ್ತಿದ್ದನು. ಅನಂತ ಕೈಕಟ್ಟಿ ನಿಂತಿದ್ದನು. ಅರವಿಂದ ಎಂದಿನಂತೆ ಹೊನಲು ಹರಿಸಿದ "ಇವತ್ತೊಂದು ದಿನ ಅಳ್ತಾರೆ–ನಾಳೆ ಹೊತ್ಗೆ ನೀವೆಲ್ಲಾ ಮರ್ತುಹೋಗಿರ್ತೀರಿ ಅವರ್ಗೆ !" ಎಲ್ಲರ ಮುಖದಲ್ಲೂ ಮಂದಹಾಸ ಮೂಡಿತು.

ಎಲ್ಲರೂ ಕೈ ಬೀಸುತ್ತಿರುವಂತೆ ಟ್ಯಾಕ್ಸಿ ಮಾಯವಾಯಿತು. ಅಮರೇಶ ಮಾತ್ರ ಬಂದಿರಲಿಲ್ಲ.

ನಿರ್ಮಲ ಸೆರಗಿನಿಂದ ಕಣ್ಣೊರೆಸಿಕೊಂಡು ಒಳಗೆ ಬಂದಾಗ ಅಶೋಕ

ಅವಳ ನೆರಳಾಗಿ ಬಂದನು. "ಬಾ ನಿಮ್ಮು, ಎಲ್ಲಾದ್ರೂ ಒಂದು ರೌಂಡ್ ಹೋಗಿ ಬರೋಣ, ಮನೇಲಿದ್ರೆ ಬೇಜಾರಾಗುತ್ತೆ ನಿಂಗೆ..."

"ಬೇಕಾದ್ರೆ ನನ್ನ ಕಾರು ತೊಗೊಂಡು ಹೋಗು ಅಶೋಕ...." ಅನಂತ ಹೇಳಿದನು.

"ಬೇಗ ಮುಖ ತೊಳ್ಕೊಂಡು ರೆಡಿಯಾಗಿ ಅತ್ಗೆ....ಅನಂತಣ್ಣ ಕಾರು ಕೊಡ್ತೀನೀಂತ ಹೇಳ್ತಾ ಇದ್ದಾನೆ, ನಿಧಾನ ಮಾಡಿದ್ರೆ ಮನಸ್ಸು ಬದ್ಲಾಯಿಸಿ ಬಿಟ್ಬಿಟ್ಟಾನೂ....! ಇದುವರ್ಗೂ ನಮ್ಮ್ಯಾರ ಕೈಲೂ ಮುಟ್ಸಿಲ್ಲ ಅದ್ನ !" ಅರವಿಂದ ಹೇಳಿದನು.

ನಿರ್ಮಲ ಮುಖ ತೊಳೆಯಲು ಬಚ್ಚಲ ಮನೆಗೆ ಹೊರಟಳು. ಅಲ್ಲಿ ಶಿವಮ್ಮ ಬಚ್ಚಲು ಉಜ್ಜುತ್ತಿದ್ದಳು. ಕಾವೇರಮ್ಮ ಹೊರಡುವ ಮುನ್ನ ಅವಳ ಕೈಗೆ ಎರಡು ರೂಪಾಯಿತ್ತು ಹೇಳಿದ್ದರು. "ನಮ್ಮ ನಿಮ್ಮೂನ ಚೆನ್ನಾಗಿ ನೋಡ್ಕೋ ಗೊತ್ತಾಯ್ತ ?" ಶಿವಮ್ಮ ಹಲ್ಲು ಕಿರಿದು ಎರಡು ರೂಪಾಯಿಯನ್ನು ತನ್ನ ಎಲೆ ಅಡಿಕೆ ಚೀಲದಲ್ಲಿ ಸೇರಿಸಿದ್ದಳು. ಹಾಗೆಯೇ ಪದ್ದಮ್ಮನ ಕೈಗೂ ಐದು ರೂಪಾಯಿ ಹಾಕಿ ಮಗಳನ್ನು ಸರಿಯಾಗಿ ನೋಡಿ ಕೊಳ್ಳುವಂತೆ ಹೇಳಿದ್ದರು. ಕಣ್ಣಿನಲ್ಲಿ ನೀರನ್ನು ತುಳುಕಿಸಿಕೊಳ್ಳುತ್ತಲೇ ಇದ್ದ ನಿರ್ಮಲಳನ್ನು ನೋಡಿ ಶಿವಮ್ಮ "ಅದ್ಯಾಕ್ರವ್ವಾ ಅತ್ತೀರಿ. ತೌರಿನ ಋಣ ಅಷ್ಟೇಯಾ ! ಒಂದ್ಸಸಿ ತೆಗ್ದು ಇನ್ನೊಂದ್ಕಡೆ ಆಗ್ದಂಗೆ ಅಲ್ವಾ ? ಸುಮ್ಕಿರಿ ಅಳ್ಬ್ಯಾಡ್ರಿ. ಅಶೋಕಪ್ನೋರು ಬೇಜಾರು ಮಾಡ್ಕಂತಾರೆ...! ನಿಮ್ಮ ಬಟ್ಟೆನೆಲ್ಲಾ ನಿಮ್ಮ ರೂಮ್ನಾಗೆ ಮಡಿಗ್ಬುಡ್ತೀನಿ !" ಶಿವಮ್ಮ ಮಾತು ತೆಗೆದಳು. "ಏನಾರೂ ಬ್ಯಾಕಾದ್ರೆ ಏಳ್ರವ್ವಾ, ಮಾಡಿಕೊಡ್ತೀನಿ. ನನ್ಕೈ ಸವ್ದೋಯ್ತದಾ?"

"ಆಗ್ಲಿ...." ನಿರ್ಮಲ ಮುಖ ತೊಳೆಯತೊಡಗಿದಳು.

"ನಿಮ್ಗೇನೂ ಉಸ್ ಅನ್ಸಲ್ಲಾ, ನಮ್ಮಸೋಕಪ್ನೋರೂ....ಬಂಗಾರ್ದಂತೋರು. ಅರವಿಂದಪ್ನೋರ್ದೇ ಲಗ್ನ ಮುಂಚೆ ಆಗ್ಬೇಕಾಗಿತ್ರವ್ವಾ, ದೊಡ್ಸಾಮೇರು ಒಪ್ಲಿಲ್ಲ. ಕಿರಿಸ್ತಾನ್ರೋಳಂತೆ ಪಿರೀತಿ ಮಾಡ್ತಾಳಂತೆ....ಬ್ಯಾಡಾಂತ ಒಂದೇ ಆಟ ಇಡದ್ಬುಟ್ರು...." ಮುಖಕ್ಕೆ ಹಾಕಿದ ಸೋಪು ಕಣ್ಣಿಗೆ ಹೋಗಿ ಉರಿಯಿತು.

"ಅಜಯಪ್ನೋರು ಯಾರ್ತಂಟ್ಯಾಗೂ ಬರಾಕಿಲ್ಲ...ಅಮರೇಸಪ್ನೋರ್ದೇ

ಏನಿದ್ರೂ ಗಲಾಟಿ-ಪಂಚಾಯ್ತಿ. ಆಗ಼್್ಲೆ ಲಗ್ನ ಆಗ್ಬುಟ್ಟಿವ್ರೇಂತ ಮನ್ಯಾಗೆಲ್ಲಾ ಸಮಾಚಾರ ಅತ್ಬುಟ್ಟಿತ್ತು. ಅದೆಂಗೋ ತಿಳೀದೂ....ನರ್ಸವ್ನಂತೆ....ಒಂದ್ಮಗಾ ಕೂಡ ಐತಂತೆ...."

ನಿರ್ಮಲ ಬಾಯಿಯಲ್ಲಿದ್ದ ನೀರನ್ನು ಮುಕ್ಕಳಿಸಿ ಉಗಿದಳು. ಇವಳಿಗ್ಯಾರು ಇದೆಲ್ಲವನ್ನೂ ಹೇಳಿದವರು !

"ಚಂಜಿನಾ ದೊಡ್ಡ ಸಾಯೇಬ್ರಿಗೂ ಅಮರೇಸಪ್ನೋರ್ಗೂ ಜಗ್ಳ ಆಗಿ, ಅಮರೇಸಪ್ನೋರು ಒಂದ್ಸಾರ ಮನೇ ಕಡೇಕೆ ಬರ್ಲಿಲ್ಲಾ. ಆಮೇಲೆ ಅಯಪ್ನೇ ಕರ್ಕಂಡ್ಬಂದ್ರು. ಏನಾರ ಯೇಳಿ ಅಮರೇಸಪ್ನೋರಿಂದ ಮನೆಗೆ ಸುಖ ಇಲ್ಲಾ....ದೊಡ್ಡ ಸಾಯೇಬ್ರು ಲಗ್ನಾ ಆಗಾಕೇ ಇಲ್ಲಾಂದ್ಬುಟ್ರು. ಅವರ್ಗೆ ಅದೆಂತದೋ ಯೆದೆವಳೀಕೆ ಕಾಯಿಲೇಂತೆ, ರೂಮ್ನಾಗೆ ಏಟೊಂದು ಔಸ್ದಿ ಮಡಿಕ್ಕೊಂಡವ್ರೆ...."

ನಿರ್ಮಲ ಮುಖ ತೊಳೆದು ಟವಲಿನಿಂದ ಮುಖ ಒರೆಸಿಕೊಳ್ಳುತ್ತಾ ನಿಂತಳು.

"ಇದೆಲ್ಲಾ ನಿಂಗೆ ಯಾರೇಳಿದ್ರು ಶಿವಮ್ಮಾ ?"

"ಅದ್ಯಾಕ್ರವ್ವಾ, ಅದಿನೈದು ವರ್ಷದಿಂದ ಈ ಮನ್ಯಾಗೆ ಮುಸ್ರೆ ತಿಕ್ಕೊಂಡು ಬಿದ್ದಿವ್ನಿ–ನಂಗೊತ್ತಿಲ್ವಾ ?"

"ಸರಿ-ನನ್ನ ಬಟ್ಟೆಯೆಲ್ಲಾ ರೂಮ್ನಲ್ಲಿಡು," ನಿರ್ಮಲ ಅಲ್ಲಿಂದ ಸರಿದಳು. ತಾನು ಈ ಮನೆಗೆ ಬಂದಿರುವುದು ಬರಿಯಅಶೋಕನ ಹೆಂಡತಿಯ ಹಾಗಲ್ಲಾ.... ಎದುರಿಸಬೇಕಾದುದು ಬಹಳವಿದೆ ! ತಾನು ತಿಳಿದಷ್ಟು ಬದುಕು ಸುಗಮವಲ್ಲ.

ತಲೆ ಬಾಚಿಕೊಳ್ಳುತ್ತಾ ನಿಂತಿದ್ದಾಗ ಬಟ್ಟೆ ಬದಲಿಸುತ್ತಿದ್ದ ಪತಿಯನ್ನು ಶಿವಮ್ಮ ಕೇಳಿದ ವಿಷಯುಗಳನ್ನು ಕೇಳುವ ಮನಸ್ಸಾಯಿತು. ಆದರೆ ಅವು ಸುಳ್ಳಾದರೆ ಎಲ್ಲರೂ ತನ್ನ ಬಗೆಗೆ ಏನೆಂದುಕೊಳ್ಳುವುದಿಲ್ಲ.

"ಚಿನ್ನಾ,ಎಲ್ಲಿ ತುರುಬು ಹಾಕ್ಕೊ, ರಿಸೆಪ್ಷನ್ ದಿನ ಹಾಕಿಕೊಂಡ ಹಾಗೆ. ನಿಂಗೆ ತುಂಬಾ ಚೆನ್ನಾಗಿ ಕಾಣುತ್ತೆ...."ಅಶೋಕ ಹೇಳಿದಾಗ ತನ್ನ ಯೋಚನಾ ಲಹರಿಯಲ್ಲಿ ಮುಳುಗಿದ್ದ ನಿರ್ಮಲ ಎಚ್ಚೆತ್ತಳು.

"ಅಯ್ಯೋ, ನಂಗೆ ಸರ್ಯಾಗಿ ಹಾಕ್ಕೊಳೋಕೆ ಬರಲ್ಲಾರಿ, ನನ್ನ ಫ್ರೆಂಡ್ ಹಾಕಿದ್ಲು ಆವೊತ್ತು."

"ಪರ್ವಾಗಿಲ್ಲ, ಟ್ರೈಮಾಡು. ಹಾಕೋತಾ ಹಾಕೋತಾ ಬರುತ್ತಮ್ಮ! ಹಾಗೆ."

ನಿರ್ಮಲ ಒಲ್ಲದ ಮನಸ್ಸಿನಿಂದ ತುರುಬು ಕಟ್ಟಿಕೊಂಡಳು. ಅಶೋಕ ತೆಗೆದು ಕೊಟ್ಟ ಸೀರೆಯುಟ್ಟು ಅರವಿಂದ ಕೊಟ್ಟಿದ್ದ ಪರ್ಸ್ ಹಿಡಿದು ಬಂದಾಗ ಪದ್ದಮ್ಮ ಅಡಿಗೆಮನೆಯಿಂದ ಇಣಕಿ ನೋಡಿದರು. "ಏನಪ್ಪಾ ಅಶೋಕ-ರಾತ್ರಿಗೇನು ಅಡಿಗೆ ಮಾಡ್ಲಿ ? ನಿನ್ಹೆಂಡ್ತಿಗೇನ್ಬೇಕೂ ಕೇಳು" ತಾನು ಅಶೋಕನ ಹೆಂಡತಿ ಮಾತ್ರವೇ ? ಮನೆಗೆ ಸೊಸೆ, ಯಜಮಾನಿಯಲ್ಲವೇ ?

"ಏನ್ಮಾಡ್ಕೋಣ ನಿಮ್ಮೊ ?"

"ಏನಾದ್ರೂಮಾಡ್ಲಿ, ಪರವಾಗಿಲ್ಲ" ನಿರ್ಮಲ ಮೊಟಕಾಗಿ ಉತ್ತರಿಸಿದಳು.

ಹೊರಬಾಗಿಲು ದಾಟುತ್ತಿರುವಾಗ ಅನಂತ ಕೂಗಿದನು. "ಕಾರು ಬೇಡ್ವಾ ?" ಅಶೋಕ ನಿರ್ಮಲನ ಮುಖ ನೋಡಿದನು.

"ಬೇಡಾರೀ-ನಡ್ಕೊಂಡೇ ಹೋಗೋಣ." ನಿರ್ಮಲಳಿಗೆ ಮಧ್ಯಾಹ್ನ ಅನಂತ ನಡೆಸುತ್ತಿದ್ದ ತನಿಖೆ ಕಣ್ಣ ಮುಂದೆ ಬಂದು ತೇಲಿತು. ಮೆಲ್ಲನು ಸುರಿದಳು. "ಬೇಡಾ ಅಣ್ಣಾ....ಅವಳ್ಗೆ ಎಕ್ಸರ್‌ಸೈಜ್ ಇಲ್ವಂತೆ, ನಡೀ ಬೇಕಂತೆ...." ಅಶೋಕ ಹೇಳಿದಾಗ ಅನಂತ ಏನೋ ಹೇಳಲು ಹವಣಿಸಿ ಮತ್ತೆ ಸುಮ್ಮನಾದನು. ಕೊಂಚ ತಡೆದು ಹೇಳಿದನು. "ತುಂಬಾ ಲೇಟ್ ಮಾಡ್ಬೇಡಿ....ಬೇಗ ಬಂದ್ಬಿಡಿ...." ನಿರ್ಮಲಳ ಹುಬ್ಬು ಗಂಟಿಕ್ಕಿತು. ತಾವು ಹೋಗಿಬರುವುದಕ್ಕೂ ಒಂದು ಬಗೆಯ ಹತೋಟಿಯಿದೆ. ನಿಯಂತ್ರಣವಿದೆ, ಅತ್ತೆಯೇ ಅಲ್ಲ ; ಅತ್ತೆಯ ಬದಲು ಗಂಡನ ಅಣ್ಣನಿದ್ದಾನಲ್ಲಾ ! ಎಲ್ಲಕ್ಕೂ ಅಡ್ಡಿ ಮಾಡಲು !

"ಏನು ತುಂಬಾ ಮೌನವಾಗಿದ್ದೀಯಲ್ಲಾ ! ತಂದೆ ತಾಯಿ ಹೊರಟು ಹೋದ್ರೂಂತ ಬೇಜಾರಾ ?" ಅಶೋಕ ಕೇಳಿದಾಗ ಬೇಕಾಗಿ ನಗು ಬರಿಸಿ ಕೊಂಡಳು.

ರಾತ್ರಿ ಅಶೋಕ ನಿರ್ಮಲ ಇಬ್ಬರೂ ಬಂದಾಗ ಎಂಟೂ ಮುಕ್ಕಾ ಲಾಗಿತ್ತು. ಹಾಲಿನಲ್ಲಿ ಮೂವರು ಅಣ್ಣತಮ್ಮಂದಿರೂ ಕಾಯುತ್ತಾ ಕುಳಿತಿದ್ದರು.

"ಏನು ಕಾಯ್ತಾ ಕೂತಿದ್ದೀರಿ, ನಾವು ಬಂದದ್ದು ಲೇಟಾ ?" ಅಶೋಕ ಕೇಳಿದಾಗ ಅನಂತ ಹಣೆಯ ಮೇಲೆ ಕೈಯಾಡಿಸಿಕೊಂಡನು.

ಅಜಯ್ ಮೆಲುದನಿಯಲ್ಲಿ ಹೇಳಿದನು "ಅಮರೇಶ್ ಬಂದೇ ಇಲ್ಲಾ !" ನಿರ್ಮಲಳ ಎದೆ ಧಸಕ್ಕೆಂದಿತು. ಆದರೂ ಬೆಳೆದ ಹುಡುಗ ಬರದೇ ಎಲ್ಲಿಗೆ ಹೋಗುತ್ತಾನೆ. ಇನ್ನೂ ಚಿಕ್ಕ ಮಗುವಿನ ಹಾಗೆ ಅವನನ್ನು ನೋಡಿ ಕೊಳ್ಳುತ್ತಾರಲ್ಲ !

ನಿರ್ಮಲ ಬಟ್ಟೆ ಬದಲಿಸಲು ರೂಮಿಗೆ ಬಂದಾಗ ಅಶೋಕನು ಅವಳ ಹಿಂದೆ ಬಂದನು.

"ನಾನು ಹೇಳಿಲ್ವಾ ? ಆ ರ್‍ಯಾಸ್ಕಲ್‌ಗೆ ಸ್ಕೂಟರ್ ಕೊಡ್ಬೇಡಾಂತ- ನೋಡಿದ್ಯಾ ಈಗ ? ಏನಾದ್ರೂ ಹೆಚ್ಚುಕಮ್ಮಿಯಾದ್ರೆ ಯಾರು ಹೊಣೆ ?"

ನಿರ್ಮಲಳಿಗೆ ರೇಗಿತು "ಅಲ್ಲಾಂದ್ರೇ—ಅವನೇನು ಎಳೇ ಮಗೂನಾ ? ಬರ್ತಾನೆ. ಅಥ್ವಾ ನಿಮ್ಮ ಸ್ಕೂಟರ್ ಎತ್ಕೊಂಡು ಓಡಿ ಹೊರಟು ಹೋಗ್ತಾನಾ ? ಅದ್ಯಾಕೆ 'ಫಸ್' ಮಾಡ್ತೀರಿ ?"

"ನಿಂಗೊತ್ತಿಲ್ಲ ನಿನ್ಗೂ !" ಅಶೋಕ ಹೇಳಿದಾಗ ನಿರ್ಮಲ ತಟಕ್ಕನೆ ಉತ್ತರಿಸಿದಳು. "ನಂಗೆಲ್ಲಾ ಗೊತ್ತು !"

"ಏನ್ಗೊತ್ತು ನಿಂಗೆ ?" ಅಶೋಕ ಕೊಂಚ ಗಡುಸಾಗಿ ಕೇಳಿದಾಗ ನಿರ್ಮಲ ನಿಜ ಹೇಳಲು ಅಂಜಿದಳು. "ಅಯ್ಯೋ ಬಿಡೀಂದ್ರೆ, ನಮ್ಮನೇಲಿ ವಿಶ್ವನೂ ಹೀಗೇ ಮಾಡ್ತಾ ಇದ್ದ. ಅಮರೇಶನ ವಯಸ್ನಲ್ಲಿ ತುಂಬಾ ಬಿಗಿ ಹಿಡಿದ್ಬಿಟ್ರೆ, ಲಗಾಮು ಕಳಚಿದ ಕುದುರೆ ಹಾಗೆ ಓಡ್ಬಿಡ್ತಾರೆ ಗೊತ್ತಾ ?"

ಅಷ್ಟರಲ್ಲಿ ಹೊರಗಡೆ ಸ್ಕೂಟರಿನ ಶಬ್ದ ಕೇಳಿಸಿತು. ನಿರ್ಮಲ ಕಿಟಕಿ ಯಿಂದ ಇಣಕಿ ನೋಡಿದಳು. ಬಂದವನು ಅಮರೇಶ. ಅವಳ ಮನಸ್ಸು ಹಗುರವಾಯಿತು. ಅಶೋಕ ಹೊರಗೆ ಹೋದನು.

ಅವಳು ಸೀರೆ ಬದಲಿಸುತ್ತಿರುವಾಗ ಅನಂತನ ಗಡಸುದನಿ ಕೇಳಿಸಿತು. "ಯಾಕೋ ಇಷ್ಟು ಹೊತ್ತು ? ಎಲ್ಲಿಗೆ ಹೋಗಿದ್ದೇ ? ಅಜಯನ ಧ್ವನಿ ಸಮುದ್ರದಷ್ಟು ಗಂಭೀರವಾಗಿತ್ತು. "ಇನ್ನೆಲ್ಲಿಗೆ ಹೋಗ್ತಾನೆ ಗೊತ್ತಿಲ್ವಾ ?"

"ರ್‍ಯಾಸ್ಕಲ್....ಎಷ್ಟೊತ್ಗೆ ಬರೋದೂ....? ಹೊಸ್ದಾಗಿ ಬಂದಿರೋ ನಿರ್ಮಲಂಗೆ ಮಸ್ಕಾ ಹೊಡ್ದು ನನ್ನ ಸ್ಕೂಟರ್ ಎತ್ಕೊಂಡು ಹೋದವ್ನು ಈಗ ಬರ್ತಾ ಇದ್ಯಾ" ಅಶೋಕ್ ಅಮರೇಶನ ಕೆನ್ನೆಗೆ ಹೊಡೆಯುವುದಕ್ಕೂ

ನಿರ್ಮಲ ರೂಮಿನಿಂದ ಹೊರಬರುವುದಕ್ಕೂ ಸರಿಯಾಯಿತು. ನಿರ್ಮಲ ಗಂಡನತ್ತ ಧಾವಿಸಿ ಅವನಿಗೂ ಅಮರೇಶನಿಗೂ ಮಧ್ಯೆ ನಿಂತಳು.

"ಅನ್ನ ಮುಟ್ಟಿದ್ರೆ ನನ್ನಾಣೆ...." ಅವಳ ಕಣ್ಣು ಕಿಡಿ ಕಾರುತ್ತಿದ್ದವು. "ಹೌದು, ನಾನೇ ನಿಮ್ಮನ್ನ ಒಪ್ಸಿ ಸ್ಕೂಟರ್ ತಗೊಂಡ್ಹೋಗೂ ಅಂದೆ— ಏನು ಮಧ್ಯರಾತ್ರಿ ಬಂದ್ನಾ? ಈಗ್ತಾನೇ ಬರ್‍ತಾ ಇರೋದೂ? ನಾಲ್ಕು ಜನ ಅಣ್ಣತಮ್ಮಂದಿರು ಅವನ್ನ ಅಮರ್‍ಕೊಂಡು ಬೈಯ್ಯೋದೂ...ಹೊಡ್ಯೋದೂ ....ಭಲೇ....ನೀವೆಲ್ಲಾ ಓದಿ ವಿದ್ಯಾಬುದ್ಧಿ ಕಲ್ತು ಬಹಳ ಚೆನ್ನಾಗಿ ನಡ್ಕೊ ತೀರಿ. ಎಳೇ ಮಗೂನ್ನ ಹೆದರ್ಸಿ ಬೆದರ್ಸಿ ಇಟ್ಕೊಳ್ಳೋ ಹಾಗೆ ಇಟ್ಕೋ ತೀರಲ್ಲಾ!" ನಿರ್ಮಲಳ ಕಣ್ಣುಗಳು ತೀಕ್ಷ್ಣವಾದವು.

ಅಶೋಕ ಗುಡುಗಿದ, "ನೀನು ಸುಮ್ನಿರು, ನಾವು ನಾವು ಅಣ್ಣ ತಮ್ಮಂದಿರ ಮಧ್ಯೆ ಬರ್ಬೇಡಾ...."

"ನಾನು ಬರೋದೇ....ನನ್ನ ಮೈದುನನ ವಿಷಯದಲ್ಲಿ ನಾನು ಮಾತಾ ಡೋದೆ!" ನಿರ್ಮಲ ಖಾರವಾಗಿಯೇ ಹೇಳಿದಳು.

ಅನಂತ ಮಧ್ಯೆ ಬಾಯಿ ಹಾಕಿದನು. "ಸಾಕು ಅಶೋಕ್....ವಿಷಯ ತುಂಬಾ ಬೆಳೆಸ್ಬೇಡಾ, ಆಯ್ತಲ್ಲಾ ಇನ್ನು ಊಟಕ್ಕೆ ನಡೀರಿ..."

ಎಲ್ಲರೂ ಎದ್ದು ಹೋದರೂ ಅಮರೇಶ ನಿಂತಿದ್ದನು. ಅಶೋಕ ಹೊಡೆದ ಕೆನ್ನೆ ಕೆಂಪಾಗಿತ್ತು. ಅವನ ಕಣ್ಣುಗಳು ಕಿಡಿ ಕಾರುತ್ತಿದ್ದವು. ನಿರ್ಮಲಳ ಕಣ್ಣುಗಳು ಹನಿದುಂಬಿದ್ದವು.

"ಪ್ಲೀಸ್ ಅಮರೇಶ್, ಅವರೆಲ್ಲರಿಗೂ ಏಕೆ ಬೇಡದ ಹಾಗೆ ನಡ್ಕೋತೀರಿ?"

"ಇಲ್ಲಾ ಅತ್ಗೆ. ಇವ್ರ ಕೈಕೆಳಗೆ ಇರೋದ್ರಿಂದಾನೇ ಇದೆಲ್ಲಾ. ನಾನು ನನ್ಪಾಡಿಗೆ ಸಂಪಾದ್ನೆ ಮಾಡ್ತಾ ಇದ್ದಿದ್ರೆ ನನ್ನ ಯಾರೂ ಮಾತಾಡ್ತಾ ಇರ್ಲಿಲ್ಲ --ಇವರೇ ಏನ್ಬೇಕಾದ್ರೂ ಮಾಡ್ಬೋದು, ನಾನು ಏನೂ ಮಾಡ್ಬಾರ್ದು.... ನಾನು ಈ ಮನೇಲಿ ಇರೋಲ್ಲ ಅತ್ಗೆ--ಹೊಟ್ಗಿಲ್ದೇ ಸತ್ರೂ ಪರ್‍ವಾಗಿಲ್ಲ..." ಅಮರೇಶ ಆವೇಶದಿಂದ ಹೇಳಿದಾಗ ನಿರ್ಮಲ ಅವನ ಕೈಹಿಡಿದು ಹೇಳಿದಳು.

"ನೋಡೀ....ನೀವೀಗ ಹೊರಟುಹೋದ್ರೇ....ಎಲ್ರೂ ನನ್ನೇ ಆಡ್ಕೋ ತಾರೆ--ಅತ್ಗೆ ಬಂದ್ಲು ಮೈದುನನ್ನು ಓಡ್ಸಿದ್ಲೂಂತಾ....!"

ಒಳಗಿನಿಂದಲೇ ಅವರ ಮಾತನ್ನು ಆಲಿಸುತ್ತಿದ್ದ ಅರವಿಂದ ಬಂದು

ಅಮರೇಶನ ಭುಜದ ಸುತ್ತ ಕೈಹಾಕಿ ಕರೆದುಕೊಂಡು ಹೋದನು. "ಇಲ್ಬಾ, ಒಂದ್ಮಾತು ಹೇಳ್ತೀನಿ...ನೀವು ಹೋಗಿ ಅತ್ಗೆ. ಬಂದ ದಿನಾನೆ ಅಶೋಕ ನೀವು, ನಮ್ಮಗಳ ವಿಚಾರಕ್ಕಾಗಿ ಜಗಳ ಆಡೋದು ಬೇಡಾ...ಪ್ಲೀಸ್ ಲೆಟ್ ಅಸ್ ಫರ್‌ಗೆಟ್ ಇಟ್...."

ನಿರ್ಮಲ ಅರೆಕ್ಷಣ ಅಲ್ಲೇ ನಿಂತ ಅನಂತರ ತನ್ನ ಕೊಠಡಿಗೆ ಹೋದಳು. ಅಶೋಕ ಕಿಟಕಿಯಿಂದ ಹೊರಗೆ ನೋಡುತ್ತಾ ನಿಂತಿದ್ದನು. ನಿರ್ಮಲ ಒಳಗೆ ಬಂದಾಗ ಅವಳ ಕಾಲಿನ ಕಾಲುಂಗುರದ ಸದ್ದು ಕೇಳಿ ಹಿಂತಿರುಗಿ ನೋಡಿದನು. ಅವಳು ಅವನತ್ತ ನೋಡದೆ ಪುಸ್ತಕವೊಂದನ್ನು ಕೈಗೆ ತೆಗೆದುಕೊಂಡಾಗ ಮೆಲ್ಲಗೆ ಕರೆದನು. "ನಿಮ್ಮೀ, ಬಾ ಇಲ್ಲಿ...." ಜೇನು ಲೇಪಿಸಿದಂತಿತ್ತು.

ನಿರ್ಮಲ ಉತ್ತರಿಸಲಿಲ್ಲ. ಬೇಕಾಗಿಯೇ ಪುಸ್ತಕದ ಹಿಂದೆ ಮುಖ ಮರೆ ಮಾಡಿದಳು. ಅಶೋಕನೇ ಅವಳ ಬಳಿಗೆ ಬಂದು ಭುಜದ ಮೇಲೆ ಕೈ ಇಟ್ಟಾಗ ನಿರ್ಮಲ ಅವನ ಕೈ ಹಿಂದೆ ತಳ್ಳಿದಳು.

"ನಿಮ್ಮೂ....ಪ್ಲೀಸ್...." ಅಶೋಕ ಮತ್ತೆ ಭುಜದ ಮೇಲೆ ಕೈಯಿಟ್ಟಾಗ ನಿರ್ಮಲ ಹಿಂದೆ ತಳ್ಳಲಿಲ್ಲ. ಅದರ ಬದಲು ಮುಖವನ್ನು ಪುಸ್ತಕದಲ್ಲಿ ಅಡಗಿಸಿದಳು. ಅಶೋಕ ಬಲವಂತದಿಂದ ಅವಳ ಮುಖವೆತ್ತಿದಾಗ ಕೆನ್ನೆ ಎರಡರ ಮೇಲೆ ಕಂಬನಿಯಿತ್ತು. ಹಾಗೆಯೇ ಅವಳ ಮುಖವನ್ನು ಎದೆ ಗಪ್ಪಿದ–"ಸಾರಿ ಚಿನ್ನಾ, ಸಾರಿ ನಿಮ್ಮೂ ಇನ್ನೊಂದ್ಸಲ ಖಂಡಿತ ಅಮರೇಶನ ತಂಟೆಗೆ ನಾನು ಹೋಗುವುದಿಲ್ಲ. ನಿನ್ನಾಣೆ ನನ್ನ ಕ್ಷಮಿಸು !" ಅವಳ ಕೆನ್ನೆ, ಕತ್ತು, ಕಣ್ಣುಗಳಿಗೆ ಮುತ್ತಿನ ಮಳೆಗರೆದ.

ಒಂಭತ್ತು ಗಂಟೆಗೆ ಎಲ್ಲರೂ ಊಟಕ್ಕೆ ಕುಳಿತಾಗ ಏನೂ ನಡೆಯಲೇ ಇಲ್ಲವೆನ್ನುವ ಹಾಗಿತ್ತು. ಪದ್ದಮ್ಮ ಬಡಿಸುತ್ತಿದ್ದಾಗ ಅರವಿಂದ ಹಾಸ್ಯದ ಚಟಾಕಿ ಹಾರಿಸಿದ.

"ಏನು ಪದ್ದಮ್ಮ, ಸಾರಿಗೆ ಸ್ವಲ್ಪ ಖಾರ ಜಾಸ್ತಿ. ಇವೊತ್ತು ನಿಮಗೆ ಯಾರ ಮೇಲೆ ಕೋಪ ಜಾಸ್ತಿ ?"

"ನನ್ಮೇಲೇ ಇರ್ಬೇಕೂ...." ನಿರ್ಮಲ ಹೇಳಿದಾಗ ಎಲ್ಲರೂ ನಕ್ಕರು. ವಾತಾವರಣ ತಿಳಿಯಾಗಿಹೋಯಿತು.

ಊಟ ಮುಗಿಸಿ ಕೈ ತೊಳೆಯಲು ಎಲ್ಲರೂ ಎದ್ದಾಗ ಅಮರೇಶ ಇನ್ನೂ

ಬೆರಳು ನೆಕ್ಕುತ್ತಿದ್ದನು. ಎಲ್ಲರೂ ಕೈ ತೊಳೆದಾದ ಮೇಲೆ ಕೊನೆಯಲ್ಲಿ ನಿಧಾನವಾಗಿ ಎದ್ದು ಬಂದಾಗ ಆಗತಾನೆ ಕೈ ತೊಳೆದುಕೊಂಡು ಒರೆಸಿಕೊಳ್ಳುತ್ತಿದ್ದ ನಿರ್ಮಲಳ ಬಳಿ ಬಂದನು.

"ಅತ್ತಿಗೆ, ತುಂಬಾ ಸಾರಿ ....ಇಂತಹ ಅನಾಹುತ ಆಗ್ದೇ ಇರೋಹಾಗೆ ಎಚ್ಚರಕ್ಕೆ ತೊಗೋತೀನಿ....ಏಕವಚನದಲ್ಲೇ ಮಾತಾಡ್ಸಿ...." ಅವನ ದನಿಯಲ್ಲಿ ದೈನ್ಯತೆಯಿತ್ತು.

"ಅದೆಲ್ಲಾ ಈಗ್ಯಾಕೆ ಅಮರೇಶ್. ಹೋಗು, ಒಳ್ಳೆಯ ಮನಸ್ಸಿನಿಂದ ನಿದ್ದೆ ಮಾಡು, ಗುಡ್‌ನೈಟ್ .." ನಿರ್ಮಲ ಹೇಳಿದಾಗ ಅಮರೇಶನ ಕಣ್ಣುಗಳು ಬಾರದ ಕಂಬನಿಯಿಂದ ತುಂಬಿದವು.

"ಅತ್ಗೆ, ನಿಮ್ಮನ್ನ ಕಂಡ್ರೆ ನಂಗೆ ತುಂಬಾ ಇಷ್ಟ."

ಅಶೋಕನೂ ಅವರ ಜೊತೆ ಸೇರಿದನು. "ಏನು ಅತ್ಗೆ, ಮೈದುನನ ಕಾನ್ಫರೆನ್ಸ್ ?

"ಅಮರೇಶನಿಗೆ ನನ್ನ ಕಂಡ್ರೆ ತುಂಬಾ ಇಷ್ಟಾಂತೆ !" ನಿರ್ಮಲ ಹೇಳಿದಾಗ ಅಶೋಕ ಮೃದುವಾಗಿ ನಕ್ಕು ಅಮರೇಶನ ತಲೆ ತಡವಿದನು.

"ನೀನು ಒಂದೊಂದ್ಸಲ ರೇಗಿಸ್ಬಿಡ್ತೀಯಾ !"

ಅಂದು ರಾತ್ರಿ ಅಶೋಕನ ತೋಳ್ತೆಕ್ಕೆಯಲ್ಲಿ ಮಲಗಿದ್ದ ನಿರ್ಮಲಳಿಗೆ ಮನಸ್ಸೇಕೋ ನಲಿವಿನಿಂದ ಅರಳಿ ಹೂವಾಗಿತ್ತು.

## ೫

ಅಶೋಕ ಮೂರು ದಿನಗಳ ರಜ ಹಾಕಿದ್ದರಿಂದ ಎಲ್ಲರೂ ಹೊರಗೆ ಕೆಲಸಕ್ಕೆ ಹೊರಟುಹೋದಾಗ ಬೇಸರವೆನಿಸಲಿಲ್ಲ. ಅವನೊಡನೆ ಚಕ್ಕಂದ ವಾಡುತ್ತಲೋ, ಅವನ ಬಾಹುಗಳಲ್ಲಿ ಒರಗಿಯೋ,ಅವನ ಒಲವಿನಲ್ಲಿ ಮುಳುಗಿ ತೇಲುತ್ತಲೋ ಇರುತ್ತಿದ್ದರಿಂದ ಅಷ್ಟು ಬೇಸರವಾಗಲಿಲ್ಲ. ಅಮರೇಶ ಕಾಲೇಜಿಗೆ ಹೊರಟಾಗ ನಿರ್ಮಲಳಿಗೆ ಹೇಳದೇ ಹೋಗುತ್ತಿರಲಿಲ್ಲ.

ಆದರೆ ಅಶೋಕನ ರಜ ಮುಗಿದು ಆಫೀಸಿಗೆ ಹೊರಟಾಗ ಅವಳಿಗೆ ಮಂಕು

ಬಡಿಯಿತು. ಬೆಳಿಗ್ಗೆ ಅಜಯ್ ಎಂಟು ಗಂಟೆಗೆ ತಿಂಡಿ ತಿಂದು ಹೊರಟು ಹೋಗುತ್ತಿದ್ದನು. ಒಂಭತ್ತೂವರೆ ಗಂಟೆಗೆ ಕ್ಯಾರಿಯರ್ ಕಳುಹಿಸ ಲಾಗುತ್ತಿತ್ತು. ಅರವಿಂದ, ಅಮರೇಶ ಒಂಭತ್ತೂವರೆಗೆ ಊಟ ಮಾಡಿಕೊಂಡು ಕಾಲೇಜಿಗೆ ಹೋಗುತ್ತಿದ್ದರು. ಹತ್ತೂವರೆಗೆ ಅಶೋಕ ಅನಂತ ಒಟ್ಟಿಗೆ ಊಟ ಮಾಡಿ ಆಫೀಸಿಗೆ ಹೊರಡುತ್ತಿದ್ದರು. ಎಂಟು ಗಂಟೆಗೆ ಕಾಫಿ ಕುಡಿದು ತಿಂಡಿ ತಿನ್ನುತ್ತಿದ್ದ ನಿರ್ಮಲಳಿಗೆ ಅಷ್ಟು ಬೇಗ ಊಟ ಸೇರುತ್ತಿರಲಿಲ್ಲ. ಅವರೆಲ್ಲರೂ ಹೋದ ಮೇಲೆ ಸ್ನಾನ ಮಾಡಿ, ಪೂಜೆ ಮಾಡಿ ಮನೆಯ ಸುತ್ತಲಿದ್ದ ಸಣ್ಣ ಕೈ ತೋಟದಲ್ಲಿ ತಿರುಗಾಡಿ, ಯಾವುದಾದರೂ ಪುಸ್ತಕ ತಿರುವಿಹಾಕುತ್ತಾ ಕುಳಿತು ಹನ್ನೆರಡು ಗಂಟೆಗೆ ಊಟಕ್ಕೇಳುತ್ತಿದ್ದಳು. ಪದ್ಮಮ್ಮ ಅವಳಿಗೆ ಬಡಿಸಿ ತಾವೂ ಊಟ ಮಾಡುತ್ತಿದ್ದರು. ಮತ್ತೆ ಅಮರೇಶ ಸಂಜೆ ನಾಲ್ಕು ಗಂಟೆಗೆ ಬರುವ ವೇಳೆಗೆ ಕಾಫಿ ತಿಂಡಿ ಸಿದ್ಧವಾಗುತ್ತಿತ್ತು. ಅರವಿಂದ, ಅಶೋಕ, ಅನಂತ, ಅಜಯ್ ಸಂಜೆ ಐದು ಗಂಟೆಗೆ ಬರುತ್ತಿದ್ದರು. ನಿರ್ಮಲ ಮಧ್ಯಾಹ್ನ ನಿದ್ದೆ ಮಾಡಿ ಕಾಲ ತಳ್ಳುತ್ತಿದ್ದಳು. ಅಶೋಕ ಬರುವ ವೇಳೆಗೆ ಅಲಂಕರಿಸಿ ಕೊಂಡು ಸಿದ್ಧಳಾಗುತ್ತಿದ್ದಳು. ಅವನ ಕಾಫಿ ತಿಂಡಿ ಆದ ಮೇಲೆ ಇಬ್ಬರೂ ಎಲ್ಲಾದರೂ ಹೊರಡುತ್ತಿದ್ದರು. ರಾತ್ರಿ ಒಂಬತ್ತು ಗಂಟೆಗೆ ಊಟ. ಇದು ದಿನನಿತ್ಯದ ಕಾರ್ಯಕ್ರಮವಾಗಿತ್ತು.

ಎರಡು ದಿನಗಳು ಕಳೆಯುವಷ್ಟರಲ್ಲಿ ನಿರ್ಮಲಳಿಗೆ ಮೈ ಭಾರವೆನಿಸಿತು. ತಿಂದು, ಕೂತು, ಮಲಗಿ ಬೇಸರವೆನಿಸಿತು. ಮನೆಯಲ್ಲಿ ಹುಡುಕಿದರೂ ಕೆಲಸವಿಲ್ಲ. ಶಿವಮ್ಮ, ಪದ್ಮಮ್ಮ ಎಲ್ಲ ಕೆಲಸ ಮಾಡುತ್ತಿದ್ದರು. ಗಂಡಸರು ಅವರವರ ಕೆಲಸ ಮಾಡಿಕೊಳ್ಳುತ್ತಿದ್ದರು. ಬೇಸರವಾದಾಗ ಅಡಿಗೆ ಮನೆ ಯಲ್ಲಿ ಪದ್ಮಮ್ಮನೊಡನೆ ಹರಟುತ್ತಿದ್ದಳು. ಅವರು ಅವಳ ಕೈಯಲ್ಲಿ ಮಡಿ ಯೆಂದು ಯಾವ ಕೆಲಸವನ್ನೂ ಮಾಡಿಸುತ್ತಿರಲಿಲ್ಲ.

ಅಂದು ಅಶೋಕ ಸಂಜೆ ಬಂದಾಗ ನಿರ್ಮಲ ಗೊಣಗಿದಳು.

"ಏನ್ರೀ....ನಾನು ಸಣ್ಣಗೆ ತೆಳ್ಳಗೆ ಇದ್ರೆ ಇಷ್ಟಾನೋ ಇಲ್ಲಾ ಹಂಡೆ ದಪ್ಪಕ್ಕಿದ್ರೆ ಇಷ್ಟಾನೋ ನಿಮ್ಗೆ ?"

"ನೀನು ಹೇಗಿದ್ರೂ ಇಷ್ಟ ನನ್ಗೆ !" ಅಶೋಕ ಹೇಳಿದಾಗ ನಿರ್ಮಲ ಕೆನ್ನೆ ಯೂದಿಸಿದಳು.

"ಹೋಗ್ರಿ,ನಿಮಗೆಲ್ಲಾ ನೂ ತಮಾಷೆ....ನಾನು ಹೀಗೆ ದಿನಾ ತಿನ್ನೋದೂ ಸುಮ್ನೇ ಕೂತ್ಕೊಳ್ಳೋದು ಮಾಡ್ತಾ ಇದ್ರೆ ನಾನು ಬೆಲೂನ್ ಹಾಗೆ ಊದ್ಬಿಡ್ತೀನಿ, ನಂಗೇನಾದ್ರೂ ಕೆಲ್ಸ ಬೇಕಲ್ಲಾ !"

"ನಾನು ಕೆಲ್ಸಾ ಕೊಡ್ಲಾ ?" ಅಶೋಕ ಅವಳ ಕಡೆ ಆಸೆಯಿಂದ ನೋಡಿದಾಗ ನಿರ್ಮಲ ಸಿಡುಕಿದಳು. "ನಿಮಗೊಂದೇ ಗೊತ್ತಿರೋದೂ–ನೋಡೀ, ಮನೇಲಿ ಬಾಗಿಲಿಗೆ ಹಾಕಿರೋ ಪರದೆಗಳಿಗೆಲ್ಲಾ ನಿಮ್ಮ ವಯಸ್ಸಾಗಿದೆ. ಹೇಗಿದ್ರೂ ನನ್ನ ಹೊಲಿಗೆ ಮಿಷಿನ್ ತಂದಿದ್ದೀನಿ. ಬಟ್ಟೆ ತರೋಣ, ನಾನು ಹೊಸ ಕರ್ಟನ್ಸ್ ಹೊಲಿದು ಹಾಕ್ತೀನಿ...."

"ಅದೆಲ್ಲಾ ಹೋಂ ಡಿಪಾರ್ಟ್‌ಮೆಂಟು, ಅದಕ್ಕೆ ಅನಂತನ್ನ ಕೇಳ್ಬೇಕೂ!" ನಿರ್ಮಲಳಿಗೆ ಆಶ್ಚರಿಯಾಯಿತು. ಮನೆಗೆ ತಾನು ಪರದೆ ಬಟ್ಟೆ ತಂದು ಹೊಲಿಯುವುದಕ್ಕೂ ಅನಂತನ ಅನುಮತಿ ಬೇಕೆ ?

"ಏನೂಂದ್ರೆ ನೀವು ಹೇಳೋದೂ. ಪರದೆಗೂ ಅದಕ್ಕೂ ಸಂಬಂಧವೇನೂ ? ಅವರಿಗೇನು ಗೊತ್ತು ?"

"ಹಾಗಲ್ಲ ನಿಮ್ಮಿ, ನಾವೆಲ್ಲ ತಮ್ಮಂದಿರೂ ನಮ್ಮ ಕೈ ಖರ್ಚಿಗೆ ದುಡ್ಡಿಟ್ಕೊಂಡು ಮಿಕ್ಕೆಲ್ಲಾ ಹಣ ಅಣ್ಣನ ಕೈಲಿ ಕೊಟ್ಬಿಡ್ತೀವಿ. ಮನೆ, ಹಣಕಾಸು ಖರ್ಚು ಎಲ್ಲಾ ಅವನೇ ನೋಡ್ಕೊಳ್ಳೋದೂ."

"ಖರ್ಚಾಗಿ ಮಿಕ್ಕಿದ ದುಡ್ಡು ಏನ್ಮಾಡ್ತಾರೆ ?" ನಿರ್ಮಲ ಅನುಮಾನಿಸುತ್ತಾ ಕೇಳಿದಾಗ ಅಶೋಕ ತಲೆಯಲ್ಲಾಡಿಸಿದನು. "ಅದ್ನ ನಾವ್ಯಾರೂ ಕೇಳೋಕೇ ಹೋಗೋಲ್ಲ. ಮನೆ ಸಾಮಾನಿನ ಖರ್ಚು, ಹಾಲು ಮೊಸರು, ಕೆಲಸದವರ ಸಂಬಳ, ಅಮರೇಶನ ಓದು ಎಲ್ಲಾ ಆಗ್ಬೇಕಲ್ಲಾ !"

ನಿರ್ಮಲಳಿಗೆ ಅದು ಸಂಬರಲಿಲ್ಲ. "ಇಲ್ನೋಡಿ ...ಪರ್ದೆಗೆ ದುಡ್ಡು ನೀವು ಕೊಡೋಹಾಗಿದ್ರೆ ಕೊಡಿ. ಇಲ್ದಿದ್ರೆ ನಾನು ಕೇಳೋಕೆ ಹೋಗೋಲ್ಲ. ಏನ್ರಿ, ಎಲ್ಲದಕ್ಕೂ ಅವರ್ನ ಕೇಳೋದು ಏನು ಚೆನ್ನ?"

ಅಶೋಕ ಮಾತು ಬೆಳೆಸಲಿಲ್ಲ. ಅಂದು ರಾತ್ರಿ ಎಲ್ಲರೂ ಊಟಕ್ಕೆ ಕುಳಿತಾಗ ಅಶೋಕ ಮಾತು ತೆಗೆದ.

"ಅಣ್ಣಾ, ಮನೆಯ ಪರ್ದೆಗಳೆಲ್ಲ ಹಳೇದಾಗಿ ಮಾಸಲಾಗಿವೆ. ಬೇರೆ ಪರ್ದೆಗಳ್ನ ತರ್ಬೇಕೂ. ಯಾರಾದ್ರೂ ಬಂದ್ರೆ ಅಸಹ್ಯವಾಗಿರುತ್ತೆ !"

ಅನಂತ ತಲೆ ತಗ್ಗಿಸಿ ಊಟ ಮಾಡುತ್ತಿದ್ದ ನಿರ್ಮಲಳತ್ತ ದೀರ್ಘವಾಗಿ ನೋಡಿದನು.

"ಎಷ್ಟು ಆಗ್ಬೋದು ಪರ್ದೆ ಬಟ್ಟೆಗೆ ?"

"ನಂಗೊತ್ತಿಲ್ಲ-ಅವೆಲ್ಲಾ ಹೆಂಗಸರ ಬಾಬ್ತು. ಇದ್ದಾಳಲ್ಲ ಕೇಳು." ಅಶೋಕ ಹೇಳಿದಾಗ ನಿರ್ಮಲ ತಕ್ಷಣ ಉತ್ತರಿಸಲಿಲ್ಲ.

"ಬಟ್ಟೆ ತಂದುಕೊಟ್ಟರೆ ಬೇಕಾದರೆ ಹೊಲಿದು ಕೊಡುತ್ತೀನಿ !"

ಮಾರನೆಯ ದಿನ ಅನಂತ ಐನೂರು ರೂಪಾಯಿಗಳನ್ನು ನಿರ್ಮಲಳ ಕೈಗಿತ್ತನು.

"ನೀನೇ ಹೋಗಿ ಬಟ್ಟೆ ಕೊಂಡ್ಕೊಂಡ್ಬಾ-" ನಿರ್ಮಲ ನಿರುತ್ತರಳಾಗಿ ನಿಂತರೂ ಅಸಮಾಧಾನ ಮುಖದಲ್ಲಿ ಎದ್ದು ಕಾಣುತ್ತಿತ್ತು.

ಅಂದು ಸಂಜೆ ಅಶೋಕನ ಜೊತೆ ಸ್ಕೂಟರ್‌ನಲ್ಲಿ ಹೋಗಿ ಮನೆಯ ಗೋಡೆಗಳಿಗೊಪ್ಪುವ ಬಣ್ಣ ಬಣ್ಣದ ಹೂವುಗಳಿದ್ದ ಪರದೆಯ ಬಟ್ಟೆಯನ್ನು ಕೊಂಡುಕೊಂಡಳು. ಬಟ್ಟೆಯ ಖರೀದಿಗೆ ತಗುಲಿದ ಖರ್ಚಿನ ಬಿಲ್ಲನ್ನು ಕೈಯಲ್ಲಿ ಭದ್ರವಾಗಿ ಹಿಡಿದಾಗ ಅಶೋಕ ಗೊಣಗಿದನು.

"ಅದನ್ಯಾಕೆ ಅಷ್ಟು ಭದ್ರವಾಗಿಟ್ಕೋತೀ ?"

"ಎಷ್ಟು ಖರ್ಚಾಯ್ತೂಂತ ನಿಮ್ಮಣ್ಣ -ಕೇಳಿದರೆ ಏನ್ಮಾಡೋದೂ ?" ನಿರ್ಮಲ ಹೇಳಿದಾಗ ಅಶೋಕ ತಡೆದನು.-"ಬೇಡಾ ನಿಮ್ಗ್ಯಾ,ಅವನು ಅಪಾರ್ಥ ಮಾಡ್ಕೋತಾನೆ...."

"ಮಾಡ್ಕೊಳ್ಳಿ ಬಿಡಿ--ನಾನೇನೂ ಅಪಾರ್ಥ ಮಾಡಿಕೊಳ್ಳೊಲ್ಲಾ— ಏನಾದ್ರೂ ಅಂದ್ರೆ ?"

ಮನೆಗೆ ಬಂದು ಬಟ್ಟೆಗಾದ ಬಿಲ್ಲನ್ನೂ ಮಿಕ್ಕ ದುಡ್ಡನ್ನೂ ಅನಂತನ ಮುಂದಿಟ್ಟಾಗ ಅನಂತ ಅವಳನ್ನು ನೋಡಿ ನಸುನಕ್ಕನು.

"ಇದೆಲ್ಲಾ ಫಾರ್ಮ್ಯಾಲಿಟೀಸ್ ಯಾಕೆ ?"

ನಿರ್ಮಲ ಅವನಿಗೆ ಉತ್ತರ ಕೊಡುವ ಗೊಡವೆಗೆ ಹೋಗಲಿಲ್ಲ.

ದಿನವೆಲ್ಲಾ ಕುಳಿತು ಪರದೆಗಳನ್ನು ನೆರಿಗೆಯಿಟ್ಟು ಹೊಲಿದಳು. ಆಫೀಸಿನಿಂದ ಒಬ್ಬೊಬ್ಬರಾಗಿ ಬರುವುದರೊಳಗಾಗಿ ಮನೆಯ ಕಳೆ ಬದಲಾಯಿಸಿತ್ತು. ಎಲ್ಲಾ ಬಾಗಿಲು ಕಿಟಕಿಗಳಿಗೆ ಬಣ್ಣಬಣ್ಣದ ಹೂವಿನ ಪರದೆಗಳಿದ್ದವು.

"ನಿಮ್ಮ ಸೆಲೆಕ್ಷನ್ ತುಂಬಾ ಚೆನ್ನಾಗಿದೆ." ಅರವಿಂದ ಹೊಗಳಿದನು. ಅಜಯ್ ಕಣ್ಣಿನಲ್ಲೇ ಚೆನ್ನಾಗಿದೆಯೆಂದು ತಿಳಿಸಿದನು.

ಅಮರೇಶ ಸಂತಸದಿಂದ ಸಿಳ್ಳೆ ಹೊಡೆದನು. "ನಾನು ಬೇರೆ ಮನೆಗೆ ಬಂದ್ಬಿಟ್ಟಿದ್ದೀನೀಂತ ಅಂದ್ಕೊಂಡಿದ್ದೆ...."

ಅಶೋಕ ಮೃದುವಾಗಿ ನಕ್ಕು "ನೀನಂದ್ರೇ ಕೇಳ್ಬೇಕಾ ?" ಎಂದನು.

ಒಪ್ಪದಿದ್ದವನು ಅನಂತನೊಬ್ಬನೆ. "ಸ್ವಲ್ಪ ಗಾಡಿ ಎನಿಸುತ್ತೆ. ಹಳೇ ಮನೆ ಹಳೇ ಫರ್ನಿಚರ್, ಹೊಸ ಕರ್ಟೆನ್ಸ್ ಅಂದ್ರೆ ಮುದುಕಿಗೆ ಹುಡುಗಿಯ ಅಲಂಕಾರ ಮಾಡಿದಹಾಗಿರುತ್ತೆ."

ನಿರ್ಮಲನಿಗೆ ಆ ಮಾತು ಮುಖಕ್ಕೆ ಹೊಡೆದಂತಿತ್ತು. ತಾನು ಅಷ್ಟೊಂದು ಶ್ರಮಪಟ್ಟು ಬಟ್ಟೆ ತಂದು ಹೊಲಿದು ಹಾಕಿಯಾದ ಮೇಲೆ ಈ ಮಾತಾಡ ಬಹುದೇ ? ಅಶೋಕ ಆ ಮಾತು ಕಿವಿಗೇ ಬೀಳಲಿಲ್ಲವೆಂಬಂತೆ ಎತ್ತಲೋ ನೋಡುತ್ತಿದ್ದನು. ಹಾಕಿದ್ದ ಪರದೆಗಳನ್ನೆಲ್ಲಾ ಎಳೆದು ಕಿತ್ತಿಹಾಕಿಬಿಡ ಬೇಕೆಂಬಷ್ಟು ರೋಷ ನಿರ್ಮಲಳಿಗೆ ಹೊಮ್ಮಿ ಬಂತು. ತನ್ನದು ಯಾವಾಗಲೂ ದುಡುಕುತನವೆಂಬುದು ಜ್ಞಾಪಕಕ್ಕೆ ಬಂದು ಮಾತನಾಡದೇ ಸುಮ್ಮನಾದಳು.

ರಾತ್ರಿ ಮಲಗುವಾಗ ಅಶೋಕನ ಹತ್ತಿರ ತನ್ನ ಮನದಳಲನ್ನು ಹೇಳಿ ಕೊಂಡಳು.

"ನೋಡಿ, ಎಲ್ರೂ ಚೆನ್ನಾಗಿದೇಂದ್ರೂ ನಿಮ್ಮಣ್ಣಾನೇ ಕೊಂಕು ಮಾತ ನಾಡಿದ್ದು !"

"ಅವನು ಹೇಳಿದ್ದೂ ನಿಜ ಅಲ್ವೇ ನಿರ್ಮಲ. ಹಳೇ ಮೇಜು ಕುರ್ಚಿ-ಹೊಸ ಪರದೆಗಳು-ಏನು ಚೆನ್ನ. ಹೊಸ ಫರ್ನಿಚರ್ ತೊಗೊಂಡ್ರಾಯಿತು !" ಅವನು ಅಷ್ಟು ಸುಲಭವಾಗಿ ಹೇಳಿದಾಗ ನಿರ್ಮಲ ಗಲಿಬಿಲಿಗೊಂಡಳು.

"ಅಂದ್ರೆ ನಾಳೆ ಫರ್ನಿಚರ್ ತರೋಕೆ ಅವರ ಅನುಮತಿ, ಅವರ ಕೈಯಲ್ಲಿ ಹಣ ತೆಗೆದುಕೊಳ್ಳಬೇಕಾ ?"

"ಈಗ ಮಲ್ಗೋ ಹೊತ್ನಲ್ಲಿ ಯಾಕೆ ಆ ಮಾತು. ನಾಳೆ ಬೆಳಿಗ್ಗೆ ಯೋಚಿಸೋಣ ನಿರ್ಮ್ಮಾ. ದೀಪ ಆರಿಸು !" ಅವಳ ಮಾತಿಗೆ ಅವನು ಚರಣ ಹಾಡಿದನು.

ಮಾರನೆಯ ದಿನ ಬೆಳಿಗ್ಗೆ ಆಫೀಸಿಗೆ ಹೊರಟಾಗ ಅನಂತ ಅಶೋಕನ

ಹತ್ತಿರ ಹೇಳುತ್ತಿದ್ದನು "ಒಳ್ಳೇ ಫರ್ನೀಚರ್ ಶಾಪ್‌ಗೆ ಹೋಗಿ ಒಂದಿಷ್ಟು ಸೋಫಾ, ಕುರ್ಚಿ ಮೇಜುಗಳು ತರ್ಬೇಕೂ....ನನಗೆ ಅದೆಲ್ಲಾ ಗೋತ್ತಾಗೊಲ್ಲ-ನಿರ್ಮಲ ಹೆಣ್ಣು ಹುಡುಗಿ. ಅಂಗಡಿಯವರು ಚೆನ್ನಾಗಿ ಮೋಸ ಮಾಡ್ತಾರೆ-ನೀನೋ ಅಜಯ್‌ನೋ ಹೋಗಿ ಕೊಂಡ್ಕೊಡ್ಬನ್ನಿ...."

ಹಾಲಿನಲ್ಲಿ ಅಶೋಕನ ಷರಟಿಗೆ ಗುಂಡಿ ಹೊಲೆಯುತ್ತಿದ್ದ ನಿರ್ಮಲಳ ಕಿವಿಗೆ ಆ ಮಾತು ಬಿದ್ದಿತ್ತು. ಬೇಕಾಗಿಯೇ ಅವರ ಮಾತಿನಲ್ಲಿ ತನಗೆ ಇಷ್ಟ ವಿಲ್ಲವೆನ್ನುವಂತೆ ನಟಿಸಿ ಹೊಲಿದ ಷರಟನ್ನು ಟೇಬಲಿನ ಮೇಲಿಡುತ್ತಿದ್ದಾಗ ಅಶೋಕ ಅನಂತನ ಮಾತನ್ನು ಹೇಳಿದಾಗ ಮೊಟಕಾಗಿ ಉತ್ತರಿಸಿದಳು. "ನಿಮ್ಮಿಷ್ಟ ಏನಾದ್ರೂ ಮಾಡ್ಕೊಳ್ಳಿ !"

ಬಾಯಿಗಿಟ್ಟುಕೊಳ್ಳುತ್ತಿದ್ದ ತುತ್ತು ಅನಂತನ ಕೈಯಿಂದ ತಟ್ಟೆಗೆ ಬಿತ್ತು. ಅದನ್ನು ಗಮನಿಸುವ ವ್ಯವಧಾನ ಯಾರಿಗೂ ಇರಲಿಲ್ಲ.

ಮತ್ತೆರಡು ದಿನಗಳಲ್ಲಿ ಹೊಸ ಸೋಫಾ ಸೆಟ್ಟು, ಹಲವು ಕುರ್ಚಿಗಳೂ ಮೇಜುಗಳೂ ಬಂದವು. ಅವುಗಳನ್ನು ಹೇಗೆ ಜೋಡಿಸಬೇಕೆಂಬ ಬಗೆಗೆ ಅರವಿಂದ, ಅಮರೇಶ, ಅಶೋಕ್ ಮಾತುಕತೆ ನಡೆಸುತ್ತಿದ್ದಾಗ ಅನಂತ ಅವ ರನ್ನು ತಡೆದನು.

"ಅದನ್ನ ಹೇಗೆ, ಎಲ್ಲಿಡ್ಬೇಕೂಂತ ನಿರ್ಮಲ ಡಿಸೈಡ್ ಮಾಡ್ಲಿ !" ನಿರ್ಮಲ ಆ ಮಾತು ಕಿವಿಗೆ ಬೀಳದ ಹಾಗೆ ಬಟ್ಟೆ ಮಡಿಸಿಡುತ್ತಿದ್ದಳು. ಅವಳಿಗೆ ಕೋಪ ಬಂದಿರುವುದೂ ಅಸಮಾಧಾನವಾಗಿರುವುದೂ ಅಶೋಕನಿಗೆ ತಿಳಿಯಿತು. ಅನಂತನ ಹಣೆಯಲ್ಲಿ ಗೆರೆಗಳು ಮೂಡಿದವು.

ಅವರುಗಳೇ ಕುರ್ಚಿಮೇಜುಗಳನ್ನು ಜೋಡಿಸಿಟ್ಟರು. ಅರವಿಂದ "ಅತ್ತಿಗೆ, ನಾನೊಂದಿಷ್ಟು ಬಟ್ಟೆ ತಂದ್ಕೊಡ್ತೀನಿ ದಿಂಬಿನ ಕವರುಗಳನ್ನು ಹೊಲೆದು ಅದಕ್ಕೆ ಕಸೂತಿ ಹಾಕ್ಕೊಡ್ತೀರಾ ? ನೀವು ತುಂಬಾ ಚೆನ್ನಾಗಿ ಹಾಕ್ತೀ ರಂತೆ !" ನಿರ್ಮಲ ಅವನ ಕಡೆ ನೋಡಿ ಅರ್ಥಗರ್ಭಿತನಾಗಿ ನಕ್ಕಳು.

"ನಾಳೆ ದೋಭಿ, ವೆಂಕಟಪ್ಪ ಬರ್ತ್ತಾನೆ. ಎಲ್ರ ಬಟ್ಟೆನೂ ತೆಗ್ದಿಟ್ಬಿಡಿ." ಅನಂತ ಹೇಳಿದಾಗ ಅಮರೇಶ ತಲೆ ಕೆರೆದುಕೊಂಡನು.

"ದೋಭೀಗೆ ಹಾಕ್ಬಿಟ್ರೆ ಒಂದ್ವಾರ ಮಾಡ್ತಾನೆ. ಅಲ್ಲೀವರ್ಗೂ ನಾನೇನು ಹಾಕ್ಕೊಳ್ಳಿ ?"

"ನಾಲ್ಕು ಇಟ್ಕೊ, ಮಿಕ್ಕಿದ್ದು ಹಾಕಿದ್ರಾಯ್ತು" ಅಶೋಕ ಹೇಳಿದಾಗ ಅಮರೇಶ ತಲೆ ತಗ್ಗಿಸಿದ. "ಇರೋದೇ ನಾಲ್ಕು....ಟ್ರಿಮ್ ಆಗಿ ಹೋಗ್ದೇ ಇದ್ರೆ ಡೀನ್ ಕೋಪ ಮಾಡ್ಕೊತಾರೆ."

"ಅಣ್ಣಾ, ಅಮರೇಶಂಗೆ ಒಂದಿಷ್ಟು ಬಟ್ಟೆ ಹೊಲಿಸ್ಬೇಕೂ !" ಅರವಿಂದ ಹೇಳಿದಾಗ ಅನಂತನ ಮುಖ ಗಂಭೀರವಾಯಿತು.

"ಮುಂದಿನ ತಿಂಗ್ಳು ಹೊಲಿಸೋಣ....ಮದ್ವೆ ಖರ್ಚು, ಪರ್ದೆ, ಫರ್ನೀಚರ್ ಗೆಲ್ಲಾ ತುಂಬಾ ಖರ್ಚಾಗಿಹೋಗಿದೆ."

ನಿರ್ಮಲಳಿಗೆ ಸಿಡಿಲೆರಗಿದಂತಾಯಿತು. ತನ್ನಿಂದ ಇಷ್ಟೆಲ್ಲಾ ಖರ್ಚಾ ಯಿತು. ತನ್ನ ತಪ್ಪು ತನಗರಿವಾಗಲಿಲ್ಲ. ತನ್ನ ಬಳಿ ದುಡ್ಡಿದ್ದಿದ್ದರೆ ಅಮರೇಶ ನಿಗೆ ಷರಟು ಪ್ಯಾಂಟುಗಳನ್ನಾದರೂ ಹೊಲಿಸಬಹುದಿತ್ತು. ಅಣ್ಣಂದಿರ ಬಳಿ ಯಿರುವ ಪ್ಯಾಂಟು ಷರಟುಗಳನ್ನೇಕೆ ಹಾಕಿಕೊಳ್ಳಬಾರದು ? ಎಲ್ಲರತ್ತ ಕಣ್ಣು ಹಾಯಿಸಿದಾಗ ಅಮರೇಶ ಎಲ್ಲರಿಗಿಂತ ತೆಳ್ಳಗಿದ್ದನು.

ನಿರ್ಮಲ ತನ್ನ ಕೊಠಡಿಗೆ ಧಾವಿಸಿದಳು. ಅಶೋಕನ ಬಟ್ಟೆಯಿಟ್ಟಿದ್ದ ಬೀರು ತೆಗೆದು ನೋಡಿದಳು. ಹಾಕುವುದಕ್ಕಿಂತ ಹಾಕದಿರುವ ಬಟ್ಟೆಗಳನ್ನು ಜೋಡಿಸಿಟ್ಟಿತ್ತು. ಅವಳಿಗೊಂದು ಉಪಾಯ ಹೊಳೆಯಿತು. ತಾನು ಬಂದಾ ಗಿನಿಂದ ಬೀರುವಿನ ಕೆಳ ಅಂತಸ್ತಿನಲ್ಲಿದ್ದ ಯಾವ ಬಟ್ಟೆಗಳನ್ನೂ ಅಶೋಕ ಹಾಕಿರಲಿಲ್ಲ. ತಾನೊಂದು ದಿನ ಜಿರಳೆ ಸೇರದಿರಲೆಂದು ನಾಫ್ತಲಿನ್ ಹಾಕಲು ಹೋದಾಗ ಅಶೋಕ ತಡೆದಿದ್ದನು. "ಅದಕ್ಕೆಲ್ಲಾ ಯಾಕೆ ಹಾಕ್ತೀ ? ನಾನೇನೂ ಯೂಸ್ ಮಾಡ್ತಾ ಇಲ್ಲ...ಸದ್ದಮ್ಮನ ಕೈಗೆ ಕೊಟ್ರೆ ಅದ್ನ ಕೊಟ್ಟು ಪಾತ್ರೆ ಗೀತ್ರೆ ತೊಗೋತಾರೆ" ಎಂದಿದ್ದನು.

ಎಲ್ಲರೂ ಆಫೀಸಿಗೆ ಹೋದ ಮೇಲೆ ನಿರ್ಮಲ ಬೇಗ ಸ್ನಾನ ಊಟ ಮುಗಿಸಿದಳು. ಅಶೋಕನ ಬೀರುವಿನ ಕೆಳ ಅಂತಸ್ತಿನಲ್ಲಿದ್ದ ಪ್ಯಾಂಟು ಷರಟುಗಳನ್ನು ತೆಗೆದಳು. ತನಗೆ ಹೇಗಿದ್ದರೂ ಹೊತ್ತು ಹೋಗುವುದಿಲ್ಲ. ಈ ಕೆಲಸವನ್ನಾದರೂ ಮಾಡಬಹುದು. ಅಮರೇಶನ ಷರಟು, ಪ್ಯಾಂಟು ಇದ್ದರೆ ಸರಿಯಾಗಿ ಅಳತೆ ತೆಗೆದುಕೊಂಡು ಹೊಲಿಯಬಹುದಿತ್ತು. ಅವನ ಬಟ್ಟೆ ಎಲ್ಲಿಟ್ಟಿರುತ್ತಾನೋ ! ಹಾಲಿನ ಮೂಲೆಯಲ್ಲಿ ಅಗಸನಿಗೆ ಹೋಗ ಬೇಕಾಗಿದ್ದ ಬಟ್ಟೆಯ ಗಂಟು ಇಡಲಾಗಿತ್ತು. ಅದನ್ನು ಬಿಚ್ಚಿದಾಗ ಅವಳಿಗೆ

ಯಾವುದು ಯಾರದು ತಿಳಿಯಲಿಲ್ಲ. ತಾನೇ ತಂದು ಹಾಕಿದ್ದ ಅಶೋಕನ ಬಟ್ಟೆ ಮಾತ್ರ ತಿಳಿಯಿತು.

ತಾನೇಕೆ ಅಮರೇಶನ ಕೊಠಡಿಗೆ ಹೋಗಿ ಅವನ ಬಟ್ಟೆ ಹುಡುಕಿ ತರ ಬಾರದು ? ತಾನೆಂದೂ ಹೋಗಿಲ್ಲ....ಅವನೇನಾದರೂ ಅಂದುಕೊಂಡರೆ! ಅವಳು ಯೋಚಿಸುತ್ತಾ ನಿಂತಾಗ ಆಗತಾನೆ ಊಟಮಾಡಿ ಎಂಜಲೆಲೆಯನ್ನು ಎಸೆದು ಕೈ ತೊಳೆಯಲು ಬರುತ್ತಿದ್ದ ಪದ್ದಮ್ಮ ನೋಡಿದರು.

"ಅದ್ಯಾಕೆ ಹೀಗೆ ನಿಂತ್ಬಿಟ್ರಿ ? ಬಟ್ಟೆಯೆಲ್ಲಾ ಕಿತ್ತಾಡಿಬಿಟ್ರೀ ? ಯಜಮಾನ್ರ ಬಟ್ಟೇಲಿ ಮರ್ತು ದುಡ್ಡು ಕಾಸು ಇಟ್ಬಿಟ್ಟಿದ್ರೇನೊ ? ಬಟ್ಟೆ ಕಳ್ದುಹೋಯ್ತು ಅಂತ ಸುಳ್ಳು ಹೇಳಿ ಅದಕ್ಕೆ ಬಣ್ಣ ಹಾಕಿಸ್ಕೊಂಡು ಹಾಕ್ಕೋತಾನೆ ! ದುಡ್ಡಿದ್ರೇ ಬಿಟ್ಟಾನಾ ?"

ನಿರ್ಮಲ ಬಟ್ಟೆಗಳ ಗಂಟನ್ನು ಮತ್ತೆ ಕಟ್ಟಿದಳು. "ಏನೂ ಇಟ್ಟಿಲ್ಲ ಪದ್ದಮ್ಮ. ಅಮರೇಶ ರೂಮಿನ ಬೀಗ ಹಾಕ್ಕೊಂಡು ಹೋಗ್ತಾನಾ ?"

"ಅಯ್ಯೋ ಬಿಡಿ- ಅನಂತನ ಹತ್ತಿರ ಎಲ್ಲಾ ಕೊಟ್ಟಿರುತ್ತಾರೆ ಈ ಮನೇಲಿ, ಅವನೊಬ್ನೆ ಎಲ್ಲಾದಕ್ಕೂ ಬೀಗ ಹಾಕಿಡೋದೂ....ಇನ್ಯಾರೂ ಯಾವ್ದಕ್ಕೂ ಬೀಗ ಹಾಕೊಲ್ಲ....ಸರ್‍ಯಾಗಿ ನೋಡ್ಕೊಳ್ಳೊಲ್ಲ-ನೀವು ಹೇಗಿದ್ರೂ ಬಂದಿದ್ದೀರಿ- ಎಲ್ಲಾ ನಿಧಾನವಾಗಿ ನಿಮ್ಮ ಕೈಗೆ ತಗೊಂಡ್ಬಿಡಿ, ಅನಂತನಿಗೂ ಹಾಯಾಗುತ್ತೆ."

ಪದ್ದಮ್ಮ ಹಿತ್ತಲ ಕಡೆಗೆ ಹೆಜ್ಜೆ ಹಾಕಿದರು. ನಿರ್ಮಲ ಮೆತ್ತಗೆ ಅಮರೇಶನ ಕೊಠಡಿಯತ್ತ ಹೆಜ್ಜೆ ಹಾಕಿದಳು.

ಕೊಠಡಿಯಲ್ಲಿ ಬಿರುಗಾಳಿ ಬೀಸಿ ಬಂದಂತಿತ್ತು. ರೂಮಿನ ತುಂಬಾ ಅಲ್ಲಲ್ಲಿ ಪುಸ್ತಕಗಳು, ಮಂಚದ ಮೇಲಿನ ಹಾಸಿಗೆಯು ಮಗ್ಗುಲು ಹಾಸಿಗೆ, ಕಂಬಳಿ ಕಿತ್ತು ಬಿದ್ದಿತ್ತು. ದಿಂಬು ಒಂದು ಕಡೆ ಹರಿದು ಅದರ ಸಂದಿನಿಂದ ಹತ್ತಿ ಹೊರ ಬಂದಿತ್ತು. ಮಂಚಕ್ಕೆ ಕಟ್ಟಿದ್ದ ಸೊಳ್ಳೆಯ ಪರದೆ ಮಣ್ಣು ಬಣ್ಣಕ್ಕೆ ತಿರುಗಿತ್ತು. ಕೊಠಡಿಯಲ್ಲಿ ಗಮಟು ವಾಸನೆ ಹರಡಿತ್ತು-ನಿರ್ಮಲನ ಹೃದಯ ಭಾರವಾಯಿತು-ಯಾರೂ ನೋಡಿಕೊಳ್ಳದಿದ್ದರೆ ಹೀಗೆಯೇ ಎನಿಸಿತು. ತಾನು ಬಂದು ಇಷ್ಟು ದಿನಗಳಾದರೂ ಕೆಲಸವಿಲ್ಲ-ಹೊತ್ತು ಹೋಗುವುದಿಲ್ಲ ವೆನ್ನುತ್ತಿದ್ದುದು ತಪ್ಪು. ಇವನದೇನು ! ಎಲ್ಲರದೂ ಹಾಗೇ ಇರಬೇಕು- ಅಶೋಕನದೊಬ್ಬನದೇ ತಾನು ಎಲ್ಲಾ ಜೋಡಿಸಿಟ್ಟು ಓರಣ ಮಾಡುತ್ತಿದ್ದುದು!

ನೆಲದ ಮೇಲಿದ್ದ ಪುಸ್ತಕಗಳನ್ನೆಲ್ಲಾ ಎತ್ತಿ ಟೇಬಲ್ಲಿನ ಮೇಲೆ ಓರಣವಾಗಿ ಜೋಡಿಸಿಟ್ಟಳು. ಹಾಸಿಗೆ ಹಾಸನ್ನು ಸರಿಮಾಡಿ, ಕಂಬಳಿಯನ್ನು ಮಡಿಸಿಟ್ಟಳು. ತನ್ನ ರೂಮಿಗೆ ಹೋಗಿ ಸೂಜಿ ದಾರ ತಂದು ಹರಿದುಹೋದ ದಿಂಬನ್ನು ಸರಿಯಾಗಿ ಹೊಲಿದಳು. ಕೊಳಕಾಗಿದ್ದ ಸೊಳ್ಳೆಯ ಪರದೆಯನ್ನು ಬಿಚ್ಚಿ ದೋಭಿಯ ಗಂಟಿನಲ್ಲಿ ಸೇರಿಸಿದಳು. ಕುರ್ಚಿಯ ಮೇಲೆ ಬಿದ್ದಿದ್ದ ಅವನ ಹಳೆಯ ಬಿಳಿಯ ಪ್ಯಾಂಟನ್ನು ಕೈಗೆತ್ತಿಕೊಂಡಳು. ಅವನ ಬಟ್ಟೆಯ ಬೀರುವಿಗೇ ಬೀಗದ ಕೈ ಸಿಕ್ಕಿಸಲಾಗಿತ್ತು. ಅದನ್ನು ತೆಗೆದಾಗ ಕೊಳಕಾಗಿದ್ದ ಹಳೆಯ ಷರ್ಟುಗಳೂ ಬುಷ್‌ಕೋಟುಗಳೂ ಇದ್ದವು. ಮುಚ್ಚಿದ್ದ ಬಾಗಿಲ ಹಿಂದೆ ಸುಂದರವಾದ ತರುಣಿಯೊಬ್ಬಳ ಫೋಟೊ ಅಂಟಿಸಲಾಗಿತ್ತು. ಅದರ ಮೇಲೆ ಬರೆದಿದ್ದ "ವಿತ್ ಲವ್, ಡಾಲೀ" ಮಾಸಲು ಬಣ್ಣಕ್ಕೆ ತಿರುಗಿತ್ತು.

ನಿರ್ಮಲಳ ಎದೆ ಬಡಿದುಕೊಂಡಿತು. ಶಿವಮ್ಮ ಹೇಳಿದುದು ನಿಜವಿರಬೇಕು ! ತಾನು ಅವನ ವೈಯಕ್ತಿಕ ವಿಷಯಕ್ಕೆ ತಲೆ ಹಾಕಬಾರದು. ತುಟಿ ಕಚ್ಚಿ ಬೀರುವಿನ ಬಾಗಿಲು ಹಾಕಿ ಅವನ ಹಳೆಯ ಪ್ಯಾಂಟು, ಒಂದೆಡೆ ತುರುಕಿದ್ದ ಕೊಂಚ ಹರಿದ ಷರಟನ್ನು ಕೈಯಲ್ಲಿ ಹಿಡಿದು ರೂಮಿನ ಬಾಗಿಲು ಮುಂದೆಮಾಡಿ ಹೊರಬಂದಳು. ವೆಂಕಟಪ್ಪ ಬಂದು ಬಟ್ಟೆ ತೆಗೆದುಕೊಂಡು ಹೋದಾಗ, ಅವನಿಗೆ ಸೊಳ್ಳೆ ಪರದೆ ಜ್ಞಾಪಿಸಿದಳು.

ಅಶೋಕನ ಪ್ಯಾಂಟುಗಳನ್ನು ಷರಟುಗಳನ್ನು ಅಮರೇಶನ ಅಳತೆಗೆ ಸರಿಯಾಗಿ ಕತ್ತರಿಸಿದಳು. ಸಂಜೆ ಎಲ್ಲರೂ ಬರುವ ಹೊತ್ತಿಗೆ ಹೊಲಿದಿದ್ದ ಕೆಲವನ್ನು ಯಾರಿಗೂ ಕಾಣದಂತೆ ಒಳಗಿಟ್ಟಳು. ಕೆಳಗೆ ಬಿದ್ದಿದ್ದ ಬಟ್ಟೆಯ ಚೂರುಗಳನ್ನು ಬಚ್ಚಲು ಮನೆಯ ಒಲೆಯೊಳಗೆ ಹಾಕಿದಳು.

"ನನ್ನ ಗಿಣಿ ಏನು ಬಹಳ ಸಂತೋಷವಾಗಿರುವಂತಿದೆ !" ಅಶೋಕ ಹೆಂಡತಿಯ ಹಸನ್ಮುಖ ನೋಡಿ ಕೇಳಿದ.

"ನಾನು ಇರೋದೇ ಯಾವಾಗ್ಲೂ ಹೀಗೆ !" ನಿರ್ಮಲ ಉತ್ತರಿಸಿದಳು.

ಅಂದು ಅಮರೇಶ ಕಾಲೇಜಿನಿಂದ ಬಂದದ್ದೇ ಲೇಟಾಗಿತ್ತು. ಬಂದವನೇ ಅಡಿಗೆ ಮನೆಯತ್ತ ನಡೆದನು.

"ಪದ್ದಮ್ಮ, ಬೇಗ ಕಾಫಿ ತಿಂಡಿ ಕೊಡಿ, ಇಲ್ದಿದ್ರೆ ನಿಮ್ಮನ್ನೇ ತಿಂದು ಹಾಕಿಬಿಡ್ತೀನಿ...."

"ಅಲ್ಲೇ ಇರು, ಹಾಳು ಸುಡುಗಾಡು ಕಾಲೇಜ್ನಿಂದ ಬರ್‍ತ್ತೀ, ಕೈಕಾಲು ತೊಳ್ಕೊಳ್ಳಲ್ಲ, ಬಟ್ಟೆ ಬದ್ಲಾಯಿಸೋಲ್ಲ. ಹೊರ್‍ಗೇ ಇರು, ತಂದ್ಕೊಡ್ತೀನಿ—" ಪದ್ಮಮ್ಮ ಕಾಫಿ ತಿಂಡಿ ತಂದು ಬಾಗಿಲ ಬಳಿ ನೆಲದ ಮೇಲಿಟ್ಟಾಗ ನಿರ್ಮಲ ಅಮರೇಶ ಕರ್ಚೀಫಿನಿಂದ ಮುಖ, ಕೈ ಒರಸಿಕೊಳ್ಳುತ್ತಿದ್ದುದ್ದನ್ನು ನೋಡಿದಳು.

"ಅಮರೇಶ, ಕೈಕಾಲು ತೊಳ್ಕೊಂಡು ಬನ್ನಿ ನಾಳೆ ಡಾಕ್ಟರಾಗಿ ಹೀಗೆ ಕೊಳ್ಕಾಗಿದ್ರೆ ಆಯ್ತು."

"ದಿನಾ ಕೈಕಾಲು ತೊಳ್ಕೋತೀನಿ ಅತ್ಗೇ—ಇವೊತ್ತು ತುಂಬಾ ಹಸಿವು. ನಿನ್ನೇನೇ ನನ್ನ ಪಾಕೆಟ್ ಮನಿ ಮುಗಿದೋಯ್ತು. ಮಧ್ಯಾಹ್ನದಿಂದ ಕವಳ ಇಲ್ಲ !"

ಗೊಣಗಿದರೂ ಕೈಕಾಲು ತೊಳೆದು ಬಂದಾಗ ನಿರ್ಮಲ ತಿಂಡಿ ಕಾಫಿ ಅವನ ಕೈಗಿತ್ತಳು. "ಮುಗಿದುಹೋದ್ರೇ ಕೇಳ್ಬಾರ್‍ದಿತ್ತಾ ಅಣ್ಣನ್ನ ?"

"ಅಯ್ಯೋ ಬಿಡಿ ಅತ್ಗೇ. ಅವನ್ನ ಕೇಳಿ, ಅವನ್ಗೆ ಲೆಕ್ಕ ಒಪ್ಸಿಸೋಕ್ಕಿಂತ, ಉಪವಾಸ ವನವಾಸಾನೇ ಮೇಲು ! ಅದಕ್ಯಾಕೆ ಇಷ್ಟು ಖರ್ಚು ಮಾಡ್ದೀ ? ಅಲ್ಲಿಗ್ಯಾಕೆ ಹೋದೀ ? ಅದ್ಯಾಕೆ, ಇದ್ಯಾಕೆ ಸಮಾಚಾರ ಎಲ್ಲ ತಲೆನೋವು !" ಅಮರೇಶ ತಿಂಡಿ ತಿನ್ನುತ್ತಾ ಹೇಳಿದ. ನಿರ್ಮಲಳಿಗೂ ಅದು ಸರಿಯೆನಿಸಿತು. ಸಂಪಾದಿಸುತ್ತಿದ್ದ ಮೂವರೂ ಅವನ ಕೈಗೆ ದುಡ್ಡು ಕೊಡುತ್ತಿದ್ದರು. ಯಾರೂ ಅವನನ್ನು ಲೆಕ್ಕ ಕೇಳುತ್ತಿರಲಿಲ್ಲ—ಹೀಗಾಗಿ ಅವನೇಕೆ ಎಲ್ಲರನ್ನೂ ಲೆಕ್ಕ ಕೇಳಿ ಹಿಂಸೆ ಮಾಡಬೇಕು !"

"ಎಷ್ಟು ಪಾಕೆಟ್ ಮನಿ ಕೊಡ್ತಾರೆ ನಿಂಗೆ ?"

"ಐವತ್ತು ರೂಪಾಯಿ, ಯಾವ ಮೂಲೆಗೆ ಅತ್ಗೆ ! ನಂಗೆ ಸ್ನೇಹಿತರು ಜಾಸ್ತಿ...ಅವ್ರು ಕೊಡಿಸ್ತಾರೆ, ನಾನು ಕೊಡಿಸ್ಬೇಕಾಗುತ್ತೆ. ಒಂದೊಂದು ತಿಂಗ್ಳು ಹದಿನೈದನೇ ತಾರೀಖಿಗೆ ಪಾಪರ್ ಆಗಿಬಿಡ್ತೀನಿ—ಫೀಸು, ಮಣ್ಣು ಮಸಿ ಅನಂತ ಕೊಡ್ತಾನೆ" ಕಹಿಯಾಗಿ ಹೇಳಿದ.

ಅಷ್ಟರಲ್ಲಿ ಅಶೋಕ ಅವಳನ್ನು ಕರೆದ ಕಾರಣ ಅವಳು ಅಲ್ಲಿಂದ ಕಾಲ್ತೆಗೆದಳು.

ಸಂಜೆ ಹೊರಗೆ ಹೋಗಲು ತಯಾರಾಗುತ್ತಿದ್ದ ನಿರ್ಮಲ ತನ್ನ ರೂಮಿನ ಬಾಗಿಲು ತಟ್ಟಿದ ಸದ್ದು ಕೇಳಿ ಅಚ್ಚರಿಗೊಂಡಳು. ಯಾರಿರಬಹುದು?

ಅಶೋಕ ತಟ್ಟಿದೆಯೋ ಬರುತ್ತಾನೆ. ಅವಸರ ಅವಸರವಾಗಿ ಬೇಗ ಸೀರೆಯುಟ್ಟು ಬಾಗಿಲು ತೆರೆದಳು. ನಿಂತಿದ್ದವನು ಅಮರೇಶ.

"ಅತ್ತಿಗೆ, ನೀವಾ....ನನ್ನ ರೂಮಿಗೆ ಹೋಗಿದ್ದುದು ?" ಅವನ ಮುಖ ಗಂಭೀರವಾಗಿತ್ತು.

ಹೌದೆನ್ನುವಂತೆ ತಲೆಯಾಡಿಸಿದಳು.

"ತುಂಬಾ ಥ್ಯಾಂಕ್ಸ್, ಎಲ್ಲಾ ಕ್ಲೀನ್ಮಾಡಿ ಇಟ್ಟಿದ್ದೀರಿ, ನಂಗೆ ಬುದ್ಧಿ ತಿಳ್ದಾಗಿಂದ ಯಾರೂ ನನ್ನ ಬಗೆಗೆ ಇಷ್ಟು ವಿಶ್ವಾಸ ತೋರಿರಲಿಲ್ಲ....ನಮ್ಮಮ್ಮ ಸತ್ತಾಗ ನಂಗೆ ಹತ್ತು ವರ್ಷ ಆಗಿತ್ತು ಅತ್ಗೆ !" ಅಮರೇಶ ತಲೆ ತಗ್ಗಿಸಿ ನೆಲ ನೋಡಿದಾಗ ನಿರ್ಮಲಳಿಗೆ ಅಕ್ಕರೆ ಉಕ್ಕಿ ಬಂತು. ಅವನ ಬಗ್ಗಿದ ತಲೆ ತಡುವುವ ಮನಸ್ಸಾಯಿತು.

"ನನ್ನ ರೂಮ್ನಲ್ಲಿ ಎಸೆದಿದ್ದ ಸಾಮಾನು ನೋಡಿ ನೀವು ಹೆದರಿರ್ಬೇಕೂ ಅಲ್ವಾ ? ಆದ್ರೆ ನನ್ನ ಸೊಳ್ಳೆಪರ್ದೆ ಎಲ್ಲಿ ? ರಾತ್ರಿಯೆಲ್ಲಾ ಸೊಳ್ಳೆ ಕೈಲಿ ಕಚ್ಚಿಸ್ಕೊಂಡ್ರೆ ನಾಳೆ ಬ್ಲಡ್ ಟ್ರಾನ್ಸ್‌ಫ್ಯೂಸ್ ಮಾಡ್ಬೇಕಾಗುತ್ತೆ ! ಅಷ್ಟು ಸೊಳ್ಳೆ ನನ್ನ ರೂಮ್ನಲ್ಲಿ !"

"ನಿನ್ನ ಪರ್ದೆ ತುಂಬಾ ಕೊಳಕಾಗಿತ್ತು. ಅಗಸರವನಿಗೆ ಹಾಕಿದ್ದೀನಿ.... ಸೊಳ್ಳೆ ಕಚ್ಚದೆ ಇರ್ಬೇಕಾಗಿದ್ರೆ ಓಡೋಮಸ್ ಇದೆ, ಕೊಡ್ತೀನಿ. ಪರ್ದೆ ಬರೋತನ್ಕ ಹಚ್ಕೊಂಡು ಮಲ್ಕೋ, ಅಷ್ಟೆ" ನಿರ್ಮಲ ಹೇಳಿದಳು.

"ನನ್ನ ಬಿಳಿ ಪ್ಯಾಂಟು ಬೇಕು...ನಂಗೆ ಮನೇಲಿ ಹಾಕೋಕೆ ಬಟ್ಟೆ ಇಲ್ಲ. ಅದನ್ಬಿಟ್ರೆ-ನಂಗೆ ಪಂಚೆ, ಲುಂಗಿ, ಉಟ್ಕೊಳ್ಳೋಕೆ ಬರೋಲ್ಲ ! ಸದ್ಯ ಪ್ಯಾಂಟು ವೆಂಕಟಪ್ಪನಿಗೆ ಕೊಟ್ಟಿಲ್ಲ ತಾನೇ ?"

ನಿರ್ಮಲ ನಸುನಕ್ಕಳು, "ಇಲ್ಲ, ತಾಳು ಕೊಡ್ತೀನಿ." ಒಳಗೆ ಇಟ್ಟಿದ್ದ ಅವನ ಪ್ಯಾಂಟನ್ನು ಅವನ ಕೈಗಿತ್ತಳು.

"ಇದ್ನ ಯಾಕೆ ತಗೊಂಡ್ಬಂದಿದ್ರೀ ?"

"ತುಂಬಾ ಕೊಳೆಯಾಗಿತ್ತು....ಮನೆ ಒರೆಸೋಕ್ಕಿರ್ಲಿ೯ಂತ ! ..." ನಿರ್ಮಲ ನಕ್ಕಳು. ಅಶೋಕ ಮುಖ ಒರೆಸಿಕೊಳ್ಳುತ್ತಾ ಬಂದನು.

"ಏನು ಇಬ್ರದ್ದೂ ಸಂಧಾನ ?"

"ಏನಿಲ್ಲಾ, ಪ್ಯಾಂಟ್ ಹರಿದುಹೋಗಿದೆ. ಹೊಲ್ಕೊಡ್ತೀರಾಂತ ಕೇಳ್ತಾ ಇದ್ದ, ಅಷ್ಟೇ!"

"ಹೂಂ....ಹೂಂ, ಅವನ್ಗೆ ಯಾವ ಬಟ್ಟೇನೂ ಬಾಳ್ಕೆ ಬರೋಲ್ಲ– ಗೋಣಿಚೀಲದ್ಬಟ್ಟೇಲಿ ಹೊಲಿಸ್ಬೇಕೂ!" ಅಶೋಕ ಗೊಣಗುತ್ತಾ ತಲೆ ಬಾಚಿಕೊಳ್ಳತೊಡಗಿದನು.

"ಅಲ್ಲಾ ಅತ್ತಿಗೆ, ನನ್ಹತ್ರ ಇರೋದು ನಾಲ್ಕೋ ಐದೋ....ಅದ್ನೆ ಹಾಕ್ಕೋಬೇಕು—ಇವರುಗಳ ಹತ್ತಿರ ಬೇಕಾದಷ್ಟಿದೆ—ದಿನಕ್ಕೊಂದೊಂದು ಹಾಕ್ಕೊತ್ತಾರೆ, ಹರ್ಯೊಲ್ಲಾ!"

"ನಿಮ್ಮೊ, ರೆಡೀನಾ?" ಅಶೋಕ ಕೇಳಿದಾಗ ಅಮರೇಶ ಅಲ್ಲಿಂದ ಹೊರ ಬಿದ್ದನು.

"ಅವನಿಗೆ ತುಂಬಾ ಸಲಿಗೆ ಕೊಡ್ಬೇಡಾ ನಿಮ್ಮೊ--ಅವನ್ನ ಆದಷ್ಟು ಬಿಗೀಲಿಟ್ಕೋಬೇಕು!"

ಅಶೋಕ ಹಾಗೆ ಹೇಳಿದಾಗ ತಾನು ಕಂಡ ತರುಣಿಯ ಫೋಟೋ ಜ್ಞಾಪಕಕ್ಕೆ ಬಂತು. ಆ ವಿಷಯ ತಾನೇಕೆ ಗಂಡನನ್ನು ಕೇಳಬಾರದು?

"ಇಲ್ನೋಡಿ...." ನಿರ್ಮಲ ಕೇಳಿದಾಗ ಅಶೋಕ ಅವಳ ಮಾತು ತಡೆದನು.

"ಅವನು ಮೊದ್ಲಿಂದ್ಲೂ ತುಂಟ. ಅಮ್ಮಾ ಹೋದ್ಮೇಲೆ ಅಪ್ಪ ತುಂಬಾ ಮುದ್ದು ಮಾಡ್ಬಿಟ್ರು....ನಾವು ಬಿಗಿ ಇಲ್ದೇ ಇದ್ದಿದ್ರೆ ಹಾಳಾಗ್ಹೋಗೋನು!"

ನಿರ್ಮಲ ಮಾತು ಬೆಳಸಲಿಲ್ಲ. ಇದಾದ ಎರಡು ದಿನಗಳಲ್ಲಿ ನಿರ್ಮಲ ಅಶೋಕನ ಐದು ಪ್ಯಾಂಟುಗಳನ್ನೂ ಐದು ಷರಟುಗಳನ್ನೂ ಅಮರೇಶನ ಅಳತೆಗೆ ಸಿದ್ಧಪಡಿಸಿದ್ದಲ್ಲದೇ, ಅವುಗಳನ್ನು ಒಗೆಸಿ, ಒಣಗಿಸಿ ತಾನೇ ಇಸ್ತ್ರಿಮಾಡಿ ಅಮರೇಶನ ಬೀರುವಿನಲ್ಲಿಟ್ಟಳು. ಅಂದು ಬೆಳಿಗ್ಗೆ ಶಿವಮ್ಮನ ಕೈಯಲ್ಲಿ ಅವನ ರೂಮನ್ನು ಗುಡಿಸಿ ಸಾರಿಸಿಸಿ ಶುಚಿಮಾಡಿಸಿದ್ದಳು.

ಅವಳು ಮಾಡಿದುದು, ಬಟ್ಟೆ ಒಗೆದ ಶಿವಮ್ಮನಿಗೆ ಬಿಟ್ಟು ಯಾರಿಗೂ ಗೊತ್ತಾಗಲಿಲ್ಲ.

ಎಲ್ಲರಿಗಿಂತ ಮುಂಚೆ ಬಂದ ಅಮರೇಶ ತನ್ನ ಕೋಣೆಯೊಳಗೆ ಕಾಲಿಟ್ಟಾಗ ಸಿಳ್ಳೆ ಹೊಡೆದನು.

"ಅತ್ತಿಗೇ...ವಂಡರ್‌ಫುಲ್...!" ಪ್ಯಾಂಟಿನ ಜೇಬಿನಲ್ಲಿದ್ದ ಪೆನ್ನು ಪರ್ಸನ್ನು ಬೀರುವಿನ ಒಳಗಿಡಲು ಬಾಗಿಲು ತೆರೆದಾಗ ಇಸ್ತ್ರಿ ಮಾಡಿದ ಬಟ್ಟೆ ಕಂಡು ಮತ್ತೂ ಅಚ್ಚರಿಗೊಂಡನು.

"ಇದೆಲ್ಲಾ ತುಂಬಾ ಜಾಸ್ತಿಯಾಯ್ತು ಅತ್ತಿಗೆ! ಇದಕ್ಕೆಲ್ಲಾ ನಿಮ್ಗೆ ದುಡ್ಡೆಲ್ಲಿತ್ತು? ಅಶೋಕನ ಕೈಲಿ ಇಸ್ಕೊಂಡ್ರಾ? ಆಮೇಲೆ ಅಣ್ಣಂಗೆ ಗೊತ್ತಾದ್ರೆ ನನ್ನ ಸಿಗಿದುಹಾಕಿಬಿಡ್ತಾನೆ."

ನಿರ್ಮಲ ನಸುನಕ್ಕಳು. "ಯಾರ್ಹತ್ರಾನೂ ಇಸ್ಕೊಂಡಿಲ್ಲ, ನನ್ಹತ್ರ ಅಲ್ಲಾವುದ್ದೀನನ ಅದ್ಭುತ ದೀಪ ಇದೆ ಗೊತ್ತಾ? ಅದ್ನ ಉಜ್ದೆ, ಅದರ ರಾಕ್ಷಸ ಬಂದ. ನಮ್ಮ ಅಮರೇಶಂಗೆ ಐದು ಪ್ಯಾಂಟು, ಐದು ಷರಟು ಕೊಡೂಂದೆ, ಕೊಟ್ಬಿಟ್ಟ!"

"ಜೋಕ್ ಮಾಡ್ಬೇಡೀ ಅತ್ಗೆ....ನೀವು ಒಳ್ಳೇತನ ನನ್ಗೆ ತೋರ್ಸಿ ಮಿಕ್ಕವರಿಗೆಲ್ಲಾ ನನ್ನ ಕೆಟ್ಟೋನು ಮಾಡ್ಬೇಡೀ...." ಅಮರೇಶ ಮುಖ ಸಪ್ಪೆ ಮಾಡಿಕೊಂಡು ಹೇಳಿದಾಗ ನಿರ್ಮಲ ನಿಜಾಂಶ ಹೊರಗೆಡಹಿದಳು.

ಅಮರೇಶನ ಕಣ್ಣಲ್ಲಿ ನೀರು ತುಂಬಿತು.

"ಅತ್ಗೆ...ನಿಮ್ಮ ಋಣ ಹೇಗೆ ತೀರಿಸಲಿ? ನಿಮಗ್ಯಾಕೆ ನನ್ಕಂಡ್ರೆ ಅಷ್ಟಿಷ್ಟ."

"ನೀನು ನನ್ನ ಚಿಕ್ಕನ್ಮೈದುನಾಂತ....ಇಷ್ಟದ ಪ್ರಶ್ನೆ ಬಂದ್ಮೇಲೆ ಋಣದ ಪ್ರಶ್ನೇನೂ ಬರೋಲ್ಲಾ....ನಿನ್ನ ಮಿಕ್ಕ ಅಣ್ಣಂದಿರು ಎಷ್ಟೆಷ್ಟು ಒಳಗೆ ತುರುಕ್ಕಿಟ್ಟಿದ್ದಾರೋ....ಅದೆಲ್ಲಾ ನಿನ್ನ ಅಳತೆಗೆ ಹೊಲಿದ್ರೆ ಅವರೆಲ್ಲರಿಗಿಂತ ನಿನ್ಹತ್ರಾನೇ ಜಾಸ್ತಿ ಬಟ್ಟೆಯಾಗುತ್ತೆ." ನಿರ್ಮಲ ಹೇಳಿದಾಗ ಅಮರೇಶನ ಹುಬ್ಬು ಗಂಟಿಕ್ಕಿತು.

"ನೀವೇ ಬೀರು ತೆಗೆದು ಇಟ್ರಾ?"

"ಹೌದು, ಯಾಕೆ?"

"ಯಾಕೂ ಇಲ್ಲ....ನೀವಾಗಿರೋ ಹೊತ್ಗೆ ಸುಮ್ನಿದ್ದೇನೆ. ಇನ್ಯಾರಾದ್ರೂ ನನ್ನ ಬೀರುವಿಗೆ ಕೈ ಹಾಕಿದ್ರೇ ನಾನು ಸುಮ್ಮನಿರ್ತಾ ಇರ್ಲಿಲ್ಲಾ."

"ಏನಪ್ಪಾ ಅಂತಹ ಆಸ್ತಿ ಇಟ್ಟಿದ್ದೆ?" ನಿರ್ಮಲಾ ಕೇಳಿದಳು--"ನಾನೇನೂ ಮುಟ್ಟಿಲ್ಲ."

"ಹಾಗಾದ್ರೇ ನೀವು ನೋಡ್ಲಿಲ್ಲಾ !" ಅಮರೇಶನ ಮುಖ ಬಿಳಿಚಿತು.

"ಏನನ್ನಾ ?"

"ಡಾಲಿ ಫೋಟೋನ್ನ !" ಅಮರೇಶ ಮೆಲ್ಲನುಸುರಿದನು.

"ಓಹೋ ಅದಾ ? ನಾನು ಯಾರೋ ಫಿಲ್ಮ್ ಆಕ್ಟ್ರೆಸ್ ಅಂದ್ಕೊಂಡೆ. ಕಾಲೇಜು ಓದೋ ಹುಡ್ಗರಿಗೆ ಇರುತ್ತೆ ಆ ಕ್ರೇಜು, ನಂಗೊತ್ತು....ಅದಕ್ಕೆ ಸುಮ್ನಾದೇ"....ನಿರ್ಮಲ ಬೇಕಾಗಿ ನಿರ್ಲಿಪ್ತಳಾಗಿ ಹೇಳಿದಾಗ ಅಮರೇಶ ಅವಳಿಗೆ ಕುರ್ಚಿ ತೋರಿಸಿದ.

"ಕೂತ್ಕೊಳ್ಳಿ, ಅತ್ತಿಗೆ....ನೀವ್ಯಾಕೆ ಅವ್ಳು ಯಾರೂಂತ ಕೇಳ್ಲಿಲ್ಲಾ ?" ನಿರ್ಮಲ ಕುಳಿತುಕೊಂಡಳು. "ನಾನ್ಯಾಕೆ ಕೇಳಲಿ ಅಮರೇಶ್, ಅದು ನಿನ್ನ ಸ್ವಂತ ವಿಷಯ."

"ಅಲ್ಲಾ ಅತ್ತಿಗೆ. ಅದು ನಮ್ಮನೇಲಿ ಎಲ್ಲರ ವಿಷಯ. ನಮ್ಮನೆ ಪದ್ದಮ್ಮ, ಶಿವಮ್ಮಂಗೂ ಗೊತ್ತು. ಅದಕ್ಕೆ ಕಾಲು, ಬಾಲ ಅಂಟಿಸಿ ಹೇಳ್ತಾರೆ ಕೇಳಿ...."

"ಡಾಲಿ ನರ್ಸು ಅತ್ತಿಗೆ. ತುಂಬಾ ಒಳ್ಳೇ ಹುಡುಗಿ. ನಾನು ಅವಳ್ನ ತುಂಬಾ ಪ್ರೀತಿಸ್ತಾ ಇದ್ದೆ. ಅವಳೂ ಅಷ್ಟೆ. ನಾನು ಎಂಬೀ ಮೂರ್ನೆ ವರ್ಷದಲ್ಲಿದ್ದೆ. ಅವ್ಳು ನಂಗಿಂತ ಮೂರು ನಾಲ್ಕು ವರ್ಷ ದೊಡ್ಡೋಳೂ. ಆದ್ರೆ ನೋಡೋಕೆ ಎಷ್ಟು ಪುಟ್ಟ ಹುಡುಗಿ ಇದ್ಹಾಗಿದ್ಲೂ ಗೊತ್ತಾ ? ನಾವು ಅಲ್ಲಿ ಇಲ್ಲಿ ಕದ್ದು ಮೀಟ್ ಮಾಡ್ತಾ ಇದ್ವಿ...ಅದ್ಹೇಗೊ ಅನಂತಣ್ಣಂಗೆ ಗೊತ್ತಾಗಿಹೋಯ್ತು. ನನ್ನ ಒಂದು ದಿನ ಕರೆದು ನಿಜಾಂಶ ಕೇಳಿದರು. ಪ್ರೀತಿಸೋದೇನು ತಪ್ಕೆಲ್ಲಾನಾ, ನಾನು ರಾಜಾರೋಷದಿಂದ ಒಪ್ಪಿಕೊಂಡೆ. ಅಶೋಕ, ಅನಂತ ನನ್ನ ಹೀನಾವಮಾನ ಬೈಯ್ದರು. ಮೈ ಮುರಿಯೋ ಹಾಗೆ ಹೊಡೆದರು. ಅವಳು ಕೊಡಗರ ಹುಡುಗಿಯಂತೆ, ನಮ್ಮನೆ ಸಂಪ್ರದಾಯಕ್ಕೆ ಸರಿಯಲ್ಲವಂತೆ, ಓದು ಬಿಟ್ಬಿಟ್ಟು ಅವಳ ಹಿಂದೆ ತಿರುಗಿದ್ರೆ ಪೋಲಿಬಿದ್ದು ಹಾಳಾಗಿಹೋಗ್ತೀನಂತೆ. ದಿನ ಬೆಳಗಾದರೆ ಇದೇ ಆಗೋಯ್ತು. ನನ್ಗೆ ಮನಸ್ಸು ಕೆಟ್ಹೋಗಿ ಓದೋಕೂ ಆಗ್ಲಿಲ್ಲ-ಆ ವರ್ಷ. ಫೇಲಾಗ್ಬಿಟ್ಟೆ. ಪಾಪ ! ಡಾಲಿ ನನ್ನ ಓದಿಗೊಂದು ಚೂರು ಅಡ್ಡಿ ಬರ್ತಾ ಇರ್ಲಿಲ್ಲಾ. ಅವ್ಳೇ ನನ್ನ ಬೈಯೋಳು–ಬೇಗ ಮನೆಗೆ ಹೋಗಿ ಓದ್ಕೋಂತ-! ಫೇಲಾಗಿದ್ದೇ ಸಾಕು. ಅನಂತ, ಅಶೋಕ ಇಬ್ರೂ ಮತ್ತೂ ಬಿಗಿಯಾದ್ರು–ನನಗೆ ಪೋಲಿಸ್ ಕಾವ್ಲ

ಲಿದ್ದ ಹಾಗಾಯಿತು. ಡಾಲಿ ಮುಖ ನೋಡೋಕೆ ಬಿಡ್ತಾ ಇರ್ಲಿಲ್ಲ. ಯಾರ್ಗೋ ಹೇಳಿ ಅವಳಿಗೆ ಟ್ರಾನ್ಸ್‌ಫರ್ ಮಾಡಿಸಿಬಿಟ್ಟರು. ಅವಳ್ನ ಕಾಣ್ದೇ, ಅವಳ್ನ ಮರ್ಯೋಕೆ ನಾನು ಸಿಗರೇಟು ಕುಡ್ಯೋದು ಕಲ್ತೆ, ಡ್ರಿಂಕ್ಸ್ ತಗೊಳ್ಳೋದು ಕಲ್ತೆ. ಕ್ಲಾಸಿಗೆ ಚಕ್ಕರ್ ಹೊಡ್ಯೋದು ಕಲ್ತೆ. ಪುನಃ ಫೇಲಾದೆ. ಆರೇಳು ತಿಂಗಳಾದ ಮೇಲೆ ಒಂದು ದಿನ ಡಾಲಿ ಸಿಕ್ಕಳು. ಆದ್ರೆ ಅತ್ತಿಗೆ, ಅವಳಿಗೆ ಮದ್ವೆಯಾಗಿಹೋಗಿತ್ತು. ಅವಳ ಗಂಡ ಡಾಕ್ಟರು....!" ಅಮರೇಶನ ಕಣ್ಣುಗಳಲ್ಲಿ ನೀರುಕ್ಕಿತು. ತುಟಿಗಳು ಅದುರಿದವು. "ಅವಳು ನಂಗೆ ಮೋಸ ಮಾಡಿ ಮದ್ವೆ ಮಾಡ್ಕೊಂಬಿಟ್ಲು....ಆಮೇಲೆ ನಂಗೆ ಗೊತ್ತಾ ಗಿದ್ದು-ಅವಳಿಗೆ ನಮ್ಮನೆ ಪರಿಸ್ಥಿತಿ ಗೊತ್ತಾಗಿ ನನ್ನ ಲೈಫ್ ಹಾಳ್ಮಾಡ್ಬಾ ರ್ದೂಂತ ಮದ್ವೆ ಮಾಡ್ಕೊಂಡ್ಲಂತೆ-ನನ್ನ ಎದೆ ಒಡೆದುಹೋದ್ರೂ ನಾನು ತಡ್ಕೊಂಡೆ ಅತ್ತಿಗೆ. ಅವಳು ಚೆನ್ನಾಗಿದ್ದಾಳೆ, ಒಳ್ಳೇ ಗಂಡ....ಈಗೊಂದು ಮಗೂ ಬೇರೆ ಇದೆ. ನಾನು ಪ್ರೀತಿಸಿದ್ದ ಡಾಲಿ ಸತ್ಹೋದ್ಲೂ ಅತ್ತಿಗೆ.... ಈಗ ಇರೋ ಡಾಲಿ-ನನ್ನ ಒಡಹುಟ್ಟಿದವಳು, ನಾನು ಈಗ್ಲೂ ಒಂದೊಂದು ದಿವಸ ಮನೆಗೆ ಹೋಗ್ತೀನಿ. ಊಟ-ತಿಂಡಿ ಮಾಡ್ಕೊಂಡ್ಬರ್ತೀನಿ. ಅವಳ್ಗೆ, ಅವಳ ಮಗೂಗೆ ಪ್ರೆಸೆಂಟ್ಸ್ ತೊಗೊಂಡ್ಹೋಗ್ತೀನಿ. ಡಾಕ್ಟರ್ ಅಪ್ಪಚ್ಚಣ್ಣ ನನ್ನ ತುಂಬಾ ಚೆನ್ನಾಗಿ ನೋಡ್ಕೋತಾರೆ. ಅವರ್ಗೂ ನನ್ಕಂಡ್ರೆ ಇಷ್ಟ. ಅವರು ನನ್ನ ನೋಡೋತ್ಲೂ ಹಾಸ್ಯ ಮಾಡ್ತಾರೆ. 'ಡಾಲಿ....ನಿನ್ನ ಲವರ್ ಬಾಯ್ ಬಂದಾ....' ಅಂತ. ಆದ್ರೆ ಅತ್ತಿಗೆ, ನಮ್ಮನೇಲಿ ಇವನ್ಯಾರೂ ಅರ್ಥ ಮಾಡ್ಕೊಳ್ಳೋಲ್ವಲ್ಲಾ ? ನಾನು ಎಲ್ಲಾದ್ರೂ ಹೋಗಿ ಲೇಟಾಗಿ ಬಂದ್ರೆ ಹಾರಾಡ್ತಾರೆ. ನಮ್ಮ ಸಂಬಂಧಕ್ಕೆ ಅಪಾರ್ಥ ಕಲ್ಪಿಸ್ತಾರೆ. ನೀವು ಬಂದಿದ್ದೀರಿ ಅತ್ತಿಗೆ. ಒಂದು ದಿನ ಈ ಅನುಮಾನ ಅಪಾರ್ಥ ಕೊನೆಗೊಳ್ಳ ಬೇಕು." ಅಮರೇಶ ಹಿಂಗೈಯ್ಯಿಂದ ಕಣ್ಣೆ ಒರೆಸಿಕೊಂಡನು. "ನಾನು ಯಾರ್ನೂ ಮದ್ವೆ ಮಾಡ್ಕೋಬಾರ್ದೂಂತ ಮನಸ್ಸು ಮಾಡಿದ್ದೀನಿ....ಏನಿದ್ರೂ ನಾನು ಓದಿದ್ಮೇಲೆ ನಾಲ್ಕು ಜನಕ್ಕೆ ಉಪಕಾರ ಮಾಡ್ಕೊಂಡು ಸನ್ಯಾಸಿ ಹಾಗಿದ್ಬಿಡೋಣಾಂತ ಇದ್ದೀನಿ" ಅಮರೇಶ ಮತ್ತೆ ಹೇಳಿದಾಗ ನಿರ್ಮಲ ಅವನ ತಲೆ ತಡವಿ ನಕ್ಕಳು.

"ಹುಚ್ಚು ಹುಡುಗ-ಇದೊಂದು ದೊಡ್ಡ ವಿಚಾರಾಂತ ತಲೆ ಕೆಡಿಸ್ಕೊಂಡಿ

ದ್ದೀಯಾ ? ಅಗ್ಲಿ—ಡಾಲಿ ವಿಚಾರ ನನಗ್ಬಿಡೂ....ಆದ್ರೆ ಕುಡ್ಯೋದು, ಸಿಗರೇಟು ಸೇದೋದೂ ಬಿಟ್ಬಿಡೂ....ಮದ್ವೆ ಗಿದ್ವೆ ವಿಚಾರ ಎಲ್ಲಾ ತಲೆಗೆ ಹಚ್ಕೋಬೇಡಾ. ಅದಕ್ಕೆಲ್ಲಾ ನೀನು ತುಂಬಾ ಚಿಕ್ಕೋನು. ಟೈಂ ನಂತಹ ಹೀಲರ್ ಇನ್ನೊಂದಿಲ್ಲ ಅಮರೇಶ್—ಕಾಲ ಉರುಳ್ತಾ ಉರುಳ್ತಾ ನೀನೇ ಎಲ್ಲಾ ಮರೆತ್ಬಿಡ್ತೀಯಾ! ಫರ್‌ಗೆಟ್ ಇಟ್...." ನಿರ್ಮಲ ಅವನ ಬೆನ್ನು ತಟ್ಟಿದಳು. ಹೊರಗೆ ಸ್ಕೂಟರ್ ಶಬ್ದ ಕೇಳಿ ಎದ್ದಳು. "ಬಂದ್ರೂಂತ ಕಾಣ್ಸತ್ತೆ—"

ಅಶೋಕನಿಗೆ ಕಾಫಿ ತಿಂಡಿಯಿತ್ತು ಮುಖ ತೊಳೆಯಲು ಸೋಪು ಟವಲು ಕೊಡುತ್ತಿದ್ದಾಗ ಅಮರೇಶ ಅಲಂಕರಿಸಿಕೊಂಡು ಬಂದನು.

ನಿರ್ಮಲ ತಾನು ಹೊಲಿದುದು ಅವನಿಗೆ ಸರಿಯಾಗಿದೆಯೆಂದು ತಿಳಿದು ಹಿಗ್ಗಿದಳು. ಅಶೋಕ ಹುಬ್ಬೆತ್ತಿದನು.

"ಲೇ ನಿಮ್ಮೂ—ಇದು ನನ್ನ ಪ್ಯಾಂಟಿನ ಹಾಗಿದ್ಯಲ್ಲಾ ?"

"ಹೌದು ನಿಮ್ಮೇ—ನೀವು ಬೇಡಾಂತ ಎಸ್ದಿದ್ರಿ, ಅವನ್ಗೆ ಆಲ್ಟರ್ ಮಾಡ್ಕೊಟ್ಟೆ. ಆ ಷರಟೂ ಅಷ್ಟೆ!" ಅಶೋಕ ಗದರುವನೆಂದುಕೊಂಡಿದ್ದ. ನಿರ್ಮಲನಿಗೆ ಅವನು ನಕ್ಕಾಗ ಧೈರ್ಯ ಬಂತು.

"ವೆರಿ ಗುಡ್....ಇನ್ಯಾವ್ದಾದ್ರೂ ಇದ್ರೆ ಮಾಡ್ಕೊಡ್ತಾರ್ದಾ ?"

"ನಿಮ್ದೆಲ್ಲಾ ಆಗೋಯ್ತು—ಅರವಿಂದ್, ಅಜಯ್‌ದು ಇದ್ರೇ ಕೇಳಿ. ಮಾಡಿಕೊಡ್ತೀನಿ" ನಿರ್ಮಲ ಹೇಳಿದಾಗ ಅಶೋಕ ನಸುನಕ್ಕು ಎದುರಿಗೆ ಅಮರೇಶ ಇರುವುದನ್ನೂ ಮರೆತು ಅವಳ ಕೆನ್ನೆ ಹಿಂಡಿದ.

"ಅಷ್ಟೇ ಅಲ್ಲ, ಇನ್ಮೇಲೆ ನನ್ನ ಪ್ಯಾಂಟೂ ಷರಟು ನೀನೇ ಹೊಲ್ಕೊಡು. ದರ್ಜಿಗಳಿಗೆ ದುಡ್ಡು ಸುರ್ಯೋದು ತಪ್ಪತ್ತೆ."

ಅಂದು ರಾತ್ರಿ ಊಟಕ್ಕೆ ಕುಳಿತಾಗ ಅಶೋಕ ಅಮರೇಶನ ಪ್ಯಾಂಟು ಷರಟಿನ ಮಾತು ತೆಗೆದು ಅಜಯ್ ಅರವಿಂದರಿಗೆ ಹೇಳಿದಾಗ ಅವರಿಗೆ ಸಂತಸವಾಯಿತು.

"ನಮ್ದೂ ಏನಾದ್ರೂ ರಿಪೇರಿ ಕೆಲ್ಸ ಮಾಡ್ಕೊಟ್ರೇ ಕೊಡ್ತೀನಿ!" ಅರವಿಂದ ಹೇಳಿದ. ಅಜಯ್ ಆರೇಳು ಪ್ಯಾಂಟು ಷರಟುಗಳನ್ನು ತಂದು ನಿರ್ಮಲಳ ಮುಂದೆ ಹಾಕಿದನು. ಅನಂತನ ಮುಖ ಅಗ್ನಿ ಪರ್ವತದಂತಿತ್ತು.

ಅಮರೇಶನ ವಿಷಯದಲ್ಲಿ ಎಲ್ಲರೂ ಔದಾರ್ಯ ತೋರುವುದು ಅವನಿಗೆ ಇಷ್ಟ ವಿರಲಿಲ್ಲ.

೬

ಬೆಳಿಗ್ಗೆ ವೆಂಕಟಪ್ಪ ಇಸ್ತ್ರಿ ಮಾಡಿದ ಬಟ್ಟೆಗಳ ಗಂಟನ್ನು ಹೊತ್ತು ಬಂದಾಗ ಮನೆಯಲ್ಲಿ ಪದ್ಮಮ್ಮ, ನಿರ್ಮಲ ಇಬ್ಬರನ್ನು ಬಿಟ್ಟು ಮತ್ತ್ಯಾರೂ ಇರಲಿಲ್ಲ.

"ಪಾಕೀಟುಬುಕ್ಕಿನಾಗೆ ಬರ್ಕೊಂಡ್ರಲ್ಲ ಅದ್ನ ತಗಂಡ್ಬನ್ರವ್ವಾ, ಒಂದಪ ಎಲ್ಲಾ ನೋಡ್ಕಂಡ್ಬುಡಿ ಅತ್ಲಾಗೆ-ಇನ್ನಾ ಸಾಕ್ಮನೆ ಒರಿ ಐತೆ-" ವೆಂಕಟಪ್ಪ ಹೇಳಿದಾಗ ನಿರ್ಮಲ ಲಗುಬುಗನೆ ಪುಸ್ತಕದಲ್ಲಿ ಬರೆದಿದ್ದುದನ್ನು ತಂದು ಲೆಕ್ಕ ನೋಡಿದಳು. ಎಂಟು ಪ್ಯಾಂಟುಗಳು ಹತ್ತು ಷರ್ಟುಗಳು--ನಾಲ್ಕು ಲುಂಗಿ ಗಳು, ಐದು ಮಗ್ಗಲು ಹಾಸಿಗೆಗಳು. ಒಂದು ಸೊಳ್ಳೆಯ ಪರದೆ-ನಾಲ್ಕು ಜುಬ್ಬ ಗಳು - ಎರಡು ಟವಲು ವೆಂಕಟಪ್ಪ ಲೆಕ್ಕ ಮಾಡಿ ಜೋಡಿಸಿಟ್ಟು ಹೊರಟು ಹೋದಾಗ ನಿರ್ಮಲ ನೆಮ್ಮದಿಯಿಂದ ಉಸಿರಾಡಿದಳು.

ಸಂಜೆ ಎಲ್ಲರೂ ಬಂದಾಗ ಕಣ್ಣೆದುರಿಗೆ ಇದ್ದ ಇಸ್ತ್ರಿಯಾಗಿದ್ದ ಬಟ್ಟೆ ಗಳನ್ನು ಕಂಡು ಒಬ್ಬರ ಮುಖ ಒಬ್ಬರು ನೋಡಿ ನಕ್ಕರು.

"ಅತ್ತಿಗೆ ಹೊಸಬ್ರು, ಅದ್ಕೇ ಗಾದೆ ಹೇಳ್ತಾರಲ್ಲಾ ಹಾಗೆ ಹೊಸದ್ರಲ್ಲಿ ಗೋಣೇನೂ ಎತ್ತಿ ಎತ್ತಿ ಒಗೆದಾಂತ ಹಾಗೆ ವೆಂಕಟಪ್ಪನೋರು ಟೈಂಗೆ ಸರ್ರ್ಯಾಗಿ ಬಟ್ಟೆಗಳ್ನ ತಂದಿಟ್ಟಿದ್ದಾನೆ!" ಅರವಿಂದ ಹೇಳಿದ.

"ತಾಳಯ್ಯ, ಯಾವ ಪ್ಯಾಂಟು ಯಾರ ಪ್ಯಾಂಟು ಹರಿದಿದ್ದಾನೇಂತಾ.... ಎಲ್ಲಿ ಸುಟ್ಟಿದ್ದಾನೇಂತ ಚೆಕ್ ಮಾಡಿಬಿಡೋಣ-' ಅಮರೇಶ ಬಟ್ಟೆಗಳ ರಾಶಿಯ ಮುಂದೆ ಕುಳಿತನು.

"ಲೋ, ಇದ್ಯಾರ್ದೊ ಲುಂಗಿ? ಯಾರ್ದೊ ಹೆಂಗಸ್ರು ಸೀರೆ ಹರಿದ್ಹಾಗಿದೆ. ಈ ಮನೇಲಿ ಯಾರು ಇಂತಹ ಲುಂಗಿ ಉಡ್ತಾರೆ, ನಾನು ನೋಡ್ಲೇ ಇಲ್ವಲ್ಲಾ! ಅತ್ತಿಗೆ, ನಿಮ್ಸೀರೆ ಹರ್ದು ಅಶೋಕನ್ಗೇನಾದ್ರೂ ಲುಂಗಿ ಮಾಡಿದ್ದೀರಾ?" ಎರಡು ಲುಂಗಿಗಳನ್ನು ದೂರ ತೆಗೆದಿರಿಸಿದನು. ನಿರ್ಮಲ ಕೊಂಚ ಗಲಿಬಿಲಿಗೊಂಡಳು.

ಅಮರೇಶ ತನ್ನನ್ನು ಹಾಸ್ಯ ಮಾಡುತ್ತಿದ್ದಾನೆಯೇ, ಇಲ್ಲ ನಿಜವಾಗಿಯೂ ಹೇಳುತ್ತಿದ್ದಾನೆಯೋ-ಅವನ ಮುಖವನ್ನೇ ನೋಡಿದಳು.

"ಹೌದು ಅತ್ತಿಗೆ-ಅದು ಅಶೋಕಂದೇ ಇರ್ಬೇಕೂ-ಎಲ್ಲೊ ನೈಟ್ ಡ್ರೆಸ್ ಮಾಡ್ಕೊಂಡಿರ್ಬೇಕೂ-ನಾವ್ಯಾರೂ ನೋಡೇ ಇಲ್ಲ...." ಅಮರೇಶ ಹೇಳಿದಾಗ ಅಶೋಕ ಸಿಡುಕಿದನು.

"ನಳಮಹಾರಾಜ ನೋಡೂ ನಾನು. ನಿಮ್ಮೊ ಸೀರೆ ಉಟ್ಕೊಳ್ಳೋಕೆ ! ಯಾರ್ದ್ದೋ ನಮ್ಗೆ ತಗಲಾಕಿದ್ದಾನೆ-ಎಸೆಯೋ ಅತ್ಲಾಗೆ !"

ಅರವಿಂದ ಪ್ಯಾಂಟುಗಳ ರಾಶಿಯಿಂದ ಒಂದೆರಡು ತೆಗೆದುಕೊಂಡು ಬೆಳಕಿಗೆ ಹಿಡಿದು ನೋಡಿದನು.

"ಇದ್ಯಾವ್ದೋ ಗುಜರಿ ಪ್ಯಾಂಟುಗಳು-ಒಂದೂ ನಂದಲ್ಲ !"

ಅಜಯ ಷರಟುಗಳನ್ನು ಬಿಡಿಸಿ ನೋಡಿ ಮೆಲ್ಲಗೆ ನುಡಿದನು. "ಅತ್ತಿಗೆ ನನ್ನ ಷರಟುಗಳು ಯಾವ್ದೂ ಬಂದಿಲ್ಲ."

"ಅನಂತಾ, ನೀನ್ಯಾವಾಗ ಗಾಂಧೀಭಕ್ತ ಆಗೋದೀ,-ನೀನು ಖಾದಿ ಜುಬ್ಬ ಹಾಕಿದ್ದೇ ನೋಡಲಿಲ್ಲ !" ಅಮರೇಶ ಗಹಗಹಿಸಿದನು. "ಇಲ್ನೋ ಡ್ರಪ್ಪೋ, ನನ್ನ ಸೊಳ್ಳೇ ಪರದೆ ಅನ್ನಿಸ್ಕೊಳ್ಳೊ ವಸ್ತು-ಇಷ್ಟು ಅಗಲ ತೂತು ಗಳ್ನ ಮಾಡಿದ್ದಾನೆ--ರಾತ್ರಿ ಸೊಳ್ಳೆ ಸಂಸಾರ ಸಮೇತ ಬಂದ್ಬಿಡುತ್ವೆ !"

ಅವರ ಮಾತುಗಳನ್ನು ಕೇಳುತ್ತಾ ಕೇಳುತ್ತಾ ನಿರ್ಮಲನಿಗೆ ದಿಕ್ಕೇ ತೋಚ ದಾಯಿತು.

"ಏನಮ್ಮಾ, ಅವೊತ್ತು ಅವನು ಬಂದು ತೊಗೊಂಡ್ಹೋದಾಗ ನೀನು ಸರ್‍ಯಾಗಿ ನೋಡ್ಲಿಲ್ವೇ ?" ಅಡಿಗೆ ಮನೆಯ ಬಾಗಿಲಿನಿಂದ ಬಗ್ಗಿ ನೋಡಿದರು, ಪದ್ದಮ್ಮ.

"ಅವಳ ಸೀರೆ ಬಟ್ಟೆಗಳೇ ಅವಳಿಗೆ ಜ್ಞಾಪಕ ಇರುತ್ತೋ ಇಲ್ಲವೋ ಅಷ್ಟಿದೆ. ಇನ್ನು ನಮ್ಮ ಬಟ್ಟೆಬರೆ ಎಲ್ಲಾ ನೋಡ್ತಾ ಇರೋದು ಹೊಸ್ದು. ಅವಳಿಗೆಲ್ಲಿ ಜ್ಞಾಪಕ ಇರುತ್ತೆ !" ಅಶೋಕ ಅವಳ ಪರವಾಗಿ ಹೇಳಿದಾಗ, ಅನಂತ ಗೊಣಗಿದನು.

"ಯಾರು ಬಂದ್ರೇನು ಹೋದ್ರೇನೂ-ನಿಮ್ಮ ಕೆಲಸ ನೀವು ನೋಡ್ಕೋ

ಬಾರ್ದ್ದಾ ? ಅಗಸನ್ಕೈಲ್ಲಿ ನೀನಲ್ವೇನೋ ನೋಡ್ಕ್ಕೋತಾ ಇದ್ದಿದ್ದು ಅಮರೇಶ ? ಈಗ ನೀನೇ ಹೋಗಿ ಬದ್ಲಾಯ್ಸಿ- ನಮ್ಮ ಬಟ್ಟೆಗಳ್ನ ತೊಗೊಂಡ್ಬಾ...."

ನಿರ್ಮಲನಿಗೆ ಅವನ ಮಾತು ಕೇಳಿದಾಗ ಜೀವ ಹಿಡಿಯಾಯಿತು. ಎಲ್ಲರಿದುರಿಗೂ ಮುಖಭಂಗವಾದಂತಾಯಿತು.

ಎಲ್ಲರಿಗೂ ಕಾಫಿ, ತಿಂಡಿ ಕೊಡಲು ಒಳಗೆ ಬಂದಾಗ ಪದ್ದಮ್ಮ ಮಣೆಯನ್ನು ಅತ್ತ ಸರಿಸುತ್ತಾ ನಿರ್ಮಲನಿಗೆ ಹೇಳಿದರು.

"ಒಂದ್ಮನೆಗೆ ಸೊಸೆಯಾಗಿ ಬಂದ್ಮೇಲೆ ಎಲ್ಲಾ ಜವಾಬ್ದಾರಿನೂ ವಹಿಸ್ಕೊಂಡು ಸರ್ಯಾಗಿ ಮನೆ ಯಜಮಾನಿಹಾಗೆ ಎಲ್ಲರ ಕಷ್ಟ ಸುಖ ನೋಡ್ಕೊಬೇಕು--ಇದೆಲ್ಲಾ ತಾಯಿ ತಂದೆ ಹೇಳ್ಕೊಡ್ಬೇಕಮ್ಮಾ-ಕಾಲೇಜಲ್ಲಿ ಕಲಿತ್ರೇನ್ಬಂತು !"

ನಿರ್ಮಲ ಉಕ್ಕಿ ಬಂದ ಕೋಪವನ್ನು ತಡೆದಳು-'ನೀವ್ಯಾರ್ರೀ ನಮ್ಮ ತಂದೆ ತಾಯಿ ವಿಚಾರ ಮಾತಾಡೋಕೇ !' ಎನ್ನಲು ನಾಲಿಗೆ ಹವಣಿಸಿತು. ಅದನ್ನು ಪ್ರಯತ್ನಪಟ್ಟು ತಡೆದಳು.

ರಾತ್ರಿಯ ಊಟದ ಹೊತ್ತಿಗೆ ಅಮರೇಶ ಅಗಸನಿಂದ ಸರಿಯಾದ ಬಟ್ಟೆಗಳ ಗಂಟನ್ನು ತಂದಾಗ ಅನಂತ ಅಮರೇಶನತ್ತ ನೋಡಿ ಒಂದು ಬಗೆಯಾಗಿ ನಕ್ಕನು. ಅದನ್ನು ಕಂಡೂ ಕಾಣದಂತೆ ನಿರ್ಮಲ ಓದುತ್ತಿದ್ದ ಪತ್ರಿಕೆಯತ್ತ ಗಮನ ಹರಿಸಿದಳು.

"ಕಳ್ಳಬಡ್ಡೀಮಗ, ಅತ್ಗೇಗೆ ಟೋಪಿ ಹಾಕೋಕೆ ನೋಡ್ತಾನೆ, ಯಾವತ್ತಾದ್ರೂ ಅವನ ಕಾಲು ಮುರಿದ್ಬಿಡ್ತೀನಿ. "ನಿಮ್ಮತ್ಗೆ ಮ್ಮೋರೇ ಸುಮ್ನಿದ್ರು, ನೀವ್ಯಾಕೆ ಗಂಟು ಒತ್ಕಂಡ್ಬಂದ್ರೀ ?" ಅಂದ—ಆ ವೆಂಕಟಪ್ಪ. "ಲೋ, ನಿಮ್ಮಪ್ಪನ್ಮನೆದಲ್ರೊ ಬಟ್ಟೆ....ನಮ್ದೆಲ್ಲಾ ಮುಲಾಜಿಲ್ದೇ ಇತ್ಲಾಗೆ ಮಡಗ್ಬಿಡೂಂದೆ. ಬಾಯ್ಮುಚ್ಕೊಂಡು ತಂದ್ಕೊಟ್ಟ...." ಅಮರೇಶ ಹೇಳಿದಾಗ ಅರವಿಂದ ನಕ್ಕನು.

"ನೋಡಿದ್ನೇನೋ....ನಮ್ಮ ಬಟ್ಟೇನೆಲ್ಲಾ ಅವನ ಮಗ, ಅಳಿಯಂಗೆ ಹಾಕಿ ಮೆರ್ಸ್ಸೋಣಾಂತ !"

ಅಲ್ಲಿಯವರೆಗೆ ಎಲ್ಲವನ್ನೂ ಕೇಳುತ್ತಿದ್ದ ನಿರ್ಮಲ ದನಿಗೂಡಿಸಿದಳು.

"ಅವನಲ್ಲಿ ಅಷ್ಟು ಅಪನಂಬಿಕೆಯಿದ್ರೇ ಬೇರೆ ದೋಭಿನಾ ಯಾಕೆ ಗೊತ್ಮಾಡ್ಕೋ ಬಾರ್ದು ?....ಊರ್ಗೆಲ್ಲಾ ಅವನೊಬ್ಬನೇನಾಂತ ?"

"ಯೂ ಸೆಡ್ ಇಟ್" ಅಮರೇಶ ಹೇಳಿದ. "ಆದ್ರೆ ನಮ್ಮನೇಲಿ.... ಅತ್ಗೆ....ಒಂದು ತರಹಾ ಪಾರಂಪರ್ಯವಾಗಿ ನಡೆದು ಬಂದ್ಬಿಟ್ಟಿದೆ-ವೆಂಕಟಪ್ಪನ ಅಪ್ಪ, ನಮ್ಮಪ್ಪನ ದೋಭಿ--ವೆಂಕಟಪ್ಪ ನಮ್ಮ ದೋಭಿ-ಅವನ್ಮಗ ಮರಿಯಪ್ಪ, ನಮ್ಮ ಮಕ್ಕಳ ದೋಭಿಯಾಗ್ಲೇಬೇಕೂ !.... ಇದೂ ಹೆರಿಡಿಟರಿ ! ನಾವು ಐದು ಜನ ಬ್ರದರ್ಸ್ನಲ್ಲಿ ಕೆಲವರು ಒಂದು ತರಹ ಫೆನಾಟಿಕ್ಸ್....ಅಪ್ಪ ಹಾಕಿದ ಆಲದ್ಮರಾಂತಾರಲ್ಲಾ....ಹಾಗೆ !"

ಅನಂತ ಅವನತ್ತ ಕಿಡಿನೋಟ ಹರಿಸಿ ಕೆಮ್ಮಿದಾಗ ಅಮರೇಶ ಅಲ್ಲಿಂದ ದೂರ ಸರಿದನು.

"ಸ್ವಲ್ಪ ಓದ್ಕೊಬೇಕಪ್ಪಾ....ಟೈಂ ಇಲ್ಲ...."

ಅಶೋಕನ ಮುಂದೆ ತನ್ನ ಪರಾಭವದಳಲನ್ನು ಹೇಳಿಕೊಂಡಾಗ ಅಶೋಕ ಮನಸಾರೆ ನಕ್ಕನು.

"ಆ ವೆಂಕಟಪ್ಪನ ಸಮಾಚಾರಕ್ಕೆಲ್ಲ ತಲೆ ಕೆಡಿಸ್ಕೋತಾರಾ ? ಹುಚ್ಚು ಹುಡುಗಿ--ನಮ್ಮನ್ನೇ ಯಾಮಾರಿಸಿಬಿಡ್ತಾನೆ. ಒಂದೊಂದ್ಸಲ-ನೀನ್ಯಾವ ಲೆಕ್ಕ ಹೇಳು ಅವನ್ಗೆ ! ನಾಲ್ಕು ಸಲ ಬಿಗಿಯಾಗು, ಸರಿಹೋಗ್ತಾನೆ."

"ಮತ್ತೆ....ನಿಮ್ಮಣ್ಣ ಒಂದು ತರಹಾ ಕೊಂಕು ಮಾತಾಡ್ಬಿಟ್ರು....!" ನಿರ್ಮಲ ಕೆನ್ನೆಯುಬ್ಬಿಸಿದಾಗ ಅಶೋಕ ಅವಳ ಕೆನ್ನೆಗೆ ಮುತ್ತಿಟ್ಟನು. "ಅವನ ಸ್ವಭಾವನೇ ಹಾಗೆ. ಅದಕ್ಕೆ ನೀನ್ಯಾಕೆ ಬೇಜಾರು ಮಾಡ್ಕೋತಿ. ನೀನು ಬೇಜಾರು ಮಾಡ್ಕೊತೀಂತ ಅವನೇನೂ ಅನ್ನೋದು ನಿಲ್ಸೊಲ್ಲ. ಜಸ್ಟ್ ಇಗ್ನೋರ್ ಹಿಮ್...."

ಅಶೋಕ ಸಮಾಧಾನ ಹೇಳಿದರೂ ನಿರ್ಮಲಳ ಮಾನಸ್ಸಿನೊಳಗೆ ಅನಂತನ ಕೊಂಕು ನುಡಿಗಳು, ಚುಚ್ಚು ಮಾತುಗಳು ಕೊರೆಯುತ್ತಿತ್ತು. ಅವನನ್ನೇಕೆ ತಾನು ಮೆಚ್ಚಿಸಬೇಕು ? ಅವನು ಬೇಕಾಗಿಯೇ ತನ್ನನ್ನು ಕೀಳಾಗಿ ಕಾಣುತ್ತಿರುವನು. ತನ್ನ ಬಗೆಗೆ ಅವನಿಗೇನೋ ಅಸಮಾಧಾನ--ತಾನು ಅಶೋಕನನ್ನು ಮದುವೆಯಾದುದೇ ಇಷ್ಟವಿಲ್ಲವೇ ಅಥವಾ ತಾನು ಆ ಮನೆಗೆ ಅತಿಕ್ರಮಿಸಿ

ಬಂದಿರುವ ಅವನ ಎದುರಾಳಿಯೆಂದುಕೊಂಡಿರುವನೋ— ಹೇಗಾದರೂ ಮಾಡಿ ಬೇಸರವಾಗುವ ಮಾತುಕತೆಗಳಿಗೆ ಎಡೆಕೊಡಬಾರದೆಂದು ನಿರ್ಧಾರ ಮಾಡಿದಳು.

ಎರಡು ದಿನಗಳನಂತರ ದೋಭಿ ಬಂದಾಗ ಬೇಕೆಂತಲೇ ಅವರೆಲ್ಲರ ಬಟ್ಟೆಗಳ ಜೊತೆಗೆ ಅವುಗಳ ಬಣ್ಣ, ವಿನ್ಯಾಸ, ಅವುಗಳ ಪ್ರತಿಯೊಂದು ವೈವಿಧ್ಯತೆಯನ್ನೂ ಬರೆದುಕೊಂಡಳು. ಅದನ್ನೆಲ್ಲಾ ಕಿರುಗಣ್ಣಿನಿಂದ ಗಮನಿಸಿದ ವೆಂಕಟಪ್ಪ ಮತ್ತೆ ತಪ್ಪು ಮಾಡಲು ಆಗಲಿಲ್ಲ.

"ಹಾಡ್ತಾ ಹಾಡ್ತಾ ಹಾಡೂ—ನಡೀತಾ ನಡೀತಾ ಹೆಜ್ಜೆ ಅನ್ನೋ ಹಾಗೆ ಕೆಲ್ಸ ಮಾಡ್ತಾ ಮಾಡ್ತಾ ತಾನೇ ಬರುತ್ತೆ..." ಪದ್ಮಪ್ಪ ಟೀಕೆ ಮಾಡದೇ ಬಿಡಲಿಲ್ಲ. "ಅನಂತನಿಗೆ, ಶಿಸ್ತು, ಸ್ವಚ್ಛತೇಂದ್ರೆ ಬಹಳ ಜಾಸ್ತಿ."

## ೭

ದಿನಗಳುರುಳುತ್ತಿದ್ದವು. ತಂದೆ ತಾಯಿಯರಿಂದ ಕಾಗದ ತಪ್ಪದೇ ಬರುತ್ತಿತ್ತು. ಅಮರೇಶ, ನಿರ್ಮಲ ಬಹಳ ನಿಕಟವರ್ತಿಗಳಾಗಿದ್ದರು. ಅರವಿಂದ ಮೊದಲಿನಿಂದಲೂ ಸ್ನೇಹಮಯಿ-ಅಶೋಕ ತನ್ನ ಹೆಂಡತಿಗಿಂತ ಪ್ರಪಂಚದಲ್ಲಿ ಇನ್ನೊಂದೂ ಮಿಗಿಲಿಲ್ಲನೆಂಬ ಭಾವನೆ ತಾಳುತ್ತಿದ್ದನು. ನಿರ್ಮಲ ಅನಂತ ಅಜಯರಿಗೆ ದೂರವಾಗಿಯೇ ಉಳಿದಿದ್ದಳು.

ಅಂದು ಮೊದಲನೆಯ ತಾರೀಖು. ರಾತ್ರಿ ಎಂಟು ಗಂಟೆ. ಅಮರೇಶ ನಿರ್ಮಲ ಮಾತನಾಡುತ್ತಾ ಕುಳಿತ್ತಿದ್ದಾಗ ಅನಂತ ಒಂದು ಪುಸ್ತಕ ಪೆನ್ನು ಹಿಡಿದು ಬಂದು ಕುಳಿತನು.

ಅಜಯ್ ತನ್ನ ರೂಮಿನೊಳಗೆ ಹೋಗಿ ಪರ್ಸ್ ತೆಗೆದು ನೂರರ ನೋಟುಗಳನ್ನು ಹಿಡಿದು ಬಂದು ಅನಂತನ ಮುಂದಿಟ್ಟನು. ಅನಂತ ಅದನ್ನೆಣಿಸಿ ಪುಸ್ತಕದಲ್ಲಿ ಬರೆದಿಟ್ಟನು. ಅಶೋಕನು ರೂಮಿಗೆ ಹೋಗಿ ದುಡ್ಡು ತಂದಿತ್ತಾಗ ಅನಂತ ಅವನಿಗೆ ನೂರರ ಎರಡು ನೋಟುಗಳನ್ನು ಹಿಂತಿರುಗಿಸಿದನು.

"ನಿಂಗೆ ಖರ್ಚು ಜಾಸ್ತಿ ಇರಲಿ....ಇಷ್ಟು ಸಾಕು...." ಅರವಿಂದನೂ ಂದಿತ್ತ ಮೇಲೆ ಅಮರೇಶನೆಗೆ ಹೇಳಿದನು.

"ಹೋಗಿ ಪದ್ದಮ್ಮನ ಕರಿ...."

ಅರವಿಂದ ಅವನನ್ನು ತಡೆದನು. "ಅಣ್ಣಾ, ನಾನೊಂದು ಮಾತು ಹೇಳ್ತೀನಿ....ಅಲ್ಲಾ ಅತ್ತಿಗೆ ಬಂದಿದ್ದಾರಲ್ಲಾ, ಅಡಿಗೆ ಮನೆ ಬಾಬತ್ತೆಲ್ಲಾ ಅವರ ಕೈಗೆ ಕೊಡಬಾರ್ದ ? ಪದ್ದಮ್ಮಂಗ್ಯಾಕೆ ಅಷ್ಟೊಂದು ಇಂಪಾರ್ಟೆನ್ಸ್ ?"

ಅಜಯ್ 'ದಟ್ ಈಸ್ ರೈಟ್' ಎಂದನು. ಅಶೋಕ ಮಾತನಾಡಲಿಲ್ಲ.

ಅಮರೇಶ ಗೊಣಗಿದ "ಪದ್ದಮ್ಮ ಹೊಡ್ಯೋ ಚಿಲ್ರೆ ಕಾಸಾದ್ರೂ ಮಿಗುತ್ತೆ." ಅನಂತ ಪೆನ್ನಿನ ಹಿಂಭಾಗ ಕಚ್ಚಿದನು.

"ಹೊಸ್ದಾಗಿ ಮದ್ವೆ ಆಗಿರೋದೂ....ಈಗ್ಲಿಂದ ಈ ರೆಸ್ಪಾನ್ಸಿಬಿಲಿಟಿ ಯಾಕೆ ? ಇನ್ನೂ ಒಂದೆರಡು ತಿಂಗಳು ಹಾಯಾಗಿರ್ಲೀಂತ ನಾನು ಸುಮ್ಮನಿದ್ದೆ. ನೀನೇನ್ಹೇಳ್ತೀ ಅಶೋಕ್ ?"

"ನಾನೇನ್ಹೇಳಿ-ನಿನ್ನಿಷ್ಟ....ಹೇಗಿದ್ರೂ ಹೊತ್ತು ಹೋಗೋಲ್ಲಾಂತಾಳೆ-ಮಾಡ್ಲಿ ಬಿಡು."

"ನೀನೇನ್ಹೇಳ್ತೀ ನಿರ್ಮಲ?" ಅನಂತ ನಿರ್ಮಲಳನ್ನು ಕೇಳಿದಾಗ ನಿರ್ಮಲ ಉಗುರು ಕಚ್ಚಿದಳು.

"ಇಷ್ಟೊಂದು ಜನದ ಒಪಿನಿಯನ್ ಮಧ್ಯೆ ನಂದೇನು ?"

ಅಮರೇಶ ಕೊಂಚ ರೇಗಿದ—"ಪದ್ದಮ್ಮ ಶಿವಮ್ಮನ ಕೇಳೋಲ್ವಾ ? ಅಜಯ್ ಅವನನ್ನು ಕಣ್ಣಿನಿಂದಲೇ ಗದರಿದನು.

ಅನಂತ ನಿರ್ಮಲಳ ಕೈಯಲ್ಲಿ ನೋಟುಗಳನಿಟ್ಟನು. "ಇಲ್ಲೀವರ್ಗೂ ಇಷ್ಟು ಪದ್ದಮ್ಮನ ಕೈಗಿಡ್ತಾ ಇದ್ದೆ. ಇನ್ನು ಹೆಚ್ಚು ಬೇಕಾದ್ರೆ ಕೇಳೂ..." ನಿರ್ಮಲಳಿಗೆ ಆ ಜವಾಬ್ದಾರಿ ತಂದೆ ತಾಯಿ ಕೊಟ್ಟಿರಲಿಲ್ಲ. ಅವಳಿಗೆ ಅದರ ವಿಷಯ ಹೆಚ್ಚು ತಿಳಿಯದು. "ಆಮೇಲೆ ಲೆಕ್ಕ ಬರ್ದಿಡ್ಬೇಕೂ....ಆ ಪದ್ದಮ್ಮ ಅಡಿಗೆ ಮನೇಲಿ ಒಂದು ಪುಸ್ತಕ ಇಟ್ಕೊಂಡಿದ್ದಾರೆ....ಏನೇನು ಎಷ್ಟೆಷ್ಟು ಬೇಕೂಂತ. ಅದನ್ನು ಒಂದ್ಸಲ ನೋಡಿದ್ರೆ ವಾಸಿ" ಅನಂತ ಹೇಳಿದಾಗ ಅರವಿಂದ ಕಿಸಕ್ಕನೆ ನಕ್ಕನು.

"ಪದ್ದಮ್ಮನ ಹ್ಯಾಂಡ್‌ರೈಟಿಂಗೊ—ಬ್ರಹ್ಮಲಿಪಿ....ಯಾರ್ಗೂ ಅರ್ಥ ಆಗೋಲ್ಲ. ನೀವೇ ನೋಡಿ ಅತ್ತಿಗೆ...."

"ಅಮರೇಶಾ....ತೊಗೋ ನಿನ್ನ ಪಾಕೆಟ್ಮನಿ...." ಐವತ್ತು ರೂಪಾಯಿಯನ್ನು ಅವನ ಕೈಗಿತ್ತನು.

"ಪದ್ದಮ್ಮನ ಕರಿ. ಸಂಬಳ ಕೊಟ್ಬಿಡೋಣ..." ಪದ್ದಮ್ಮ ತಲೆಯ ಸೆರಗು ಸರಿಮಾಡಿಕೊಂಡು ಬಂದರು. ಅವರ ಸಂಬಳ ಕೈಗಿತ್ತಾಗ ಹಾಗೆಯೇ ನಿಂತಿದ್ದರು.

"ಏನಾದ್ರೂ ಬೇಕಾಗಿತ್ತಾ ಪದ್ದಮ್ನೋರೆ ?" ಅನಂತ ಕೇಳಿದಾಗ ಪದ್ದಮ್ಮ ಸಂಬಳದ ದುಡ್ಡನ್ನು ಸೊಂಟಕ್ಕೆ ಸಿಕ್ಕಿಸುತ್ತಾ ಕೇಳಿದರು.

"ಅಡ್ಗೇಮನೆ ದುಡ್ಡು ?"

"ಅದ್ನ ಅತ್ತಿಗೆ ನೋಡ್ಕೋತಾರೆ" ಅಮರೇಶ ಹೇಳಿದಾಗ ಪದ್ದಮ್ಮನ ಮುಖ ಗಂಭೀರವಾಯಿತು. ಕಣ್ಣರಳಿಸಿ ನಿರ್ಮಲಳತ್ತ ನೋಡಿದರು.

"ಬಹಳ ಸಂತೋಷ—ಅವ್ರು ಜವಾಬ್ದಾರಿ ತೊಗೋಬೇಕಾದ್ದೇ !" ಎನ್ನುತ್ತ ಮತ್ತೆ ಅಡಿಗೆ ಮನೆ ಹೊಕ್ಕರು.

ಅವರಿಬ್ಬರೇ ಇದ್ದಾಗ ಅಶೋಕನನ್ನು ಕೇಳಿದಳು. "ಅಲ್ಲಾಂದ್ರೇ, ಪದ್ದಮ್ಮಂಗೆ ಸಂಬ್ಳ ಕೊಡ್ತೀರಾ....ಊಟ ತಿಂಡಿ, ಮನೆ ಎಲ್ಲಾ ಇಲ್ಲೇ ಆಗೋಗತ್ತೆ. ಸಂಬಳ ಏನ್ಮಾಡ್ತಾರೆ ?"

"ವೆಂಕತ್ತೆ ಹೇಳ್ತಾ ಇದ್ರೂ—ಅವರ ಮಗ್ಳು ಅಳಿಯ ಇದ್ದಾರಂತೇ ಹಳ್ಳೀಲಿ....ನಾಳೇನೆ ಹೋಗಿ ಮನಿಯಾರ್ಡರ್ ಮಾಡಿಬಿಟ್ಟು ಬಂದ್ಬಿಡ್ತಾರೆ ನೋಡ್ತಾ ಇರು. ಆ ಕೆಲ್ಸಕ್ಕೆಲ್ಲಾ ಪಕ್ಕದ್ಮನೆ ಲಲಿತಮ್ಮನ ಸ್ನೇಹ ಇಟ್ಕೊಂಡಿದ್ದಾರೆ." ಅಶೋಕ ಹೇಳಿದಾಗ ನಿರ್ಮಲ ಕೊಂಚ ಯೋಚಿಸಿದಳು.

"ಪದ್ದಮ್ಮಂಗೆ ನೀವೆಲ್ಲಾ ನನ್ನ ಕೈಲಿ ದುಡ್ಡು ಕೊಟ್ಟಿದ್ದು ಇಷ್ಟಾ ಆಗ್ಲಿಲ್ಲಾ !"

"ಆಗ್ಲಿ ಬಿಡ್ಲಿ....ಅವರ್ಯಾರು ಅದನ್ನೆಲ್ಲಾ ಕೇಳೋಕೇ—ನೀನೇನೂ ಆ ವಿಷ್ಯ ತಲೆಗೆ ಹಚ್ಕೋಬೇಡ. ನಿಂಗೆ ಸಂಸಾರ ತಾಪತ್ರಯ ಈಗ್ಲಿಂದ ಹಚ್ಚಿಸೋಕೆ ನಂಗೆ ಇಷ್ಟಾನೇ ಇಲ್ಲ. ಆದ್ರೆ ಏನ್ಮಾಡೋದೂ. ನೀನೊಬ್ಳೇ ಇರೋದೂ...." ಅಶೋಕ ಅವಳ ಮುಂಗುರುಳು ಸವರಿದನು. "ಅನಂತನೇನಾದ್ರೂ ಮದುವೆಯಾಗಿದ್ರೆ, ನಿನ್ಕೈಲಿ ಏನೂ ಮಾಡಿಸ್ತಾ ಇರ್ಲಿಲ್ಲ ನಾನು !"

"ಚೆನ್ನಾಗಿದೆ ನೀವ್ಹೇಳೋದೂ, ಇದೇ ತರಹ ಅರವಿಂದ, ಅಜಯ್.

ಅಮರೇಶ ಅಂದ್ಕೊಂಡ್ರೆ ನನ್ನ ಗತಿ ಏನು ?" ನಿರ್ಮಲ ನಸುನಕ್ಕಳು. "ಯಾಕ್ರೀ, ನಿಮ್ಮಣ್ಣ ಮದ್ವೆ ಆಗ್ಲಿಲ್ಲ ?"

"ಅವನಿಗೆ ಮೊದಲಿನಿಂದಲೂ ಆಸ್ತಮಾ ಟ್ರಬಲ್ಲು, ಬ್ಲಡ್ ಶುಗರ್ ಎಲ್ಲಾ ಇವೆ. ಅವನು ಮದ್ವೇನೇ ಆಗೋಲ್ಲ....ನಾನೊಬ್ನೇ ಹಾಯಾಗಿರ್ತೀನೀಂತ ಆ ಹುಚ್ಚಿಗೆ ಬೀಳಲಿಲ್ಲ...."

ಅಶೋಕ ಹಾಗೆ ಹೇಳಿದಾಗ ನಿರ್ಮಲ ತುಟಿ ಕಚ್ಚಿಕೊಂಡಳು. ಅದಕ್ಕೇ ಇರಬೇಕು, ಅವನು ಎಲ್ಲರಿಗಿಂತ ಕೊಂಚ ಸ್ಥೂಲ, ಊಟ ತಿಂಡಿ ಬಹಳ ನಾಜೂಕು. ಯಾರೊಂದಿಗೂ ಹೆಚ್ಚಿಗೆ ಬೆರೆಯುತ್ತಿರಲಿಲ್ಲ. ಮಾತನಾಡುತ್ತಿರಲಿಲ್ಲ.

"ನೋಡಿದ್ಯಾ ಆಗ಼್ೇ ಸಂಸಾರ ತಾಪತ್ರಯ ಹಚ್ಕೊಂಡೀ. ನನ್ನ ಮರ್ತೇ ಬಿಟ್ಟೆ" ಅಶೋಕ ಅನ್ಯಮನಸ್ಕಳಾದ ಅವಳನ್ನು ತನ್ನೆಡೆಗೆ ತಿರುಗಿಸಿಕೊಂಡನು.

ಮಾರನೆಯ ದಿನ ಬೆಳಿಗ್ಗೆ ಎದ್ದು ಕಾಫಿ ಕುಡಿಯಲು ಬಂದಾಗ ಪದ್ಮಮ್ಮ ಗಂಟಲು ಸರಿ ಮಾಡಿಕೊಂಡರು.

"ಮುಗಿದುಹೋಗಿರೋ ಸಾಮಾನೆಲ್ಲಾ ತರಿಸ್ಬಿಟ್ರೆ ಸರಿ. ಇಲ್ದಿದ್ರೆ ಅಡ್ಗೆಗೆ ತೊಂದ್ರೆಯಾಗುತ್ತೆ !"

"ಆಗ಼್ಿ ತರಿಸ್ತೀನಿ, ಇರಿ. ಈಗ ಏಳ್ತಾ ಇದ್ದೀನಲ್ಲಾ !" ನಿರ್ಮಲ ಹೇಳಿದಾಗ ಪದ್ಮಮ್ಮ ಗೊಣಗಿಕೊಂಡರು. "ಬೇಕ್ ಬೇಕಾದ ಸಾಮಾನಿದೆ. ಅಡಿಗೆ ತಿಂಡಿ ಸುಲಭ ಆಗುತ್ತೆ. ತರ್ಸೋಕೆ ನಿಧಾನ ಮಾಡಿ ನನ್ನ ಬೈಸ್ಬೇಡಿ ಅಷ್ಟೆ !" ನಿರ್ಮಲ ನಿಟ್ಟುಸಿರಿಟ್ಟು ಕಾಫಿ ಕುಡಿದಳು.

"ಎಲ್ಲಿ...ನೀವು ಸಾಮಾನು ಬರ್ದಿಡ್ತಾ ಇದ್ದಿದ್ದ ಪುಸ್ತಕ ಎಲ್ಲಿ ?"

"ಅದೆಲ್ಲಿದೆ ? ನಿನ್ನೆ ನಿಮ್ಮೈಗೆ ದುಡ್ಡು ಕೊಡೋತ್ಲೂ ಆ ಪುಸ್ತಕ ಯಾಕೇಂತ ಬೆಳಿಗ್ಗೆ ಬಚ್ಚಲ್ಮನೆ ಒಲೆಗೆ ಹಾಕ್ಬಿಟ್ಟೆ" ಪದ್ಮಮ್ಮ ಕತ್ತು ಕೊಂಕಿಸಿ ಹೇಳಿದರು.

"ಏನ್ಸಾಮಾನು, ಎಷ್ಟೆಷ್ಟು ಬೇಕಾಗುತ್ತೇಂತ ಹೇಗ್ರಿ ನಂಗೆ ಗೊತ್ತಾಗಬೇಕು ?" ನಿರ್ಮಲ ಕೋಪ ನುಂಗಿ ಹೇಳಿದಳು.

"ಗೊತ್ತಿಲ್ದೇ ಇದ್ರೇ ಯಾಕೆ ಜವಾಬ್ದಾರಿ ತೊಗೋಬೇಕಾಗಿತ್ತು. ನಂಗದೆಲ್ಲಾ ಗೊತ್ತಿಲ್ಲಾಂದ್ರೇ ಆಗ್ತಾ ಇತ್ತು. ಸಿಮ್ತಾಯಿ ಬಂದಾಗ್ಲೇ

ಹೇಳಿದ್ರು....ನನ್ಮಗಳಿಗೆ ಏನೂ ತಿಳ್ಯೋಲ್ಲಾ, ನೀವೇ ನೋಡ್ಕೊಳ್ಳಿಂತಾ....!' ಪದ್ದಮ್ಮ ಹೇಳಿದಾಗ ನಿರ್ಮಲಳಿಗೆ ಅವಮಾನವಾದಂತಾಯಿತು. ಇದೊಂದು ಬ್ರಹ್ಮವಿದ್ಯೆಯೇ ? ಒಂದ್ಸಲ ತಪ್ಪಬಹುದು....ಎರಡುಸಲ ತಪ್ಪಬಹುದು. ಆಮೇಲೆ ತಿಳ್ದೀತಿಳ್ಯತ್ತೆ...

"ಹಾಗಾದ್ರೆ ನಾನು ಬೇರೆ ಪುಸ್ತಕದಲ್ಲಿ ಬರೀತೀನಿ...." ನಿರ್ಮಲ ಅಲ್ಲಿಂದ ಅಮರೇಶನ ರೂಮಿಗೆ ಬಂದು ಅವನ ಕೈಯಿಂದ ಒಂದು ಖಾಲಿ ಪುಸ್ತಕ ತೆಗೆದು ಕೊಂಡಳು.

"ಯಾಕೆ ಅತ್ತಿಗೆ ?"

"ಲೆಕ್ಕ ಬರ್ಯೋಕೆ, ಸಾಮಾನು ತರ್ಸೋಕೆ !"

"ಬೇಕಾದಷ್ಟು ಮಿಸ್ಟರಿಗಳ್ನ ಹೊರತೆಗೀತೀರಿ....ಷೆರ್ಲಾಕ್ ಹೋಮ್ಸ್ ಹಾಗೆ !" ಅಮರೇಶ ಪೆನ್ನನ್ನೂ ಕೈಗಿತ್ತನು.

ನಿರ್ಮಲ ಅಡುಗೆ ಮನೆಗೆ ಬಂದು ಪ್ರತಿಯೊಂದು ಡಬ್ಬವನ್ನು ತೆಗೆದು ನೋಡಿ ಅವುಗಳಲ್ಲಿನ ಸಾಮಾನಿನ ಹೆಸರು ಬರೆದುಕೊಳ್ಳುತ್ತಾ ಹೋದಾಗ ಪದ್ದಮ್ಮ ದೂರ ಮುದುರಿ ಕುಳಿತರು.

"ಮಡಿ ಮೈಲಿಗೆ ಕಲಿಬೇಕಮ್ಮ ಎಲ್ಲಾ ಡಬ್ಬನೂ ಮುಟ್ಕೊಂಡ್ರೆ ನಾನ್ಹೇಗೆ ಊಟ ಮಾಡ್ಲಿ ?"

"ಡಬ್ಬ ಮುಟ್ಟಿದ್ರೆ ಮೈಲಿಗೆ ಯಾಕೆ ಆಗುತ್ತೇ ? ನಿಮ್ಮ ಅಡಿಗೆನೇನೂ ಮುಟ್ಲಿಲ್ವಲ್ಲಾ !" ನಿರ್ಮಲ ಸಿಡುಕಿದಾಗ ಪದ್ದಮ್ಮ ಮೆತ್ತಗಾದರು.

"ಇವೊತ್ತಿನ ಅಡಿಗೆಗೆ ತರಕಾರಿ ತರಿಸ್ಬಿಡಿ, ಆಮೇಲೆ ಸಾಮಾನು ಬಂದ್ರಾಯ್ತು."

"ಏನು ತರಿಸ್ಲಿ ?" ನಿರ್ಮಲ ಕೇಳಿದಾಗ ಪದ್ದಮ್ಮ ಸೊಂಟ ಹಿಡಿದು ಎದ್ದರು--"ಏನಾದ್ರೂ ತರ್ಸಿ-ಅನಂತನಿಗೆ ಬದ್ನೇಕಾಯಿ ಸೇರೋಲ್ಲ--ಅಜಯ್‌ನಿಗೆ ಬೆಂಡೇಕಾಯಿ ಆಗೋಲ್ಲ--ನಿಮ್ಮ ಜಮಾನ್ರಿಗೆ ಬರೀ ಹಸೀ ತರ್ಕಾರಿ ಇಷ್ಟ. ಅರವಿಂದನಿಗೆ ಹಾಗಲಕಾಯಿ ಇಷ್ಟ-ಅಮರೇಶನಿಗೆ ಭೂಮಿ ಮೇಲಿರೋ ತರ್ಕಾರಿ ಒಂದೂ ಇಷ್ಟ ಇಲ್ಲ....ಮೂಲಂಗಿ ಬೂದುಗುಂಬಳಕಾಯಿ, ನಾನು ತಿನ್ನೋಲ್ಲ ಕಾಶಿಗ್ಹೋದಾಗ ಬಿಟ್ಬಿಟ್ಟೇ...."

"ಮತ್ತೇ ನೆನ್ನೆ ಬೆಂಡೆಕಾಯಿ ಗೊಜ್ಜು ಮಾಡಿದ್ರಲ್ಲ--ಅಜಯ್ ತಿಂದ್ರೂ !"

"ಮತ್ತಿನ್ನೇನು ಮಾಡ್ತಾನೆ. ಅತ್ತಿಗೆ ಮುಂದೆ ಹಾಗೆಲ್ಲಾ ಆಡ್ತಾ ರ್ದ್ದಂತ ಬಾಯ್ಮುಚ್ಕೊಂಡು ತಿಂತಾನೆ....ನಾನೊಬ್ಬೇ ಇದ್ದಾಗ ಹಾರಾ ಡೋಸ್ತೂ !"

ನಿರ್ಮಲ ಅವರೊಂದಿಗೆ ಮಾತಾಡಿ ಪ್ರಯೋಜನವಿಲ್ಲವೆಂದು ತಿಳಿದಳು. "ನೋಡಿ, ಈರುಳ್ಳಿ ಆಲೂಗಡ್ಡೆ ಹುಳಿ ಮಾಡ್ಬಿಡಿ....ಸೌತೆಕಾಯಿ ಸಣ್ಣಗೆ ಹೆಚ್ಚಿ ಕೋಸಂಬರಿ ಮಾಡಿ...."

ಪದ್ಮಮ್ಮ ಗಲ್ಲದ ಮೇಲೆ ಕೈಯಿಟ್ಟರು. "ಈರುಳ್ಳಿ ನಾನು ಮುಟ್ಕೋ ಕ್ಯಾಗುತ್ಯೇ ? ನಾನು ಈರುಳ್ಳಿನೇ ತರ್ಸೋಲ್ಲ."

"ನಾನು ತರಿಸ್ತೀನಿ ಮಾಡಿ ಬೇಕಾದ್ರೆ ನೀವು ಬೇರೆ ಏನಾದ್ರೂ ಮಾಡ್ಕೊಳ್ಳಿ!..." ನಿರ್ಮಲ ಕಡ್ಡಿ ಮುರಿದಂತೆ ಹೇಳಿದಾಗ ಪದ್ಮಮ್ಮ ನೆಂಗೆ ಮುದುರಿಕೊಂಡರು. ಬೇಳೆ ಬೇಯಿಸ್ಕೊಡ್ತೀನಿ. ಹುಳಿ ಉಪ್ಪು ಖಾರ ಬೇಯಿಸ್ಕೊಡ್ತೀನಿ—ಒಲೆ ಹಚ್ಕೊಡ್ತೀನಿ. ನೀವೇ ಈರುಳ್ಳಿ, ಆಲೂಗೆಡ್ಡೆ ಹೋಳು ಹಾಕಿ ಬೇಯ್ಸಿಬಿಡಿ....ನಾನು ಅದ್ನೆಲ್ಲಾ ಮುಟ್ಕೊಂಡು ಯಾವ ರೌರವ ನರಕಕ್ಕೆ ಹೋಗ್ಲಿ ?"

ನಿರ್ಮಲನಿಗೆ ನಗು ಬಂದರೂ ತಡೆದುಕೊಂಡಳು. ಕೆಲಸಕ್ಕೆ ಬಂದ ಶಿವಮ್ಮನ ಕೈಗೆ ದುಡ್ಡು ಚೀಲ ಕೊಟ್ಟು ಆಲೂಗೆಡ್ಡೆ, ಈರುಳ್ಳಿ, ಸೌತೇ ಕಾಯಿ, ಹಸಿಮೆಣಸಿನ ಕಾಯಿ, ಕರಿಬೇವಿನಸೊಪ್ಪು ತರುವುದಕ್ಕೆ ಹೇಳಿದಾಗ ಶಿವಮ್ಮ ಎಲೆ ಅಡಿಕೆಯಿಂದ ಕೆಂಪಾದ ಹಲ್ಲು ಬಿಟ್ಟು ನಕ್ಕಳು.

"ಓ ಇವೊತ್ನಿಂದ ಅವ್ಮಾವ್ರದಾ ಮನೇ ಉಸಾಬರಿ ? ನಿಮ್ಕೈಯ್ಯಾಗೆ ಕೊಟ್ಟಾಗ ಪದ್ಮಮ್ಮೋರ ಪಿರಾಣ ಅಂಗೇ ಒಂಟೋಗ್ಲಿಲ್ವಾ ?"

"ಯಾಕೇ ಹಾಗಂತಿ ಶಿವಮ್ಮ ?" ನಿರ್ಮಲ ಕೇಳಿದಾಗ ಶಿವಮ್ಮ ಅಚ್ಚರಿ ವ್ಯಕ್ತಪಡಿಸಿದಳು.

"ನಿಮ್ಗೆ ಗೊತ್ತಿಲ್ಲವ್ವಾ ? ಒಂದೊಂದು ಲೋಟದ ತುಂಬಾ ಆಲು ಮಡ್ಕಂಡು ಎಲ್ರೂ ಒತ್ತೂ ಕುಡ್ಯೋರೂ. ತಳ್ಕಾರ ಹೋಳ್ಗಳನ್ನ ಬ್ಯಾರೆ ಪಾತ್ರೇಲ್ಮಡ್ಗಿ ಎಲ್ರಿಗೂ ಮೇಲಿದ್ದ ತಿಳಿ ಆಕ್ಬುಡೋರೂ. ಊಟಕ್ಕೆ ಎಲ್ರಿಗೂ

ನೀರು ಮೊಸ್ರಾಕಿ ಅಯಮ್ಮ ಮಾತ್ರ ಬೆಣ್ಣೆ ಮೊಸರು ಆಕ್ಕೊಳ್ಳೋರೂ. ಪಪ್ಪಾಗೋತ್ಲೂವೇ ಪಕ್ಕದ್ಮನೆಯವ್ರೋರ ಕೈಯ್ಯಾಗ್ಬರ್ಸಿ........ನೂರಾರು ರೂಪಾಯಿ ಮಗಳ್ಗೆ ಕಳ್ಸೋರೂ....ಆ ಮಗ್ಳು ಮೂರ್ಮನೆ ಕಟ್ಕಂಡಿರ್ಬೇಕೂ ಅಗ್ಲೇ. ಆ ಪಾಟಿ ಹಣ ಕಳ್ಸೋರೂ........ನಾನೋಡ್ದೇಂತ ಒಂಜಿನ—ಯಾಳ್ಬೇಡ್ವೆ ಸಿವಮ್ಮಾ....ನಿಂಗಿಪ್ಪತ್ತು ಕೊಟ್ಟೇನೂ ಅಂದಿದ್ರು....ಅಯಮ್ಮ ಕೊಡ್ನಿಲ್ಲಾ, ನಾ ತಗಂಡ್ನಿಲ್ಲ...."

ನಿರ್ಮಲಳಿಗೆ ಕೊಂಚ ಅರಿವು ಮೂಡಿತು. ಪದ್ದಮ್ಮ ಇಪ್ಪತ್ತು ರೂಪಾಯಿ ಕೊಟ್ಟಿದ್ದರೆ ಶಿವಮ್ಮ ಬಾಯಿಬಿಡುತ್ತಿರಲಿಲ್ಲ. ಅವಳು ಕೊಡದಿದ್ದ ಕಾರಣ ಈಗ ಅದು ಬಯಲಾಯಿತು.

"ನೀನು ಚೆನ್ನಾಗಿ ಕೆಲ್ಸ ಮಾಡ್ಕೊಂಡಿರೂ ಶಿವಮ್ಮ....ನನ್ನ ಹಳೇ ಸೀರೆಗಳ್ನೆಲ್ಲಾ ನಿಂಗೇ ಕೊಡ್ತೀನಿ"....ಎಂದಳು. ಶಿವಮ್ಮ ಹಿಗ್ಗಿದಳು.

"ಲಕ್ಸ್ಮಂದೇವಿ ಅಂಗೆ ಮನೇಗೆ ಬಂದಿವ್ರೀ ಮಾಡ್ದೇ ಇದ್ದೇನಾ ?"

ಅಶೋಕ ಏಳುವ ಹೊತ್ತಿಗೆ ಶಿವಮ್ಮ ತರಕಾರಿ ತಂದಿದ್ದಳು. ಪದ್ದಮ್ಮ ಉಪ್ಪಿಟ್ಟು ಕೆದಕುತ್ತಿದ್ದರು. ನಿರ್ಮಲ ಕಣ್ಣು ಮೂಗಿನಲ್ಲಿ ನೀರು ಸುರಿಸುತ್ತಾ ಈರುಳ್ಳಿ ಹೆಚ್ಚುತ್ತಿದ್ದಳು.

"ಇದೇನು ನೀನು ಅಡಿಗೆಗೆ ಇಳಿದುಬಿಟ್ಟೆ ! ? ಅಶೋಕ ಆಶ್ಚರಿಯಿಂದ ಕೇಳಿದನು.

"ಪದ್ದಮ್ಮ ಈರುಳ್ಳಿ ಮುಟ್ಟೋಲ್ವಂತೆ, ಮಡಿಯಂತೆ" ಎಂದಾಗ ಅಶೋಕ ಸಿಡುಕಿದನು.

"ಮುಟ್ಟಿದ್ರೇನಂತೆ—ತಿನ್ದೇ ಇದ್ರಾಯ್ತು."

"ಅದಕ್ಕೆ ಬೇರೆ ತರ್ಕಾರಿ ತರ್ಸಿದ್ರಾಗಿತ್ತು...." ಪದ್ದಮ್ಮ ರಾಗವಾಗಿ ಹೇಳಿದಾಗ ಅಶೋಕ ಮತ್ತೆ ರೇಗಿದನು.

"ನೋಡಿ—ನಮ್ಗೆಲ್ಲಾ ಏನಿಷ್ಟಾನೊ ಅವನ್ನ ಮಾಡ್ಬೇಕ್ರೀ. ನೀವು ಮಾಡಿ ಹಾಕಿದ್ನ....ನಿಮಗಿಷ್ಟಾ ಇರೋದ್ನ ನಾವು ತಿನ್ನೋಕ್ಕಾಗೊಲ್ಲ... ಇಷ್ಟು ದಿನ ನಿಮ್ಮ ದರ್ಬಾರಾಯಿತಲ್ಲಾ !"

ಅಷ್ಟರಲ್ಲಿ ಅನಂತನೂ ಎದ್ದು ಬಂದಾಗ ಪದ್ದಮ್ಮ ದನಿ ಏರಿಸಿದರು.

"ಇಷ್ಟು ದಿನ ಮಾಡ್ತಾ ಇರ್ಲಿಲ್ವೇ ಒಂದ್ಮಾತು ಕಾಣೆ....ಇವೊತ್ತು ಏನು ಹೊಸದು ?"

ಅನಂತ ಹುಬ್ಬು ಗಂಟಿಕ್ಕಿದನು. "ಏನದು ಗಲಾಟೆ ?"

"ಏನಿಲ್ಲಾ, ಇವ್ರು ಈರುಳ್ಳಿ ಆಲೂಗಡ್ಡೆ ಹುಳಿ ಮಾಡೂಂದ್ರೆ—ಮಾಡೋಲ್ಲ; ಮಡಿ ಹಾಳಾಗುತ್ತೇದ್ರಂತೆ—ಇವ್ರೇ ಮಾಡ್ತಾ ಇದ್ದಾಳೆ—ಅದಕ್ಕೆ...."

"ಅಷ್ಟೇ ತಾನೆ ? ಅದಕ್ಯಾಕೆ ಗಲಾಟೆ !?" ಅನಂತ ಹೇಳಿದಾಗ ನಿರ್ಮಲ ಕಣ್ಣಲ್ಲಿ ನೀರಾಡುತ್ತಿದ್ದರೂ ತೀಕ್ಷ್ಣವಾಗಿ ಅವನತ್ತ ನೋಡಿದಳು. 'ಈ ಮನೆಯ ಸಂಸಾರದ ಭಾರ ಹೊರುವುದು ಸುಲಭವಾದ ಕೆಲಸವಲ್ಲ'—ಎನಿಸಿ ತವಳಿಗೆ.

ಅಶೋಕ ಅಣ್ಣ ಹೋದ ದಿಕ್ಕನ್ನೇ ದಿಟ್ಟಿಸಿದನು. ಅಶೋಕನಿಗೆ ಕಾಫಿ ಉಪ್ಪಿಟ್ಟು ಕೊಡುತ್ತಾ ನಿರ್ಮಲ ಹೇಳಿದಳು.

"ನೆನ್ನೆಯೇ ನಿಮ್ಮಣ್ಣಂಗೆ ನನ್ಗೆ ಇದೆಲ್ಲಾ ಒಪ್ಪಿಸೋಕೆ ಇಷ್ಟಾ ಇರ್ಲಿಲ್ಲ-ನೋಡ್ರಿ, ದುಡ್ಡು ಪದ್ಮಮ್ಮನ ಕೈಗೆ ಕೊಟ್ಬಿಡ್ತೀನಿ-ಏನಾದ್ರೂ ಮಾಡ್ಕೊಳ್ಳಿ" ಹೆಂಡತಿಯ ಕೆಂಪಗಾದ ಮೂಗು ಕಣ್ಣನ್ನು ನೋಡಿದನು.

"ಹಾಗ್ಮಾಡ್ಬೇಡಾ....ಇದನ್ನ ಛಾಲೆಂಜ್ ತರಹ ತಗೋ. ತೋರ್ಸು ನೀನು ಆ ಪದ್ಮಮ್ಮನಿಗಿಂತ ವಾಸಿಂತಾ—ಆಗ ಸುಮ್ಮನಾಗ್ತಾನೆ...."

ನಿರ್ಮಲ ಒಂದು ಘಳಿಗೆ ಯೋಚಿಸಿದಳು. ಬೆಳಗಿನಿಂದ ಪದ್ಮಮ್ಮ ಕೊಡುತ್ತಿರುವ ಕಿರುಕುಳ, ಶಿವಮ್ಮನಿಂದ ತಿಳಿದ ವಿಷಯ ಇದೆಲ್ಲವನ್ನೂ ನೋಡಿದರೆ ಈ ಕೆಲಸ ತನಗೆ ಸವಾಲಿನಂತಿದೆ. ಈಗ ತಾನು ಹಿಮ್ಮೆಟ್ಟಿದರೆ ಸೋಲನ್ನು ತಾನೇ ಒಪ್ಪಿಕೊಂಡಂತಾಗುತ್ತದೆ.

ಅಮರೇಶ ಎದ್ದು ಬಂದಾಗ ನಿರ್ಮಲ ಅವನಿಗೆ ವರದಿಯೊಪ್ಪಿಸಿದಾಗ ಅವನು ಜೋರಾಗಿ ನಕ್ಕುಬಿಟ್ಟನು.

"ಪದ್ಮಮ್ಮನಿಗೆ ನನ್ನ ಕಂಡ್ರೆ ಆಗೋಲ್ಲಾ ಯಾಕೆ ಗೊತ್ತಾ ? ಅವರ ಎಲ್ಲ ಸೀಕ್ರೆಟ್ಸ್ ನಾನು ತಿಳ್ಕೊಂಡಿದ್ದೀನಿ. ಇವೊತ್ತು ನೋಡ್ತಾ ಇರಿ. ನೀವು ಮಾಡಿರೋ ಆಲೂಗಡ್ಡೆ ಈರುಳ್ಳಿ ಹುಳಿ ಕದ್ದು ತಿಂತಾರೋ ಇಲ್ವೋ-ಮಡಿ ಮೈಲಿಗೆ ಎಲ್ಲಾ ಬರಿ ನಾಟಕ ಅಷ್ಟೆ."

ಅವನಿಂದ ಧೈರ್ಯ ಪಡೆದ ಮೇಲೆ ನಿರ್ಮಲ ತನಗೆ ತಕ್ಕ ಬೆಂಬಲವಿದೆ ಯೆಂದು ತಿಳಿದಳು.

ಅರವಿಂದ ಈರುಳ್ಳಿ ಆಲೂಗಡ್ಡೆ ಹುಳಿಯನ್ನು ಚಪ್ಪರಿಸುತ್ತಾ ತಿಂದನು.

ಪದ್ದಮ್ಮ, ಯಾವಾಗ್ಲೂ ಸಪ್ಪೆ ಸಾರು, ಸೊಪ್ಪಿನ ಪಲ್ಯ ಮಾಡಿ ಹಾಕಿ, ನಮ್ಮನ್ನೆಲ್ಲಾ ಒಂದು ತರಹಾ ಸನ್ಯಾಸಿಗಳನ್ನಾಗಿ ಮಾಡಿಬಿಟ್ಟಿದ್ದರು. ಈವೊತ್ತು ಹಾಯಾಗಿ ಹೊಟ್ಟೆ ತುಂಬಾ ಊಟ ಮಾಡಬಹುದು.

ಅಶೋಕ ಸೌತೆಕಾಯಿ ಕೋಸಂಬರಿಯನ್ನು ಬಾಯಿಗಿಡುತ್ತಾ ಹೇಳಿದ. "ಪದ್ದಮ್ಮ, ಈ ಅಡಿಗೆಯೆಲ್ಲಾ ನಿಮಗೆ ಬರುತ್ತೇಂತಾ ಗೊತ್ತಿರ್ಲಿಲ್ಲ!" ಪದ್ದಮ್ಮ ಯಾವುದಕ್ಕೂ ಮಾತನಾಡದೇ ಮುಖ ದಪ್ಪಗೆ ಮಾಡಿಕೊಂಡು ಬಡಿಸಿದರು. ಅನಂತ ಹೆಚ್ಚಿಗೆ ಅನ್ನ ತಿನ್ನದೇ ಬರಿಯ ಮೊಸರು ತರಕಾರಿ ತಿನ್ನುತ್ತಿದ್ದವನು ಏನನ್ನೂ ಮುಟ್ಟದೇ ಬರಿಯ ಸೌತೇಕಾಯಿ ಕೋಸಂಬರಿ ತಿಂದು ಮೊಸರು ಕುಡಿದು ಎದ್ದನು. ಅಶೋಕ, ಅರವಿಂದ ಹುಬ್ಬೆತ್ತಿ ನೋಡಿ ದರು. ಪದ್ದಮ್ಮ ಗೊಣಗಿದರು.

"ಇವರುಗಳೆಲ್ಲಾ ಪೊಗದಸ್ತಾಗಿ ತಿಂದು ತೇಗಲಿ. ಮನೆಗೆ ಹಿರಿಯ ಅವನು. ಮೂರು ಗುಟುಕು ನೀರು ಕುಡ್ಕೊಂಡಿರ್ಲಿ, ಚೆನ್ನಾಗಿದೆ! ಸೊಸೆ ಆದವಳು ಯಾರಿಗೆ ಏನು ಮಾಡ್ಬೇಕೂಂತ ತಿಳ್ಕೊಂಡು ಮಾಡಿಸ್ಬೇಕೂ— ಆಲೂಗಡ್ಡೆ ತಿಂದರೆ ಅವನ ಮೈ ಏನಾಗ್ಬೇಕೂ!"

ಆ ಮಾತು ನಿರ್ಮಲಳ ಕಿವಿಗೆ ಬಿತ್ತು. ಅವಳ ರಕ್ತ ಬಿಸಿಯಾಯಿತು. ತಕ್ಷಣ ಪ್ರತಿ ಮಾತನಾಡಬಾರದೆಂದು ತಡೆದಳು. ಎಲ್ಲರೂ ಊಟ ಮಾಡಿ ಹೋದ ಮೇಲೆ ಸ್ನಾನ ಮಾಡಿ, ಪೂಜೆ ಮುಗಿಸಿ ಊಟಕ್ಕೆ ಬಂದಳು. ಅವಳು ಊಟ ಮಾಡುತ್ತಿದ್ದಾಗ ಪದ್ದಮ್ಮನ ಅಸಮಾಧಾನ ಇನ್ನೂ ಹೋಗಿರಲಿಲ್ಲ. ಮುಖ ಧುಮುಗುಟ್ಟುತ್ತಲೇ ಇದ್ದಿತು. ಊಟ ಮುಗಿಸಿ ಕೈತೊಳೆದು ರೂಮಿಗೆ ಹೋದ ಶಾಸ್ತ್ರ ಮಾಡಿ ಹೊರಗೆ ಬಂದಾಗ ಅಡಿಗೆ ಮನೆಯ ಬಾಗಿಲು ಓರೆ ಯಾಗಿತ್ತು. ಪದ್ದಮ್ಮ ಊಟ ಮಾಡುತ್ತಿರುವರೆಂದು ಗೊತ್ತಾಯಿತು. ಮೆಲ್ಲಗೆ ಕಳ್ಳ ಹೆಜ್ಜೆಯಿಡುತ್ತಾ ಮುಂದೆ ಮಾಡಿದ ಬಾಗಿಲ ಸಂದಿನಿಂದ ಬಗ್ಗಿ ನೋಡಿದಳು. ಎಲೆಯ ತುಂಬಾ ಆಲೂಗಡ್ಡೆ ಈರುಳ್ಳಿಯ ಹೋಳುಗಳು. ಅವಳ ಮುಂದೆ ಹುಣಿಸೇ ಗೊಜ್ಜು ಮಾಡಿಕೊಂಡಿದ್ದ ಶಾಸ್ತ್ರ ಮಾಡಿದರು.

ನಿರ್ಮಲ ಅಡಿಗೆ ಮನೆ ಬಾಗಿಲು ತೆರೆದು ಒಳಗೆ ಬಂದಾಗ ಪದ್ದಮ್ಮ ಬೆಚ್ಚಿದರು. ತಲೆಯೆತ್ತಿ ನೋಡಿದರೆ ನಿರ್ಮಲ ! ನಿರ್ಮಲ ನಕ್ಕುಬಿಟ್ಟಳು.

"ಯಾಕ್ರೀ ಹೆದರ್ತೀರಿ ತಿನ್ನಿ, ಪರವಾಗಿಲ್ಲ; ಯಾರಿಗೂ ಹೇಳೋಲ್ಲ" ಎಂದಾಗ ಪದ್ದಮ್ಮನ ಮುಖ ಕಪ್ಪಿಟ್ಟಿತು. ಆದರೂ ಮಾತಿನಲ್ಲಿ ತಮ್ಮ ನಿಲುವನ್ನು ಬಿಡಲಿಲ್ಲ.

"ಈ ಹಾಳು ಹುಣಿಸೇಗೊಜ್ಜ್ನಲ್ಲಿ ಜಿರಳೇ ಬಿದ್ಬಿಡ್ತು....ಇಷ್ಟೊತ್ನಲ್ಲಿ ಏನು ತಿರ್ಗಾ ಮಾಡ್ಕೊಳ್ಳಂತ ಇದ್ನೇ ತಿಂತಾ ಇದ್ದೀನಿ. ದೇವರ್ಗೆ ತಪ್ಪು ಕಾಣಿಕೆ ಎತ್ತಿಟ್ಟಿದ್ದೀನಿ—ನಾಳೆ ದೇವಸ್ಥಾನಕ್ಕೆ ಹೋಗಿ ಪಂಚಗವ್ಯ ಕುಡಿದು ಬಿಡ್ತೀನಿ, ಅಷ್ಟೆ—"

ನಿರ್ಮಲ ಅವರಿಗೆ ಉತ್ತರಿಸದೇ ಎಲ್ಲಾ ಸಾಮಾನುಗಳನ್ನು ಪರೀಕ್ಷಿಸಿ ಅಂದಾಜಿನ ಮೇಲೆ ಇಷ್ಟಿಷ್ಟು ಬೇಕೆಂದು ಬರೆದಳು. ಹನ್ನೆರಡು ಗಂಟೆಯ ಹೊತ್ತಿಗೆ ಹಾಲಿನವನು ಬಂದನು. ಅವನ ಹಾಲಿನ ಲೆಕ್ಕ ನೋಡಿದಾಗ ಅಚ್ಚರಿಯಾಯಿತು. ಒಂದು ದಿನಕ್ಕೆ ಐದು ಲೀಟರ್ ಹಾಲು ! ಏಕೆ ? ಹಾಲು ಕುಡಿಯುತ್ತಿದ್ದುದು ಅನಂತನೊಬ್ಬನೇ. ಬೆಳಿಗ್ಗೆ ಎಲ್ಲರೂ ಒಂದು ಲೋಟ ಕಾಫಿ ಕುಡಿದರೆ ಮುಗಿಯಿತು. ಇನ್ನು ಸಂಜೆಯೇ ಕಾಫಿ. ಊಟಕ್ಕೆ ಹಾಕುತ್ತಿದ್ದ ಮೊಸರೂ ಅಷ್ಟೇ—ಅರ್ಧ ನೀರು ಬೆರೆಸುತ್ತಿದ್ದರು. ಹಾಗಾಗಿಯೂ ಐದು ಲೀಟರ್ ಹಾಲೇಕೆ ? ಅವನಿಗೆ ಲೆಕ್ಕ ಹಾಕಿ ದುಡ್ಡು ಕೊಡುತ್ತಾ ಹೇಳಿದಳು. "ನಾಳೆಯಿಂದ ಮೂರು ಲೀಟರ್ ಹಾಲು ಸಾಕಪ್ಪ"

"ಅಷ್ಟು ವರ್ಷದಿಂದ ಐದು ಲೀಟರ್ ತೊಗೊಂತಾ ಅವ್ರೆ..." ಹಾಲಿನವನು ಮೂಗೆಳೆದಾಗ, ನಿರ್ಮಲ ಕೊಂಚ ಗಡುಸಾಗಿಯೇ ಹೇಳಿದಳು :

"ನಮಗೆ ಎಷ್ಟು ಬೇಕೋ ಅಷ್ಟು ತೊಗೋತೀವಿ. ಕೊಡಕ್ಕಿಷ್ಟ ಇದ್ರೆ ಕೊಡು, ಇಲ್ದಿದ್ರೆ ಬೇಡಾ !"

'ಅಂಗೇ ಮಾಡಿ, ನೀವೇಳ್ದಂಗೆ ನಾವು ಕೊಡೋಣ....ನಾಳೀಕ್ಕಿಂದ ಮೂರು ಲೀಟರೇ ಆಕ್ತೀನಿ" ಹೆಚ್ಚು ಮಾತು ಬೆಳಸದೇ ಹೊರಟುಹೋದನು.

ನಿರ್ಮಲ ಪದ್ದಮ್ಮನ ಹತ್ತಿರ ಬಂದಳು. "ಯಾಕೆ ಪದ್ದಮ್ಮ ? ಮನೆಗೆ ಐದು ಲೀಟರ್ ಹಾಲು-ಹೋಟಲಿಗೆ ತೊಗೊಳ್ಳೊ ಹಾಗೆ ತೊಗೋಬೇಕಾ ?"

"ಹಂಗಂದ್ರೇ ಹೇಗಮ್ಮ ? ಮನೆಗೆ ಬರೋರೂ ಹೋಗೋರು ಇರ್ತಾರೆ-

ಬೇಕಾದಾಗ ಹಾಲು ಎಲ್ಲಿ ಸಿಕುತ್ತೆ ? ಅದಕ್ಕೆ ಅಷ್ಟೇ ತೊಗೋತಾ ಇದ್ದೆ" ಅವರ ಕಳ್ಳತನ ಅರ್ಥವಾಗಿದ್ದ ನಿರ್ಮಲ ಸುಮ್ಮನಾದಳು.

ಮಧ್ಯಾಹ್ನ ನಿರ್ಮಲಳಿಗೆ ಜೊಂಪು ಹತ್ತಿದಾಗ ಪದ್ದಮ್ಮ ಮೆಲ್ಲನೆ ಹಿತ್ತಲ ಬಾಗಿಲು ತೆರೆದು ಹೊರಹೋದರು. ಗಾಳಿಗೆ ಧಡಾರೆಂದು ಬಾಗಿಲು ಹಾಕಿಕೊಂಡಾಗ ನಿರ್ಮಲಳಿಗೆ ಎಚ್ಚರವಾಯಿತು. ಯಾರಿರಬಹುದೆಂದು ಕಣ್ಣು ಉಜ್ಜುತ್ತಾ ಬಂದಾಗ ಹಿತ್ತಲ ಬಾಗಿಲು ತೆರೆದಿದ್ದುದು ತಿಳಿಯಿತು. ಹಿತ್ತಲ ಬಾಗಿಲ ಹತ್ತಿರ ಬಂದಾಗ ಪದ್ದಮ್ಮ ಪಕ್ಕದ ಮನೆ ಲಲಿತಮ್ಮನೊಡನೆ ಮಾತನಾಡುತ್ತಾ ಇದ್ದರು.

"ಆಯ್ತೇ ಕೆಲ್ಸ-ಇವೊತ್ತು ನಿಧಾನ ಮಾಡಿಬಿಟ್ರೇ ! ಪೋಸ್ಟ್ ಆಫೀಸು ಬಾಗಿಲು ಮುಚ್ಚಿಬಿಡುತ್ತೆ...." ಲಲಿತಮ್ಮನ ದನಿ

"ಏನ್ಮಾಡೋದ್ದೇಳಿ ? ಅವ್ಳು ಮಳ್ಳಿ ಬಂದು ಸೇರ್ಕ್ಕೊಂಡಿದ್ದಾಳೆ-ಎಲ್ಲಕ್ಕೂ ತಡೆ ...ಹಾಕ್ತಾಳೆ-ನಿದ್ದೆ ಮಾಡ್ತಾ ಇದ್ಲು...ಮೆಲ್ಲಗ್ಬಂದೆ....ತೊಗೊಳ್ಳಿ ಪ್ರತಿ ತಿಂಗಳೂ ಕಳುಹಿಸ್ತೋ ಹಾಗೆ ನಿಮ್ಮ ಹೆಸರಿನಲ್ಲೇ ಕಳುಹಿಸಿಬಿಡಿ....ಈ ತಿಂಗ್ಳೇನೊ ಕಳಿಸ್ಬೋದೂ, ಮುಂದಿನ ತಿಂಗ್ಳಿಂದ ಇಷ್ಟೊಂದು ಆಗೋಲ್ಲಾರೀ...ದುಡ್ಡು ಕಾಸಿನ ಚೀಲಾನ್ನೆಲ್ಲಾ ಬಿಗಿ ಹಿಡಿದ್ಬಿಟ್ಟಿದ್ದಾಳೆ-ಅವಳ್ಮುಖ ನೋಡಿ ಒಪ್ಪಿದ್ದಾರೆ-ನಾನು ಮಾಡೋ ಕೆಲ್ಸ ಅವ್ಳು ಮಾಡ್ತಾಳೆ ಅಷ್ಟೇ-ಮಿಕ್ಕದ್ದನ್ನು ತವರ್ಮನೆಗೆ ಕಳಹಿಸಿಕೊಡ್ತಾಳೆ ಅಷ್ಟೆ !....ಇವೊತ್ತು ನನ್ನೈಲಿ ಈರುಳ್ಳಿ ಮುಟ್ಸಿ ನನ್ನ ಮಡಿ ಹಾಳು ಮಾಡಿಬಿಟ್ಲು. ಪಾಪ ! ಅವಂತ ಒಂದಿಷ್ಟು ಕೋಸಂಬರಿ ತಿಂದು ಎದ್ದು ಹೋದ."

ನಿರ್ಮಲ ಬೇಕಾಗಿ ಕೆಮ್ಮಿದಾಗ ಪದ್ದಮ್ಮ ತಿರುಗಿ ನೋಡಿದರು. ಲಲಿತಮ್ಮ ಕಾಪೌಂಡಿನ ಹಿಂದೆ ಜರುಗಿದರು. "ಹೊತ್ತಾಯ್ತು ಮ್ಮಾ ಕಾಫಿಗಿಡ್ಬೇಕೂ....!"

"ನಾನೂ ಅಷ್ಟೇರಿ....ನಿನ್ನೇ ಗಂಟಲು ನೋವ್ಪೂಂದ್ರಲ್ಲಾ ಕೇಳೋಣಾಂತ ಕರ್ದೆ ಅಷ್ಟೆ !" ಪದ್ದಮ್ಮ ಮನೆಯತ್ತ ಬಂದರು.

ನಿರ್ಮಲ ಆ ಮಾತು ತನಗೆ ಕೇಳಿಸಲಿಲ್ಲವೆಂಬಂತೆ ನಟಿಸಿ ಒಣಗಿ ಹಾಕಿದ್ದ ಬಟ್ಟೆಗಳನ್ನು ತೆಗೆದುಕೊಂಡಳು. ಅವಳ ಬಗೆಗೆ ಒಳ್ಳೆಯವರಂತೆ ನಟಿಸುತ್ತಾ ಪದ್ದಮ್ಮ ಕೇಳಿದರು.

"ಏನು ತಿಂಡಿ ಮಾಡಲಿ ?"

"ನಿಮಗೇನು ತೋರುತ್ತೋ ಮಾಡಿ !" ನಿರ್ಮಲ ಹುಬ್ಬುಗಂಟಿಕ್ಕಿದಾಗ ಪದ್ದಮ್ಮ ಬೆಣ್ಣೆಯಲ್ಲಿ ಕೂದಲು ತೆಗೆದಂತೆ ಹೇಳಿದರು.

"ಹಾಗಂದ್ರೆ ಹೇಗೆ ? ನೀವು ಮನೆ ಯಜಮಾನಿ ! ನೀವೇ ಹೇಳಿ."

"ಚಪಾತಿ ಮಾಡಿ ಒಂದಿಷ್ಟು ಕೊಬ್ಬರಿ ಚಟ್ನಿ ಮಾಡಿ ! ಅನಂತಣ್ಣನೂ ತಿಂತಾರೆ."

"ಸರಿ, ಹಾಗೇ ಮಾಡ್ತೀನಿ."

"ಇನ್ಮೇಲೆ ಊಟದ ಜೊತೆಗೆ ನಾಲ್ಕು ಚಪಾತಿ ಅವರಿಗೆ ಮಾಡಿ."

"ಹೂಂ, ಮಾಡೂಂದ್ರೆ ಮಾಡೊಕ್ಕೇನು ! ನಾನಿರೋದೇ ಅದಕ್ಕೇ !"

ಅವರಿಗೆ ಇದ್ದಕಿದ್ದಹಾಗೆ ಬಂದ ಒಳ್ಳೆಯತನ ಕಂಡು ನಿರ್ಮಲಳಿಗೆ ಆಶ್ಚರಿಯಾದರೂ ಅವರ ಮುಂದೆ ತೋರ್ಪಡಿಸಲಿಲ್ಲ. ತನ್ನ ಬಗ್ಗೆ ಲಲಿತಮ್ಮನ ಮುಂದೆ ಹೇಳಿದ್ದು ತನಗೆ ಕೇಳಿಸಲಿಲ್ಲವೇ? ತನ್ನ ಗಂಡ ಬಂದ ಮೇಲೆ ಹೇಳ ಬೇಕು, ಎಂದಾದರೂ ಈಕೆ ತನ್ನ ಬಾಳಿನಲ್ಲಿ ಮುಳ್ಳೇ !

ಅಮರೇಶ ಕಾಲೇಜಿನಿಂದ ಬಂದಾಗ ಅವನಿಗೆ ಹೇಳಿದಾಗ ಅಮರೇಶ ಕಿಡಿ ಕಿಡಿಯಾದನು. "ಅವರ್ನ ಇವೊತ್ತೇ ಒದ್ದು ಓಡಿಸ್ದೇ ಇದ್ರೆ ನೋಡಿ !"

"ಬೇಡಾ ಅಮರೇಶ, ಸುಮ್ಮನಿರು. ನಿಮ್ಮ ದೊಡ್ಡಣ್ಣಂಗೆ ಗೊತ್ತಾಗ್ಲಿ-ಇಲ್ದಿದ್ರೆ ನಾನೇ ಬೇಕು ಬೇಕೂಂತ ಓಡಿಸ್ದೆ ಅನ್ಕೋತಾರೆ ! ನನ್ನ ಕೆಟ್ಟೋಳು ಮಾಡ್ಬಿಡ್ತಿ ಅಷ್ಟೆ...."

ಅಮರೇಶ ಆ ಮಾತಿನಿಂದ ಸುಮ್ಮನಾದನು. ಆದರೆ ಪದ್ದಮ್ಮನನ್ನು ಛೇಡಿಸದೇ ಬಿಡಲಿಲ್ಲ. ತಿಂಡಿ ತಿನ್ನುತ್ತಾ ಕೀಟಲೆ ಮಾಡಿದನು.

"ಏನು ಪದ್ದಮ್ನೋರೆ...ಮಗಳಿಗೆ ದುಡ್ಡು ಕಳಿಸಿದ್ರಾ ? ಅವರು ಕಟ್ಸರೋ ಹೋಟೆಲುಗಳು ಹೇಗೆ ನಡೀತಾ ಇದ್ಯಂತೆ ? ಬೆಳಿಗ್ಯೆ ಆಲೂಗಡ್ಡೆ ಈರುಳ್ಳಿ ಹುಳಿ ಚೆನ್ನಾಗಿತ್ತಾ ? ನಿಮ್ಮ ಫ್ರೆಂಡ್ ಲಲಿತಮ್ಮನ್ನ ಹುಡ್ಕೊಂಡು ಪೋಲೀಸ್ನೋರು ಬಂದಿದ್ರಂತೆ, ಲೇವಾದೇವಿ ಮಾಡ್ತಾ ಇದ್ದಾರೇಂತಾ....ಕಳ್ಳ ಸಹಿ ಹಾಕ್ತಾರೇಂತ !"

ನಿರ್ಮಲ ಬರುತ್ತಿದ್ದ ನಗುವನ್ನು ತಡೆದುಕೊಳ್ಳುತ್ತಾ ಅಮರೇಶನನ್ನು ಸುಮ್ಮನಿರುವಂತೆ ಸಂಜ್ಞೆ ಮಾಡಿದಳು. ಅಡಿಗೆ ಮನೆಯಲ್ಲಿ ಪದ್ದಮ್ಮ ಗೊಣಗುತ್ತಿದ್ದರು. "ಹುಡುಗರ್ನ ಕೊಬ್ಬಿಸಿದ್ರೆ ಹಿಂಗೇ !"

ಬರೆದ ಸಾಮಾನಿನ ಪಟ್ಟಿಯನ್ನು ಅಮರೇಶನ ಮುಂದಿಡುತ್ತಾ ಕೇಳಿದಳು. "ಇದನ್ನೆಲ್ಲಾ ಯಾರು ತರ್‍ತಾರೆ ?"

"ನಾನು ತರ್‍ತೀನಿ....ಕೊಡಿ ಅತ್ತಿಗೆ. ಅದರ ಯೋಚನೆ ನೀವು ಬಿಡಿ. ಪ್ರತಿ ಸಲ ಪದ್ದಮ್ಮ ಶಿವಮ್ಮನ ಕರ್‍ಕೊಂಡ್ಹೋಗಿ ತರೋರೂ-ಇಬ್ರೂ ಅಂಗ್ಡಿ ತೋರ್‍ಸಿದ್ರೆ ಹಸ್ತ ನುಂಗೋರು."

"ನಮ್ಮಂದೆ ಅಂಗ್ಡೀಲಿ ಅಕೌಂಟ್ ಇಟ್ಟಿದ್ದರು—ತಿಂಗಳು ತಿಂಗಳಿಗೆ ಸಾಮಾನು ಬರೆದು ಕೊಟ್ಟರೆ ಅವರೇ ಕಳುಹಿಸಿಬಿಡೋರು. ದುಡ್ಡು ಕೊಟ್ಟಿಡ್ತಾ ಇದ್ವಿ ! ನೀವು ಯಾಕೆ ಹಾಗೆ ಮಾಡ್ಬಾರ್‍ದು ?"

"ಒಳ್ಳೆ ಐಡಿಯಾ ಅತ್ತಿಗೆ-ಅಶೋಕನಿಂದ ಅಣ್ಣಂಗೆ ಹೇಳ್ಸಿ." ಅಮರೇಶ ತಿಂಡಿ ತಿಂದು ಸಾಮಾನಿನ ಪಟ್ಟಿ ಹಿಡಿದು ಹೊರಟನು.

ಅಶೋಕ ಆಫೀಸಿನಿಂದ ಬಂದಾಗ ಅಂದು ನಡೆದುದನ್ನೆಲ್ಲಾ ಹೇಳಿದಾಗ ಅವನು ಮೊದಲು ಕೋಪ ಮಾಡಿಕೊಂಡರೂ ಅನಂತರ ನಕ್ಕುಬಿಟ್ಟನು. ಇನ್ನು ಹುಷಾರಾಗ್ತಾರೆ ಬಿಡು-ನಿನಗೆಲ್ಲಾ ಗೊತ್ತಿದೆಯೆಂದು ತಿಳಿದರೆ ಅವ ರಾಟ ನಡೆಯುವುದಿಲ್ಲ. ಒಳ್ಳೇ ಮಾತ್ನಲ್ಲೇ ದಾರಿಗೆ ತೊಗೊಂಡ್ಬಾ ಇಲ್ದಿದ್ರೆ ನಿನ್ಮೇಲೇ ಅಡ್ಗೇ ಕೆಲ್ಸಾ ಎಲ್ಲಾ ಬಿದ್ಬಿಡುತ್ತೆ."

ಮೂವರು ಅಣ್ಣತಮ್ಮಂದಿರು ಪದ್ದಮ್ಮನ ವಿಷಯ ಹೇಳಿಕೊಳ್ಳುತ್ತಾ ತಿಂಡಿ ತಿನ್ನುತ್ತಾ ಬಿದ್ದು ಬಿದ್ದು ನಕ್ಕರು. ಅರವಿಂದನಿಗೆ ನಗು ಬಂದು ನೆತ್ತಿಗೇರಿತು.

"ಪದ್ದಮ್ಮನ ಮಗಳು ನನ್ನ ಜ್ಞಾಪಿಸಿಕೊಂಡಿರಬೇಕೂ !" ನಿರ್ಮಲಳಿಗೂ ನಕ್ಕು ನಕ್ಕು ಸಾಕಾಯಿತು. ಅನಂತನಿಗೆ ಕೊಂಚ ತಲೆ ನೋವಿದ್ದ ಕಾರಣ ರೂಮಿಗೆ ತಿಂಡಿ ತೆಗೆದುಕೊಂಡು ಹೋಗಿ ಅಜಯ್ ಕೊಟ್ಟು ಬಂದಿದ್ದನು.

"ಅಣ್ಣಂಗೆ ಹೇಳ್ಬೇಕೂ ಅಶೋಕ್....ಅನಂತ ಪದ್ದಮ್ಮನಷ್ಟು ನಿಸ್ವಾರ್ಥಿ ಯಾರೂ ಇಲ್ಲಾಂತ ತಿಳ್ಕೊಂಡಿದ್ದಾನೆ—" ಅರವಿಂದ ಹೇಳಿದ "ಅನಂತನಿಗೆ ಅವರನ್ನ ಕಂಡ್ರೆ ಒಂದು ತರಹಾ ಹೀರೋವರ್‌ಶಿಪ್...."

"ಬೇಡಾ, ಅವನಿಗೇನೋ ಮೈ ಸರಿಯಿರುವಂತೆ ಕಾಣಲಿಲ್ಲ. ಸಮಯ ನೋಡಿ ಹೇಳೋಣ" ಅಶೋಕ ತಡೆದನು.

ರಾತ್ರಿಯೂಟಕ್ಕೂ ಅನಂತ ಬಾರದಿದ್ದಾಗ ನಿರ್ಮಲ ಕಳವಳಗೊಂಡಳು. ಅಶೋಕನ ಹತ್ತಿರ ಬಂದಳು.

"ಏನೂಂದ್ರೆ, ಸಂಜೆ ತಿಂಡಿಗೂ ರೂಮಿನಿಂದ ಹೊರಬರಲಿಲ್ಲ. ಊಟಾನೂ ಬೇಡವಂತೆ. ಏನೂಂತ ವಿಚಾರಿಸಬಾರದಾ ? ಡಾಕ್ಟರನ್ನು ಕರೆಸಿ ತೋರಿ ಸ್ಬಾರ್ದಾ ?"

"ನೀನು ಸುಮ್ನಿರು ನಿಮ್ಮ. ಎಲ್ಲಾ ತಲೆಗೆ ಹಚ್ಕೊಂತೀ .. ಎಷ್ಟೋ ಸಲ ಹೀಗೇ ಮಲಗ್ತಾನೆ. ಅವನೇನು ಎಳೀ ಮಗೂನಾ ? ತಾನೇ ಡಾಕ್ಟರಿಗೆ ತೋರಿಸ್ಕೊಂಡು ಬಂದಿರ್ತಾನೆ. ಅದೂ ಅಲ್ದೆ ರೂಮಿನ ಬಾಗಿಲು ಹಾಕ್ಕೊಂಡು ಮಲ್ಗಿರ್ತಾನೆ. ಎಬ್ಸಿದ್ರೆ ಕೋಪ ಬರುತ್ತೆ."

ಅಮರೇಶ ಬಂದಾಗ ಅವನ ಮುಂದೆ ಅದೇ ಮಾತು ಹೇಳಿದಾಗ ಅಮರೇಶ ಎರಡೂ ಕೈಎತ್ತಿ ಜೋಡಿಸಿ ಕೈ ಮುಗಿದನು. "ಸಧ್ಯ ! ನಾನು ಹೋಗಿ ಅವನ ರೂಮಿನ ಬಾಗಿಲು ತಟ್ಟಿದರೆ ಕಂಬ ಒಡೆದು ಬಂದ ನರಸಿಂಹನ ಹಾಗೆ ಬಂದ್ಬಿಡ್ತಾನೆ."

ಅರವಿಂದನೊಬ್ಬನೇ ಅವಳಿಗೆ ಸಮಾಧಾನ ಹೇಳಿದನು. "ಅವ್ನು ಮಲ್ಗಿರ್ಲಿ ...ನಾನು ಮಲಗೋಕೆ ಮುಂಚೆ ನಾನೇ ವಿಚಾರಿಸ್ಕೊಡ್ತಂದು ನಿಮಗೆ ತಿಳಿಸ್ತೀನಿ, ನೀವು ಸುಮ್ಮನೆ ವರಿ ಮಾಡ್ಕೋಬೇಡಿ."

ಎಲ್ಲರೂ ಊಟ ಮುಗಿಸಿ ಮಲಗಲು ಹೊರಟಾಗಲೂ ನಿರ್ಮಲ ತವಕ ದಿಂದ ಕಾದಿರುವುದನ್ನು ನೋಡಿ ಅರವಿಂದ ಅನಂತನ ರೂಮಿನ ಬಾಗಿಲು ತಟ್ಟಿದನು. ಯಾರೂ ಮಾತನಾಡದಿದ್ದಾಗ ಬಾಗಿಲ ಬಳಿ ಕೂಗಿದನು.

"ಅಣ್ಣಾ, ಅತ್ತಿಗೆ ಬಂದಿದ್ದಾರೆ....ನಿನ್ನ ನೋಡಬೇಕಂತೆ."

ಅರವಿಂದ ಕಣ್ಸನ್ನೆಯಿಂದ ನಿರ್ಮಲಳನ್ನು ಕರೆದನು. ಬಾಗಿಲು ತೆರೆ ಯುವುದಕ್ಕೂ ನಿರ್ಮಲ ಬಾಗಿಲ ಬಳಿ ಬರುವುದಕ್ಕೂ ಸರಿಹೋಯಿತು. ಅನಂತನ ತಲೆ ಕೆದರಿತ್ತು-ಮುಖ ಬಾಡಿತ್ತು. ಕಣ್ಣು ಕೆಂಪಗಾಗಿತ್ತು. ನಿರ್ಮಲಳನ್ನು ನೋಡುತ್ತಲೇ ಕೇಳಿದನು. "ಏನು....ಏನ್ಬೇಕಾಗಿತ್ತು ?"

"ಏನಿಲ್ಲಾ, ಮೈಗೆ ಹೇಗಿದೆ ? ಏನಾದರೂ ಬೇಕಾ ? ಏನೂ ತಿಂದಿಲ್ಲ ವಲ್ಲಾ !" ನಿರ್ಮಲ ಕೇಳಿದಾಗ ಅನಂತ ಬಾಗಿಲು ಮುಂದೆ ಮಾಡಿದನು.

"ಏನೂ ಬೇಡಾ....ನಾನೆಲ್ಲಾ ನೋಡ್ಕೋತೀನಿ....ಎಲ್ರೂ ಮಲ್ಕೋ ಬಹುದು."

ನಿರ್ಮಲ ಅರವಿಂದನ ಮುಖ ನೋಡಿದಳು....ಅಶೋಕ ಕರೆದನು "ಬಾ ನಿಮ್ಮೂ—ಬೆಳಿಗ್ಗೆ ಹೊತ್ಗೆ ಸರಿಹೋಗ್ತಾನೆ...."

ಪದ್ಮಮ್ಮ ಅಡಿಗೆ ಮನೆಯಲ್ಲಿ ಅಮರೇಶ ತಂದಿದ ಸಾಮಾನುಗಳನ್ನು ಡಬ್ಬದಲ್ಲಿ ಹಾಕಿ ಮುಚ್ಚಿಡುತ್ತಿದ್ದರು. ಪ್ರತಿ ತಿಂಗಳು ತಾವು ತರುತ್ತಿದ್ದಂತೆ ಎಪ್ಪತ್ತೈದು ಕೆ. ಜಿ. ಅಕ್ಕಿ ತರಿಸದೆ 40 ಕೆ.ಜಿ. ಅಕ್ಕಿ, 20 ಕೆ. ಜಿ. ಗೋಧಿ ತರಿಸಿದ್ದು ಅವರಿಗೆ ಕೋಪ ಬಂದಿತ್ತು. ಚಪಾತಿ, ರೊಟ್ಟಿ ಅವರ ಹಲ್ಲಿಗೆ ಆಗುತ್ತಿರಲಿಲ್ಲ.

ಅನಂತನನ್ನು ಕಂಡರೆ ಪಂಚಪ್ರಾಣದಂತೆ ಹಾರಾಡುತ್ತಿದ್ದ ಪದ್ಮಮ್ಮ ಅವನ ಬಗ್ಗೆ ವಿಚಾರಿಸಿರಲೂ ಇಲ್ಲ.

ರಾತ್ರಿ ಮಗ್ಗಲು ಬದಲಿಸುತ್ತಿದ್ದ ಹೆಂಡತಿಯ ಚಡಪಡಿಕೆ ಕಂಡು ಅಶೋಕ ಮಿಡುಕಿದನು. "ಯಾಕೆ ನಿಮ್ಮಿ, ನಿದ್ದೇ ಬರ್ಲಿಲ್ವಾ ?"

"ಯಾಕೋ ಬರ್‍ತಾ ಇಲ್ರೀ...." ನಿರ್ಮಲ ಮತ್ತೆ ಮಗ್ಗಲು ತಿರುಗಿ ತಿರುಗಿ ಅಶೋಕನ ಎದೆಯಲ್ಲಿ ಮುಖ ಹುದುಗಿಸಿದಳು. "ನಿಮ್ಮಣ್ಣನನ್ನು ಯಾರಾದರೂ ಒಳ್ಳೆಯ ಡಾಕ್ಟರಿಗೆ ತೋರಿಸಬಾರದಾ ?"

"ಇನ್ನೂ ಅದನ್ನೆ ಯೋಚಿಸ್ತಾ ಇದ್ದೀಯಾ ? ಅದಕ್ಕೇ ನಿದ್ದೆ ಬಂದಿಲ್ಲ."

"ನೀನೇ ನೋಡು, ಅವನು ಆಗ್ಲೇ ಎದ್ದು ಓಡಾಡ್ತಾನೆ. ಇದೆಲ್ಲಾ ಮಾಮೂಲು...." ಹೆಂಡತಿಯನ್ನು ತಬ್ಬಿ "ಏನು ಪ್ರೀತಿಯೇ ನಿಂಗೆ ? ನಮ್ಮನ್ನೆಲ್ಲಾ ಕಂಡರೆ ! ನಂಗೆ ಮದ್ವೆಗೆ ಮುಂಚೆ ತುಂಬಾ ಹೆದರಿಕೆಯಾಗಿತ್ತು. ಜಗಳ ಆಡೋಳೊಬ್ಳು ಬಂದಿದ್ದರೆ ಏನ್ಮಾಡ್ತಾ ಇದ್ನೋ !" ನಿರ್ಮಲಳಿಗೆ ಆ ಹೊತ್ತಿನಲ್ಲಿ ವಿಶ್ವ ಹೇಳಿದ ಮಾತು ಜ್ಞಾಪಕ ಬಂತು.

"ನಮ್ಮಣ್ಣ ನನ್ನ 'ಪಾಂಚಾಲೀ' ಅಂತ ಹಾಸ್ಯ ಮಾಡಿದ್ದ....ನಾನು ದ್ರೌಪದಿಯಂತೆ ...ಮದ್ವೆ ಆಗಿದ್ದು ಅರ್ಜುನನ್ನಾದರೂ ಮಿಕ್ಕ ನಾಲ್ವರನ್ನೂ ನನ್ನವರೆಂದುಕೊಳ್ಳುವವಳೂ ಅಂತ ತಿಳ್ಕೋಬೇಕಂತ ರೇಗಿಸಿದ್ದ...." ಅಶೋಕ ನಕ್ಕನು.

"ನಿಮ್ಮಣ್ಣಂಗೆ ಒಳ್ಳೆ ಸೆನ್ಸ್ ಆಫ್ ಹ್ಯೂಮರ್ ಇದೆ...."

ಬೆಳಿಗ್ಗೆ ನಿರ್ಮಲ ಎದ್ದು ಬಂದಾಗ ಪದ್ದಮ್ಮ ಕಾಫಿ ಮಾಡುವುದರಲ್ಲಿ ನಿರತರಾಗಿದ್ದರು.

"ಅಕ್ಕಿ ಸಾಕಾ ನಿರ್ಮಲಮ್ಮ ?" ನಿರ್ಮಲಳನ್ನು ನೋಡುತ್ತಲೇ ಕೇಳಿದರು.

"ಸಾಕಾಗ್ಬೋದೂ; ಹತ್ತು ಸೇರು ಗೋಧಿ ಹಿಟ್ಟು ಮಾಡ್ಸಿ—ಇನ್ನತ್ತು ಸೇರು ಗೋಧಿ ರವೆ ಮಾಡ್ಸಿಡಿ...ಅನಂತಣ್ಣಂಗೆ ಒಂದಿಷ್ಟು ಗೋಧಿ ಅನ್ನ ಬೇಯಿಸಿಡಿ. ಹಾಗಾದ್ರೂ ಹೊಟ್ಟೆ ತುಂಬಾ ಊಟ ಮಾಡ್ಲಿ..."

ಎಲ್ಲರೂ ಎದ್ದು ಕಾಫಿ ಮುಗಿಸಿದರೂ ಅನಂತ ಎದ್ದಿರಲಿಲ್ಲ. "ಮಲ್ಗಿರ್ಲಿ ಬಿಡಿ ಅತ್ತಿಗೆ—ನಿದ್ದೆಗಿಂತ ಮದ್ದು ಇದ್ಯಾ ?" ಅರವಿಂದ ನಿರ್ಮಲಳ ಆತಂಕ ತುಂಬಿದ ಮುಖ ನೋಡಿ ಹೇಳಿದ.

ಅನಂತರ ಆಫೀಸಿನ ಗಲಾಟೆ. ಎಲ್ಲರೂ ಊಟ ಮುಗಿಸಿ ಹೊರಟಾಗಲೂ ಅನಂತನ ರೂಮಿನ ಬಾಗಿಲು ತೆರೆದಿರಲಿಲ್ಲ.

"ಏನೂಂದ್ರೇ ಎಬ್ಸಿ....ಕಾಫಿ ಗೀಫಿ ಕುಡೀಲಿ. ಆಮೇಲೆ ಮಲ್ಕ್ಕೊಳ್ಳಲಿ. ನೀವೆಲ್ಲಾ ಕೆಲ್ಸಕ್ಕೆ ಹೊರಟುಹೋದ್ಮೇಲೆ ಒಬ್ರೇ ಇರ್ತಾರೆ. ನಾನೇನು ಮಾಡ್ಲಿ ?" ಅಶೋಕ ಹೆಂಡತಿಯ ವರಾತದಂತೆ ಬಾಗಿಲು ತಟ್ಟಿದನು. ಹತ್ತು ನಿಮಿಷ ಒಬ್ಬರಾಗುತ್ತಲೂ ಒಬ್ಬರು ತಟ್ಟಿದ ಮೇಲೆ ಅನಂತ ಮೆಲ್ಲನೆದ್ದು ಬಾಗಿಲು ತೆರೆದನು.

"ಏನಣ್ಣಾ, ಕಾಫಿ ಕುಡೀತೀಯಾ ? ಬಿಸಿಬಿಸಿ ಹಾಲು ತಂದ್ಕೊಡ್ಲಾ ? ನೀನು ಬಾಗಿಲು ಹಾಕ್ಕೊಂಡು ಮಲಗಿಬಿಟ್ರೇ ಹೇಗೆ ?" ಅನಂತ ಬಾಗಿಲನ್ನು ತೆರೆದೇ ಮಂಚದ ಮೇಲೆ ಬೆಚ್ಚಗೆ ಹೊದ್ದು ಮತ್ತೆ ಮಲಗಿದ.

"ನಂಗೆ ನಿದ್ದೆ. ಆಮೇಲೆ ಏನಾದ್ರೂ ತೊಗೋತೀನಿ."

"ನೋಡೂ ಏನಾದ್ರೂ ಬೇಕಾದ್ರೇ ನಿರ್ಮಲ ಇರ್ತಾಳೆ. ಕೇಳಣ್ಣ—" ಅಶೋಕ ಹೇಳಿದನು. "ಅಮರೇಶ ಬರತ್ಲೂ ಡಾ|| ಸುಂದರೇಶ್‌ಗೆ ಹೇಳಿ ಕಳಿಸೋಣ."

ಅನಂತ ಅವನಿಗೆ ಉತ್ತರಿಸಲಿಲ್ಲ. ಆಗಲೇ ಮತ್ತೆ ನಿದ್ದೆಯ ಮಂಪರಿನಲ್ಲಿದ್ದನು.

ಎಲ್ಲರೂ ಹೊರಟುಹೋದ ಮೇಲೆ ದೈನಂದಿನ ಕಾರ್ಯ ಎಂದಿನಂತೆ

ನಡೆದಿತ್ತು. ನಿರ್ಮಲ ಊಟ ಮಾಡುವ ಹೊತ್ತಿಗೂ ಅನಂತ ಏಳದಿದ್ದಾಗ ಅವಳು ಬೆದರಿದಳು.

"ಏನ್ರೀ ಪದ್ದಮ್ಮ, ಇನ್ನೂ ಎದ್ದಿಲ್ವಲ್ಲ!"

"ಅಯ್ಯೋ, ಆ ಕಾಯಿಲೆ ಹಾಗೇನೇ....ಯಾವ್ದಕ್ಕೂ ಬಗ್ಗೋಲ್ಲ. ಅಂತಹವರ್ನ ದೇವರು ಬೇಗ ಕರ್ಕೊಂಡ್ಬಿಡ್ಬೇಕೂ. ನಾನು ನೋಡ್ತಾ ಇದ್ದೀನಿ. ಎಷ್ಟು ವರ್ಷಗಳಿಂದ ನರಳ್ತಾ ಇದ್ದಾನೆ!"

ಅನಂತನ ಸಾವು ಬಯಸುತ್ತಾರಲ್ಲಾ ಎಂದು ನಿರ್ಮಲಳಿಗೆ ಸಂಕಟವಾಯಿತು. "ಹೋಗಿ ನೋಡಿ, ಸ್ವಲ್ಪ ಎಬ್ಸಿ ಕೇಳಿ ಪದ್ದಮ್ಮಾ, ಹೊಟ್ಟೆಗೇನಾದ್ರೂ ತಗೊಳ್ಲಿ...." ಪದ್ದಮ್ಮ ಮೆಲ್ಲಗೆ ಅನಂತನ ರೂಮಿನ ಬಾಗಿಲ ತನಕ ಹೋಗಿ ಬಗ್ಗಿ ನೋಡಿದರು.

"ಎಳೆತ ಇದೆ. ಅದಕ್ಕೆ ಅವನೇ ಔಷಧಿ ತೊಗೊಂಡಿದ್ದಾನೆ, ಮದ್ವೇ ಮನೇ ಓಡಾಟ ಇತ್ತು. ಗಾಳಿ ಕಾಲ, ಜಾಸ್ತಿಯಾಗಿದೆ ಅಷ್ಟೇ."

ನಿರ್ಮಲಳೂ ಬಾಗಿಲಿನಿಂದ ಇಣುಕಿ ನೋಡಿದಳು. ಅನಂತ ಉಬ್ಬಸ ಪಡುತ್ತಿದ್ದನು. ಕಷ್ಟಪಡುವುದನ್ನು ಅವಳೆಂದೂ ಕಂಡಿರಲಿಲ್ಲ. ಅವಳಿಗೆ ಅದನ್ನು ನೋಡಲಾಗಲಿಲ್ಲ.

"ಪದ್ದಮ್ಮ, ಏನಾದ್ರೂ ಮಾಡಿ-ಸ್ವಲ್ಪ ಕಡಿಮೆ ಆಗ್ಲಿ" ನಿರ್ಮಲ ಗೋಗರೆದಳು.

"ಏನ್ಮಾಡೋಕಾಗುತ್ತೆ ? ಒಂದಿಷ್ಟು ಭತ್ತದ ಹೊಟ್ಟೋ, ಉಪ್ಪೋ ಬಿಸಿಮಾಡಿ ಶಾಖ ಕೊಡ್ಬೋದೂ—ಡಾಕ್ಟ್ರು ಏನಾದ್ರೂ ಔಷಧಿ ಕೊಟ್ರೇ ಸರಿ ಹೋಗುತ್ತೆ!" ಪದ್ದಮ್ಮ ಹೇಳಿದರು.

"ಯಾರು ಡಾಕ್ಟ್ರು ? ಎಲ್ಲಿದೆ ಅವರ ಶಾಪೂ ?" ನಿರ್ಮಲ ಕೇಳ್ತಿದಾಗ ಪದ್ದಮ್ಮ ಬಾಗಿಲಿಗೆ ಹಾಕಿದ ಪರದೆ ತಮಗೆಲ್ಲಿ ತಗುಲಿ ಮಡಿ ಹಾಳಾಗುವುದೋ ಎಂಬ ಭಯದಿಂದ ದೂರ ಸರಿದರು.

"ಡಾಕ್ಟರ ಮನೆ ಎಲ್ಲಿದ್ಯೋ ಗೊತ್ತಿಲ್ಲಾ...ಇವರುಗಳೇ ಕರ್ಕೊಂಡ್ಬರ್ತಾ ಇದ್ರು."

"ಹೋಗ್ಲಿ ಏನಾದ್ರೂ ಬೇಕಾ ಅಂತ ಕೇಳ್ರಿ...."

"ನಾನು ಮಡೀಲಿದ್ದೀನಿ. ಹೇಗೆ ಅವರ ಹಾಸ್ಗೆ ಹತ್ತಿರ ಹೋಗ್ಲಿ ? ತಾಳಿಇ,ಲ್ಲಿಂದಲೇ ಕೂಗ್ತೀನಿ....ಅನಂತಾ....ಅನಂತಾ...ಏನಾದ್ರೂ ಕೊಡ್ಲೇ?"

ಅನಂತ ಅವರಿಗೆ ಉತ್ತರಿಸುವ ಸ್ಥಿತಿಯಲ್ಲಿರಲಿಲ್ಲ. ನಿರ್ಮಲ ಅವನ ಮಂಚದ ಬಳಿ ಹೋಗಿ ಕೇಳಿದಳು. "ಏನಾದ್ರೂ ಬೇಕಾ ?" ಅನಂತನ ಕಣ್ಣು ಗಳು ಅರೆ ಮುಚ್ಚಿದ್ದವು. ಎದೆ ಏರಿಳಿಯುತ್ತಿತ್ತು. ಉಸಿರಾಟ ದುಸ್ತರವಾಗಿ ಸಂಕಟಪಡುತ್ತಿದ್ದನು.

ನಿರ್ಮಲಳಿಗೆ ದಿಕ್ಕೇ ತೋಚದಾಯಿತು. ಮಂಚದ ಪಕ್ಕದಲ್ಲಿದ್ದ ಸಣ್ಣ ಮೇಜಿನ ಮೇಲೆ ನಾಲ್ಕೈದು ಬಗೆಯ ಮಾತ್ರೆಗಳಿದ್ದವು. ಅವುಗಳಲ್ಲಿ ಯಾವುದು ಬೇಕೋ ! ಯಾವುದು ಬೇಡವೋ ಅವಳಿಗೆ ತಿಳಿಯದು. ಅವಳಿಗೆ ಅವನ ನರಳಾಟ ನೋಡಿ ಕಣ್ಣಲ್ಲಿ ನೀರು ಬರುವ ಹಾಗಾಯಿತು. ಅವಳಿಗೆ ನೋಡಲಾಗಲಿಲ್ಲ. ಬಾಗಿಲು ಮುಂದೆ ಮಾಡಿಕೊಂಡು ಮನೆಯ ಮುಂದೆ ಮೆಟ್ಟಿಲ ಮೇಲೆ ಕುಳಿತುಬಿಟ್ಟಳು. ಯಾರಾದರೂ ಮನೆಗೆ ಬರಬಾರದೇ ? ರಸ್ತೆಯಲ್ಲಿ ಬಂದು ಹೋಗುತ್ತಿದ್ದ ಸ್ಕೂಟರ್‌ಗಳನ್ನೆಲ್ಲಾ ಆತಂಕದಿಂದ ನೋಡುತ್ತಿದ್ದಳು.

ನೋಡುತ್ತಾ ನೋಡುತ್ತಾ ಕಣ್ಣುಗಳು ಉರಿಯತೊಡಗಿತು. ಸಣ್ಣಗೆ ತಲೆನೋವು ಪ್ರಾರಂಭವಾಯಿತು. ತಾನೆಂತಹ ಮೊದ್ದು ಹುಡುಗಿ ! ತನ್ನ ಗಂಡನ ಫೋನಿನ ನಂಬರನ್ನಾದರೂ ಕೇಳಿ ತಿಳಿದುಕೊಳ್ಳಬಾರದಿತ್ತೇ ? ಊರು ತನಗೆ ಹೊಸದು. ಎಲ್ಲಿಗೆ ಹೋಗಬೇಕು ತಿಳಿಯದು. ಗಲ್ಲಕ್ಕೆ ಕೈ ಕೊಟ್ಟು ಹಾಗೇ ಕುಳಿತಳು. ಉರಿಯುತ್ತಿದ್ದ ಕಣ್ಣುಗಳನ್ನು ಹಾಗೆಯೇ ಮುಚ್ಚಿದಳು.

'ಅನಂತನಿಗೇನಾದರೂ ಆದರೆ....?' ಮುಂದಕ್ಕೆ ಯೋಚಿಸಲು ಅವಳ ಮನಸ್ಸು ಒಡಂಬಡಲಿಲ್ಲ. ಮೋಟಾರ್ ಸೈಕಲ್ಲಿನ ಹಾರನ್ನಿನ ಶಬ್ದ ಕೇಳಿ ಬೆಚ್ಚಿ ಕಣ್ತೆರೆದಳು. ಬಂದವನು ಅರವಿಂದ.

ಅವಳ ಮುಖ ನೋಡಿ ಅರವಿಂದ ಅಚ್ಚರಿಗೊಂಡನು.

"ಯಾಕತ್ತಿಗೆ, ಹೊರ್ಗೆ ಕೂತಿದ್ರೀ ಹಾಗೆ....! ಏನಾಯ್ತು ? ಪದ್ದಮ್ಮ ಏನಾದ್ರೂ....?"

ಅವನನ್ನು ನೋಡುತ್ತಲೇ ಭಾರವಾಗಿದ್ದ ಹೃದಯ, ಆತಂಕದಿಂದ

ತುಂಬಿದ ಮನಸ್ಸು ಹಗುರವಾಯಿತು. ಉಕ್ಕಿ ಬಂದ ಸಾಂತ್ವನದ ಉದ್ವೇಗ ವನ್ನು ತಡೆಯುದಾದಳು. ಕಣ್ಣುಗಳು ತುಂಬಿ ಕೆನ್ನೆಯ ಮೇಲೆ ಹನಿಗಳು ರುಳಿದುವು. "ಸಧ್ಯ ಬಂದ್ಯಲ್ಲಾ ! ಅಣ್ಣನಿಗೆ ಜಾಸ್ತಿಯಾಗಿ ಹೇಗೆಹೇಗೋ ಮಾಡ್ತಾ ಇದ್ದಾರೆ...." ಅವನಿಗೆ ಮಾತಿಗೆ ಎಡೆ ಕೊಡದೆ ಹಿಂಗೈನಿಂದ ಕಣ್ಣೊರಸಿಕೊಂಡು ಅವನನ್ನು ಒಳಗೆ ಕರೆದೊಯ್ದಳು. ಅರವಿಂದ ಅಚ್ಚರಿ ಯಿಂದ ಅವಳ ಹಿಂದೆ ನಡೆದನು. ಅನಂತನ ರೂಮಿನ ಬಾಗಿಲು ತೆರೆದು ನಿರ್ಮಲ ಅವನಿಗೆ ತೋರಿದಾಗ ಅವನು ಅವಳ ಉದ್ವೇಗ, ಆತಂಕ ತುಂಬಿದ ಮುಖವನ್ನು ನೋಡಿದನು.

"ಇದಕ್ಕೆ ಇಷ್ಟೊಂದು ಹೆದರಿಬಿಟ್ರಾ ? ಎಬ್ಬಿಸಿ ಟೇಬಲ್ಲಿನ ಮೇಲಿದ್ದ ಟ್ಯಾಬ್ಲೆಟ್ ಕೊಟ್ಟಿದ್ರಾಗಿತ್ತು....ಇದು ಬಹಳ ಮೈಲ್ಡ್ ಅಟ್ಯಾಕ್....ಚಳಿ ಗಾಲದಲ್ಲಿ ಇನ್ನೂ ಜಾಸ್ತಿ ಬರುತ್ತೆ...." ಅರವಿಂದ ಅನಂತನನ್ನು ಮೆಲ್ಲಗೆ ಹಿಡಿದಲುಗಿಸಿ ಎಬ್ಬಿಸಿದನು. ಅನಂತ ಕಣ್ಣು ಬಿಟ್ಟು ಸುತ್ತಲೂ ನೋಡಿ ಎದ್ದು ಕೂಡಲು ಯತ್ನಿಸಿದಾಗ ಅರವಿಂದ ಅವನ ಬೆನ್ನಿಗೆ ದಿಂಬು ಕೊಟ್ಟು ಕೂಡಿಸಿದನು.

"ಅತ್ಗೇ, ಒಂದ್ಲೋಟ ನೀರು ತರ್ತೀರಾ ?"

ನಿರ್ಮಲ ಓಡಿ ಹೋಗಿ ಒಂದು ಲೋಟದಲ್ಲಿ ನೀರು ಮತ್ತೊಂದು ಲೋಟದಲ್ಲಿ ಹಾಲು ತಂದಳು.

"ಹೊಟ್ಟೆಗೆ ಏನೂ ತಗೊಂಡಿಲ್ಲ. ಹಾಲಾದ್ರೂ ಕುಡಿದ್ರೆ ವಾಸಿ...." ಅರವಿಂದ ಹಾಲಿನ ಲೋಟ ಅನಂತನ ಮುಂದೆ ಹಿಡಿದನು.

"ಅತ್ತಿಗೆ ಹಾಲು ತಂದಿದ್ದಾರೆ ಕುಡಿ....ಆಮೇಲೆ ಟ್ಯಾಬ್ಲೆಟ್ ನುಂಗುವಿ ಯಂತೆ... "

ಅನಂತ ಹೆಚ್ಚಿಗೆ ಹಠಮಾಡದೆ ಹಾಲು ಕುಡಿದನು. ಅರವಿಂದ ಕೊಟ್ಟ ಎರಡು ಮಾತ್ರೆಗಳನ್ನು ನುಂಗಿದನು. ಕುರ್ಚಿಯ ಮೇಲಿದ್ದ ಒಂದು ದಿಂಬನ್ನು ಹಾಕಿ ಎತ್ತರ ಮಾಡಿ ಅದರ ಮೇಲೆ ಅನಂತನ ತಲೆಯೊರಗಿಸಿ ಮಲಗಿಸಿ ಕತ್ತಿನ ವರೆಗೆ ಕಂಬಳಿ ಹೊದ್ದಿಸಿ ಮಲಗಿಸಿದನು. ಅನಂತ ಅರೆಗಣ್ಣು ತೆರೆದು ಸುತ್ತಲೂ ನೋಡಿ ಏನೋ ಹೇಳಲು ಯತ್ನಿಸಿದಾಗ ಅರವಿಂದ ತಲೆಯಾಡಿಸಿ ದನು.

"ನಿನ್ನ ಆಫೀಸಿಗೆ ಫೋನ್ ಮಾಡಿದ್ದೀನಿ....ಎರಡುಮೂರು ದಿನ ಬರೋಲ್ಲಾಂತ ಮಾತಾಡ್ಬೇಡಾ, ಮಲ್ಕೋ...." ಅನಂತ ದಿಂಬಿಗೊರಗಿ ಕಣ್ಮುಚ್ಚಿದನು. ನಿರ್ಮಲ ಎವೆಯಿಕ್ಕದೆ ನೋಡುತ್ತಿದ್ದಳು.

"ಮಲಗ್ತಾನೆ ಇನ್ನು ಬನ್ನಿ...ಯಾಕೆ ಅಷ್ಟೊಂದು ಹೆದರ್ಬಿಟ್ಟಿದ್ದೀರಿ !" ಅರವಿಂದ ನಿರ್ಮಲಳನ್ನು ರೂಮಿನಿಂದ ಹೊರಬರುವಂತೆ ಹೇಳಿದನು. "ನೋಡ್ತಾ ಇರಿ...ಹಾಯಾಗಿ ಮಲಗಿಬಿಡ್ತಾನೆ-ಸಾಯಂಕಾಲ ಡಾಕ್ಟರ್ ಬಂದು ನೋಡ್ತೀನೀ ಎಂದಿದ್ದಾರೆ-ಎರಡು ದಿನ ಸ್ವಲ್ಪ ಹಾಗೇ ಹೀಗೆ ಇರುತ್ತೇ-ಆಮೇಲೆ ಸರಿಹೋಗ್ತಾನೆ."

ನಿರ್ಮಲ ಹಾಲಿನಲ್ಲಿದ್ದ ಸೋಫದ ಮೇಲೆ ಕುಸಿದಳು. ಅವಳ ಮುಖದಲ್ಲಿ ಕೊಂಚ ಗೆಲುವು ಮೂಡಿತು.

"ಅರವಿಂದ, ನೀನು ಬರ್ದೇ ಇದ್ರೇ ನಂಗೇ ಹುಚ್ಚೇ ಹಿಡಿದ್ಬಿಡೋದೂ.... ದೇವರ ಹಾಗೆ ಬಂದ್ಬಿಟ್ಟೇ...."

"ನಾನು ಕ್ವೆಶ್ಚನ್ ಪೇಪರ್ ಸೆಟ್ ಮಾಡಿ ಟೇಬಲ್ ಮೇಲೆ ಮರೆತು ಇಟ್ಬಿಟ್ಟಿದ್ದೆ. ತಗೊಂಡು ಹೋಗೋಣಾಂತ ಬಂದೆ ಅಷ್ಟೆ....ಒಳ್ಳೆ ಅತ್ತಿಗೆ ನೀವು ! ನಿಮ್ಮುಖ ನೋಡಿ ಪದ್ದಮ್ಮಂಗೆ ನಿಮ್ಗೆ ಮಾರಾಮಾರಿಯಾಗ್ಬಿಟ್ಟಿದೆ ಅಂದ್ಕೊಂಡೆ....ಈಗ್ಲಾದ್ರೂ ಹೋಗಿ ಮಲ್ಕೊಳ್ಳಿ....ನಿಮ್ಗೆ ಸಮಾಧಾನ ಇಲ್ದೇ ಇದ್ರೆ ನಾನು ಹಾಫ್ ಡೇ ಲೀವ್ ಹಾಕಿ ಮನೇಲೇ ಇರ್ತೀನಿ...." ಅರವಿಂದ ಹೇಳಿದಾಗ ನಿರ್ಮಲ ಸಮಾಧಾನದ ನಿಟ್ಟುಸಿರು ಬಿಟ್ಟಳು.

"ನಂಗೆ ನೀವೆಲ್ಲಾ, ಮನೆ ವಿಷಯ, ಮನೆಯವರ ವಿಷಯ ಸರ್ಯಾಗಿ ತಿಳಿಸ್ದೇ ಇದ್ರೆ ಬಹಳ ಕಷ್ಟ....ಅವರಿಗೆ ಟ್ಯಾಬ್ಲೆಟ್ ಯಾವ್ದು ಕೊಡ್ಬೇಕೂಂತಾನೂ ಗೊತ್ತಿಲ್ಲ. ನೀವ್ಯಾರೂ ನಿಮ್ಮ ಫೋನಿನ ನಂಬರುಗಳನ್ನೂ ಕೊಟ್ಟಿಲ್ಲ-ನಾನು ಒಬ್ಬೇ ಮನೇಲಿ ಸೇರ್ಕೊಂಡು ಏನ್ಮಾಡ್ಲಿ ? ಏನಾದ್ರೂ ಹೆಚ್ಚು ಕಡಿಮೆ ಯಾದ್ರೇ...."

"ನಾಳೆ ಎಲ್ಲಾ ನಿಮ್ಮ ಟೇಬಲ್ ಮೇಲೆ ಬರ್ದಿಟ್ಟು ಹೋಗ್ತಿನಿ. ನಿಮ್ಮ ಮುಖ ನೋಡಿದ್ರೆ ನಾನು ಕಾಲೇಜಿಗೆ ಹೋಗ್ದೇ ಇರೋದೇ ವಾಸಿ-ನೀವು ಮಲ್ಕೊಳ್ಳಿ ಹೋಗಿ-ನಾನಿರ್ತೀನಿ...." ಬಲವಂತ ಮಾಡಿದಾಗ ನಿರ್ಮಲಳಿಗೆ

ನೋಯುತ್ತಿದ್ದ ತಲೆಯ ಜ್ಞಾಪಕ ಬಂತು. ಎದ್ದು ಹೊರಟಾಗ ಪದ್ದಮ್ಮ ಅಡಿಗೆ ಮನೆಯಿಂದ ಹೊರಬಂದರು.

"ಅನಂತಂಗೆ ವಾಸೀನಾ? ನಿಮ್ಮತ್ತಿಗೆಗೆ ಸ್ವಲ್ಪಾನೂ ಧೈರ್ಯ ಇಲ್ಲ. ತುಂಬಾ ಹೆದರ್ಬಿಟ್ಟಿದ್ರೂ."

ಅರವಿಂದ ಅವರಿಗೆ ಉತ್ತರ ಕೊಡುವ ಗೋಜಿಗೆ ಹೋಗಲಿಲ್ಲ–ತಾವೇ ಹೋಗಿ ಅನಂತನ ರೂಮಿನ ಬಾಗಿಲಲ್ಲಿ ಹಣಕಿ ನೋಡಿ ಬಂದರು.

"ಈಗ್ನೋಡು ಹಾಯಾಗಿ ಮಲ್ಗಿದ್ದಾನೆ–ನಿಮಗಾದ್ರೆ ಅಣ್ಣ....ಅವರಿಗೇನು ಗೊತ್ತು? ಅವರಿಗೆಲ್ಲಿಯದು?" ಪದ್ದಮ್ಮ ಹೇಳಿದಾಗ ನಿರ್ಮಲ ಆ ವೇಳೆಗೆ ರೂಮಿನೊಳಗೆ ಹೋಗಿ ಹಾಸಿಗೆಯ ಮೇಲುರುಳಿದ್ದಳು.

ಅರವಿಂದ ಕಣ್ಣು ಕಿರಿದು ಮಾಡಿ ಪದ್ದಮ್ಮನನ್ನು ದುರುದುರು ನೋಡಿದ- "ನಾಲಗೆ ಹುಷಾರು ...ಬಹಳ ಉದ್ದ ಬೆಳೆಸ್ಬೇಡಿ ಪದ್ದಮ್ಮ....ನಿಮಗೆಲ್ಲೋ ಈ ಮನೆ ಬಿಟ್ಟು ಹೋಗೋ ಕಾಲ ಬರ್‍ತಾ ಇದೇಂತ ಕಾಣ್ಸತ್ತೆ–! ಅತ್ತಿಗೆ ವಿಷಯದಲ್ಲಿ ಹಗುರವಾಗಿ ಮಾತನಾಡಿದರೆ ನಾನು ಸುಮ್ಮನಿರೋಲ್ಲ!" ಅರವಿಂದ ಚಾಟಿಯೇಟನಂತೆ ನುಡಿದಾಗ ಪದ್ದಮ್ಮ ತಲೆ ತಗ್ಗಿಸಿ ಅಡಿಗೆ ಮನೆ ಹೊಕ್ಕರು.

ಸಂಜೆ ಅಶೋಕ ಬಂದಾಗಲೂ ನಿರ್ಮಲ ಮಲಗಿದ್ದುದು ಕಂಡು ಹೆದರಿದನು. "ಯಾಕೆ, ಮೈ ಸರಿಯಾಗಿಲ್ಲವೇನು?"

ಅರವಿಂದ ನಡೆದ ಸಂಗತಿ ತಿಳಿಸಿದಾಗ ಅಶೋಕನ ಮನಸ್ಸು ಹೆಂಡತಿಯ ಹೆಂಗರುಳು ಕಂಡು ಹೂವಾಗಿ ಅರಳಿತು.

ನಿರ್ಮಲ ಎದ್ದಾಗ ಎಲ್ಲರೂ ಮನೆಗೆ ಬಂದಿದ್ದರು. ಅನಂತನ ಉಬ್ಬಸ ಬಹಳಮಟ್ಟಿಗೆ ಕಡಿಮೆಯಾಗಿತ್ತು. ಡಾಕ್ಟರೂ ಬಂದು ನೋಡಿ ಹೋಗಿದ್ದರು. ಅವಳು ಮುಖ ತೊಳೆದು ಕಾಫಿ ತಿಂಡಿ ಮುಗಿಸಿದಾಗ ಅಶೋಕ ಹೆಂಡತಿಯ ಬಳಿ ಬಂದು ಮೆಲ್ಲನುಸುರಿದನು.

"ತುಂಬಾ ಕತ್ತಲಾಗಿಹೋಯಿತು–ಎಲ್ಲೂ ಹೋಗೋದು ಬೇಡಾ.... ಎಲ್ರೂ ಮನೇಲೇ ಇರೋಣ–ಅನಂತಂಗೆ ಬೇರೆ ಮೈ ಸರಿಯಾಗಿಲ್ಲ"

ಹೊತ್ತಿಲ್ಲದ ಹೊತ್ತಿನ ನಿದ್ದೆಯಿಂದ ನಿರ್ಮಲಳಿಗೆ ಮೈ ಭಾರವಾಗಿತ್ತು, ಅವಳಿಗೂ ಎಲ್ಲಿಗೂ ಹೋಗಲು ಬೇಡವಾಗಿತ್ತು.

ಅರವಿಂದ ಕರೆದನು "ಬನ್ನಿ ಅತ್ತಿಗೆ–ಬ್ರಿಡ್ಜ್ ಆಡೋಣ....ಅಶೋಕ ಕ್ಲಾಸ್ ಪ್ಲೇಯರ್...."

ನಿರ್ಮಲ ಅಲ್ಲಿಯೇ ಕುಳಿತಳು. "ನಂಗೆ ಆಟ ಬರೋಲ್ಲ-ನೀವು ಆಡಿ, ನಾನು ನೋಡ್ತೀನಿ."

ಅಮರೇಶ ಒಪ್ಪಲಿಲ್ಲ. "ನೀವು ಆಡಿ ಅತ್ತಿಗೆ–ನಾನು ನಿಮ್ಮನ್ನ ಗೈಡ್ ಮಾಡ್ತೀನಿ....ಅಶೋಕ–ನೀವೂ ಪಾರ್ಟ್‌ನರ್ ಆಗಿ....ಅರವಿಂದ, ಅಜಯ್‌ಗೆ ಫೂರ್ತಿ ಗೇಟ್‌ಪಾಸ್ ಕೊಡ್ಸಿ."

"ಹೌದು ಬಾ, ನಿಮ್ಮೂ....ಆಟ ಹೇಳ್ಕೊಡ್ತೀವಿ..." ಅಶೋಕ ಬಲವಂತ ಮಾಡಿದನು.

ನಿರ್ಮಲ ಬಂದ ಆಕಳಿಕೆ ತಡೆದಳು. "ಬೇಡಾರೀ....ನಂಗ್ಯಾಕೋ ಮೂಡಿಲ್ಲ. ನೀವುಗಳೇ ಆಡಿ; ನಾನು ನೋಡ್ತೀನಿ."

ಅಶೋಕ ಅಜಯ್, ಅಮರೇಶ, ಅರವಿಂದರನ್ನು ಹಿಂದೆ ಹಾಕಿದಾಗ ನಿರ್ಮಲ ಆಕಳಿಸಿದಳು.

"ಸಾಕ್ರೀ ಆಟ. ಯಾಕೋ ನೋಡೋಕೂ ಬೇಜಾರು. ಹೋಗಿ ನಿಮ್ಮಣ್ಣಂಗೆ ಏನಾದ್ರೂ ಬೇಕಾ ಕೇಳಿ ಹೋಗಿ..."

ರಾತ್ರಿ ಎಲ್ಲರೂ ಮಲಗುವ ವೇಳೆಗೆ ಅನಂತನ ಉಬ್ಬಸ ಬಹಳ ಕಡಿಮೆಯಾಗಿತ್ತು.

ಮತ್ತೆರಡು ದಿನಗಳಲ್ಲಿ ಅನಂತನಿಗೆ ಎಷ್ಟೋ ವಾಸಿಯಾಗಿ ಮೊದಲಿನಂತೆ ತಿರುಗಾಡುತ್ತಿದ್ದರೂ ಆಫೀಸಿನ ಕೆಲಸಕ್ಕೆ ಹೋಗಲಿಲ್ಲ–ಅಶೋಕ ಬಲವಂತ ಮಾಡಿ ಒಂದು ವಾರ ರಜ ಹಾಕಿಸಿದನು.

"ನೀನು ಮಲಗಿದ್ದಾಗ ನಿಮ್ಮು ಬಹಳ ಒದ್ದಾಡಿಬಿಟ್ಟಳು" ಎಂದಾಗ ಅನಂತ ಅರ್ಥವಿಲ್ಲದ ನಗೆ ನಕ್ಕಿದ್ದನು.

## ೮

ನಿರ್ಮಲ ಕೈಹಿಡಿತ ಮಾಡಿದ್ದರಿಂದ ಪದ್ದಮ್ಮ ಒಳ ಒಳಗೇ ಕುದಿಯುತ್ತಿದ್ದರು. ಅಲ್ಲದೆ–ವಾರದಲ್ಲಿ ಒಂದೊಂದು ದಿನವೂ ಇಂತಹ ಅಡಿಗೆ ಮಾಡಬೇಕು, ಇಂತಹ ತಿಂಡಿ ಮಾಡಬೇಕು–ಅನಂತನಿಗೆ ಪ್ರತಿದಿನ ಗೋಧಿಯನ್ನ

ವನ್ನೋ ಚಪಾತಿಯನ್ನೋ ಮಾಡಲು ಹೇಳಿದ್ದಳು. ಹಾಲು ಮೊಸರಿನ ಸರಬರಾಜು ಹಿಡಿತದಲ್ಲಿದ್ದುದು ಅವರಿಗೆ ಕೋಪವೇ ಬಂದಿತ್ತು.

ಎಲ್ಲರಿಗೂ ಕಾಫಿ ಮಾಡುವಾಗ ನಿರ್ಮಲ ಎದುರಿಗೇ ಇರುತ್ತಿದ್ದುದೂ, ಒಮ್ಮೊಮ್ಮೆ ಅವಳೇ ಬೆರೆಸಿಕೊಡುತ್ತಿದ್ದುದೂ, ರಾತ್ರಿ ಮಲಗುವ ಮುನ್ನ ಅವಳೇ ಮೊಸರಿಗೆ ಹೆಪ್ಪು ಹಾಕುತ್ತಿದ್ದುದೂ ಪದ್ದಮ್ಮನ ಹಾಲಿನ ಮೇಲಿನ ಹಿಡಿತ ತಪ್ಪಿಹೋಗಿತ್ತು. ಒಮ್ಮೊಮ್ಮೆ ಅವರೇ ಬಾಯಿಬಿಟ್ಟು ಹೇಳುತ್ತಿದ್ದರು.

"ಸ್ವಲ್ಪ ಹಾಲಿದ್ರೆ ಇಟ್ಟಿದ್ರ್ಯುತ್ತು—ನಂಗೆ ಎರಡು ದಿನಗಳಿಂದ ಗಂಟಲು ಕೆರೆತ-ಮೊಸರು ತಿಂದ್ರೆ ಆಗೋಲ್ಲ !"

"ಕಾಫೀಗಿನ್ಸ್ವಲ್ಪ ಹಾಲು ಹಾಕಿದ್ರೆ ವಾಸಿ-ಅಷ್ಟು ಕಪ್ಪಗೆ ಕುಡಿದ್ರೆ ಬಹಳ ಉಷ್ಣ-ಮೈ ಒಣಗಿಹೋಗುತ್ತೆ."

"ರಾತ್ರಿ ತುಂಬಾ ಹೊತ್ತಾಯ್ತು-ನಾನಿನ್ನೂ ಊಟ ಮಾಡಿಲ್ಲ-ನಾನೇ ಹೆಪ್ಪು ಹಾಕ್ಬಿಡ್ತೀನಿ."

ಅವರ ನಾಟಕವನ್ನು ತಿಳಿದಿದ್ದ ನಿರ್ಮಲ ಕೊಂಚ ಬಿಗಿಯಾಗೇ ಇದ್ದಳು.

ಅವಳಿಂದ ಅದನ್ನು ತಿಳಿದ ಅಮರೇಶ ಪಕ್ಕೆ ಹಿಡಿದು ನಕ್ಕನು. "ಅತ್ತಿಗೆ, ಹೀಗೆ ಒಂದೈದು ದಿನ ಸತಾಯ್ಸಿ, ನಮ್ಮ ಪದ್ದಮ್ಮ ಇಪ್ಪತ್ತು ಕೆಜಿ ಇಳಿದು ಹೋಗ್ತಾರೆ. ಅವರ ಮೈಲಿರೋದೆಲ್ಲಾ ನಮ್ಮನೆ ಹಾಲು ಮೊಸರೇ !"

ನಿರ್ಮಲಳೂ ನಕ್ಕಳು. "ಅಮರೇಶ, ಅದೇನೋ ಸರಿ ! ಆದ್ರೆ ನಿಮ್ಮ ಅನಂತಣ್ಣಂಗೆ ಕೋಪ ಬರ್ಬ್ಬೋದೂ."

ಅಮರೇಶನ ಮುಖ ಇದ್ದಕ್ಕಿದ್ದಹಾಗೆ ಗಂಭೀರವಾಯಿತು.

"ನಮ್ಮ್ಯಾರ್ಮೇಲೂ ಅವನ್ಗೆ ಅಷ್ಟು ನಂಬಿಕೆ ಇಲ್ಲ...ಆ ಮುದ್ಕಮ್ಮ ಬಕಾಸುರಿನ್ನ ಕಂಡ್ರೆ ಅದೇನು ನಂಬಿಕೆ, ಭಕ್ತಿ, ವಿಶ್ವಾಸಾನೋ ! ಅವನ್ದೆಲ್ಲಾ ಲಾಪ್ ಸೈಡೆಡ್ ಲೈಕಿಂಗೇ ಅತ್ತಿಗೆ !"

ಒಮ್ಮೆ ಭಾನುವಾರ ಅಜಯನ ಸ್ನೇಹಿತರುಗಳು ಮನೆಗೆ ಬರುವುದಾಗಿ ಹೇಳಿದಾಗ ಅಜಯ್ ಪದ್ದಮ್ಮನ ಬಳಿಗೆ ಬಂದು ಹೇಳಿದನು :

"ಐದು ಜನ ಫ್ರೆಂಡ್ಸ್ ಬರ್ತಾರೆ—ಫಸ್ಟ್ ಕ್ಲಾಸ್ ಕಾಫಿ, ಏನಾದ್ರೂ ತಿಂಡಿ ಮಾಡ್ಬಿಡಿ."

"ನಿಮ್ಮ ಅತ್ತಿಗೆಗೆ ಹೇಳಪ್ಪಾ....ನಂದೇನಿದೆ ಕೈಯಲ್ಲಿ ? ಅವರು

ಸಾಮಾನು ಕೊಟ್ರೆ ಮಾಡ್ತೀನಿ " ಪದ್ದಮ್ಮ ಹೇಳಿದಾಗ ಅಜಯ್ ತಬ್ಬಿಬ್ಬಾದನು. ನಿರ್ಮಲ, ಅಶೋಕ ಇಬ್ಬರೂ ಅಂದು ಯಾವುದೋ ಚಿತ್ರ ನೋಡಲು ಹೋಗಿದ್ದರು. ಅವರು ಬರುವವರೆಗೂ ತಾನು ಕಾದಿದ್ದು ಹೇಳಬೇಕು -ಅಷ್ಟರಲ್ಲಿ ಗೆಳೆಯರು ಬಾದುಬಿಟ್ಟರೆ ? ಅವನಿಗೆ ಅತ್ತಿಗೆಯ ಅತಿಹಿಡಿತ ಕೊಂಚ ಅಸಮಾಧಾನವಾಯಿತು. ಮುಂಚೆ ತನ್ನ ಗೆಳೆಯರನ್ನು ಬೇಕು ಬೇಕಾದಾಗ ಕರೆದು ತಂದು ತಿಂಡಿಕೊಟ್ಟು ಕಳುಹಿಸುತ್ತಿದ್ದನು—ಆದರೆ ಈಗ....! ಬಂದವರ ಮುಂದೆ ಅವಮಾನವಾಗದಿರಲೆಂದು ಫ್ಲಾಸ್ಕ್ ಹಿಡಿದು ಸ್ಕೂಟರ್ ಏರಲು ಹೊರಟಾಗ ಎಲ್ಲಿಗೋ ಹೊರಟಿದ್ದ ಅನಂತ ತಡೆದನು.

"ಎಲ್ಲಿಗಯ್ಯಾ ಹೋಗ್ತಿ ?"

"ಕಾಫಿ ತಂದ್ಬಿಡ್ತೀನಿ....ನನ್ನ ಫ್ರೆಂಡ್ಸ್ ಬರ್ತಾರೆ—ಅತ್ತಿಗೆ ಬರೋದು ಯಾವಾಗ಼್ೋ....ಅವರು ಕೊಟ್ಟ ಹೊರತು ಪದ್ದಮ್ಮ ಮಾಡುವ ಹಾಗಿಲ್ಲ ವಂತೆ !" ಅಜಯ ಹೇಳಿದಾಗ ಅನಂತ ಹುಬ್ಬು ಗಂಟಿಕ್ಕಿದನು.

"ನಿನ್ನ ಫ್ರೆಂಡ್ಸ್‌ಗೆ ಕಾಫಿ ಕೊಡೋಕ್ಯಾಗ್ದೇ ಇರೋಷ್ಟು ಹಿಡಿತ ಇರೋಲ್ಲ-ಪದ್ದಮ್ಮನ್ನ ಕೇಳು ಹೋಗೂ....!"

ಬಾಯಲ್ಲಿ ಹೇಳಿದರೂ ತಾನೇ ಪದ್ದಮ್ಮನ ಬಳಿ ಬಂದು ಕೇಳಿದನು- "ಏನು ಹೇಳ್ಲೀಪ್ಪಾ, ಅರ್ಧ ಲೋಟ ಹಾಲಿದೆ—ಒಂದು ಲೋಟ ಸುಮಾ ರಾಗಿರೋ ಡಿಕಾಕ್ಷನ್ ಇದೆ-ಮುಂಚೆ ಐದು ಲೀಟರ್ ಹಾಲು ತೊಗೋತಾ ಇದ್ದೆ. ಡಬ್ಬದಲ್ಲಿ ಯಾವಾಗಲೂ ಕಾಫಿಪುಡಿ, ಸಕ್ಕರೆ ಇರೋದೂ—ಮನೆಗೆ ಯಾರು ಬರ್ಲಿ ಹೋಗ್ಲಿ, ಹಾಲು ಹೊಳೆ ಹರಿಯೋದೂ....ನಿಮ್ಮ ನಾದಿನಿ ಹೇಳೋದು ಸರಿಯೇ ಅನ್ನು-ಸಂಸಾರದ ಖರ್ಚು ಜಾಸ್ತಿಯಾಗ್ತಾ ಹೋದ್ರೇ ಕಷ್ಟ ಅಲ್ವೇ ?" ಪದ್ದಮ್ಮ ನಯವಾಗಿಯೇ ತಾವು ಹೇಳ ಬಯಸುತ್ತಿದ್ದುದನ್ನು ಹೇಳಿದರು.

"ದುಡ್ಡು ಕೊಡ್ತೀನಿ—ಹಾಲು, ಕಾಫಿಪುಡಿ—ಇನ್ನೇನ್ಬೇಕೋ ತರ್ಸಿ !" ಅನಂತ ಹೇಳಿದಾಗ ಪದ್ದಮ್ಮ ಕಾಲು ನೀವಿಕೊಂಡರು.

"ಯಾರ ಕೈಲಿ ತರಿಸ್ಲಿ ? ಶಿವಮ್ಮ ಭಾನುವಾರಾಂತ—ಮನೇಲಿ ಹೆಚ್ಚು ಗಟ್ಲೆ ಬರೋಲ್ಲಾಂತ ಹೇಳಿ ಹೋದ್ಲು—ಅಮರೇಶನಾದ್ರೂ ಇದ್ದಿದ್ರೆ ತರಿಸ್ಕೋದೂ....ಅತ್ತಿಗೆ ಕೈಲಿ ಏನೋ ದುಡ್ಡು ಈಸ್ಕೋತಾ ಇದ್ದ—ಎಲ್ಲಿ

ಹೋದ್ನೋ, ಎಷ್ಟು ಹೊತ್ತಿಗೆ ಬರ್ತಾನೋ ! ನೀನು ಹೋಗೋಕೆ ಆಗುತ್ಯೇ?" ಪದ್ಮಮ್ಮ ಹೇಳಿದಾಗ ಅನಂತ ಬೇಸರದಿಂದ ಕೈಕೊಡವಿಕೊಂಡನು.

"ನನ್ನ ಫ್ರೆಂಡ್ಸ್‌ನ ಹೋಟೆಲಿಗೆ ಕರ್ಕೊಂಡ್ಹೋಗಿ ತಿನ್ನಿಸಿಬಿಡ್ತೀನಿ ಬಿಡಣ್ಣಾ, ಸುಮ್ನೆ ಯಾಕೆ ಮಾತು !"

"ಹಾಗೇ ಮಾಡು !" ಅನಂತ ಸುಮ್ಮನಾದನು.

ನಿರ್ಮಲ ಅಶೋಕ, ಮನೆಗೆ ಬಂದಾಗ ಆರೂವರೆಯಾಗಿತ್ತು. ಆಗಲೇ ಅಜಯನ ಗೆಳೆಯರು ಬಂದು ಏನೋ ಮಾತಾಡುತ್ತಾ ನಗುತ್ತಿದ್ದರು. ಅಶೋಕನನ್ನು ನೋಡಿ ಅವನಿಗೆ ಗುರುತಿರುವವರು 'ಹಲೋ' ಎಂದರು ಅಶೋಕ ಹಲೋ ಎಂದು ಅವರ ಜೊತೆ ಮಾತಿಗೆ ಕುಳಿತನು.

"ನಿಮ್ಗೂ, ನಮ್ಗೆ ಎಲ್ಲರಿಗೂ ಕಾಫಿ, ತಿಂಡಿ ಇಲ್ಲಿಗೇ ತಂದ್ಬಿಡೂ...." ಅಜಯ್ ಅತ್ತಿಗೆಯ ಕಡೆ ನೋಡಲಿಲ್ಲ. ತನ್ನ ಗೆಳೆಯರಿಗ್ಯಾರಿಗೂ ಪರಿಚಯ ಮಾಡಿಸಲಿಲ್ಲ. "ಬೇಡಾ, ಅಶೋಕ್....ನಾವೆಲ್ಲಾ ಹೊರಗಡೆ ಹೋಗಿ ತಿನ್ನೋಣ ಅಂತ ಇದ್ದೀವಿ...."

ನಿರ್ಮಲಳಿಗೆ ಮುಖ ಮುರಿದಂತಾಯಿತು. ಅಜಯ ಬೇಕಾಗಿಯೇ ತನ್ನನ್ನು ಗೆಳೆಯರಿಗೆ ಪರಿಚಯ ಮಾಡಿಸಲಿಲ್ಲವೆಂದು ಅರಿತಳು. ಆದರೂ ಅವರ ಮುಂದೆ ಅಸಮಾಧಾನ ತೋರ್ಪಡಿಸದೇ ನಸುನಕ್ಕಳು.

"ಇಲ್ಲೂ ತಿನ್ನಿ...ಹೊರಗೆ ಹೋಗಿಯೂ ತಿನ್ನಿ. ಅದಕ್ಕೇನಂತೆ...."

ಅವಳು ಒಳಗೆ ಹೋಗಿ ಅರ್ಧ ಗಂಟೆಯಲ್ಲಿ ಬಿಸಿ ಬಿಸಿಯಾದ ಗೊಜ್ಜವಲಕ್ಕಿ ಕಾಫಿ ತಂದಾಗ ಅಜಯನಿಗೆ ಅಚ್ಚರಿಯಾಯಿತು. ತಿಂಡಿಗೇನೋ ಅತ್ತಿಗೆ ಬರಬೇಕಾಗಿತ್ತು. ಕಾಫಿಗೆ ಅತ್ತಿಗೆ ಹಾಲು ಎಲ್ಲಿಂದ ತಂದರು ?

ಗೆಳೆಯರೆಲ್ಲಾ ಹೋದಮೇಲೆ ಅರವಿಂದ ತಂದಿತ್ತಿದ್ದ ಬಟ್ಟೆಯಿಂದ ದಿಂಬಿನ ಕವರುಗಳನ್ನು ಹೊಲಿದು ಅದಕ್ಕೆ ಕಸೂತಿ ಹಾಕುತ್ತಾ ಕುಳಿತಿದ್ದ ನಿರ್ಮಲಳ ಹತ್ತಿರ ಬಂದನು.

"ಅತ್ತಿಗೆ....ಮನೇಲಿ ಹಾಲಿತ್ತಾ ಎಲ್ರಿಗೂ ಕಾಫಿ ಮಾಡೋಕೇ?"

ನಿರ್ಮಲ ಅಚ್ಚರಿಯಿಂದ ಅವನತ್ತ ನೋಡಿದಳು. "ಇದೆಂತಹ ಪ್ರಶ್ನೆ ?"

"ಯಾಕೆ ? ಬೇಕಾದಷ್ಟಿದೆಯಲ್ಲಾ ! ಇನ್ನೂ ಹತ್ತು ಜನ ಬಂದರೂ ಮಾಡಿ ಕೊಡ್ಬೋದೂ !"

ಅಜಯ ತುಟಿಯನ್ನು ನಾಲಿಗೆಯಿಂದ ಸವರಿಕೊಂಡನು. "ಯಾಕೂ ಇಲ್ಲ; ಸುಮ್ಮನೇ ಕೇಳಿದೆ. ಅನ್‌ಎಕ್ಸ್‌ಪೆಕ್ಟೆಡ್ ಆಗಿ ಯಾರಾದ್ರೂ ಬಂದ್ಬಿಡ್ತಾರೆ ನನ್ನ ಫ್ರೆಂಡ್ಸೂ !"

"ಬರ್ಲಿ ಏನೀಗ, ಮನೇಲಿ ಹಾಲಿಲ್ದೇ ಇರೋಕೆ ಯಾವ ಎಳೇ ಮಕ್ಕಳಿದ್ದಾರೆ ಕುಡಿಯೋಕೆ !"

ಅಜಯನಿಗೆ ಪದ್ಮಮ್ಮನ ಕಿತಾಪತಿ ಅರ್ಥವಾಯಿತು. ಅನಂತನಿಗೆ ಹೇಳಬೇಕೆಂದು ಅವನ ರೂಮಿಗೆ ಬಂದಾಗ ಅವನು ಅಲ್ಲಿರಲಿಲ್ಲ—ಎಂದಿನಂತೆ ಅವನು ರಾಮಕೃಷ್ಣಾಶ್ರಮಕ್ಕೆ ಹೊರಟುಹೋಗಿದ್ದನು.

ರಾತ್ರಿಯ ಅಡಿಗೆಗೆ ಸಾಮಾನು ತೆಗೆದು ಕೊಡುತ್ತಿದ್ದಾಗ ನಿರ್ಮಲ ಸಂಜೆಯ ಘಟನೆ ಬಗೆಗೆ ಕುತೂಹಲದಿಂದ ಪದ್ಮಮ್ಮನನ್ನು ಕೇಳಿದಳು. "ಅದೇನ್ರೀ, ಅಜಯನ ಗೆಳೆಯರು ಬಂದಾಗ ಹಾಲಿನ ಪ್ರಶ್ನೆ ಬಂತಾ ? ಎಲ್ಲರಿಗೂ ಕಾಫೀಗೆ ಆಗುವಷ್ಟು ಹಾಲು ಇತ್ತಾ ಅಂತ ಕೇಳಿದರು....ನೀವೇನಾದ್ರೂ ಇಲ್ಲಾಂತ ಹೇಳಿದ್ರಾ ?"

"ಅಯ್ಯೋ ದೇವ್ರೇ, ನಾನ್ಯಾಕೆ ಹೇಳ್ಲಿ....ಇಲ್ಲೇ ನಿಲುವಿನ ಮೇಲೆ ಪಾತ್ರೆಯಲ್ಲಿ ಇತ್ತಲ್ಲಾ !" ಪದ್ಮಮ್ಮ ಹಾಗೆ ಹೇಳಿದರೂ ಒಂದು ವೇಳೆ ಅಜಯ ತನ್ನನ್ನು ಪ್ರಶ್ನಿಸಿದರೆ ಎಂಬ ಭಯವೂ ಸೇರಿತ್ತು. "ಅವ್ನು ಯಾವಾಗಲೂ ಹಾಗೇ ಬಹಳ ದಾಕ್ಷಿಣ್ಯ...."

ರಾತ್ರಿ ಅಜಯನ ಮತ್ತೊಬ್ಬ ಗೆಳೆಯ ಬಂದು ಅವನನ್ನು ನೈಟ್‌ಶೋಗೆ ಕರೆದೊಯ್ದುದ್ದರಿಂದ ಅಜಯನಿಗೆ ಅಂದು ಅನಂತನಿಗೆ ಆ ವಿಷಯ ತಿಳಿಸಲು ಆಗಲೇ ಇಲ್ಲ. ಮಾರನೆಯ ದಿನ ಎಲ್ಲವೂ ಸಮಾಧಾನಕರವಾಗಿದ್ದರಿಂದ ಮತ್ತೆ ಬೇಸರ ತರಿಸುವ ವಿಷಯ ಎತ್ತಬಾರದೆಂದೂ ಸಮಯ ಬಂದಾಗ ತಿಳಿಸಿದರಾಯಿತೆಂದೂ ಸುಮ್ಮನಾಗಿಬಿಟ್ಟನು.

## ೯

ನಿರ್ಮಲ ಹೊಸ ವಾತಾವರಣ, ಜವಾಬ್ದಾರಿಗಳಿಗೆ ಹೊಂದಿಕೊಳ್ಳುತ್ತಾ ಬಂದಳು. ಅಶೋಕನಿಗೆ ಹೊಸ ಹೆಂಡತಿಯ ಹುಚ್ಚು ಕಡಿಮೆಯಾಗಿ ತನ್ನ

ಕೆಲಸಕಾರ್ಯಗಳಿಗೆ ಹೊತ್ತು ವಿರಾಮವಾಗಿಡುವಷ್ಟು ಸಂಯಮ ಬಂದಿತು. ಪದ್ದಮ್ಮ ನಿಧಾನವಾಗಿ ನಿರ್ಮಲಳ ಅಧಿಕಾರವನ್ನು ಒಪ್ಪಿಕೊಳ್ಳತೊಡಗಿದ್ದರು. ಅನಂತ, ನಿರ್ಮಲ ಅಪ್ರಬುದ್ಧಳಲ್ಲವೆಂಬುದನ್ನು ಮನಗಂಡಿದ್ದನು. ಅಮರೇಶನ ಬೀರುವಿನ ಒಳಬಾಗಿಲಲ್ಲಿದ್ದ ಡಾಲಿಯ ಭಾವಚಿತ್ರ ಮಾಯವಾಗಿತ್ತು. ಅವನ ಭಾಷೆಯಲ್ಲೇ ಹೇಳುವುದಾದರೆ, "ಅತ್ತಿಗೇ....ಇವೊತ್ತು ಹಾಸ್ಪಿಟಲ್‌ಗೆ ಪ್ರೊಫೆಸರ್ ಜೊತೆ ಹೊದಾಗ ಅನಿತಾಂತ ಒಬ್ಬ ಹೌಸ್ ಸರ್ಜನ್‌ನ್ನ ಮೀಟ್ ಮಾಡಿದೆ. ಹೇಗಿದ್ದಾಳೆ ಗೊತ್ತಾ ? ಗಂಧರ್ವಕನ್ಯೆ. ಅವಳ್ನ ನೋಡಿದ ತಕ್ಷಣ ನಂಗೆ ಒಂದು ತರಹಾ ಆಗೋಯ್ತು. ಒಂದೇ ನೋಟದಲ್ಲಿ ಐ ಫೆಲ್ ಇನ್ ಲವ್....ವಿತ್ ಹರ್...." ಎಂದು ಕಣ್ಣುಗಳಲ್ಲಿ ನಕ್ಷತ್ರ ಹೊಳೆಸಿ ತುಟಿಗಳಲ್ಲಿ ಹೂನಗು ಅರಳಿಸಿ ಹೇಳಿದಾಗ ನಿರ್ಮಲ ನಕ್ಕುಬಿಟ್ಟಳು.

"ಅಲ್ಲಾ, ಡಾಲಿ ಗಲಾಟೆ ಆದ್ಮೇಲೆ ನಾನು ಮದ್ವೇನೇ ಆಗೋಲ್ಲಾಂತ ಹೇಳಿದ್ದೀ....ಈಗ ಆಗ್ಲೇ ಅನಿತಾಂತ ರಾಗಾಲಾಪನೆ ಶುರು ಮಾಡ್ಬಿಟ್ಯಲ್ಲಾ ! ನಾನು ಅವೊತ್ತೇ ಹೇಳಲಿಲ್ವಾ ?"

ಅದಾದ ವಾರದಲ್ಲಿ ಬೇರೆ ರಾಗ ಶುರುವಾಗಿತ್ತು. "ಅತ್ತಿಗೆ, ಆ ಅನಿತಾಗೆ ತುಂಬಾ ಜಂಬ, ತನ್ನ ಸಮಾನ ಇಲ್ಲಾಂತ ಅಂದ್ಕೊಂಡಿದ್ದಾಳೆ. ಇವೊತ್ತು ಥರ್ಡ್ ಇಯರ್ ಸ್ಟೂಡೆಂಟ್ ರೇಣುಕಾಂತ ಇದ್ದಾಳೆ. ನೋಡೋಕೆ ಸುಮಾರು ಅಷ್ಟೆ. ಆದರೆ 'ಎ' ಒನ್ ಗೊತ್ತಾ ? ಅವ್ಳು ನಕ್ಬಿಟ್ರೆ ಮೈಯ್ಯೆಲ್ಲಾ 'ಝುಂ' ಅನ್ಬಿಡುತ್ತೆ ! ಮದ್ವೆ ಆದ್ರೆ ಅವಳ್ನೇ ಅತ್ತಿಗೆ !" ನಿರ್ಮಲ ಬಾಯಿಯ ಮೇಲೆ ಬೆರಳಿಟ್ಟುಕೊಂಡಳು.

"ಅಲ್ಲಾ, ಒಂದೇ ವಾರದಲ್ಲಿ ಒಬ್ಬಳನ್ನ ಲವ್ ಮಾಡಿ ಬಿಟ್ಟಾಯ್ತು. ಆಗ್ಲೆ ಬೇರೆ ಹುಡ್ಗೀನಾ? ಚೆನ್ನಾಯ್ತು! ಇದಕ್ಕೇನಾ ಕಾಲೇಜಿಗೆ ಹೋಗೋದೂ, ತಾಳು ಇವರಿಗೆ, ಅನಂತಣ್ಣಂಗೆ ಹೇಳ್ತೀನಿ."

"ನಿಮ್ಮ ದಮ್ಮಯ್ಯ ಅತ್ತಿಗೆ, ಸುಮ್ನಿರಿ. ಸಧ್ಯ ಎಲ್ಲದಕ್ಕೂ ಸಂಚಕಾರ ತಂದ್ಬಿಟ್ಟೀರಿ !"

ನಿರ್ಮಲ ಎದುರು ಮನೆ ಜಾನಕಿಯ ಸ್ನೇಹ ಬೇರೆ ಮಾಡಿಕೊಂಡಿದ್ದಳು. ಒಂದು ದಿನ ಕರಿಬೇವಿನ ಸೊಪ್ಪಿಗಾಗಿ ಬಂದಿದ್ದ ಜಾನಕಿ ನಿರ್ಮಲ.

ಹಾಕುತ್ತಿದ್ದ ಕಸೂತಿ ನೋಡಿ ಮೆಲ್ಲಗೆ ಅವಳೇ ಸ್ನೇಹ ಬಯಸಿ ಬಂದಿದ್ದಳು. "ತುಂಬಾ ಚೆನ್ನಾಗಿ ಹಾಕ್ತೀರಿ....ನಂಗೂ ಸ್ವಲ್ಪ ಹೇಳ್ಕೊಡ್ತೀರಾ ?" ಹೀಗೆ ಪ್ರಾರಂಭವಾದ ಸ್ನೇಹ ಪ್ರತಿ ಮಧ್ಯಾಹ್ನ ಬಂದು ಒಂದರ್ಧ ಗಂಟೆಯಾದರೂ ಹರಟೆ ಹೊಡೆದು ಹೋಗುವಷ್ಟರಮಟ್ಟಿಗೆ ಬೆಳೆಯಿತು.

ರಾತ್ರಿ ಮಲಗಿದ್ದಾಗ ನಿರ್ಮಲ ಗಂಡನಿಗೆ ಬೆಳಗಿನಿಂದ ಆದ ವಿಷಯ ಗಳನ್ನು ಹೇಳಬೇಕು. ಅವನು ಕೇಳಬೇಕು. ಅವನು ಕೇಳದಿದ್ದರೆ ಗೊಣ ಗುತ್ತಿದ್ದಳು "ನಿಮ್ಗೆ ಬರ್‍ತಾ ಬರ್‍ತಾ ನನ್ಮೇಲೇ ಪ್ರೀತಿ ಕಡಿಮೆಯಾಗ್ತಾ ಇದೆ!"

"ಒಳ್ಳೇ ಚೆನ್ನಾಗಿ ಹೇಳ್ತೀ—ನೀನು ಹೇಳೋದೆಲ್ಲಾ ಕೇಳ್ತಾ ಇದ್ರೆ ಬೆಳಿಗ್ಗೆ ಆಗಿಬಿಡುತ್ತೆ. ಆವೊತ್ತು ಜಾನಕಿ ವಿಷಯ ನಾನೇ ಕೇಳ್ದಾಗ ನೀನು ರೇಗಿದ್ದಿ, ಅದೇನ್ರೀ ಅವಳ ವಿಷಯದಲ್ಲಿ ನಿಮಗೆ ಅಷ್ಟು ಆಸಕ್ತೀಂತ ಸಾಕು, ದೀಪ ಆರ್ಸು ಮಲ್ಗೋಣ...." ಅಶೋಕ ಕೊನೆಗೆ ತಾನೇ ದೀಪ ಆರಿಸ ಬೇಕಾಗುತ್ತಿತ್ತು.

ಮೊದಲನೆಯ ತಾರೀಖಿಗೆ ಎಂದಿನಂತೆ ದುಡ್ಡು ಕೊಡಲು ಬಂದಾಗ ನಿರ್ಮಲ ಬೆರಳು ಕಚ್ಚಿಕೊಂಡಳು. ಹಿಂದಿನ ತಿಂಗಳ ಹಿಡಿತದಿಂದ ಆಗಲೇ ಮುನ್ನೂರಕ್ಕೂ ಹೆಚ್ಚು ಮಿಕ್ಕಿತ್ತು. ಅವನಿಗೆ ಹಾಗೆ ಹೇಳಿ ಹಿಂದಕ್ಕೆ ಕೊಟ್ಟು ಬಿಡಬೇಕೆಂದು ಯೋಚಿಸಿದಳು. ಹಾಗೆ ಮಾಡುವ ಬದಲು ಮೂನ್ನೂರು ರೂಪಾಯಿ ಕಡಿಮೆ ತೆಗೆದುಕೊಂಡರಾಯಿತು ಎಂದುಕೊಂಡು ಬಂದಾಗ ಅನಂತ ಅವಳಿಗೆ ನೋಟುಗಳನ್ನು ಎಣಿಸಿಕೊಡುತ್ತಾ ಅವಳು ಬಾಯ್ತೆರೆಯುವ ಮುನ್ನ ಹೇಳಿದ.

"ವಿಪರೀತ ಬಿಗಿ ಮಾಡೋದು ಬೇಡಾ....ಒಂದ್ಸೈವತ್ತು, ನೂರು ಜಾಸ್ತಿ ಆದ್ರೂ ಪರ್‍ವಾಗಿಲ್ಲ. ಯಾರಾದ್ರೂ ಬಂದಾಗ ಅದಿಲ್ಲ ಇದಿಲ್ಲ ಅಂದ್ರೆ ಚೆನ್ನಾಗಿ ರೋಲ್ಲ...."

ನಿರ್ಮಲ ಪ್ರಶ್ನಾರ್ಥಕವಾಗಿ ನೋಡಿದಳು. ಅಲ್ಲಿಯೇ ನಿಂತಿದ್ದ ಅಜಯ್ ಅವನ ಮಾತನ್ನು ಬದಲಿಸಿದನು.

"ಅದೆಲ್ಲಾ ಹಳೆಯ ಮಾತು. ಅತ್ತಿಗೆ ತುಂಬಾ ಚೆನ್ನಾಗಿ ಮ್ಯಾನೇಜ್ ಮಾಡ್ತಾರೆ!"

"ಹೇಗಾದ್ರೂ ಅಗ್ಲಿ, ನೂರು ರೂಪಾಯಿ ಜಾಸ್ತೀನೇ ಕೊಟ್ಟಿದ್ದೇನೆ !" ಅನಂತ ಹೇಳಿದಾಗ ನಿರ್ಮಲಳಿಗೆ ರೋಷ ಉಕ್ಕಿ ಬಂತು.

ಎಲ್ಲರೂ ತನ್ನ ಬಗ್ಗೆ ಒಪ್ಪಿಕೊಂಡರೂ ಇವನಿಗೇನು ! ತಾನು ಮಾಡಿದುದರಲ್ಲಿ ತಪ್ಪು ಕಂಡುಹಿಡಿಯುವುದೇ ! ಹೇಳಬೇಕಾದುದನ್ನು ಹೇಳಬಾರದೇ ಎಂಬ ಕೋಪವೂ ಹಟವೂ ಬಂತು. ಆಗಲಿ, ಕೂಡಿಟ್ಟಿದ್ದ ದುಡ್ಡು ಯಾರಿಗಾದರೂ ಯಾವಾಗಲಾದರೂ ಬೇಕಾಗಬಹುದು. ತಾನೇ ಸೀರೆಯ ಮಡಿಕೆಯಲ್ಲಿಟ್ಟುಕೊಂಡರಾಯಿತು. ತನ್ನ ತಾಯಿ ಯಾವಾಗಲೂ ತಂದೆಯ ಕೈಯ್ಯಲ್ಲಿ ಐವತ್ತು-ನೂರು ಮನೆಯ ಖರ್ಚಿಗೇಂತ ಹೆಚ್ಚು ಕೇಳಿ ತೆಗೆದುಕೊಂಡು ಮುಚ್ಚಿಟ್ಟು ಕೊನೆಗೆ ತಂದೆಗೆ ದುಡ್ಡಿನ ಅವಶ್ಯಕತೆ ಬಿದ್ದಾಗ ಕೊಡುತ್ತಿರಲಿಲ್ಲವೇ? ತಾನು ಏನು ಮಾಡಿದರೂ ನಂಬಿಕೆಯಿಲ್ಲದ ಮೇಲೆ ಎಷ್ಟು ಮಾಡಿದರೂ ಅಷ್ಟೇ. ಹಿರಿಯನೆಂದು ತಾನು ಎದುರಾಡದೇ ಸುಮ್ಮನಿರುವುದು. ಹೀಗೇ ಮಾಡುತ್ತಿದ್ದರೆ ಒಂದಲ್ಲ ಒಂದು ದಿನ ತಾನು ದುಡುಕಬಹುದು !

ಬೆಳಿಗ್ಗೆ ಎದ್ದಾಗಲೆ ಅನಂತ ಪುರೋಹಿತರೊಡನೆ ಮಾತನಾಡುತ್ತಿರುವುದು ಕಂಡು ನಿರ್ಮಲ ಹೂವು ಕಿತ್ತು ತಂದಿತ್ತ ಅರವಿಂದನನ್ನು ಕೇಳಿದಳು.

"ಏನು ವಿಶೇಷ ?"

"ನಾಡಿದ್ದು ನಮ್ಮಮ್ಮನ ತಿಥಿಯಂತೆ....ಅದೆಲ್ಲಾ ಅನಂತಾನೇ ಜ್ಞಾಪ್ಕ ಇಟ್ಕೊಂಡು ಮಾಡಿಸೋದೂ....! ಅವನಿರೋದ್ರಿಂದ್ಲೇ ನಮ್ಮಮ್ಮನಿಗೆ ಪ್ರತಿವರ್ಷ ಸ್ವರ್ಗದಲ್ಲಿ ಸೀಟು ಬುಕ್ ಆಗೋದೂ !" ಅರವಿಂದ ತಮಾಷೆಗೆ ಹೇಳಿದಾಗ ನಿರ್ಮಲ ಕಣ್ಸನ್ನೆಯಿಂದ ಸುಮ್ಮನಾಗಿಸಿದಳು.

"ಹಾಗೆಲ್ಲಾ ಹೇಳ್ಬಾರ್ದೂ....ಎಲ್ಲಾ ಅವರವರ ನಂಬಿಕೆ ಆಚಾರ !"

ಅನಂತ ನಿರ್ಮಲಳನ್ನು ಕರೆದನು. "ನೋಡೂ, ಇವರೆಲ್ಲ ಸಾಮಾನಿನ ಪಟ್ಟಿ ಕೊಡ್ತಾರೆ. ಬರ್ಕ್ಕೊಂಡ್ಬಿಟ್ಟು ನಾಳೆ ಹೊತ್ಗೆ ಎಲ್ಲಾ ಸಾಮಾನೂ ತರ್ಸಿಬ್ಬಿಡು. ಗೊತ್ತಾಗ್ದಿದ್ರೆ ಪದ್ದಮ್ಮನ್ನ ಕೇಳಿದ್ರೆ ಎಲ್ಲಾ ಹೇಳ್ತಾರೆ ! ಮಡಿ ಹಾಕೋದೆಲ್ಲಾ ಅವರು ಮಾಡ್ತಾರೆ !"

ಪದ್ದಮ್ಮ ಸರ್ವವಿದ್ಯಾಪ್ರವೀಣೆ ಇವನಿಗೆ ! ಮನಸ್ಸಿನಲ್ಲೇ ಗೊಣಗಿದರೂ ಬಾಯಲ್ಲಿ ಆಗಲಿ ಎಂದಳು.

ರಾಮಾಚಾರರು ಹೇಳಿದ ಸಾಮಾನುಗಳ ಪಟ್ಟಿಯನ್ನು ಬರೆದು ಮುಗಿಸಿ

ದಳು. ಸಂಜೆ ಅರವಿಂದ, ಅಮರೇಶನ ಕೈಯ್ಯಲ್ಲಿ ತರಿಸಿದರೆ ಆಯಿತೆಂದು ಕೊಂಡಳು. ಹೇಗಿದ್ದರೂ ಮಡಿಯ ವಿಚಾರ ಪದ್ದಮ್ಮ ನೋಡಿಕೊಳ್ಳುವ ರೆಂದು ಸುಮ್ಮನಾದಳು.

ಮಾರನೆಯ ದಿನ ಮನೆಯನ್ನು ಶಿವಮ್ಮನ ಕೈಯಲ್ಲಿ ಶುಚಿಮಾಡಿಸಿ ಅಡಿಗೆಗೆ ಬೇಕಾದ ದೊಡ್ಡ ಪಾತ್ರೆಗಳನ್ನು ಅಟ್ಟದ ಮೇಲಿಂದ ತೆಗಿಸಿ ತೊಳೆಸು ವುದು, ದೇವರ ಮನೆ ಶುಚಿ ಮಾಡುವುದರಲ್ಲೇ ಆಯಿತು.

ತಿಥಿಯ ದಿನ ಬೆಳಿಗ್ಗೆ ಐದು ಗಂಟೆಯ ಹೊತ್ತಿಗೇ ಅಡಿಗೆಯವರು ಬಂದರು. ಬಚ್ಚಲು ಮನೆಯಲ್ಲಿ ನೀರು ಕುದಿಯುವಷ್ಟು ಕಾದಿತ್ತು. ಹಿಂದಿನ ದಿನವೇ ಅನಂತ ತಮ್ಮಂದಿರಿಗೆ ಆ ದಿನ ಎಲ್ಲೂ ಹೋಗಬಾರದೆಂದು, ಒಂದು ದಿನ ವಾದರೂ ನೇಮನಿಯಮ ಪಾಲಿಸಬೇಕೆಂದೂ ಹೇಳಿದ್ದರಿಂದ ಎಲ್ಲರೂ ಆ ದಿನ ರಜ ಹಾಕಿದ್ದರು.

ಅನಂತ ಎಲ್ಲರಿಗಿಂತ ಮುಂಚೆ ಎದ್ದು ಪೂಜೆಗಾಗಿ ತಾನೇ ತುಳಸಿ ಹೂವುಗಳನ್ನು ಕಿತ್ತು ದೇವರ ಮುಂದಿಟ್ಟು ಸ್ನಾನಕ್ಕೆ ಹೋಗಲು ತಯಾ ರಾದನು. "ನಿರ್ಮಲಾ, ಪದ್ದಮ್ಮನನ್ನು ಕರಿ, ನನ್ನ ಮಡಿ ಬಟ್ಟೆ ತಂದು ಕೊಡಲಿ...." ನಿರ್ಮಲ ಆಗತಾನೇ ಎದ್ದು ಮುಖ ತೊಳೆದು ಹೊರ ಬರುತ್ತಿ ದ್ದಳು. ಒಳಗೆ ಅಡಿಗೆಯವರಿಗೆ ತರಕಾರಿ ಹೆಚ್ಚುವುದರಲ್ಲಿ ಸಹಾಯ ಮಾಡು ತ್ತಿದ್ದ ಪದ್ದಮ್ಮನನ್ನು ನಿರ್ಮಲ ಕೇಳಿದಳು.

"ಅನಂತಣ್ಣನಿಗೆ ಮಡಿಬಟ್ಟೆ ತೊಗೊಂಡೋಗಿ ಇಡ್ಬೇಕಂತೆ!"

ಪದ್ದಮ್ಮ ತಲೆಯೆತ್ತದೆ ಕೇಳಿದರು. "ಯಾವ ಮಡಿ ಬಟ್ಟೆ? ನಂಗೊತ್ತಿಲ್ವಲ್ಲಾ!" ನಿರ್ಮಲ ಅಚ್ಚರಿಗೊಂಡಳು. "ಅನಂತಣ್ಣ ಹೇಳಿದ್ರು ನೀವು ಮಡಿಬಟ್ಟೆ ವಿಚಾರ ನೋಡ್ಕೋತೀರೀಂತಾ, ನಂಗೇನ್ಗೊತ್ತು?"

"ಅಲ್ಲಮ್ಮ, ನೀನೇನಾದ್ರೂ ನನ್ಕೈಗೆ ನಿನ್ಗಂಡಂದು, ಭಾವಂದು, ಮೈದುನಂದಿರದು ಬಟ್ಟೆಗಳ್ನ ತಂದ್ಕೊಟ್ಟಿದ್ರೆ ನೆನಸಿ ಮಡಿ ಹಾಕ್ತಾ ಇದ್ದೆ. ನೀನು ತಂದ್ಕೊಡ್ಲಿಲ್ಲ, ನಾನು ಹಾಕ್ಲಿಲ್ಲ. ಎಲ್ಲೋ ನೀನೇ ಹಾಕಿದ್ದೀ ಅಂದ್ಕೊಂಡೆ ನಾನು" ಪದ್ದಮ್ಮ ನಿರ್ವಿಕಾರವಾಗಿ ಹೇಳಿದಾಗ ನಿರ್ಮಲಳ ಎದೆ ಧಸಕ್ಕೆಂದಿತು. ಇವೊತ್ತು ತಾನೆಲ್ಲೋ ಎಡಮಗ್ಗುಲಿನಿಂದ ಎದ್ದಿರಬೇಕು. ಅನಂತನಿಗೆ ತಿಳಿದರೆ ತನ್ನನ್ನು ಸುಮ್ಮನೇ ಬಿಡುವುದಿಲ್ಲ.

ತನಗೆ ಬಟ್ಟೆಗಳನ್ನು ತರದೇ ಇದ್ದುದು ಕಂಡು ಅನಂತ ಬಚ್ಚಲು ಮನೆ ಯಿಂದಲೇ ಕೂಗಿದನು. "ಎಲ್ಲಿ ನನ್ನ ಬಟ್ಟೆ ?"

"ಹೋಗಿ....ಪದ್ದಮ್ಮ ಹೇಳಿ ಹೋಗಿ...." ನಿರ್ಮಲ ಹೇಳಿದಾಗ ಪದ್ದಮ್ಮ ತರಕಾರಿ ಹೆಚ್ಚುವ ಕಾರ್ಯದಲ್ಲೇ ಮಗ್ನರಾಗಿದ್ದರು. "ನಾನೇ ನ್ಹೇಳ್ಬೇ....?" ಅಡಿಗೆಯವರ ಮುಂದೆ ಅವಮಾನ ಮಾಡಲು ಬೇಕಾಗಿಯೇ ತನ್ನನ್ನು ನಿಕೃಷ್ಟವಾಗಿ ಕಾಣುವರೆಂದು ನಿರ್ಮಲ ಅರಿತಳು.

ಯಾರೂ ಬಾರದಿದ್ದುದ್ದನ್ನು ಕಂಡು ಒದ್ದೆಯ ಟವಲೊಂದನ್ನು ಸೊಂಟಕ್ಕೆ ಸುತ್ತಿಕೊಂಡು ಅನಂತನೇ ಹೊರಬಂದನು.

"ಏನು ಪದ್ದಮ್ಮ, ಎಷ್ಟು ಸಲ ಕರಿಬೇಕು ? ತರಕಾರಿ ಆಮೇಲೆ ಹೆಚ್ಚಿ. ನನ್ನ ಮಡಿ ತಂದ್ಕೊಡ್ಬಾರ್ದಾ ? ಒಂಬತ್ತು ಗಂಟೆಗೆಲ್ಲಾ ಆಚಾರ್ರು ಬರ್ತೀನೀಂದಿ ದ್ದಾರೆ !" ಪದ್ದಮ್ಮ ನಿಟ್ಟುಸಿರಿಟ್ಟರು.

"ಎಲ್ಲಿಂದ ತರ್ಲೀಪ್ಪಾ ? ನಿನ್ನ ನಾದಿನಿ ನಂಗೆ ನಿಮ್ಮ ಬಟ್ಟೆಗಳ್ನ ಕೊಡ್ಲೇ ಇಲ್ಲ-ನಾನು ಮಡಿ ಹಾಕ್ಲಿಲ್ಲ-ಅವಳೇ ಹಾಕ್ಕೋತಾಳೇಂತ ಸುಮ್ಮನಿದ್ದೆ.... ಈಗ ಅವ್ಳು ಬಂದು ನನ್ನ ಮೇಲೆ ರೇಗಿದ್ರೆ ನಾನು ಏನು ಮಾಡ್ಲಿ ?"

ಅನಂತ ತಲೆ ತಗ್ಗಿಸಿ ನಿಂತಿದ್ದ ನಿರ್ಮಲಳನ್ನು ದುರುಗುಟ್ಟಿ ನೋಡಿದನು.

"ಜವಾಬ್ದಾರಿ ತೆಗೆದುಕೊಂಡ ಮೇಲೆ ಎಲ್ಲಾ ಮಾಡಬೇಕು. ಇಲ್ದಿದ್ರೇ ಬೇಡಾ ಅಂತ ಸುಮ್ಮನೆ ಇದ್ದುಬಿಡಬೇಕು ! ಈಗೇನ್ಮಾಡೋದೂ?" ಅನಂತ ಗುಡುಗಿದನು.

"ಏನ್ಮಾಡೋದೇನು. ತೆಗೊಂಡ್ಬಾ, ಒಂದ್ನಿಮಿಷ ಹಾಕ್ತೀನಿ. ಗಾಳೀಗೆ ಒಣಗೋಕೆ ಹಾಕಿದ್ರೆ ಅರ್ಧ ಗಂಟೇಲಿ ಆರ್ಕೊಳ್ಳುತ್ತೆ !" ಪದ್ದಮ್ಮ ಎದ್ದು ನಿಂತರು. ಅನಂತ ದಡದಡನೆ ರೂಮಿಗೆ ಹೋಗಿ ಒಂದು ಪಂಚೆ ಶಲ್ಯವನ್ನು ತಂದು ಪದ್ದಮ್ಮನ ಮುಂದೆ ಎಸೆದನು.

"ತೊಗೊಳ್ಳಿ, ಬೇಗ ಹಾಕಿ.... ಹೋಗಿ ನಿನ್ನ ಗಂಡಂದು ಮೈದುನಂದು ತಂದ್ಕೊಡು. ನಿಂತ್ರೆ ಹೇಗೆ?" ಅನಂತ ಹೇಳಿದಾಗ ನಿರ್ಮಲಳಿಗೆ ಅವಮಾನ ದಿಂದ ಕಣ್ಣಲ್ಲಿ ನೀರು ತುಂಬಿತು. ಮಾಡುವುದು ತಾಯಿಯ ಶಿಥಿ, ಯಾರ ಪ್ರೀತಿಗೋ.... ಸೊಸೆಗೆ ಅವಮಾನ ಮಾಡಿ, ಕಣ್ಣಲ್ಲಿ ನೀರು ಹಾಕಿಸುವುದು.

ನಿರ್ಮಲ ಸೆರಗಿನಿಂದ ಕಣ್ಣೊರೆಸಿಕೊಂಡು ಅಶೋಕನ ಪಂಚೆ ಶಲ್ಯ ತಗೆ

ಹೊರಟಾಗ ಅಡಿಗೆಯವನೊಬ್ಬನು ಹೇಳಿದುದು ಕೇಳಿಸಿತು: "ಪಾಪ, ಎಲ್ಲಾ ಹೊಸದೊಂತ ಕಾಣ್ಸತ್ತೆ!" 'ಈ ಮನೆಯಲ್ಲಿ ಮನೆಯ ಜನಕ್ಕಿಂತ ಕೆಲಸದವರಿಗೆ ಹೆಚ್ಚು ಸಲಿಗೆ' ನಿರ್ಮಲ ಗೊಣಗಿಕೊಂಡಳು.

ಅಶೋಕ, ಅರವಿಂದ, ಅಮರೇಶ, ಅಜಯರ ಬಟ್ಟೆಗಳನ್ನು ಹುಡುಕಿ ತಂದು ಪದ್ಮಮ್ಮನ ಮುಂದಿಟ್ಟಳು.

ಪದ್ಮಮ್ಮ ಸೊಂಟ ನೀವಿಕೊಳ್ಳುತ್ತಾ ಬಟ್ಟೆಗಳನ್ನು ಎತ್ತಿ ಹಿತ್ತಲಿಗೆ ತೆಗೆದುಕೊಂಡು ಹೋದಾಗ ಅನಂತ ಮೆಲ್ಲನುಸುರಿದನು:

"ನಾನು ಹೇಳಿರಲಿಲ್ಲವೇ, ಇದೆಲ್ಲಾ ನೋಡ್ಕೊಬೇಕೂಂತಾ ?"

"ಸಾಮಾನುಗಳ ವಿಷಯ ಹೇಳಿ, ಅನಂತರ ಪದ್ಮಮ್ಮ ಮಡಿ ವಿಚಾರ ನೋಡಿಕೋತಾರೇಂತ ಅಂದಿದ್ರೀ...." ನಿರ್ಮಲ ನಯವಾಗಿ ಹೇಳಿದಾಗ ಅನಂತ ಕೊಂಚ ಗಡುಸಾಗಿಯೇ ಹೇಳಿದನು.

"ನೀನು ಬಟ್ಟೆಗಳ್ನ ಕೊಡ್ದೇ ಇದ್ರೇ ಅವರೇನು ನೋಡ್ಕೋತಾರೆ ?"

"ನಾನೆಂದೂ ನಿಮ್ಮ ರೂಮಿಗೆ ಬಂದು ಸಾಮಾನುಗಳನ್ನು ಮುಟ್ಟಿರಲಿಲ್ಲ. ನೀವು ಕೊಟ್ಟಿದ್ದರೆ ಕೊಡುತ್ತಿದ್ದೆ...."

"ಮಾತಿಗೆಮಾತು ಬರುತ್ತೆ ಓದಿದ ಹುಡುಗಿಯರಿಗೆ. ಕೆಲಸದಲ್ಲಿ ಜಾಣತನ ಇರೋಲ್ಲ....ಎಲ್ಲರ ರೂಮಿಗೆ ಹೋಗಿ ಸಾಮಾನು ಜೋಡಿಸಿಟ್ಟು, ಅವರಿಗೆ ಬಟ್ಟೆ ಬರೆ ಹೊಲಿದುಕೊಟ್ಟು ಮಾಡಬಹುದು. ನನ್ನ ರೂಮಿಗೆ ಹೋಗಿ ತೆಗೆದುಕೊಂಡರೆ ಬೇಡಾ ಅನ್ನುತ್ತಿದ್ದೆನೆ ? ನಾನೇನು ಅಸ್ಪೃಶ್ಯನೇ ?"

ಮುಂದಿನ ಮಾತು ನಿರ್ಮಲ ಕೇಳಲಿಲ್ಲ. ಅಲ್ಲಿಂದ ಕಾಲ್ತೆಗೆದಳು. ಇವನಿಗೆ ಮೊದಲಿನಿಂದಲೂ ತನ್ನನ್ನು ಕಂಡರೆ ಆಗುವುದಿಲ್ಲ. ತನ್ನ ಗಂಡ ಒಪ್ಪಿದುದರಿಂದ ತನ್ನನ್ನು ಮನೆಯ ಸೊಸೆಯಾಗಿ ಸ್ವೀಕರಿಸಿರಬೇಕು...ಎಷ್ಟು ವಿಧದಲ್ಲಿ ತನ್ನನ್ನು ಕಂಡರೆ ಆಗುವುದಿಲ್ಲವೆಂದು ತೋರಿಸಿದ್ದಾನೆ! ತಾನು ಇಲ್ಲಿರಕೂಡದು, ಗಂಡ ಎದ್ದಕೂಡಲೇ ಎಲ್ಲ ಹೇಳಿಬಿಡಬೇಕು.! ರೋಷದಿಂದ ಮೈಯ್ಯಲ್ಲಿನ ರಕ್ತ ಕುದಿಯಿತು. ಆದರೆ ತಕ್ಷಣ ಅವಳ ಅಂತರ್ಯ ಅವಳನ್ನು ತಡೆಯಿತು. ತನ್ನ ತಪ್ಪಿರಲಿಲ್ಲವೇ ?

ಒಂಭತ್ತು ಗಂಟೆಗೆ ಆಚಾರ್ಯರು ಬಂದಾಗ ಎಲ್ಲರದೂ ಸ್ನಾನ ಮುಗಿದಿತ್ತು. ಬಟ್ಟೆಗಳು ಆರದೇ ಇದ್ದುದ್ದರಿಂದ ಒದ್ದೆಯಾಗಿಯೇ ಇತ್ತು.

ಪದ್ಮಮ್ಮ ಅಕ್ಕಿಯ ಮೊರವನ್ನು ತಂದಿಡುತ್ತಾ ಮೈಗೆ ಅಂಟಿಕೊಂಡಂತಿದ್ದ ಅವರ ಬಟ್ಟೆಗಳನ್ನು ನೋಡಿ ನಿಟ್ಟುಸಿರು ಬಿಟ್ಟರು.

"ಸೀತ ಮುಚ್ಕೋಗುತ್ತೆ. ದೇವರ ಮೇಲೆ ಭಾರಹಾಕಿ ಕೆಲಸ ಮುಗಿಸಿ....ಎಷ್ಟು ಒದ್ದೆ ...ಅನಂತಂಗಂತೂ ಆಗೋದೇ ಇಲ್ಲ ಥಂಡೀಂದ್ರೆ !" ಆಚಾರ್ಯರು ಅಕ್ಕಿಯ ಮೊರ ತೆಗೆದುಕೊಳ್ಳುತ್ತಾ ಹೇಳಿದರು : "ಒದ್ದೇ ಬಟ್ಟೆನೇ ಶ್ರೇಷ್ಠಾಮ್ಮಾ....!"

ಆ ದಿನದ ಆಗುಹೋಗುಗಳ ಅರಿವೇ ಇಲ್ಲದ ನಾಲ್ವರು ತಮ್ಮಂದಿರು ಕೈ ಕಟ್ಟಿ ಒದ್ದೆಯುಟ್ಟು ನಿಂತಿದ್ದರು.

"ಅತ್ತಿಗೆ ಯಾವಾಗಲೂ ಶ್ರೇಷ್ಠವಾದುದನ್ನೇ ಮಾಡಿಸೋದು!" ಅರವಿಂದ ಹೇಳಿದಾಗ ಅನಂತ ಅವನತ್ತ ಕಿಡಿನೋಟ ಬೀರಿದನು.

ನಿರ್ಮಲಳಿಗೆ ಮನಸ್ಸು ಭಾರವಾಗಿದ್ದರೂ ತೋರ್ಪಡಿಸದೇ ಅಲ್ಲಿಂದಿಲ್ಲಿಗೆ ಓಡಾಡುತ್ತಿದ್ದಳು. ಆ ದಿನ ಊಟಕ್ಕೆ ಕರೆದಿದ್ದ ಮುತ್ತೈದೆಗೆ ಸೀರೆ, ರವಿಕೆ ಕಣದ ಜೊತೆಗೆ ದಕ್ಷಿಣೆಯಿಡಲು ಕೇಳಿದಾಗ ನಿರ್ಮಲ ಸೊಂಟದಲ್ಲಿ ಸಿಕ್ಕಿಸಿ ಕೊಂಡಿದ್ದ ಕರವಸ್ತ್ರದ ಗಂಟನ್ನು ಹುಡುಕಿದಳು. ಸೊಂಟದಲ್ಲಿರಲಿಲ್ಲ. ಎಲ್ಲಿಟ್ಟು ಬಿಟ್ಟೆ ? ಮನೆಯಲ್ಲೇ ಇರಬೇಕು. ಅಡಿಗೆ ಮನೆಯ ಹ್ಹಾಲಿನ ಶೆಲ್ಫಿನ ಮೇಲಿಟ್ಟ ಜ್ಞಾಪಕ ! ಅಡಿಗೆ ಮನೆಗೆ ಓಡಿದಳು. ಶೆಲ್ಫಿನ ಮೇಲಿರಲಿಲ್ಲ. ಹೋಳಿಗೆ ಲಟ್ಟಿಸುತ್ತಿದ್ದ ಪದ್ಮಮ್ಮನನ್ನು ಕೇಳಿದಳು.

"ಇಲ್ಲಿ ಕರ್ಚೀಫಿನಲ್ಲಿ ಕಟ್ಟಿ ದುಡ್ಡಿಟ್ಟಿದ್ದೆ, ನೋಡಿದ್ರಾ ?"

"ನಾನು ನೋಡಿಲ್ಲಮ್ಮಾ, ಬೆಳಗ್ನಿಂದ ಇಲ್ಲೇ ಇದ್ದೀನಿ....ಯಾರೂ ಬಂದಿಲ್ವಲ್ಲಾ, ಯಾರೂ ಏನೂ ಇಡ್ಲಿಲ್ಲ !"

ನಿರ್ಮಲಳಿಗೆ ಬಹಳ ಅನುಮಾನವುಂಟಾಯಿತು. ಈಗ ತನಗೆ ಚೆನ್ನಾಗಿ ಜ್ಞಾಪಕವಿದೆ. ತುಪ್ಪ ತರಲು ಕೇಳಿದಾಗ ತಾನೇ ಶೆಲ್ಫಿನ ಮೇಲಿಟ್ಟು ದೊನ್ನೆಯಲ್ಲಿ ತುಪ್ಪ ತೆಗೆದುಕೊಂಡು ಹೋದದ್ದು !

"ನೋಡಿ....ಇಲ್ಲೇ ಎಲ್ಲಾದ್ರೂ ಇರ್ಬೇಕೂ !"

"ಇಲ್ಲಿದ್ರೇ ನಾನೇನು ಬಚ್ಚಿಟ್ಕೊಂಡಿದ್ದೀನಾ ?" ಪದ್ಮಮ್ಮ ಕೊಂಚ ಖಾರವಾಗಿಯೇ ಕೇಳಿದಾಗ ನಿರ್ಮಲ ದಿಕ್ಕೆಟ್ಟಳು.

"ನಿಮ್ಮೊ ತಂದ್ಯಾ ?" ಅಶೋಕ ಕೂಗುತ್ತಿದ್ದನು.

"ಬಂದೇ...." ನಿರ್ಮಲ ತನ್ನ ರೂಮಿಗೆ ಹೋಗಿ ಪರ್ಸಿನಲ್ಲಿದ್ದ ಚಿಲ್ಲರೆ ಹಿಡಿದು ಬಂದಳು.

ಬಂದವರದ್ದೆಲ್ಲಾ ಊಟವಾದ ಮೇಲೆ ಮನೆಯವರೆಲ್ಲಾ ಊಟಕ್ಕೆ ಕುಳಿತರು. ಅಡಿಗೆ ಮನೆಯಲ್ಲಿ ಚಿಲ್ಲರೆ ವಿಷಯಕ್ಕಾಗಿ ಆಗುತ್ತಿದ್ದ ಮಾತು ಕತೆ ಅಮರೇಶನ ಕಿವಿಗೆ ಸ್ವಲ್ಪಸ್ವಲ್ಪ ಬಿದ್ದಿತ್ತು. ಅವಳ ಇನ್ನೊಂದು ಪಕ್ಕ ದಲ್ಲಿ ಕುಳಿತಿದ್ದ ಅವನು ಕೇಳಿದನು.

"ಏನತ್ತಿಗೆ, ಪದ್ದಮ್ಮಂಗೂ ನಿಮಗೂ ಏನೋ ಮಾತುಕತೆ ನಡೀತಾ ಇತ್ತು ?"

"ಏನಿಲ್ಲಾ ಅಮರೇಶ. ಶೆಲ್ಫಿನ ಮೇಲೆ ಕರ್‌ಚೀಫ್‌ನಲ್ಲಿ ಇಪ್ಪತ್ತು ರೂಪಾಯಿಯಷ್ಟು ಚಿಲ್ಲರೆ ಇಟ್ಟಿದ್ದೆ. ಅದು ಇದ್ದಕ್ಕಿದ್ದಹಾಗೆ ಮಾಯವಾಗಿ ಹೋಯಿತು. ಆ ವಿಷಯ ಕೇಳ್ತಾ ಇದ್ದೆ, ಅಷ್ಟೆ."

"ನೀವು ಊಟ ಮಾಡಿ ಮುಗ್ಸಿ–ಆಮೇಲೆ ಇನ್‌ವೆಸ್ಟಿಗೇಟ್ ಮಾಡ್ತೀನಿ."

"ಸಧ್ಯ ಸುಮ್ಮನಿರು, ಬೆಳಿಗ್ಗೆ ಮಡಿ ಹಾಕ್ದೆ ಇದ್ದಿದ್ದಕ್ಕೆ ಅನಂತಣ್ಣನ ಕೈಯಲ್ಲಿ ಬೈಸಿಕೊಂಡಾಯ್ತು. ಇನ್ನು ಚಿಲ್ರೆ ಕಳ್ದಿದ್ದಕ್ಕೆ ಬೈಯ್ಲಿ !"

"ಮಡಿ ಹಾಕ್ದೇ ಇದ್ದಿದ್ದಕ್ಕೆ ನಿಮ್ಮನ್ಯಾಕೆ ಬಯ್ಬೇಕೂ ? ಆ ಕೆಲ್ಸ ಯಾವಾಗ್ಲೂ ಪದ್ದಮ್ಮ ಮಾಡೋದು. ಶಿವಮ್ಮ ನಮ್ಮ ಬಟ್ಟೆ ನೆನಸಿದ ತಕ್ಷಣ ಅವಳಿಂದ ತೆಗೆದ್ಕೊಂಡು ತಾವು ನೆನ್ಸಿ ಒಣಗಿಹಾಕೋರೂ....ಬಿಟ್ಟೆ ಕೆಲ್ಸ ಮಾಡ್ತಾರಾ ? ಸಂಬಳ ತೊಗೊಳ್ಳೋಲ್ವಾ ? ಕವಳ ಕತ್ತರಿಸೋಲ್ವಾ ?"

"ಏನದು ಇಬ್ಬರ್ದೂ ಗುಸುಗುಸು ?" ಅಶೋಕ ಕೇಳಿದಾಗ ನಿರ್ಮಲ ಅಮರೇಶನಿಗೆ ಸುಮ್ಮನಿರುವಂತೆ ಕಣ್ಸನ್ನೆ ಮಾಡಿದಳು.

"ಏನಿಲ್ಲ....ಅಮರೇಶ ಹೇಳೋ ವಿಷಯ ಗೊತ್ತಿಲ್ವೇ ನಿಮಗೆ ?"

ಎಲ್ಲರೂ ಊಟ ಮುಗಿಸಿ ಬಂದವರೆಲ್ಲಾ ಹೊರಟುಹೋದ ಮೇಲೆ ಅಶೋಕ ಅರವಿಂದರ ಜೊತೆ ಮಾತನಾಡುತ್ತಿದ್ದಾಗ ನಿರ್ಮಲಳಿಗೆ ಅಮರೇಶ ಅಡಿಗೆಯ ಮನೆಗೆ ಹೋದುದು ಕಣ್ಣಿಗೆ ಬಿತ್ತು. ಈ ಹುಡುಗ ಏನೋ ಗಲಾಟೆ ಮಾಡುತ್ತಾನೆಂದು ಅವಳೆದೆ ಬಡಿದುಕೊಂಡಿತು.

ಸ್ವಲ್ಪ ಹೊತ್ತಿನಲ್ಲೇ ಪದ್ದಮ್ಮನ ಗಂಟಲು ಕೇಳಿಸಿತು.

"ಅದೆಲ್ಲಾ ಮುಟ್ಬೇಡ್ವೋ, ಮಡಿ !"

"ಊಟ ಗೀಟ ಆದ್ಮೇಲೆ ಮಡಿ ಏನು ?" ಅಮರೇಶನ ಧ್ವನಿ—"ಆ ಬೋರಲು ಹಾಕಿರೋ ಅನ್ನದ ಪಾತ್ರೆಯ ಕೆಳಗಿರೋ ಅತ್ತಿಗೆ ದುಡ್ಡಿನ ಗಂಟು ಇಲ್ಲಿ ಕೊಡಿ...."

"ಯಾವ ಗಂಟು ? ದುಡ್ಡಿನ್ಗಂಟು ಎತ್ಕೊಂಡು ಸಾಯೋ ಮುದ್ಕಿ ನಾನೇ ನ್ಯಾಕ್ಲಿ ?" ಪದ್ಮಮ್ಮ ಧ್ವನಿಯೇರಿಸಿದಾಗ ಅರವಿಂದ ಎದ್ದು ಹೋದನು.

"ಏನೋ ಅದೂ ಗಲಾಟೆ ಅಮರೇಶ್ ?"

"ಬೆಳಿಗ್ಗೆ ಅತ್ತಿಗೆ ಶೆಲ್ಫಿನ ಮೇಲಿ ದುಡ್ಡಿಟ್ಟಿದ್ರೆ ಪದ್ಮಮ್ಮ ಆ ಪಾತ್ರೆ ಕೆಳಗೆ ಬಚ್ಚಿಟ್ಟಿದ್ದಾರೆ ! ನೆನ್ನೆ ಮಡೀನೂ ಹಾಕ್ದೆ ಬೆಳಿಗ್ಗೆ ಅಣ್ಣನ ಕೈಲಿ ಅತ್ತಿಗೇನಾ ಬೈಯ್ಸಿದ್ದಾರೆ !"

ಅಶೋಕನೇ ಎದ್ದು ಹೋದಾಗ ನಿರ್ಮಲಳ ಕೈಕಾಲುಗಳು ನಡುಗಿತು-ಏಳಲಾರದೇ ಅಲ್ಲಿಯೇ ಕುಳಿತಳು.

"ನೀವು ತೆಗೆದಿಲ್ಲಾಂತ ಆದ್ಮೇಲೆ ಪಾತ್ರೆ ತೆಗೆದು ತೋರ್ಸೋಕ್ಕೇನ್ರೀ ?" ಅರವಿಂದನು ಕೇಳಿದಾಗ ಪದ್ಮಮ್ಮ ಧ್ವನಿಯೆತ್ತರಿಸಿಯೇ ಹೇಳಿದರು.

"ಇಷ್ಟು ವರ್ಷಾ ಮಾಡ್ತಾ ಇದ್ದೆ, ಒಂದ್ಮಾತು ಕೇಳ್ಲಿಲ್ಲಾ—ಈಗಂತೂ ಕೂತ್ರೆ ನಿಂತ್ರೆ ಮಾತ್ಕೇಳ್ಬೇಕಾಗಿದೆ ...!"

"ಆ ಮಾತು ಹಾಗಿರಲಿ, ಪಾತ್ರೆ ತೆಗೀರಿ!". ಅಶೋಕ ಹೇಳಿದಾಗ ಅಮರೇಶ ಕೈ ಉಜ್ಜಿಕೊಂಡನು "ಅವರ್ನೇನು ಕೇಳೋದು....ಜರಗ್ರೀ ಅತ್ಲಾಗೆ, ನಾನೇ ನೋಡ್ತೀನಿ."

ಪಾತ್ರೆ ಸರಿದ ಸದ್ದು. "ನೋಡಿದ್ರಾ....ಇದೆಲ್ಲಿಂದ ಬಂತು, ಅದೇ ಬಂದು ಪಾತ್ರೆ ಕೆಳಗೆ ಬಚ್ಚಿಟ್ಕೊಳ್ತಾ ?" ಅಮರೇಶ ಕೈಯಲ್ಲಿ ನಿರ್ಮಲಳ ಕರ್ಚೀಫಿನ ಗಂಟು ಹಿಡಿದು ಬಂದಾಗ ಪದ್ಮಮ್ಮ ಹೋ ಎಂದು ಅಳಲು ಪ್ರಾರಂಭಿಸಿದರು.

"ಯಾರಿಟ್ಟಿದ್ರೋ ನನ್ಗೇನ್ಗೊತ್ತು....ನನ್ನ ಮೇಲೆ ಇಲ್ಲದ ಪಿತೂರಿ ಮಾಡಿ....ನನ್ನ ಕೆಲ್ಸದಿಂದ ತೆಗ್ಸಿ ಓಡ್ಸೋಕೇ....ಆವೊತ್ತು ಬಲಗಾಲು ಮನೆಯೊಳಗಿಟ್ಟಾಗ್ಲೇ ಗೊತ್ತಾಯಿತು. ಅವ್ಳು ಮನೆ ಮುರ್ಯೋಕೆ ಬಂದಿರೋ ದೂಂತಾ...."

"ಪದ್ಮಮ್ಮ, ನಿಲ್ಲಿಸ್ರೀ. ಮುಚ್ಚೀ ಬಾಯಿ...ಮನೆ ಮುರ್ಯೋಕೆ ಬರ್ಲಿಲ್ಲ.

ನಿಮ್ಮಂತಹ ಮನೆಹಾಳರ್ನ್ನ ಒದ್ದೋಡಿಸೋಕೆ ಬಂದಿರೋದೂ...." ಅರವಿಂದ ಅಬ್ಬರಿಸಿದನು.

ಗಲಾಟೆ ಕೇಳಿ ಮಲಗಿದ್ದ ಅನಂತನೂ ಹೊರಗೆ ಬಂದನು.

"ಏನಮ ಗಲಾಟೆ ?"

ಅರವಿಂದ ನಡೆದ ವಿಷಯ ತಿಳಿಸಿದಾಗ ಅನಂತ ನಿರ್ಲಿಪ್ತನಾಗಿ "ಸಿಕ್ತ್ರಲ್ಲಾ ....ಇನ್ನೇನ್ಮತ್ತೆ. ನಮ್ಮ ಹುಷಾರಿನಲ್ಲಿ ನಾವಿರ್ಬೇಕೂ...." ಎಂದಾಗ ಅಮರೇಶ್ ಕೆಂಪಾದನು.

"ನಿನ್ನಿಂದಾನೇ ಆ ಮುದ್ಕಿ ಕೊಬ್ಬಿರೋದೂ. ಅತ್ತಿಗೆ ಮೇಲೆ ಇಲ್ಲದ ಸಲ್ಲದ ಅಪವಾದ ಹೊರ್ಸ್ತೋದೂ..ನಿಂಗೊತ್ತಾ ಅವರು ಮಾಡ್ತಾ ಇದ್ದಿದ್ದೆಲ್ಲಾ.. ತಿಂಗಳಿಗೆ ಸಂಬ್ಳದ ಜೊತೆಗೆ ಮಗಳಿಗೆ ಎಷ್ಟು ಮನಿಯಾರ್ಡರು ಲಲಿತಮ್ಮನ ಹೆಸರ್ನಲ್ಲಿ ಕಳಿಸ್ತಾ ಇದ್ರೂಂತ ? ನನಗೆ ಐವತ್ತು ರೂಪಾಯಿ ಪಾಕೆಟ್ ಮನಿ ಕೊಟ್ಟು ಹೆಚ್ಚು ಕೇಳಿದ್ರೆ ಕೈ ತಾರಮ್ಮಯ್ಯ ಆಡಿಸ್ತಿದ್ದೀ ! ಈ ಪದ್ಮಮ್ಮ ನೂರು ಇನ್ನೂರು ಮಗಳ್ಗೆ ಕಳಿಸಿದ್ರೇ ಸುಮ್ಮನಿರ್ತಿದ್ದ್ಯಲ್ಲಾ ? ಅವರ್ಗೆ ಹೆಚ್ಗೆ ದುಡ್ಡು ಕೊಡ್ತಾ ಇದ್ಯಾ ?"

"ಅಮರೇಶ....ನಾಲಿಗೆ ಹುಷಾರ್...." ಅನಂತ ಕೂಗಿದಾಗ ಅಮರೇಶ ಕಣ್ಣು ಕಿರಿದು ಮಾಡಿದ.

"ನಾಲಿಗೆ ಬಿಗಿಹಿಡಿಬೇಕಾದ್ದು ! ನಾನಲ್ಲಾ ಹೆಗ್ಗಣದ ಹಾಗೆ ಮನೇಲೇ ಕುಳಿತು ಕನ್ನಕತ್ತರಿಸ್ತಾ ಅತ್ತಿಗೇನ ಆಡ್ಕೊಳೋ ಮುದ್ಕೀ....ಅದು ಬಿಗಿ ಹಿಡೀಬೇಕಾದ್ದು...."

ನಿರ್ಮಲ ಆ ಮಾತುಗಳನ್ನು ಕೇಳುತ್ತಾ ಕಂಬನಿದುಂಬಿದಳು. ಅನಂತನಿಗೆ ತಾನು ಮನೆಯ ಸೊಸೆ, ತನಗಿಂತ ಅಡಿಗೆಯವಳ ಮಾತೇ ಹಿತ !

ಅನಂತ ತನ್ನ ಕಡೆಗಿರುವುದು ಅರಿತು ಪದ್ಮಮ್ಮ ಕಣ್ಣೊರಸಿಕೊಂಡಳು.

"ಅನಂತಾ—ಸತ್ಯವಾಗೂ ನಾನು ಮುಟ್ಟಿಲ್ಲ....ನಾನು ಅದೂ ಇದೂ ಕೂಡಿಟ್ಟು ಮಗಳಿಗೆ ಕಳಿಸ್ತಾ ಇದ್ದೆ....ಹೋದ ತಿಂಗ್ಳೆಲ್ಲಾ ಖರ್ಚು ಬಿಗಿ ಹಿಡಿದು ದುಡ್ಡು ಉಳಿಸಿದ್ದು ನಾನಾ ? ನಿಂಗೇನಿದ್ರೂ ಆ ಸಮಾಚಾರ ಗೊತ್ತಾ ? ನನಗ್ಯಾವ ತೌರುಮನೆ ಇದೆ ದುಡ್ಡು ಕಳಿಸೋಕೆ ?"

ನಿರ್ಮಲ ಕಿವಿ ಮುಚ್ಚಿಕೊಂಡಳು. ದೂರದಿಂದಲೇ ಅವಳನ್ನು ಗಮನಿಸುತ್ತಿದ್ದ ಅಶೋಕ ಸಿಡಿದೆದ್ದನು.

"ಅನಂತ....ನಿಂಗೆ ಪದ್ದಮ್ಮ ಹೇಳೋದೇ ಸರಿ ಅನ್ನೋದಾದ್ರೇ ನಾನು ನಿರ್ಮಲ ಬೇರೆ ಸಂಸಾರ ಹೂಡ್ತೀವಿ. ನೀನೂ, ಅರವಿಂದ, ಅಮರೇಶ, ಅಜಯ್ ಹಾಯಾಗಿರ್ಬೋದೂ....!"

ಅನಂತ ಅಚ್ಚರಿಯಿಂದ ಕಣ್ಣರಳಿಸಿದನು. ಅಜಯ್ ಒಳಗಿಂದ ಬಂದನು. "ಅಲ್ಲಿಯವರೆಗೂ ಹೋಯಿತಾ ?"

"ಅಶೋಕನ ಜೊತೆ ನಾನೂ ಹೋಗ್ತೀನಿ; ನಾನು ಇರೋಲ್ಲ..."ಅಮರೇಶ ಹೇಳಿದ.

"ನಂಗಿಲ್ಲಿರೋಕೆ ಸಾಧ್ಯವಿಲ್ಲ-ನಾನು ಎಲ್ಲಾದ್ರೂ ರೂಂ ಮಾಡ್ಕೋತೀನಿ."

"ಇನ್ನೇನಪ್ಪಾ. ಮೈದುನರಿಗೆಲ್ಲಾ ಮಂಕುಬೂದಿ ಹಾಕಿ ಕೈವಶ ಮಾಡ್ಕೊಂಡಿದ್ದಾಳೆ. ಅವರ್‍ಯಾಕೆ ನಿಂಜೊತೆ ಇರ್‍ತಾರೆ ?" ಪದ್ದಮ್ಮ ಹೇಳಿದಾಗ ಅಜಯ್ ಮುಂದೆ ಬಂದನು. ಅವನ ಮುಖ ಅರಕ್ತವಾಗಿತ್ತು. ಕಣ್ಣುಗಳು ಕಿಡಿಗಾರುತ್ತಿದ್ದವು.

"ತೊಗೊಳ್ರೀ ನಿಮ್ಮ ಸಾಮಾನೆಲ್ಲಾ—ಗಂಟು ಕಟ್ಕೊಳ್ಳಿ. ಬಾಯಿ ತೆರೆದ್ರೆ ಕತ್ತು ಹಿಡಿದು ನೂಕ್ಬಿಡ್ತೀನಿ....ನಡೀರಿ ಮನೆ ಬಿಟ್ಟು - ಅತ್ತಿಗೆ ಶೀಲದ ವಿಚಾರ ಮಾತಾಡ್ತೀರಾ ನೀವೂ !"

ಅಶೋಕ ತಲೆಯ ಮೇಲೆ ಕೈ ಹೊತ್ತು ಕುಳಿತನು.

"ಈಗ್ಲೂ ಯೋಚನೆ ಮಾಡು ಅನಂತ-ನಾವು ನಾವು ಚೆನ್ನಾಗಿರ್ಬೇಕಾದ್ರೇ ಈ ಮುದ್ಕಿ ಇಲ್ಲಿಂದ ತೊಲಗಬೇಕು....ವೆಂಕಟ್ತಿ ಆಗಾಗ ಹೇಳ್ತಾ ಇದ್ರು. ಇದು ಕೆಂಪು ಚೇಳೂಂತಾ....!"

ನಿರ್ಮಲ ತನ್ನ ರೂಮಿಗೆ ಓಡಿಹೋದಳು. ತನಗೆಂತಹ ಅಪವಾದ! !

"ಏನಾದ್ರೂ ಮಾಡ್ಕೊಳ್ಳಿ....ನಿಮಗೆಲ್ಲಾ ತೊಂದ್ರೆ ಆಗ್ದೇ ಇರ್‍ಲೀಂತಾ ಇದ್ದಿದ್ದು. ನನಗೇನು ಎಲ್ಲೋ ಹೇಗೋ ನಡ್ಯತ್ತೆ ! ಆಶ್ರಮಕ್ಕೆ ಸೇರಿಬಿಡ್ತೀನಿ !"

"ಏನಾದ್ರೂ ಮಾಡ್ಕೊಳ್ಳಿಂದ್ಯಲ್ಲಾ....ನೀನು ಒಳಗೆ ಹೋಗು. ನಾವು ಇನ್ಮೇಲೆ ನಿನ್ನ ನೋಡ್ಕೋತೀವಿ—!" ಅಜಯ ಅನಂತನನ್ನು ಒಳಗೆ ಕೈ ಹಿಡಿದು ಕರೆದೊಯ್ದನು. "ಪದ್ದಮ್ಮ ಆಲ್ದಿದ್ರೆ ಬೇರೆ ಯಾರಾದ್ರೂ ಸಿಕ್ತಾರೆ!"

ನಿಮ್ಮಲ ದಿಂಬಿನಲ್ಲಿ ಮುಖ ಮುಚ್ಚಿ ಅಳುತ್ತಿದ್ದಳು. ತಾನೆಂದು ಕೊಂಡಿದ್ದೇನು, ಆದದ್ದೇನು ? ಅತ್ತೆ ನಾದಿನಿಯರಿಲ್ಲದಿದ್ದರೂ ಅಡಿಗೆಯವರು, ಕೆಲಸದವರು ಇದ್ದಾರಲ್ಲ ತನ್ನ ಬಾಳು ಹಾಳು ಮಾಡಲು !

ಹಿತ್ತಲಲ್ಲಿ ಪಾತ್ರೆ ತೊಳೆಯುತ್ತಿದ್ದ ಶಿವಮ್ಮನ ಸಾಕ್ಷಿಯೂ ಆಯಿತು. ಪದ್ಮಮ್ಮ ನಿರ್ಮಲನಿಗೆ ಹಿಡಿಶಾಪ ಹಾಕುತ್ತಾ ಗಂಟುಮೂಟೆ ಕಟ್ಟಿದಾಗ ಅಮರೇಶ ಆಟೋರಿಕ್ಷಾ ಕರೆದು ಹತ್ತಿಸಿದನು. "ಅಪ್ಪಿತಪ್ಪಿ ಇನ್ನೊಂದ್ಸಲ ಇಲ್ಲಿ ಕಾಲಿಡ್ಬೇಡಿ...."

ಅಳುತ್ತಿದ್ದ ನಿರ್ಮಲನಿಗೆ ಅಶೋಕನ ಜೊತೆ ಸ್ನೇಹದುಸರೂ ಬಂದಾಗ ಹೃದಯ ತುಂಬಿಬಂತು.

"ನೀವ್ಯಾಕೆ ಅಳ್ತೀರಿ ಅತ್ತಿಗೆ ? ಅದೊಂದು ನಾಯಿ, ಅವಳಾಡಿದ ಮಾತಿಗಲ್ಲಾ ಅಳ್ಬೇಕಾ ? ನೀವೇ ಇವೊತ್ತು ಅವಳನ್ನ ಕತ್ತು ಹಿಡಿದು ಹೊರಗೆ ಹಾಕ್ಬೇಕಿತ್ತು !" ಅರವಿಂದ ಹೇಳಿದ.

"ತೊಲಗ್ತಪ್ಪಾ ಪೀಡೆ...." ಅಮರೇಶ ಕೈಮುಗಿದನು.

"ಯಾರಾದ್ರೂ ಒಳ್ಳೆಯ ಅಡಿಗೆಯವರನ್ನ ಎಲ್ರೂ ಹುಡುಕೋಣ !" ಅಜಯ ಹೇಳಿದನು.

"ಅಡಿಗೆಯವರು ಸಿಕ್ಕೋತನ್ಕ ಸ್ವಲ್ಪ ಕಷ್ಟ ಆಗ್ಬೋದು—ನಾವೆಲ್ಲಾ ನಿರ್ಮಲಂಗೆ ಸಹಾಯ ಮಾಡಿದ್ರಾಯ್ತು ಅಲ್ವೇನೋ !" ಅಶೋಕ ಹೇಳಿದ.

ಅನಂತ ರೂಮು ಬಿಟ್ಟು ಹೊರಗೆ ಬರಲಿಲ್ಲ.

ನಿರ್ಮಲನಿಗೆ ಈಗ ಹೊಸ ದಿನಚರಿ ಪ್ರಾರಂಭವಾಯಿತು. ಬೆಳಗ್ಗೆ ಐದು ಗಂಟೆಗೆ ಎದ್ದು ಒಲೆಗೆ ಉರಿ ಹಾಕಿ ಎಲ್ಲರಿಗೂ ಕಾಫಿ ತಿಂಡಿ ಮಾಡಿ ಅಡಿಗೆ ಮಾಡಬೇಕಿತ್ತು. ಚಪಾತಿ ಲಟ್ಟಿಸಲು ಅಮರೇಶ ನೆರವಾಗುತ್ತಿದ್ದನು ಶಿವಮ್ಮ ತೊಳೆದ ಪಾತ್ರೆಗಳನ್ನು ಒಳಗೆ ತಂದಿಡುತ್ತಿದ್ದಳು. ಅಶೋಕನೂ ಅಡಿಗೆ ಮನೆಯಲ್ಲಿ ಅವಳಿಗೆ ನೆರವಾಗುತ್ತಿದ್ದನು. ಮುಂಚೆ ಹೊತ್ತು ಹೋಗುವು ದಿಲ್ಲವೆಂದು ಗೊಣಗುತ್ತಿದ್ದ ನಿರ್ಮಲಳಿಗೆ ಹೊತ್ತು ಹೋಗುವುದೇ ತಿಳಿಯುತ್ತಿರ ಲಿಲ್ಲ. ಅಜಯ ತಪ್ಪದೆ ಅತ್ತಿಗೆಗೆ ಸಂಜೆ ಆಫೀಸಿನಿಂದ ಬರುವಾಗ ತರಕಾರಿ ಗಳನ್ನು ತರುತ್ತಿದ್ದನು. ಹದಿನೈದು ದಿನಗಳಲ್ಲಿ ನಿರ್ಮಲ ಸುಸ್ತಾಗಿ ಬಸವಳಿ ದಳು. ಅನಂತ ಎಂದಿನಂತೆ ಯಾವ ಬದಲಾವಣೆಯೂ ಆಗಲೇ ಇಲ್ಲವೆನ್ನು

ವಂತಿದ್ದನು. ಅವನು ಬದಲಾಗಿ ಹೆಚ್ಚಾಗಿ ತನ್ನ ಕೊಠಡಿಯಲ್ಲೇ ಇರುತ್ತಿದ್ದನು. ಅವನಿಗೇನಾದರೂ ಬೇಕಾದಲ್ಲಿ ಅಮರೇಶನೋ ಅರವಿಂದನೋ ತೆಗೆದುಕೊಂಡು ಹೋಗಿ ಕೊಡಬೇಕಿತ್ತು. ಅವನು ರೂಮಿನಿಂದ ಹೊರಗೆ ಬರುತ್ತಿದ್ದುದು ಮುಖ ತೊಳೆಯುವಾಗ, ಸ್ನಾನ ಮಾಡುವಾಗ, ಊಟ ಮಾಡುವಾಗ, ಆಫೀಸಿಗೆ ಹೊರಡುವಾಗ. ಮಿಕ್ಕೆಲ್ಲಾ ಹೊತ್ತನ್ನು ರೂಮಿನಲ್ಲಿ ಕುಳಿತು ದೊಡ್ಡ ದೊಡ್ಡ ಗ್ರಂಥಗಳನ್ನು ಓದುತ್ತಾ ಕುಳಿತುಬಿಡುತ್ತಿದ್ದನು.

ಪದ್ಮಮ್ಮ ಮನೆ ಬಿಟ್ಟು ಹೋದ ಮೇಲೆ ಮನೆ ತುಂಬಿ ತುಳುಕುತಿತ್ತು-ಅರವಿಂದ ಅಮರೇಶರಿಗಂತೂ ಹೊಸ ಜೀವ ಬಂದಹಾಗಿತ್ತು. ಇಲ್ಲಿ ಬರಬೇಡಾ, ಅಲ್ಲಿ ಹೋಗಬೇಡಾ, 'ಮಡಿ' ಎಂದು ತಡೆಯುವವರು ಯಾರೂ ಇರಲಿಲ್ಲ. ಅತ್ತಿಗೆಯ ಹಿಂದೆ ಸುತ್ತುತ್ತಾ ಮಾತಾಡುತ್ತಾ ನಗುತ್ತಾ ಕಾಲ ಕಳೆಯುತ್ತಿದ್ದರು. ಅನಂತ ಅದನ್ನು ಗಮನಿಸಿಯೂ ಗಮನಿಸದಂತಿದ್ದನು.

ಅಮರೇಶನಂತೂ ಅವಳಿಗೆ ಬೇಸರವಾಗದ ಹಾಗೆ ಕಾಲೇಜಿನ ವಿಷಯ, ತಾನು ಹೋಗುತ್ತಿದ್ದ ಆಸ್ಪತ್ರೆಯ ವಿಷಯ, ತಾನು ನೋಡುತ್ತಿದ್ದ ಹುಡುಗಿಯರ ವಿಷಯ ಹೇಳುತ್ತಿದ್ದನು. ಅವನು ಹೊತ್ತಾಗಿ ಬಂದಾಗ ಅವನನ್ನು ಯಾರೂ ಕೇಳುತ್ತಿರಲಿಲ್ಲ. ಕೇಳಿದರೆ ನಿರ್ಮಲ ಒಬ್ಬಳೇ! ಊರಿನಿಂದ ಅವಳನ್ನು ನೋಡಿ ಹೋಗಲು ಒಮ್ಮೆ ವಿಶ್ವನಾಥ ಬಂದಿದ್ದನು. ತಾಯಿ ಮನೆಯಿಂದ ಬಂದಾಗ ಮೈ ಕೈ ತುಂಬಿಕೊಂಡು ನಳನಳಿಸುತ್ತಿದ್ದ ನಿರ್ಮಲ ಈಗ ಕೊಂಚ ಸೊರಗಿದ್ದಳು. ಹುಡುಗುತನ ಮರೆಯಾಗಿ ಗಾಂಭೀರ್ಯ ಮನೆಮಾಡಿತ್ತು. ಅವನು ಬಂದಾಗ ಅತ್ತಿಗೆಯನ್ನು ಎಲ್ಲಿ ಕರೆದೊಯ್ಯುವನೋ ಎಂಬ ಭಯ ಅಮರೇಶನಿಗೆ ಉಂಟಾಯಿತು.

"ಅತ್ತಿಗೆ, ನೀವೇನಾದ್ರೂ ತೌರುಮನೆಗೆ ಹೋದ್ರೇ ನಾನು ಸುಮ್ಮನಿರೋಲ್ಲ...."

ಆತಂಕದಿಂದ ಅರವಿಂದ ಕೇಳಿದನು "ಅದೇನು ನಿಮ್ಮ ಅಣ್ಣ ಬಂದಿದ್ದು?"

ಅಶೋಕ್ ಅವನ ಮುಂದೆ ತನಗೆ ಅಡಿಗೆ ಕೆಲಸಕ್ಕೆ ಯಾರಾದರೂ ಬೇಕೆಂದು ತಿಳಿಸಿದಾಗ ವಿಶ್ವ ತಕ್ಷಣ ಹೇಳಿದನು-"ಹೆಂಗಸರು ಸಿಕ್ಕೋದು ಕಷ್ಟಾನೇ! ಒಂದಲ್ಲಾ ಒಂದು ಕಂಡೀಷ‌ನ್ ಹಾಕ್ತಾರೆ....ಹುಡುಗ ಆದ್ರೆ ನೋಡ್ಬೋದೂ...."

"ಏನು ನಿರ್ಮಲ....ನಿಂಗೆ ಅಡಿಗೆ ಮನೇಲಿ ಹೆಲ್ಪ್ ಮಾಡೋಕೆ ಹುಡ್ಗ ಇದ್ರೆ ಸಾಕಲ್ವಾ? ಅವನ್ನೇ ನೀನು ಟ್ರೈನ್ ಮಾಡ್ಬೋದೂ....ಮನೆ ತುಂಬಾ ನಾವು ಗಂಡಸ್ರು-ನಮ್ಮ ಕೆಲಸಾನೆಲ್ಲಾ ಮಾಡ್ಬೋದೂ....!"

"ಏನೋಪ್ಪಾ ಯಾರು ಸಿಕ್ರೂ ಸರಿ, ಒಳ್ಳೇಯವರಾಗಿದ್ರೆ ಸಾಕು!" ನಿರ್ಮಲ ಹೇಳಿದಳು.

ವಿಶ್ವ ಹಿಂತಿರುಗಿ ಹೋದ ವಾರದಲ್ಲಿ ಕಾಗದ ಬಂತು. ಗೋವಿಂದ ಎಂಬ ಹುಡುಗ ಇದ್ದಾನೆಂದೂ ಎರಡನೇ ಕ್ಲಾಸು ಓದಿರುವನೆಂದೂ ತೀರ ಬಡತನ ದಲ್ಲಿರುವುದರಿಂದ ಯಾವ ಕೆಲಸವನ್ನಾದರೂ ಮಾಡುವನೆಂದೂ ಸಂಬಳದ ವಿಷಯ ಅಶೋಕನೇ ನಿರ್ಣಯಿಸಲೆಂದು ಬರೆದಿದ್ದನು. ಒಪ್ಪಿದರೆ ಯಾರ ಜೊತೆಯಲ್ಲಾದರೂ ಕಳುಹಿಸಿ ಕೊಡುವುದಾಗಿಯೂ ತಿಳಿಸಿದ್ದನು.

ಎಲ್ಲರೂ ಆ ಹುಡುಗನ ವಿಷಯಕ್ಕೆ ಒಪ್ಪಿದರೂ ಅನಂತ ಮೂಗೆಳೆದನು.

"ಬರ್ಬೇಕಾದ್ರೇ ಎಲ್ಲರೂ ಮೆತ್ತಗೆ ಬರ್ತಾರೆ, ಆಮೇಲೆ ಜೋರಾಗಿ ಬಿಡ್ತಾರೆ!"

"ಹಾಗಂತ ಎಷ್ಟು ದಿನ ಅತ್ತಿಗೆ ಒಬ್ರೇ ಎಲ್ಲಾ ಮಾಡಕ್ಕಾಗುತ್ತೆ?" ಅರವಿಂದ ಕೇಳಿದನು. "ಸ್ವಲ್ಪ ದಿನ ಟ್ರೈ ಮಾಡೋಣ. ಸರಿಹೋಗದಿದ್ರೆ ಬಿಡಿಸಿದರಾಯ್ತು!"

ಅಂತೆಯೇ ಗೋವಿಂದನೊಂದು ದಿನ ಬಂದನು. ಅವನ ವೇಷ, ಉಡಿಗೆ ತೊಡಿಗೆ, ಮಾತುಕತೆ ನೋಡಿ ಅರವಿಂದನೇ ಹಾಸ್ಯ ಮಾಡಿದನು. ಪಾಪ, ಏನೂ ಅರಿಯದ ಹುಡುಗ; ಬಡತನದಲ್ಲಿ ಬೆಂದು ಅರ್ಧವಾಗಿದ್ದ. "ಇವನನ್ನ ತಿದ್ದಿ ಸರಿಮಾಡೋದ್ರಲ್ಲಿ ಮುದುಕ ಆಗೋಗ್ತಾನೆ, ಜೋರಾಗೋದಿಲ್ಲ... ಕೂತ್ಕೊಳ್ಳೋದೂ ನಿಂತ್ಕೊಳ್ಳೋದೂ ಹೇಳಿಕೊಡಬೇಕು...." ಅವನ ಮೈ ಮುಖ ಶುಚಿಯಾಗಿ ತೊಳೆದುಕೊಳ್ಳುವುದರಿಂದ ಹಿಡಿದು ಮಾತುಕತೆ, ನಡೆ-ನುಡಿ, ಕೆಲಸ ಹೇಳಿಕೊಡುವುದಕ್ಕೆ ಒಂದು ತಿಂಗಳಾಯಿತು.

ಗೋವಿಂದ ನಿರ್ಮಲಳಿಗೆ ಎರಡು ಕೈಯ್ಯಾಳಂತಾದನು. ಅನಂತನ ಕೊಠಡಿಗೂ ಹೋಗಿ ಶುಚಿಮಾಡಿ ಅವನ ಬೇಕು ಬೇಡಗಳನ್ನು ನೋಡಿಕೊಳ್ಳು ತ್ತಿದ್ದನು. ಮತ್ತೊಂದು ಬಾರಿ ಮತ್ತೆ ಅವನಿಗೆ ಉಬ್ಬಸ ಉಲ್ಬಣಿಸಿದ್ದಾಗ

ಅವನ ಮಗ್ಗಲು ಬಿಟ್ಟು ಸರಿಯಲಿಲ್ಲ. ಕೆಲವೇ ದಿನಗಳಲ್ಲಿ ಅನಂತನಿಗೂ ಅಚ್ಚುಮೆಚ್ಚಾದನು

ಒಂದು ದಿನ ಎಲ್ಲರೂ ರಾತ್ರಿಯ ಊಟ ಮುಗಿಸಿದ್ದರೂ ಸಂಜೆ ಮನೆ ಬಿಟ್ಟು ಹೋದ ಅಮರೇಶ ಬಂದಿರಲಿಲ್ಲ. ಅನಂತನ ಹುಬ್ಬುಗಳು ಗಂಟಿಕ್ಕಿದವು.

"ಅತ್ತಿಗೆಯ ಸಲಿಗೆ ಜಾಸ್ತಿ, ಈಚೀಚೆಗೆ ಮನಸ್ಸಿಗೆ ಬಂದಂತೆ ಬರ್ತಾನೆ, ಹೋಗ್ತಾನೆ! ಅವನ ಸಹವಾಸ ಚೆನ್ನಾಗಿಲ್ಲ!"

ಅಡಿಗೆ ಮನೆಯನ್ನು ಗೋವಿಂದನ ಕೈಯ್ಯಲ್ಲಿ ತೊಳೆಸುತ್ತಿದ್ದ ನಿರ್ಮಲಳ ಕಿವಿಗೆ ಬಿತ್ತು. ಹಿಂದಿನ ದಿನವೇ ತನ್ನ ಬಳಿ ಹೇಳಿದ್ದ, "ಎಲ್ಲರಿಗೂ ಸ್ಕೂಟರೋ ಮೋಟಾರ್ ಸೈಕಲ್ಲೋ ಕಾರೋ ಇವೆ. ನಾನು ಬಸ್ಸಿಗೆ ಕಾದ್ಕೊಂಡು ಇಲ್ದಿದ್ರೆ ಬಾಡಿಗೆ ಸೈಕಲ್ಲು ತಳ್ಕೊಂಡು ಬರೋ ಹೊತ್ಗೆ ಸಾಕಾಗುತ್ತೆ. ಅವ್ರೆಲ್ಲರಿಗೂ ಇನ್ನೂ ಡಾಲಿ ಮೇಲೇ ಕಣ್ಣು!" ಪಾಪ, ಅಮರೇಶನ ವಿಷಯವೆಂದರೆ ಎಲ್ಲರಿಗೂ ಅಸಡ್ಡೆ! ಅಡಿಗೆ ಮನೆಯಿಂದಲೇ ಅಶೋಕನನ್ನು ಕರೆದಳು.

"ಇಲ್ನೋಡೀ....ಅಮರೇಶನ ಹತ್ತಿರ ಯಾವ ವೆಹಿಕಲ್ಲೂ ಇಲ್ಲ...ಅವಕ್ಕೆ ಬಸ್ಸಿಗೆ ಕಾದು ಬರೋದು ಲೇಟಾಗುತ್ತದೆ!"

"ಅವ್ನು ಮಾಡೋ ಕೆಲ್ಸಕ್ಕೆ ಕಾರು ಕೊಂಡ್ಕೊಡ್ಬೇಕೇನೂ?" ಅನಂತನೇ ಉತ್ತರಿಸಿದನು.

ನಿರ್ಮಲ ನಿರುತ್ತರಳಾದಳು. ಒಬ್ಬರಿಗೂ ಅವನ ಕಷ್ಟ ಸುಖಗಳನ್ನು ವಿಚಾರಿಸುವ ವ್ಯವಧಾನವಿರಲಿಲ್ಲ.

ಅಂದು ಅಮರೇಶ ಬಂದಾಗ ರಾತ್ರಿ ಹತ್ತು ಗಂಟೆಯಾಗಿತ್ತು. ಮುಖ ಬಾಡಿತ್ತು. ದಾರಿಯಲ್ಲಿ ಅವನ ಬಾಡಿಗೆ ಸೈಕಲ್ ಪಂಕ್ಚರ್ ಆಗಿ, ಪಂಕ್ಚರ್ ಹಾಕಿಸಿಕೊಂಡರೂ ಲೈಟಿಲ್ಲದೆ ಕೈ ಕೊಟ್ಟ ಹಳೆಯ ಸೈಕಲನ್ನು ತಳ್ಳಿಕೊಂಡು ಮನೆಯವರೆಗೆ ಬಂದುದನ್ನು ಯಾರೂ ನಂಬಲಿಲ್ಲ.

"ಬೇಕಾದ್ರೇ ಸೈಕಲ್ ಶಾಪ್ ಸಿದ್ದಣ್ಣನ್ನೇ ಕೇಳಿ" ಎಂದಾಗ ಅಶೋಕ ಎದ್ದು ಆಕಳಿಸಿ ನಿಂತನು "ಹಾಗಲಕಾಯಿಗೆ ಬೇವಿನ ಕಾಯಿ ಸಾಕ್ಷಿ...." ರಾತ್ರಿ ಮಲಗುವಾಗ ನಿರ್ಮಲ ಒಂದು ನಿರ್ಧಾರಕ್ಕೆ ಬಂದಳು.

ಮೂರನೆಯ ದಿನ ತಲೆ ಬಾಚಿಕೊಳ್ಳುತ್ತಿದ್ದ ಅಮರೇಶನ ಬಳಿಗೆ ಬಂದಳು. ಅಲ್ಲಿದ್ದ ಕುರ್ಚಿಯ ಮೇಲೆ ಕುಳಿತಳು.

"ಅಮರೇಶ, ಸ್ಕೂಟರ್‌ಗೆ ಎಷ್ಟಾಗುತ್ತೆ ?"

"ಯಾಕತ್ತಿಗೆ, ನಿಮಗ್ಗೂ ಒಂದು ಬೇಕಾ ?"

"ಸುಮ್ನೇ ಹೇಳ್ಬಾರ್ದಾ ? ಯಾರಿಗೊ ಬೇಕಾಗಿತ್ತು; ಸೆಕೆಂಡ್ ಹ್ಯಾಂಡ್ ಆದ್ರೂ ಪರ್ವಾಗಿಲ್ಲ."

"ನೀವು ಕೇಳುತ್ತಿದ್ದೀರಲ್ಲಾಂತ ಹೇಳ್ತಾ ಇದ್ದೀನಿ-ನನ್ನ ಫ್ರೆಂಡ್ ಹೊಸ ಸ್ಕೂಟರ್ ತೊಗೋತಾ ಇದ್ದಾನೆ-ಹಳೇದು ಕೊಟ್ಬಿಡ್ತಿದ್ದಾನೆ ... ಸಾವಿರದೈನೂರು ಅಡ್ವಾನ್ಸ್....ಮಿಕ್ಕಿದ್ದು ಆಮೇಲೆ ಕೊಡ್ಬೋದೂ...."

"ಹೌದಾ" ನಿರ್ಮಲ ಎದ್ದು ನಿಂತಳು. "ಒಂದು ನಿಮಿಷ ಇರು."

ನಿರ್ಮಲ ಹೋಗಿ ಪ್ರತಿ ತಿಂಗಳೂ ಮಿಗುತ್ತಿದ್ದ ಹಣವನ್ನು ತನ್ನ ಸೀರೆಯ ಮಡಿಕೆಯಲ್ಲಿ ಮುಚ್ಚಿಡುತ್ತಿದ್ದಳು. ಅವುಗಳನ್ನು ಮೆಲ್ಲಗೆ ಎಣಿಸಿದಳು. ನಾಲ್ಕು ತಿಂಗಳಿಂದ ತಾನು ಮಿಗಿಸಿದ್ದುದು ಸಾವಿರದ ಇನ್ನೂರೇ....! ಅದನ್ನೇ ಹಿಡಿದು ಅಮರೇಶನ ರೂಮಿಗೆ ಬಂದಳು.

"ಕಣ್ಮುಚ್ಕೋ....ಅಮರೇಶನಿಗೊಂದು ವರ ಕೊಡ್ತೀನಿ...."

ಅಮರೇಶ ಕಣ್ಮುಚ್ಚಿ ನಿಂತನು. "ನೀವು ಶಾಪ ಕೊಟ್ರೂ ಪರವಾಗಿಲ್ಲ ... ನನ್ನ ನಟರಾಜ ಸರ್ವೀಸ್ನಿಂದ ಪಾರು ಮಾಡಿದ್ರೆ ಸಾಕು... ಈ ಶೂಸುಗಳೂ ಕಿತ್ಕೋಗ್ತಾ ಬಂತು, ನಡೆದೂ ನಡೆದೂ."

ಅವನ ಕೈ ತೆಗೆದು ಅದರಲ್ಲಿ ದುಡ್ಡಿಟ್ಟಳು. "ಈಗ ಕಣ್ತೆಗಿ."

ಕೈಯಲ್ಲಿದ್ದ ದುಡ್ಡನ್ನು ನೋಡಿ ಅಚ್ಚರಿಗೊಂಡನು.

"ಅತ್ತಿಗೆ ! ಇಷ್ಟೊಂದು ದುಡ್ಡು ! ಎಲ್ಲಿತ್ತು ? ಅಶೋಕ ಕೊಟ್ನಾ ?"

"ಅದೆಲ್ಲಾ ಕೇಳ್ಬೇಡಾ...ಸಾವಿರದ ಇನ್ನೂರಿದೆ....ನಿನ್ನ ಫ್ರೆಂಡಿಗೆ ಹೇಳಿ ಹಾಗೂ ಹೀಗೂ ಅಡ್ಜಸ್ಟ್ ಮಾಡಿಕೋ. ಆಮೇಲೆ ಬೇಕಾದ್ರೆ ತಿಂಗಳಿಗೆ ಇನ್ನೂರು ಕೊಟ್ಟು ತೀರಿಸ್ಸು. ನಾನು ಕೊಡ್ತೀನಿ."

ಅಮರೇಶ ಏನು ಮಾಡಲೂ ತೋರದೆ ಕುಣಿದುಬಿಟ್ಟನು.

"ಅತ್ತಿಗೇ ! ನಾನು ಸಂಪಾದಿಸೋಕೆ ಶುರು ಮಾಡೋತ್ಲೂ ನಿಮ್ಮ ದುಡ್ಡು ವಾಪಸ್ ಕೊಟ್ಬಿಡ್ತೀನಿ. ನಿಮ್ಮ ಉಪಕಾರ ಮರೆಯೊಲ್ಲ !"

ಇದಾದ ಎರಡು ದಿನಗಳಲ್ಲಿ ಅಮರೇಶ ಸ್ಕೂಟರನ್ನು ಹತ್ತಿ ಮನೆಗೆ ಬಂದಾಗ ನಿರ್ಮಲ ಹಿಗ್ಗಿದಳು. ಗೋವಿಂದ ಅದನ್ನು ಮುಟ್ಟಿ ನೋಡಿ ಹಿಗ್ಗಿದನು.

"ಹೇಗಿದೆ ಅತ್ತಿಗೆ ನನ್ನ ರಥ ?"

"ಅದನ್ನ ನೀನು ಹೇಳಬೇಕು. ಆದ್ರೆ ಯಾರಿಗೂ ಹೇಳ್ಬೇಡಾ-ಯಾರು ದುಡ್ಡು ಕೊಟ್ರೂಂತ! ಹೇಳಿದ್ರೆ ನನ್ನಾಣೆ !"

ಮನೆಯ ಮುಂದೆ ನಾಲ್ಕು ವಾಹನಗಳ ಮಧ್ಯೆ ಐದನೆಯದು ನಿಂತಿದ್ದನ್ನು ಕಂಡು ಸಂಜೆ ಹೊರಗೆ ಹೋಗಿ ಬಂದ ಅನಂತ ನೋಡಿ,

"ಗೋವಿಂದಾ-ಯಾರ್ದ್ದೋ ಇದು ?"

"ಚಿಕ್ಕ ಸ್ವಾಮೇರ್ದು."

"ಎಲ್ಲಿ ಅವನ್ನ ಕರಿ..."

ಅಮರೇಶ ಅತ್ತಿಗೆಗೆ ಚಪಾತಿ ಲಟ್ಟಿಸಿ ಕೊಡುತ್ತಿದ್ದನು. ಅನಂತ ತನ್ನನ್ನು ಕರೆದುದು ಕೇಳಿ ಕಣ್ಣುಮುಚ್ಚಿ ಕುಳಿತ.

"ಏನೋ ಗ್ರಹಚಾರ ವಕ್ರಿಸಿತು" ಅನಂತನ ಮುಂದೆ ನಿಂತನು.

"ಏನಯ್ಯಾ, ಯಾರ್ದು ಈ ಗಾಡಿ ?"

"ನಂದು !"

"ಎಲ್ಲಿತ್ತು ದುಡ್ಡು ?"

"ನನ್ನ ಫ್ರೆಂಡ್ ಹತ್ತಿರ ಬಾರೋ ಮಾಡಿದ್ದೀನಿ !" ಅಮರೇಶ ಸುಳ್ಳನ್ನು ಹಾಯಾಗಿ ಹೇಳಿದ.

"ಎಷ್ಟು ?"

"ಮೂರು ಸಾವಿರ."

"ಯಾರನ್ನ ಕೇಳಿ ಮಾಡ್ದಿ ನೀನು. ? ನಾಳೆ ಅವನು ಬಂದು ದುಡ್ಡು ಕೇಳಿದ್ರೆ ಏನ್ಮಾಡ್ತೀಯಾ ? ಹೇಳೋರೂ ಕೇಳೋರು ಯಾರೂ ಇಲ್ವಾ ನಿಂಗೆ? ನನ್ನನ್ನ ಒಂದ್ಮಾತು ಕೇಳಿದ್ರೇ ಏನಾಗಿತ್ತು ? ನಾಳೇನೇ ವಾಪಸ್ ಕೊಟ್ಬಿಡೂ !" ಅನಂತ ಗದರಿ ಒಳಗೆ ಹೋದನು. ಅವನ ಅನಂತರ ಅಶೋಕ ಪ್ರಾರಂಭಿಸಿದನು : "ಸಾಲ ಗೀಲ ಚೆನ್ನಾಗಿರೊಲ್ಲ....ಒಂದೆರಡು ಸಾವಿರ ಕೈಲಿದ್ದಿದ್ರೇ ನಾನೇ ಕೊಡಿಸ್ತಾ ಇದ್ದೆ. ಈಗ ಬೇಡಾ ಕೊಟ್ಬಿಡು..."

"ಪೇಪರ್ ವಾಲ್ಯೂಯೇಷನ್ ದುಡ್ಡು ಬಂದ್ರೆ ಕೊಡ್ತೀನಿ....ಆಗ ತೊಗೋವಂತೆ, ಈಗ ಬೇಡಾ...." ಅರವಿಂದ ಹೇಳಿದ.

"ಬೋನಸ್ ಬರುತ್ತೆ ಕೊಡ್ತೀನೋ ! ಆಗ ತೊಗೋ !" ಅಜಯ್ ಹೇಳಿದ.

ಅಮರೇಶ ಅತ್ತಿಗೆಯ ಬಳಿ ಬಂದು ಅವರು ಹೇಳಿದುದೆಲ್ಲವನ್ನೂ ಹೇಳಿ ನಕ್ಕನು. "ನೀವೇ ವಾಸಿ, ಅವರೆಲ್ಲರಿಗಿಂತ ದೊಡ್ಡ ಕುಬೇರರು !"

ಒಂದು ವಾರವಾದರೂ ಅವನು ಸ್ಕೂಟರನ್ನು ಹಿಂತಿರುಗಿಸದಿದ್ದಾಗ ಅನಂತನಿಗೆ ಬಹಳ ಕೋಪ ಬಂತು.

"ತೊಗೊಂಡ್ಹೋಗಿ ಕೊಡ್ದೇ ಇದ್ರೇ ನಾನೇ ತೊಗೊಂಡ್ಹೋಗಿ ಕೊಟ್ಟ್ಬಿಡ್ತೀನಿ. ಯಾರ್ದ್ಹೇಳು ?" ಅಮರೇಶನಿಗೆ ಧರ್ಮಸಂಕಟಕ್ಕಿಟ್ಟುಕೊಂಡಿತು.

"ಅವ್ನು ಇಸ್ಕೊಳ್ಳೊಲ್ವಂತೆ !"

"ಯಾಕೆ ಇಸ್ಕೊಳ್ಳೊಲ್ಲ ನೋಡ್ಹೋಣಾ, ತೊಗೋ ಸ್ಕೂಟರ್ನ....ಬಾ ನಂಜೊತೆ !" ಅಮರೇಶ ತಬ್ಬಿಬ್ಬಾದ.

"ನಾನು ಅಡ್ವಾನ್ಸ್ ಕೊಟ್ಬಿಟ್ಟಿದ್ದೀನಿ !" ಅಮರೇಶ ತೊದಲಿದನು.

"ಎಲ್ಲಿತ್ತೋ ಅಷ್ಟು ದುಡ್ಡು ?"

ಅಮರೇಶ ನಿರುತ್ತರನಾದನು.

"ಹೇಳು ಯಾರು ಕೊಟ್ರು ?"

"ನನ್ನ ಫ್ರೆಂಡು ಯಾರೋ ಕೊಟ್ಟರು."

"ಯಾವ್ಪೊಳೋ ಅದು ?" ಅನಂತ ತಾಳ್ಮೆಗೆಟ್ಟನು. "ತಾಳು ಅಶೋಕ ಬರ್ಲಿ, ನಿಂಗೆ ಇವೊತ್ತು ಮಾಡಿಸ್ತೀನಿ !" ಅತ್ತಿಗೆಯನ್ನು ಬಿಟ್ಟುಕೊಡಲು ಅಮರೇಶ ಸಿದ್ಧನಿರಲಿಲ್ಲ.

ಅಶೋಕ ಅರವಿಂದ, ಅಜಯ್ ಬಂದಾಗಲೂ ಬಾಯಿ ಬಿಡಲಿಲ್ಲ. ಅಣ್ಣಂದಿರೆಲ್ಲಾ ಅವನನ್ನು ಸುತ್ತುಗಟ್ಟಿಕೊಂಡು ಪ್ರಶ್ನೆಗಳ ಮಳೆಗರೆಯುತ್ತಿದ್ದುದನ್ನು ಕಂಡ ಗೋವಿಂದ ಅದನ್ನು ನಿರ್ಮಲಳಿಗೆ ಹೇಳಿದ.

"ಹೇಳೋ ಭಡವಾ, ಎಲ್ಲಿತ್ತು ದುಡ್ಡು...ಯಾರು ನಿನ್ನ ಆ ಡಾಲಿ ಕೊಟ್ಟಳಾ ?" ಅಶೋಕ ಕೇಳಿದಾಗ ಅಮರೇಶ ತಲೆ ತಗ್ಗಿಸಿಬಿಟ್ಟನು. ನಿರ್ಮಲ

ನಿಂತು ನೋಡಿದಳು. ಇನ್ನು ಹೆಚ್ಚು ಮುಂದುವರಿಯುವುದಕ್ಕೆ ಬಿಟ್ಟರೆ ಸರಿಯಲ್ಲವೆಂದು ಅಶೋಕನ ಬಳಿಗೆ ಬಂದು ತಡೆದಳು.

"ಇದೇನು–ಹೀಗೆ ಅವನ್ನ ಹಿಂಸೆ ಮಾಡ್ತೀರಿ ?"

"ಮತ್ತೇನೂ ? ಯಾರ್ಹತ್ರಾನಾದ್ರೂ ದುಡ್ಡು ಈಸ್ಕೊಂಡು ಸ್ಕೂಟರ್ ತೊಗೋಬೇಕಂತ ಏನು...ಆ ಡಾಲಿ–ಇವನ್ನು ಸಮಾಚಾರ ನಿಂಗೊತ್ತಿಲ್ಲ; ಸುಮ್ನಿರು" ಅಶೋಕ ಹೆಂಡತಿಯನ್ನ ದೂರ ಸರಿಸಿದನು.

"ನನಗೆ ಎಲ್ಲಾ ಗೊತ್ತು." ನಿರ್ಮಲ ಹೇಳಿದಾಗ ಎಲ್ಲರೂ ಬೆಕ್ಕಸಬೆರಗಾದರು. "ಅಮರೇಶನೇ ಎಲ್ಲಾ ಹೇಳಿದನು. ಅವನ ವಯಸ್ಸಿನಲ್ಲಿ ಒಳ್ಳೆಯದು ಕೆಟ್ಟದ್ದು ಗೊತ್ತಾಗುತ್ತಾ ?....ಯಾರೂ ದುಡ್ಡು ಕೊಡಲಿಲ್ಲ ! ನಾನು ಕೊಟ್ಟೆ!"

ಅಮರೇಶ ಅತ್ತಿಗೆಯ ಮುಖ ನೋಡಿದ "ಅತ್ತಿಗೆ!" ನಿರ್ಮಲಳ ಕಣ್ಣುಗಳು ಬೆಳಗಿದವು. ಅನಂತ ಹುಬ್ಬುಗಂಟಿಕ್ಕಿದ.

"ನಿನ್ಹತ್ರ ಎಲ್ಲಿತ್ತೂ ?" ಅಶೋಕ ಗಡುಸಾಗಿ ಕೇಳಿದನು.

"ನಾನು ಕಳ್ಳತನ ಮಾಡಲಿಲ್ಲ. ನೀವೆಲ್ಲಾ, ಮನೆ ಖರ್ಚಿಗೆ ಕೊಡ್ತಾ ಇದ್ದಿದ್ರಲ್ಲಿ ಮಿಗ್ಸಿದ್ದು ಸಾವಿರದ ಇನ್ನೂರು ಇತ್ತು, ಕೊಟ್ಟೆ. ಪದ್ದಮ್ಮ ಮನೆ ಆಡಳಿತ ನಡ್ಸ್ತಿದ್ರೆ ಆ ದುಡ್ಡೆಲ್ಲಾ ಅವಳ ಮಗಳ ಮನೆಗೆ ಹೋಗ್ತಾ ಇತ್ತು !" ನಿರ್ಮಲ ಬೇಕಾಗಿ ಅನಂತನತ್ತ ತಿರುಗಿ ಹೇಳಿ ಅಡಿಗೆ ಮನೆಗೆ ಹೊರಟಳು.

ಯಾರೊಬ್ಬರೂ ಮಾತನಾಡಲಿಲ್ಲ. ಅಮರೇಶ ಅತ್ತಿಗೆ ಹೋದ ದಿಕ್ಕಿನಲ್ಲಿ ಮಂಜುಗಣ್ಣಿನಿಂದ ನೋಡಿದನು.

ಬರುಬರುತ್ತಾ ನಿರ್ಮಲಳಿಗೆ ಮನೆಯ ಜವಾಬ್ದಾರಿ ಜಾಸ್ತಿಯಾಗುತ್ತಿತ್ತು. ಹೊತ್ತಿಗೆ ಮುಂಚೆ ಎದ್ದು ಎಲ್ಲರಿಗೂ ಕಾಫಿ ತಿಂಡಿ ಮಾಡಿ–ಅವರೆಲ್ಲರೂ ಏಳುವ ಮುಂಚೆ ಸ್ನಾನ ಮಾಡಿ ಅಡಿಗೆಯ ತಯಾರಿಕೆ ನಡೆಸುತ್ತಿದ್ದಳು. ಗೋವಿಂದ ಅವಳ ಸಮಕ್ಷ್ಮ ಓಡಾಡಿಕೊಂಡಿದ್ದರೂ ತಿಳುವಳಿಕೆಯಿಲ್ಲದಿದ್ದರಿಂದ ಅವನಿಗೆ ಹೇಳಿ ಮಾಡಿಸುವ ಬದಲು ತಾನೇ ಮಾಡಿಬಿಡುವುದು ಅವಳಿಗೆ ಸುಲಭವೆನಿಸುತಿತ್ತು.

ಎಲ್ಲರೂ ಆಫೀಸಿಗೆ ಹೊರಟುಹೋದ ಮೇಲೆ ಅವಳಿಗೆ ಕೊಂಚ ಬಿಡುವು. ಅವಳಿಗೆ ಮಧ್ಯಾಹ್ನ ಮಲಗುವ ಚಟ ಈಚೀಚೆಗೆ ಬಹಳ ಕಡಿಮೆಯಾಗಿದ್ದರಿಂದ

ಮಲಗುವ ಬದಲು ಏನಾದರೂ ಪುಸ್ತಕವನ್ನು ಓದುತ್ತಲೋ ಏನಾದರೂ ಕಸೂತಿ ಕೆಲಸ ಹಿಡಿದೋ ಕುಳಿತುಕೊಳ್ಳುತ್ತಿದ್ದಳು. ಅವಳ ಜೊತೆ ಆಗಾಗ ಜಾನಕಿ ಬಂದು ಹರಟುತ್ತಾ ಕುಳಿತುಕೊಳ್ಳುತ್ತಿದ್ದಳು.

ಅನಂತರ ಮಧ್ಯಾಹ್ನದ ತಿಂಡಿ, ಕಾಫಿಯ ವ್ಯವಸ್ಥೆಯಾಗಬೇಕಿತ್ತು. ಕೆಲಸ ಆಗ ಪ್ರಾರಂಭವಾದರೆ ಸಂಜೆ ಅಶೋಕ ಬರುವವರೆಗೂ ಇರುತ್ತಿತ್ತು. ಅವನೊಡನೆ ಹೊರಗೆ ಹೊರಡಲೂ ಒಂದೊಂದು ದಿನ ಅವಳಿಗೆ ಬೇಸರವಾಗುತಿತ್ತು. ಹೊರಗೆ ಹೋಗಿ ಬಂದ ಕೂಡಲೆ ರಾತ್ರಿಯ ಅಡಿಗೆ ಊಟ-ಅಡಿಗೆ ಮನೆಯ ಕೆಲಸವೆಲ್ಲ ಮುಗಿದು ಮಲಗುವ ವೇಳೆಗೆ ಸಾಕಾಗಿಹೋಗುತ್ತಿತ್ತು. ಅಶೋಕನ ಅಪ್ಪುಗೆ, ಪ್ರೀತಿ ಕೂಡ ಒಮ್ಮೊಮ್ಮೆ ಬೇಸರವಾಗುತಿತ್ತು. ಅವಳ ಮುಖದಲ್ಲಿ ಲಾಸ್ಯವಾಡುತ್ತಿದ್ದ ಹೊನಲು ಈಗ ಮಾಯವಾಗಿ ಮುಖದಲ್ಲಿ ಒಂದು ಬಗೆಯ ಗಾಂಭೀರ್ಯ ಮನೆಮಾಡಿತ್ತು.

ಅನಂತನೊಂದಿಗಂತೂ ಹೆಚ್ಚು ಮಾತಿಗೇ ಹೋಗುತ್ತಿರಲಿಲ್ಲ. ಅವನೂ ಯಾವ ಮಾತೂ ಆಡದೆ ನಿರ್ಲಿಪ್ತನಾಗಿದ್ದನು. ಅವನಿಗೂ ನಿರ್ಮಲನಿಗೂ ನಡೆಯುತ್ತಿದ್ದ ಮಾತುಕತೆಗಳೆಲ್ಲ ಗೋವಿಂದನಿಂದ.

"ಅಮ್ಮಾ, ಸಾಹೇಬ್ರಿಗೆ ಪಲ್ಯಕ್ಕೆ ಇನ್ನು ಸ್ವಲ್ಪ ಉಪ್ಪು ಜಾಸ್ತಿ ಹಾಕ್ಬೇಕಂತೆ. ಚಪಾತಿ ನಾಲ್ಕು ಬೇಡ್ವಂತೆ," "ಎರಡೇ ಸಾಕಂತೆ,"...."ಗೋಧಿ ಅನ್ನ ತುಂಬ ಬಿರುಸಂತೆ," "ಇವೊತ್ತು ರಾತ್ರಿ ಊಟ ಬೇಡ್ವಂತೆ,ಬರಿಯ ಹಾಲು ಸಾಕಂತೆ," "ಅವರ್ಉ ರಾತ್ರಿ ಬರೋದು ಲೇಟಾಗುತ್ತಂತೆ-ಯಾರೂ ಕಾಯ್ಬಾರ್ದಂತೆ...." ಹೀಗೆ ನೂರಾರು.

ನಿರ್ಮಲನಿಗೆ ಒಂದು ಬಗೆಯ ಅಸಮಾಧಾನವಾದರೂ ಒಂದು ವಿಧದಲ್ಲಿ ತಾನು ಅವನಿಂದ ದೂರವಿರುವುದೇ ಲೇಸೆಂದು ತಡೆಹಿಡಿದಿದ್ದಳು. ಮತ್ತೆ ಅವನಿಗೆ ಅಸ್ತಮಾ ತೊಂದರೆಯಾಗಿದ್ದಾಗ ಅವನ ಆರೈಕೆಯನ್ನು ಗೋವಿಂದ-ಅರವಿಂದರಿಗೆ ಒಪ್ಪಿಸಿ ಸುಮ್ಮನಿದ್ದುಬಿಟ್ಟಿದ್ದಳು.

## ೧೦

ನಿರ್ಮಲಳಿಗೆ ಈಚೀಚೆಗೆ ಬಹಳ ಸುಸ್ತಾಗುತ್ತಿತ್ತು. ಕುಳಿತರೆ, ನಿಂತರೆ ತಲೆಸುತ್ತು, ವಾಕರಿಕೆ. ಅವಳಿಗೆ ಅದರ ಕಾರಣ ಗೊತ್ತಿದ್ದರೂ ಹೇಳಿ

ಕೊಳ್ಳಲು ಯಾರೂ ಇರಲಿಲ್ಲ. ಅಶೋಕನ ಬಳಿ ಹೇಳಲು ಏನೋ ಒಂದು ತರಹ ಲಜ್ಜೆ.

ಯಾವಾಗಲೂ ಸುಸ್ತು, ಸಂಕಟ ಎಂದು ಎಲ್ಲೆಂದರಲ್ಲಿ ಕುಳಿತು ಒದ್ದಾಡುತ್ತಿದ್ದ ಅತ್ತಿಗೆಯನ್ನು ಕಂಡು ಅಮರೇಶ ಅವಳ ಬಳಿ ಬಂದು ಕುಳಿತನು.

"ಯಾಕೆ ಅತ್ತಿಗೆ, ಮೈಗೆ ಸರಿಯಾಗಿಲ್ಲವೇ ? ಈಚೀಚೆಗೆ ತುಂಬಾ ಇಳಿದುಹೋಗಿದ್ದೀರಾ. ಬನ್ನಿ, ಡಾಕ್ಟರ ಹತ್ತಿರ ತೋರಿಸಿಕೊಂಡು ಬರೋಣ... "

"ಏನೂ ಬೇಡಾ ಅಮರೇಶ...ಸರಿಹೋಗುತ್ತೆ !" ನಿರ್ಮಲ ಹೇಳಿದಳು. ಅಶೋಕನೂ ! ಹೆಂಡತಿಯ ಆಲಸಿಕೆ ಕಂಡು ಯೋಚನಾಮಗ್ನನಾದನು.

"ಕೆಲ್ಸ ತುಂಬಾ ಜಾಸ್ತೀಂತ ಕಾಣ್ಸತ್ತೆ....ಸ್ವಲ್ಪ ದಿನ ಗೋವಿಂದಾನೇ ಮಾಡ್ಕೊಳ್ಳಿ....ನೀನು ರೆಸ್ಟ್ ತೊಗೋಬಾರ್ದಾ ?" ಹೆಂಡತಿಯ ಮುಂಗುರುಳು ಸವರುತ್ತಾ ಹೇಳಿದನು.

"ಬೇಡಾರೀ....ನಂಗೇನೂ ಕೆಲ್ಸ ಜಾಸ್ತಿ ಇಲ್ಲ...." ನಿರ್ಮಲ ಹೇಳಿದಳು.

"ನಿಂಗೆ ಬೇಕಾದ್ರೆ ನಾಲ್ಕು ದಿನ ನಿಮ್ಮ ತಾಯಿಯ ಮನೆಗೆ ಹೋಗ್ಬಿಟ್ಬಾ...." ಎಂದು ಅಶೋಕ ಹೇಳಿದಾಗ ನಿರ್ಮಲ ಅವನ ಎದೆಯಲ್ಲಿ ಮುಖವಿಟ್ಟು ನಕ್ಕಳು.

"ಆಮೇಲೆ ಹೋಗಲೇಬೇಕಲ್ಲಾ ; ಈಗೇನೂ ಅವಸರವಿಲ್ಲ !"

"ಅಂದ್ರೇನೂ?" ನಿರ್ಮಲಳ ಮುಖ ಹಿಡಿದು ಕೇಳಿದಾಗ ನಿರ್ಮಲ ದೃಷ್ಟಿ ತಗ್ಗಿಸಿದಳು.

"ನಾನು ನೀವು ಎಷ್ಟು ದಿನ ಇಬ್ರೇ ಇರೋದೂ...ನಾವು ಅಪ್ಪ ಅಮ್ಮ ಅನ್ನಿಸ್ಕೊಳ್ಳೋದು ಬೇಡ್ವಾ ?"

"ನಿಜಾನಾ ನಿಮ್ಮೂ ?" ಅಶೋಕ್ ಸಂತಸದಿಂದ ಹೆಂಡತಿಯನ್ನು ಅಪ್ಪಿದ.

ಮಾರನೆಯ ದಿನ ಆ ವಿಷಯ ಎಲ್ಲರಿಗೂ ತಿಳಿದಾಗ ನಿರ್ಮಲಳಿಗೆ ನಾಚಿಕೆಯಾಯಿತು. ಎಲ್ಲರಿಗೂ ಏನೋ ಸಂಭ್ರಮ ವಿಭ್ರಮ.

"ಅತ್ತಿಗೆ, ನೀವೇನೂ ಬೆಳಿಗ್ಗೆ ತಿಂಡಿ ಮಾಡ್ಬೇಡಿ–ನಾನು ಕ್ಯಾಂಟೀನ್ನಲ್ಲಿ ಏನಾದ್ರೂ ತೊಗೋತೀನಿ...." ಅಜಯ್ ಹೇಳಿದನು.

"ನೀವು ಅಲ್ಲೇ ಕೂತ್ಕೊಳ್ಳಿ ಅತ್ಗೆ....ಏನು ಬೇಕೋ ಅದನ್ನ ನಾನು ತಕ್ಕೊಡ್ತೀನಿ...." ಅರವಿಂದನ ವಿಜ್ಞಾಪನೆ.

"ಅತ್ತಿಗೆ, ನಾನೂ ಗೋವಿಂದ ಇಬ್ರೇ ಎಲ್ಲಾ ಮಾಡ್ಬಿಡ್ತೀವಿ. ನೀವು ಹೋಗಿ ಮಲ್ಕೊಳ್ಳಿ" ಅಮರೇಶನ ಆರ್ಡರ್.

"ನಿಮ್ಗೆ, ತುಂಬಾ ಆಯಾಸ ಮಾಡ್ಕೊಬೇಡಾ...ನಾವು ಮ್ಯಾನೇಜ್ ಮಾಡ್ಕೋತೀವಿ...." ಅಶೋಕನ ಆತಂಕ.

"ನೋಡ್ರೋ....ಸ್ವಲ್ಪ ಅತ್ತಿಗೆ ಕಡೆ ಗಮನ ಇರಲಿ..." ಅನಂತನ ಆಜ್ಞೆ.

ಆದರೆ ಬರಬರುತ್ತಾ ನಿರ್ಮಲ ವಿಪರೀತ ಸುಸ್ತು, ಸಂಕಟದಿಂದ ಸೊರಗಿ ತಲೆಯೆತ್ತದಷ್ಟು ತಲೆ ತಿರುಗುವಿಕೆಯಿಂದ ಹಾಸಿಗೆ ಹಿಡಿದಾಗ ಅಮರೇಶ ಅಶೋಕನಿಗೆ ಹೇಳಿದನು.

"ನಮ್ಮ ಆಸ್ಪತ್ರೇಲಿ ಗೈನಿಕಾಲಜಿಸ್ಟ್ ಡಾ|| ರತ್ನಸುಂದರಂ ಇದ್ದಾರೆ. ಅವರಿಗೆ ತೋರಿಸಬಾರ್ದು ?"

ಅಮರೇಶನ ಮಾತಿನಂತೆ ನಿರ್ಮಲ ಹಟಮಾಡಿದರೂ ಕೇಳದೆ ಅವಳನ್ನು ಡಾ|| ರತ್ನಸುಂದರಂ ಹತ್ತಿರ ಕರೆದೊಯ್ದನು. ಅವರು ಪರೀಕ್ಷಿಸಿ, ಎಲ್ಲವೂ ಸರಿಯಾಗಿರುವುದೆಂದೂ ಕೆಲವರಿಗೆ ಮೂರು ನಾಲ್ಕು ದಿನಗಳು ಹಾಗೇಯೇ ಎಂದು ಹೇಳಿ ಕೆಲವು ಟಾನಿಕ್ಕು ಮಾತ್ರೆಗಳನ್ನು ಬರೆದು ಕೊಟ್ಟು, ಪ್ರತಿ ತಿಂಗಳೂ ಬಂದು ತೋರಿಸಿಕೊಂಡು ಹೋಗುವಂತೆ ಹೇಳಿದರು. ಆಗಲೇ ಎಲ್ಲರಿಗೂ ಕೊಂಚ ಸಮಾಧಾನ.

ನಿರ್ಮಲ ಮಲಗಿದಾಗ ಬಾಣಸಿಗನಾಗಿ ಅರವಿಂದ, ಅವನ ಸಹಾಯಕನಾಗಿ ಅಮರೇಶ, ಗೋವಿಂದ. ಮನೆಯ ಮೇಲ್ವಿಚಾರಣೆಗೆ ಅಶೋಕ, ಅಜಯ್. ಎಲ್ಲಕ್ಕೂ ಮಿಗಿಲಾಗಿ ಅನಂತ ಎಲ್ಲ ವಿಷಯಗಳಲ್ಲೂ ನಿರ್ವಹಣೆಯ ಭಾರ ಹೊತ್ತರು.

ಔಷಧಿ ಸೇವನೆಯಿಂದಲೋ ಮನೆಯವರ ಅಕ್ಕರೆಯಿಂದಲೋ ನಿರ್ಮಲ ಕೊಂಚ ಸುಧಾರಿಸಿಕೊಂಡಳು. ಅಜಯ್, ಅರವಿಂದ ಏನಾದರೂ ಹಣ್ಣು ಹಂಪಲುಗಳನ್ನು ತರದೇ ಬರುತ್ತಿರಲಿಲ್ಲ. ಅಶೋಕ ಹೆಂಡತಿ ಬಯಸಿದುದನ್ನೆಲ್ಲಾ ತಂದು ಸುರಿಯುತ್ತಿದ್ದನು. ಅಮರೇಶ ಅತ್ತಿಗೆಯ ಔಷಧಿ ಪಥ್ಯದ ಮೇಲೆ

ಗಮನ ಇಡುತ್ತಿದ್ದನು. ಎಲ್ಲಕ್ಕಿಂತ ಬಹಳ ಆಶ್ಚರ್ಯಕರವೆಂದರೆ ಅನಂತ ಪ್ರತಿದಿನ ದೇವಸ್ಥಾನಗಳಿಗೆ ಹೋಗಿ ಅವುಗಳ ಪ್ರಸಾದವನ್ನು ನಿರ್ಮಲಳ ಕೈಗಿಡುತ್ತಿದ್ದುದು "ದೇವರು ಒಳ್ಳೆಯದು ಮಾಡಲಿ...." ಎನ್ನುತ್ತಿದ್ದನು. "ನಿಮ್ಗೆ, ನಿಂಗೇನಾದ್ರೂ ಬೇಕಾದ್ರೆ ಹೇಳು...." ಎಂದು ಅಶೋಕ ಕೇಳಿದರೆ ನಿರ್ಮಲ ನಗುತ್ತಿದ್ದಳು. "ಅವಿಂದ ಹೂವು, ಅಜಯ್ ಹಣ್ಣು ಅಮರೇಶ ಉಪಚಾರ. ಅನಂತಣ್ಣನ ದೇವರ ಪ್ರಸಾದ, ಮಿಕ್ಕಿದ್ದೆಲ್ಲಾ ನೀವು ತಂದ್ಕೊಡ್ತಾ ಇರ್ಬೇಕಾದ್ರೆ ನನಗೇನು?"

ಮತ್ತೆ ಎರಡನೆಯ ಸಲ ಡಾ|| ರತ್ನಸುಂದರಂಗೆ ತೋರಿಸಲು ಹೋಗ ಬೇಕಾದಾಗ ಅಶೋಕನಿಗೆ ರಜವಿರಲಿಲ್ಲ. ಅಮರೇಶನೇ ಕರೆದೊಯ್ಯುವೆ ನೆಂದಾಗ ಎಲ್ಲರಿಗೂ ಆತಂಕ. "ಲೋ, ನೀನು ತುಂಬಾ ಸ್ಪೀಡಾಗಿ ಸ್ಕೂಟರ್ ಬಿಡ್ತಿ. ಬೇಡಾ. ಟ್ಯಾಕ್ಸೀಲಿ ಕರ್ಕೊಂಡ್ಹೋಗು....," "ನಿಂಗೆ ಗಮನ ಇರೋಲ್ಲ ಎಲ್ಲಂದ್ರೆ ಅಲ್ಲಿ ಮಾತಾಡ್ತಾ ನಿಂತ್ಬಿಡ್ತಿ. ಅತ್ತಿಗೆಗೆ ಆಯಾಸ ಆಗ್ಬಿಡತ್ತೇ !" "ಸರಿಯಾಗಿ ಎಲ್ಲಾ ಚೆಕ್ ಮಾಡಿಸ್ಕೊಂಡ್ಬಾರೋ"-ಹೀಗೆ ಒಬ್ಬೊಬ್ಬರದು ಒಂದೊಂದು ತರಹದ ಉಪದೇಶ....

ಕೊನೆಗೆ ಅಮರೇಶ ನಿರ್ಮಲ, ಅನಂತನ ಕಾರಿನಲ್ಲಿ ಹೋಗುವುದೆಂದೂ ಬರುವಾಗ ಟ್ಯಾಕ್ಸಿಯಲ್ಲಿ ಬರಬೇಕೆಂದೂ ಗೊತ್ತಾಯಿತು. ಎಲ್ಲಾ ಪರೀಕ್ಷಿಸಿ, ಸಲಹೆಯಿತ್ತ ಮೇಲೆ ಅಮರೇಶ, ನಿರ್ಮಲ ಟ್ಯಾಕ್ಸಿಗಾಗಿ ಕಾಯುತ್ತಿರುವಾಗ ಒಂದು ಮಗುವನ್ನೆತ್ತಿಕೊಂಡು ಗುಲಾಬಿ ಬಣ್ಣದ ಟೆರಿಲಿನ್ ಸೀರೆಯುಟ್ಟು ಎದುರಿಗೆ ಬಂದ ವ್ಯಕ್ತಿಯನ್ನು ಎಲ್ಲೋ ನೋಡಿದಂತಾಯಿತು. ಹೌದು, ಡಾಲಿ....ಅಮರೇಶನನ್ನು ನೋಡುತ್ತಲೇ ಅವಳೇ ಅವರ ಹತ್ತಿರ ಬಂದಳು.

"ಏನು ಅಮರೇಶ, ಇಲ್ಲಿ ?"

"ಇವರು ನನ್ನ ಅತ್ತಿಗೆ, ಹೇಳ್ತಾ ಇರ್ಲಿಲ್ವಾ ? ಇವ್ರೇ....ನಿರ್ಮಲಾ, ಅತ್ತಿಗೆ, ಇವಳೇ ಡಾಲಿ...." ನಿರ್ಮಲ ಕೈ ಮುಗಿದಳು. "ತುಂಬಾ ಸಂತೋಷ ನಿಮ್ಮನ್ನು ನೋಡಿದುದು...."

"ನನಗೂ ಅಷ್ಟೆ....ನಿಮ್ಮ ವಿಷಯ ಅಮರೇಶ ನನಗೆ ತುಂಬಾ ಹೇಳ್ತಾ ಇರಾ ರೆ...."

"ಮಗೂ ತುಂಬಾ ಚೆನ್ನಾಗಿದೆ, ಏನು ಹೆಸರು ?" ನಿರ್ಮಲ ಸರಾಗವಾಗಿ ಕೇಳಿದಳು.

"ಸ್ವೀಟೀ ಅಂತ...ಬನ್ನಿ ಒಂದು ದಿನ ನಮ್ಮನೇಗೆ....ಇಲ್ಲಿ ನನ್ನ ಯಜಮಾನರು ಕೆಲ್ಸಮಾಡ್ತಾ ಇದ್ದಾರೆ–ಇಲ್ಲಿಂದ ಹೀಗೇ ಯಾರದೋ ಮನೆಗೆ ಹೋಗ್ಬೇಕಿತ್ತು ಬಂದೆ...." ಡಾಲಿ ಹೇಳಿದಾಗ ಅಮರೇಶ ಹುಬ್ಬು ಹಾರಿಸಿದನು.

"ನಮ್ಮತ್ತಿಗೆಗೂ 'ಸ್ವೀಟಿ' ಯಂತಹಾದ್ದೊಂದು ಬರಲೀಂತ ಇಲ್ಲಿಗೆ ಡಾ|| ರತ್ನಸುಂದರಂ ಹತ್ತಿರ ಕರ್ಕೊಂಡ್ಬಂದೆ...."

"ಬಹಳ ಸಂತೋಷ ..." ಡಾಲಿ ಹೇಳಿದಾಗ ನಿರ್ಮಲ ಅವಳ ಸ್ನೇಹಕ್ಕೆ ಮಾರುಹೋಗಿ ಡಾಲಿಯನ್ನು ಮನೆಗೆ ಆಹ್ವಾನಿಸಿದಳು.

ಈಚೀಚೆಗೆ ಅಜಯ್ ಏನೋ ಯೋಚನೆಯಲ್ಲಿ ಮುಳುಗಿರುವಂತ್ಕೆ ತೋರುತ್ತಿತ್ತು. ಊಟ, ತಿಂಡಿಗಳಲ್ಲಿ ವಿಮನಸ್ಕತೆ ಎದ್ದು ತೋರುತ್ತಿತ್ತು. ಅದನ್ನು ಗಮನಿಸಿದ ನಿರ್ಮಲ ಅಶೋಕನ ಮುಂದೆ ಮಾತು ತೆಗೆದಳು.

"ನೋಡೀಂದ್ರೆ, ಈಚೀಚೆಗೆ ಅಜಯ್ ಒಂದು ತರಹಾ ಆಗ್ತಾ ಇದ್ದಾರೆ. ಎಲ್ಲಂದ್ರಲ್ಲೇ ನಿಂತ್ಕೊಂಡು ಯೋಚಿಸ್ತಾ ನಿಂತ್ಬಿಡ್ತಾರೆ. ಬರೀ ಅನ್ನಾನೆ ತಿಂದ್ಬಿಟ್ಟು ಊಟ ಆಯ್ತುಂತ ಎದ್ಬಿಡ್ತಾರೆ. ಆಫೀಸ್ನಿಂದ ನಾಲ್ಕೈದು ಸಲ ಮನೆಗೆ ಬಂದು 'ಫೈಲ್ ಮರ್ತಿದ್ದೆ–ನನ್ನ ಪೆನ್ನು ಮರ್ತಿದ್ದೆ—ಪರ್ಸು ಮರ್ತಿದ್ದೆ' ಅಂತಾರೆ—ರಾತ್ರಿ ನಿದ್ದೆ ಕೂಡ ಸರ್ಯಾಗಿ ಮಾಡೋ ಹಾಗೆ ಕಾಣೋಲ್ಲ. ಮೊನ್ನೆ ರಾತ್ರಿಯೆಲ್ಲ ಅವರ ರೂಮಿನ ದೀಪ ಉರೀತಾನೇ ಇತ್ತು."

ಅಶೋಕ ಅವಳ ಮುಂಗುರುಳು ನೇವರಿಸುತ್ತಾ ಹೇಳಿದ—"ಚಿನ್ನಾ, ನಿಂಗ್ಯಾಕೆ ಎಲ್ಲರ ಯೋಚನೇ ? ಎಲ್ಲಾ ತಲೆಗೆ ಹಚ್ಕೊಂಡು ನೀನು ಕೊರಗ ಬೇಡ—ಅಜಯ್ ಏನೂ ಚಿಕ್ಕ ಮಗೂನಾ ? ಅವನ ಪಾಡು ಅವನು ನೋಡ್ಕೋತಾನೆ....ನಿನ್ನ ಸ್ಥಿತೀಲಿ ನಾವೆಲ್ಲಾ ನಿನ್ನ ನೋಡ್ಕೋಬೇಕೂ ! ಅದ್ಬಿಟ್ಟು ಅವನ್ಯಾಕೆ ಹಾಗೆ—ಇವನ್ಯಾಕ್ಹೀಗಿದ್ದಾನೆ ಅಂತ ನಮ್ಮಗಳ ವಿಷ್ಯ ಹಚ್ಕೋತಿ....ಎಲ್ಲೋ ಹಿಂದಿನ ಜನ್ಮದಲ್ಲಿ—ದ್ವಾಪರಯುಗದಲ್ಲಿ—ದ್ರೌಪದಿ, ಯಾಗಿದ್ಯೇನೂ, ನಾವು ಐದು ಜನರ್ನೂ ಕಂಡು ಪ್ರಾಣ ಬಿಡ್ತೀ....ಇದು ಕಲಿಯುಗ–ಬರೋ ಅಭಿಮನ್ಯುನ್ನ ವಿಚಾರಿಸ್ಕೊ, ಸಾಕು !"

ಎರಡು ದಿನಗಳಿಂದ ಅಜಯ ನಿರ್ಮಲಳಿದ್ದ ಬಳಿ ಸುಳಿದಾಡಿದ. ಅವಳು

ಕಾಫಿ ಕೊಟ್ಟಾಗ ಏನೋ ಹೇಳಲು ಹವಣಿಸಿ ಸುಮ್ಮನಾದನು. ಅದನ್ನು ಗಮನಿಸಿಯೂ ಗಮನಿಸದಂತೆ ನಿರ್ಮಲ ಸುಮ್ಮನಾಗಿದ್ದಳು.

ಆಸ್ಪತ್ರೆಗೆ 'ಚೆಕ್‌ಅಪ್'ಗೆ ಹೊರಟಾಗ ತಾನೇ ಕರೆದೊಯ್ಯುವುದಾಗಿ ಅಮರೇಶ ಹೇಳಿದಾಗ ಹಾಸ್ಯ ಮಾಡಿದನು. "ಅಪ್ಪಾ, ಅಜಯ....ನಿನ್ನ ಆರ್ಕಿಟೆಕ್ಚರ್ ಇಲ್ಲಿ ಉಪಯೋಗ ಆಗೋಲ್ಲ—ನಮ್ಮಾಸ್ಪತ್ರೇಲಿ ಹೊಸ ವಾರ್ಡು ಕಟ್ಟಿಸ್ಬೇಕೂಂತ ಇದ್ದಾರೆ-ಆಗ ನೀನು ಬರುವಿಯಂತೆ....ನೋಡೂ, ನಾನು, ಡಾಕ್ಟರು-ಅಶೋಕ ಅತ್ತಿಗೆಯ ಗಂಡ-ಇದೆಲ್ಲಾ ನಮ್ಮಿಬ್ರ ಕೆಲಸದ ಬಾಬ್ತು !"

ಒಮ್ಮೆ ಆಸ್ಪತ್ರೆಯಿಂದ ಮನೆಗೆ ಹಿಂತಿರುಗಿ ಬಂದಾಗ ಅಜಯ್ ಮನೆಯಲ್ಲೇ ಇದ್ದನು. ನಿರ್ಮಲಳಿಗೆ ಅಚ್ಚರಿಯಾಯಿತು.

"ಇದೇನು, ಆಫೀಸ್‌ನಿಂದ ಬೇಗ ಬಂದುಬಿಟ್ಟದ್ದೀರಿ ?"

ಅಜಯ್ ಗಂಭೀರವಾಗಿಯೇ ಉತ್ತರಿಸಿದನು.

"ಅತ್ತಿಗೆ, ನಿಮ್ಮ ಹತ್ತಿರ ವೈಯಕ್ತಿಕವಾಗಿ ಮಾತಾಡಬೇಕಿತ್ತು...." ನಿರ್ಮಲ ಕಣ್ಣರಳಿಸಿದಳು.

"ಏನು ? ಏನು ಸಮಾಚಾರ ?"

"ನೀವೇನೂ ತಿಳ್ಕೊಳ್ದೇ ಇದ್ದರೆ ಒಂದು ಮಾತು. ನಾಳೆ ನನ್ನ ಜೊತೆ ಬರ್ತೀರಾ ?" ಅಜಯ ನೆಲ ನೋಡುತ್ತಾ ಕೇಳಿದನು.

"ಏನು ವಿಶೇಷ ?" ನಿರ್ಮಲ ಕೇಳಿದಾಗ ಅಜಯ ಉತ್ತರಿಸಲಿಲ್ಲ.

"ಬರ್ತೀರಿ ತಾನೇ ?" ಮತ್ತೇ ಅದೇ ಪ್ರಶ್ನೆ ಹಾಕಿದನು. "ಯಾರಿಗೂ ಹೇಳಬೇಡಿ."

"ಆಗಲಿ...." ನಿರ್ಮಲ ಹೇಳಿದಾಗ ಅಜಯ ತನ್ನ ರೂಮಿಗೆ ಹೋಗಿ ಬಾಗಿಲು ಹಾಕಿಕೊಂಡುಬಿಟ್ಟನು.

ಮಾರನೆಯ ದಿನ ಎಲ್ಲರೂ ಮನೆ ಬಿಟ್ಟು ಹೊರಟ ಮೇಲೆ ನಿರ್ಮಲ ಸಿದ್ಧಳಾಗಿದ್ದಳು. ಅಜಯ ಆಫೀಸಿನಿಂದ ಹನ್ನೊಂದು ಗಂಟೆಗೆ ಆಫೀಸಿನ ಕಾರಿನಲ್ಲಿ ಬಂದನು.

"ಬನ್ನಿ ಅತ್ತಿಗೆ, ತುಂಬಾ ಹೊತ್ತು ನಿಲ್ಲಿಸಿಕೊಳ್ಳೊಲ್ಲ...." ಅಜಯ ನಿರ್ಮಲಳನ್ನು ಕಾರಿನಲ್ಲಿ ಕೂಡಿಸಿ ಬಾಗಿಲು ಹಾಕುತ್ತಾ ಹೇಳಿದನು. ಗೋವಿಂದ ಮನೆಯಲ್ಲಿ ಕಾವಲಿದ್ದನು.

ಕಾರು ದೊಡ್ಡದೊಂದು ಮನೆಯ ಮುಂದೆ ನಿಂತಿತು. ಅಜಯ ಕಾರಿನ ಬಾಗಿಲು ತೆರೆದು ನಿರ್ಮಲಳನ್ನು ಇಳಿಸಿಕೊಂಡನು.

"ಇದು ಯಾರ ಮನೆ ಅಜಯ್?" ನಿರ್ಮಲ ಕೊಂಚ ಗಲಿಬಿಲಿಗೊಂಡಳು.

"ಬನ್ನಿ ಗೊತ್ತಾಗುತ್ತೆ .." ಅಜಯ್ ಮನೆಯ ಹೆಬ್ಬಾಗಿಲ ಹತ್ತಿರ ಕರೆದೊಯ್ದನು. ಒಳಗಿನಿಂದ ಸಿಲ್ಕಿನ ಸೀರೆಯುಟ್ಟು ತುರುಬು ಹಾಕಿಕೊಂಡಿದ್ದ ಯುವತಿಯೊಬ್ಬಳು ಹೊರಬಂದಳು. ನಿರ್ಮಲಳನ್ನು ನೋಡಿ ನಸುನಕ್ಕು ಕೈ ಮುಗಿದಳು. "ನಮಸ್ಕಾರ, ಬನ್ನಿ" ನಿರ್ಮಲಳೂ ಕೈ ಮುಗಿದಳು.

"ಇವರೇ ನನ್ನ ಅತ್ತಿಗೆ - ಇವಳು ರೇಣುಕಾ, ನನ್ನ ಹೆಂಡತಿ-" ಅಜಯ್ ಹೇಳಿದಾಗ ನಿರ್ಮಲಳಿಗೆ ಒಂದು ಘಳಿಗೆ ಕಣ್ಣು ಕತ್ತಲು ಹಿಡಿದಂತಾಯಿತು. ಬಾಗಿಲನ್ನು ಬಿಗಿಯಾಗಿ ಹಿಡಿದಳು. ಅಜಯ್ ಸಮುದ್ರದಷ್ಟು ಆಳವಾದ ವನು. ಮಾತು ಅಲ್ಪ-ಕಾರ್ಯ ಕುಶಲ. ನಿರ್ಮಲ ಎದುರಿಗೆ ನಿಂತಿದ್ದ ತರುಣಿ ಯತ್ತ ನೋಡಿದಳು. ನೋಡಲು ಚೆಲುವೆಯಲ್ಲದಿದ್ದರೂ ಬಹಳ ಚೂಟಿ ಯಾಗಿದ್ದಳು. ಮುಖದಲ್ಲಿ ಜಾಣ್ಮೆ, ಸಂಯಮಗಳು ಎದ್ದು ಕಾಣುತ್ತಿತ್ತು. ತನಗಿಂತ ಒಂದೆರಡು ವರ್ಷ ಚಿಕ್ಕವಳಿರಬಹುದು. ನಯ ವಿನಯಗಳಗೇನೂ ಕಡಿಮೆಯಿಲ್ಲ.

"ಕೂತ್ಕೊಳ್ಳಿ....ನಿಂತೇ ಇದ್ದೀರಲ್ಲಾ !" ರೇಣುಕಾ ಹೇಳಿದಾಗ ಆಸರೆ ಸಿಕ್ಕರೆ ಸಾಕೆಂದು ಕುರ್ಚಿಯ ಮೇಲೆ ಕುಳಿತಳು. ರೇಣುಕಾ ಒಳಗೆ ಹೋಗಿ ತಟ್ಟೆಯ ತುಂಬಾ ಸಿಹಿತಿಂಡಿ ತಂದಳು.

"ನಮ್ಮ ಮದುವೆಗೆ ನಿಮ್ಮನ್ನ ಕರೆಯಲಾಗಲಿಲ್ಲ. ಆದ್ದರಿಂದ ಈಗ ಸ್ವೀಟ್ಸ್ ಕೊಡ್ತಾ ಇದ್ದೀನಿ....ನೀವು ನಮ್ಮಿಬ್ಬರನ್ನ ಬ್ಲೆಸ್ ಮಾಡ್ಬೇಕೂ ! ರೇಣುಕಾ, ಅಜಯ್ ಇಬ್ಬರೂ ಅವಳ ಕಾಲು ಮುಟ್ಟಿ ನಮಸ್ಕರಿಸಿದಾಗ ನಿರ್ಮಲ ಏನು ಮಾಡಲೂ ತೋರದೆ "ಮೇ ಗಾಡ್ ಬ್ಲೆಸ್ ಯೂ" ಎಂದು ಬಿಟ್ಟಳು.

ರೇಣುಕಾ, ಅವಳಿಗೆ ಉಪಚಾರ ಮಾಡಿ ಮಾತನಾಡಿಸಿದಾಗ ಅವರ ಮದುವೆಯ ವಿಷಯ ಬಿಟ್ಟು ಎಲ್ಲಾ ಮಾತನಾಡಿದ್ದಳು. ಅಜಯನ ಆಫೀಸಿ ನಲ್ಲೇ ಅವಳೂ ಆರ್ಕಿಟೆಕ್ಟ್. ಬೊಂಬಾಯಿಯಿಂದ ಬಂದವಳು. ಕುಲಕರ್ಣಿ

ಎಂಬುವರ ಮಗಳು. ತಾಯಿಯಿಲ್ಲದ ಹುಡುಗಿ. ಒಬ್ಬಳೇ ಮಗಳು, ಎಲ್ಲಾ ತಿಳಿಯಿತು. ಹೊರಟಾಗ ತಾಂಬೂಲ ಕೊಡುತ್ತಾ ರೇಣುಕಾ ಹೇಳಿದಳು.

"ನೀವು ಬಾ ಎಂದು ಕರೆದರೆ ನಿಮ್ಮ ಮನೆಗೆ ಬರುತ್ತೇನೆ...."

ನಿರ್ಮಲನಿಗೆ ಬಾಯಿ ಕಟ್ಟಿತು. "ನನ್ನ ಮನೆ, ನಿನ್ನ ಮನೆ ಎರಡೂ ಒಂದೇ ಅಲ್ಲವೇ ?"

ನಿರ್ಮಲಳನ್ನು ಮನೆಗೆ ಬಿಟ್ಟು ಅಜಯ ಆಫೀಸಿನ ಕಾರನ್ನು ಕಳುಹಿಸಿ ಬಿಟ್ಟನು. ನಿರ್ಮಲ ಮನೆಯೊಳಗೆ ಬಂದು ಕುರ್ಚಿಯೊಂದರಲ್ಲಿ ಕುಸಿದಳು. ಅಜಯ ಅವಳ ಮುಂದೆ ಕೈ ಹಿಸುಕಿಕೊಳ್ಳುತ್ತಾ ಕುಳಿತನು.

"ಅಜಯ್, ಯಾಕೆ ಹೀಗೆ ಮಾಡಿದಿರಿ ?" ನಿರ್ಮಲ ಕೇಳಿದಾಗ ಅಜಯ್ ಮುಖದ ಮೇಲಿನ ಬೆವರು ಒರೆಸಿಕೊಂಡನು.

"ಅತ್ತಿಗೆ, ನಾನು ರೇಣೂ ಇಬ್ಬರೂ ಒಟ್ಟಿಗೆ ಕೆಲಸ ಮಾಡುತ್ತಿದ್ದೆವು. ಇಬ್ಬರದೂ ಒಂದೇ ಮನೋಭಾವ. ಒಂದೇ ಅಭಿರುಚಿ. ಒಂದೇ ದಿನ ಇಬ್ಬರಿಗೂ ನಾವೇಕೆ ಮದುವೆಯಾಗಬಾರದು ಎನಿಸಿತು ಇಲ್ಲಿ ಅನಂತಣ್ಣ ಒಪ್ಪುತ್ತಿರಲಿಲ್ಲ. ಅವನಿಗೆ ಕೆಲಸಕ್ಕೆ ಹೋಗುವ ಹುಡುಗಿಯರನ್ನು ಕಂಡರೆ ಆಗದು-ಬೊಂಬಾಯಿಗೆ ಹೋಗಿ ಅವರ ತಂದೆಗೆ ತಿಳಿಸಿ ಅವರ ತಂದೆಯ ಸಮ್ಮುಖದಲ್ಲಿ ಮದುವೆಯಾಗಿಬಿಟ್ಟೆವು. ಆದರೆ ಇಷ್ಟು ದಿನ ಮುಚ್ಚಿಟ್ಟಿದ್ದಕ್ಕೆ ಕಾರಣ ಅನಂತಣ್ಣ. ಈಚೀಚಿಗೆ ಬದಲಾದ ಮೇಲೆ ನನಗೆ ಧೈರ್ಯ ಬಂತು. ನಮ್ಮ ಮದುವೆಯಾಗಿ ಆಗಲೇ ಒಂದೂವರೆ ವರ್ಷ ಆಯಿತು ...ನೀವೇ ಅನಂತಣ್ಣಂಗೆ ಹೇಳಬೇಕು. ರೇಣುಕಾ ಈ ಹೊತ್ತಿನಲ್ಲಿ ನಿಮ್ಮ ಜೊತೆಯಲ್ಲಿ ಇರಬೇಕು. ನಿಮಗೆ ಸಹಾಯ ಮಾಡಬೇಕೆಂದು ನನ್ನಾಸೆ "

ನಿರ್ಮಲ ಅಜಯನ ಮುಖವನ್ನೇ ಈಕ್ಷಿಸಿದಳು. ಮುಖ ಎಂದಿನಂತೆ ಗಂಭೀರವಾಯ್ತು. ಎಲ್ಲರೂ ತನ್ನ ಮೇಲೆ ಭಾರ ಹೊರಿಸುತ್ತಾರಲ್ಲಾ ! ಆದರೆ ಅಜಯನದೇನು ತಪ್ಪು ? ತಾನು ಅನಂತನನ್ನು ಎದುರಿಸುವಷ್ಟು ಸುಲಭವಾಗಿ ಎದುರಿಸಲಾರ. ಏಕೆಂದರೆ ಅಣ್ಣನ ಮನಸ್ಸು ನೋಯಿಸಬಾರದೆಂದಿರಬಹುದು.

"ಆಗಲಿ....ಪ್ರಯತ್ನಿಸುತ್ತೇನೆ, ರೇಣುಕಾ ನನ್ನ ಜೊತೆಯಿದ್ದರೆ ನನಗೂ ಸಂತೋಷ " ನಿರ್ಮಲ ಹೇಳಿದಾಗ ಮೊದಲನೆಯ ಸಲ ನಿರ್ಮಲ ಅವನು ಹಸನ್ಮುಖನಾಗಿದ್ದನ್ನು ನೋಡಿದಳು.

"ತುಂಬಾ ಥ್ಯಾಂಕ್ಸ್ ಅತ್ತಿಗೆ...."

"ಆದರೆ ಅವಸರಪಡುವುದು ಬೇಡಾ...!" ನಿರ್ಮಲ ಹೇಳಿದಳು.

ಮಗಳ ವಿಷಯ ಕೇಳಿ ರಂಗನಾಥಯ್ಯ ಕಾವೇರಮ್ಮ ಸಂತಸಗೊಂಡರು. ತಕ್ಷಣ ಹೊರಡಲಾಗದ ಕಾರಣ ಬೆಂಗಳೂರಿಗೆ ಯಾವುದೋ ಕಾರ್ಯಕ್ಕಾಗಿ ಬರುತ್ತಿದ್ದ ಮಣಿಯಮ್ಮನ ಕೈಯಲ್ಲಿ ಮುರುಕು, ಕೋಡುಬಳೆ, ರವೆಉಂಡೆ, ಕೊಬ್ಬರಿ ಮಿಠಾಯಿ, ಓಂಪುಡಿ ಮಾಡಿ ಕಳುಹಿಸಿಕೊಟ್ಟರು.

ಮಣಿಯಮ್ಮ ನಿರ್ಮಲಳನ್ನು ನೋಡಿ ಸಂತಸದಿಂದ ಉಬ್ಬಿದರು. "ನೋಡೋಕೆ ದೃಷ್ಟಿ ತಗಲೋ ಹಾಗಾಗಿದ್ಯಲ್ಲೇ ತಾಯಿ ...ತಾಯಿ ಚೆನ್ನಾಗಾದ್ರೆ ಹೆಣ್ಣೇ ಹುಟ್ಟೋದೂ. ಮನೆ ತುಂಬಾ ಗಂಡುಗಳೇ. ಲಕ್ಷ್ಮಿಯ ಹಾಗೆ ಒಂದು ಹೆಣ್ಣಾಗಲೀ ಬಿಡು." ಕಾವೇರಮ್ಮ ಕೊಟ್ಟಿದ್ದ ತಿಂಡಿಯೆಲ್ಲಾ ಅವಳ ಮುಂದಿಟ್ಟಾಗ ಅಮರೇಶ, ಅರವಿಂದ ಒಬ್ಬರ ಮುಖ ನೋಡಿ ಒಬ್ಬರು ನಕ್ಕರು.

"ಇದೆಲ್ಲಾ ಶುಕ್ರದೆಸೆ ಅಂದ್ರೆ....ಹೂವಿನಿಂದ ನಾರೂ ಸ್ವರ್ಗಕ್ಕೇರ್ತಂತೆ. ಬಾರೋ, ನಾವೂ ರುಚಿ ನೋಡೋಣಾ...." ಎಂದು ತಿಂಡಿ ಡಬ್ಬಗಳನ್ನು ಅಡಿಗೆ ಮನೆಗೆ ಸಾಗಿಸಿದಾಗ ನಿರ್ಮಲ ನಕ್ಕುನಕ್ಕಳು.

"ಬರೀ ಹುಡುಗು !"

"ಅಂದ್ಹಾಗೇ ನಿರ್ಮಲ, ನಿನ್ನ ಗೆಳತಿ ಉಮಂಗೆ ಯಾವ್ದೂ ಸರಿಯಾದ ಕಡೆ ಗಂಡು ಸಿಕ್ಕಲಿಲ್ಲ. ನಿನ್ನ ಮೈದುನನ್ನ ನೋಡಿ ನಂಗೆ ಹೊಳೀತು. ಯಾಕೆ ನಿನ್ನ ಮೈದುನಂಗೇ ತಂದ್ಕೋಬಾರ್ದು-ಗೋತ್ರಾನೂ ಸರಿಹೋಗುತ್ತೆ. ಉಮಾ ಓದಿಲ್ವೇ, ನೋಡೋಕೆ ಲಕ್ಷಣವಾಗಿಲ್ವೇ ? ಪಾಪ, ವಯಸ್ಸಾದ ತಂದೆ ತಾಯಿ. ಮಗಳ್ನ ಒಂದು ಘಟ್ಟಕ್ಕೆ ಸೇರಿಸೊಣಾಂತ ಅಷ್ಟೆ !"

ನಿರ್ಮಲ ಯೋಚಿಸಿದಳು. ಹೌದು, ಉಮಾ ತನ್ನ ಗೆಳತಿ-ತಾವಿಬ್ಬರೂ ಹೂವು ಗಂಧದಂತೆ, ಯಾಕಾಗಬಾರದು? ಅದರಲ್ಲೂ ಅರವಿಂದ ಅಪರಂಜಿಯಂತ ಹವನು. ಅವನಿಗೂ ಒಳ್ಳೆಯ ಹೆಂಡತಿ. ತನಗೂ ಒಳ್ಳೆಯ ಓರಗಿತ್ತಿ.

"ಆಗ್ಲಿ, ನಮ್ಮ ಭಾವನ್ನ ವಿಚಾರಿಸಿ ಹೇಳ್ತೀನಿ..."

ಮಣಿಯಮ್ಮ ಹೊರಟಾಗ ಹೇಳಿದರು. "ನಾಳೆ ನಾಡಿದ್ದು ಇಲ್ಲೇ ಇರ್ತೀನಿ. ವಿಚಾರ್ಸಿ ಹೇಳು...."

ಎಲ್ಲರೂ ಸಂಜೆ ಮಾತಿಗೆ ಕುಳಿತಾಗ ನಿರ್ಮಲ ಬೇಕಾಗಿಯೇ ಮಾತು ತೆಗೆದಳು. ಅನಂತ ಇರಲಿಲ್ಲ.

"ನಾನೊಬ್ಬೇ ಈ ಮನೇಲಿ ಬೇಜಾರಾಗಿಹೋಯ್ತು. ಯಾರೂ ಮದ್ವೆ ಯೋಚನೆ ಮಾಡೋಲ್ವಾ?"

"ನಾನು ಮಾಡ್ಕೋತೀನಿ ತಾಳಿ ಅತ್ತಿಗೆ....ಅನಿತಾ, ರಾಧಾ, ಸುನೀತಾ, ಕಾಮಿನಿ, ಜಯಂತಿ ಇಷ್ಟು ಜನರಲ್ಲಿ ಯಾರನ್ನ ಚೂಸ್ ಮಾಡ್ಲೀಂತ ಯೋಚಿಸ್ತಾ ಇದ್ದೀನಿ...." ಅಮರೇಶ ಹೇಳಿದಾಗ ನಿರ್ಮಲ ನಕ್ಕಳು.

"ಯೋಚಿಸೋ ಹೊತ್ಗೆ ಹುಡುಗಿಯರ ನಂಬರ್ ಇನ್ನೂ ಜಾಸ್ತಿಯಾಗಿರುತ್ತೆ. ನೀನು ಬಿಡು, ಯಾವಾಗ್ಲೂ ಫಾಲಿಂಗ್ ಇನ್ ಅಂಡ್ ಔಟ್ ಆಫ್ ಲವ್ !"

ಎಲ್ಲರೂ ನಕ್ಕರು. ಅಜಯ ಮೌನಿಯಾಗಿದ್ದನು.

"ಏನಯ್ಯಾ ಅರವಿಂದ್ ? ನಿಂದೇನು ?" ಅಶೋಕ ಕೇಳಿದಾಗ ಅರವಿಂದ ಕಳಕಳಿಯಿಂದ ಹೇಳಿದನು.

"ನಾನು ಎಲ್ಲಾ ಅತ್ತಿಗೆಗೆ ಬಿಟ್ಟಿಡ್ತೀನಿ. ಮಾಡ್ಕೊಂದ್ರೆ ಮಾಡ್ಕೊತೀನಿ, ಇಲ್ದಿದ್ರೆ ಇಲ್ಲ."

"ಅಜಯ್, ನೀನು ?"

ನಿರ್ಮಲ ಅವನಿಗೆ ಬೆಂಬಲವಾಗಿ ನಿಂತಳು.

"ಅರವಿಂದಂದಾಗ್ಲಿ ಮುಂಚೆ."

ಅಷ್ಟರಲ್ಲಿ ಅನಂತನೂ ಅಲ್ಲಿಗೆ ಬಂದು ಕುಳಿತಾಗ ನಿರ್ಮಲ ಬೇಕಾಗಿ ಮಾತು ಬೆಳೆಸಿದಳು.

"ಮಣಿಯಮ್ಮ ಬಂದಾಗ ಹೇಳಿದರು. ನನ್ನ ಫ್ರೆಂಡ್ ಉಮಾನ್ನಾ ಯಾಕೆ ಅರವಿಂದಂಗೆ ತಂದ್ಕೋಬಾರ್ದೂಂತಾ–ನೀವೆಲ್ಲಾ ಅವಳನ್ನ ನನ್ನ ಮದ್ವೇಲಿ ನೋಡಿದ್ದೀರಿ....ಗೋತ್ರ ಸರಿಹೋಗತ್ತಂತೆ–ಜಾತಕ ನೋಡ್ಬೇಕೂ–ಹುಡುಗ ಹುಡುಗಿ ಒಪ್ಪಬೇಕೂ...."

ಅಶೋಕ ಹೆಂಡತಿಯ ಮಾತನ್ನು ಅನುಮೋದಿಸಿದನು.

"ರೈಟ್, ಏನಣ್ಣಾ, ಅರವಿಂದನ ಜಾತಕ ಕೊಟ್ಟು ತೋರಿಸ್ಲೀ !"

ಅನಂತ ಆಗಲೆನ್ನುವಂತೆ ತಲೆಯಾಡಿಸಿದನು. ಅರವಿಂದ ಅತ್ತಿಗೆಯ

ಮದುವೆಯಲ್ಲಿ ನೋಡಿದ್ದ ಯುವತಿಯರಲ್ಲಿ ಯಾರು ಉಮಾ ಎಂದು ಯೋಚಿಸ ತೊಡಗಿದನು. ಮಣಿಯಮ್ಮ ಊರಿಗೆ ಹೊರಡುವಾಗ ಅರವಿಂದನ ಜಾತಕ ವನ್ನು ಕೊಂಡೊಯ್ದರು. ಒಂದು ವಾರದಲ್ಲಿ ಜಾತಕ ಕೂಡಿ ಬಂತೆಂದು ಕಾಗದ ಬಂದಿತು. ಯಾವಾಗ ಬರಬೇಕೆಂದು ತಿಳಿಸಿದರೆ ಹುಡುಗಿಯನ್ನು ಕರೆತರುವುದಾಗಿ ಹೇಳಿ ಬರೆದಿದ್ದರು.

ನಿರ್ಮಲನಿಗೆ ಏಳನೆಯ ತಿಂಗಳಲ್ಲಿ ಬಳೆ ತೊಡಿಸುವ ಶಾಸ್ತ್ರವಿದ್ದ ಕಾರಣ, ಕಾವೇರಮ್ಮ ರಂಗನಾಥಯ್ಯ ಬರುವವರಿದ್ದರು. ವೆಂಕತ್ತೆಯೂ ಬರುವುದಾಗಿ ಬರೆದಿದ್ದರು. ಆಗ ಹುಡುಗಿಯನ್ನು ಕರೆತಂದರೆ ವಾಸಿಯೆಂದು ಅನಂತ ಹೇಳಿದನು.

ೕ ೕ ೕ ೕ

ಕಾವೇರಮ್ಮ, ರಂಗನಾಥಯ್ಯ ಮಗಳನ್ನು ನೋಡಿ ಉಬ್ಬಿದರು. ಮಗಳಿ ಗಾಗಿ ಒಳ್ಳೆಯ ಸೀರೆ ತಂದಿದ್ದರು. ವೆಂಕತ್ತೆ ಮುಂಚೆಯೇ ಬಂದಿದ್ದರಿಂದ ಅನಂತನಿಗೆ ಹೇಳಿ ಎಲ್ಲವನ್ನು ಮಾಡಿಸಿದ್ದರು–ನಿರ್ಮಲಳಿಗೊಂದು ಭಾರೀ ಸೀರೆ, ಒಂದು ಜೊತೆ ಚಿನ್ನದ ಬಳೆ ಮಾಡಿಸಿಟ್ಟಿದ್ದರು.

ಬಳೆ ತೊಡಿಸುವ ದಿನ ತಲೆಗೆ ನೀರು ಹಾಕಿಕೊಂಡು ಕೈ ತುಂಬಾ ಬಳೆ ಹಾಕಿಕೊಂಡು ಮೈ ತುಂಬಿದ್ದ ನಿರ್ಮಲ ಆ ಮನೆಯ ಬೆಳಕಾಗಿದ್ದಳು. ಸಂಜೆಗೆ ಅರಿಸಿನ ಕುಂಕುಮಕ್ಕಾಗಿ ಬೇಕಾಗಿಯೇ ಅಮರೇಶನಿಗೆ ಹೇಳಿ ಡಾಲಿಯನ್ನೂ ಅಜಯನಿಗೆ ಹೇಳಿ ರೇಣುಕಾಳನ್ನೂ ಕರೆಸಬೇಕೆಂದಾಗಿತ್ತು. ಅಂದೇ ಉಮನ ತಂದೆ ತಾಯಿ ಉಮಾನನ್ನು ಕರೆತರುವವರಾಗಿದ್ದರು.

ಉಮಾ ಸ್ನೇಹಿತಳನ್ನು ಕಂಡು ಸಂತಸದಿಂದ ಮನದಲ್ಲೇ ಕುಣಿದಾಡಿ ದಳು. "ಸ್ನೇಹಿತರು ಹೀಗೆ ಒಟ್ಟಿಗೆ ಸೇರಿದರೆ ಎಷ್ಟು ಚೆನ್ನಾ!" ಎಂದು ನಿರ್ಮಲಳ ಕೊರಳನ್ನಪ್ಪಿದ್ದಳು.

ಉಮಾನನ್ನು ನೋಡಿ ಅರವಿಂದ ಮೆಚ್ಚಿದನು. ಲಗ್ನ ಮಾತ್ರ ನಿರ್ಮಲಳ ಹೆರಿಗೆಯಾದ ಮೇಲೆಂದಾಯಿತು.

ಸಂಜೆಗೆ ಭಾರಿ ಸೀರೆಯುಟ್ಟು ಅಲಂಕರಿಸಿಕೊಂಡಿದ್ದ ನಿರ್ಮಲಳನ್ನು ಅಶೋಕ ಕಣ್ತುಂಬ ನೋಡಿ ಸಂತೋಷಪಟ್ಟನು. ಅರವಿಂದನಿಗೇಕೋ ಅಳಿದ ತಾಯಿಯ ನೆನಪಾಗಿ ಕಣ್ಣು ತೇವ ಆಯಿತು. ಅಮರೇಶನಿಗೆ ತನ್ನ ಅತ್ತಿಗೆ

ಯಷ್ಟು ಸುಂದರವಾಗಿರುವ ಹೆಣ್ಣು ಪ್ರಪಂಚದಲ್ಲೇ ಇಲ್ಲ ಎನಿಸಿತು. ಅಜಯ ಕಣ್ಣಿನಲ್ಲೇ ನಮಿಸಿದನು.

ರೇಣುಕಾ ಭಾರಿ ಸೀರೆಯುಟ್ಟು ಬಂದಾಗ, ಉಮಾಗೆ ಹೇಳಿ ಅವಳನ್ನು ವಿಚಾರಿಸಿಕೊಳ್ಳುವಂತೆ ಹೇಳಿದಳು. ಡಾಲಿ ಮಗುವನ್ನೆತ್ತಿಕೊಂಡು ಬಂದಾಗ ಅನಂತ ಹುಬ್ಬು ಗಂಟಿಕ್ಕಿದರೂ ಆ ಕಡೆ ಮತ್ತೆ ನೋಡಲಿಲ್ಲ.

ಕಾವೇರಮ್ಮ ಎಲ್ಲರಿಗೂ ತಾಂಬೂಲ ಕೊಡುತ್ತಿದ್ದಾಗ ನಿರ್ಮಲ ರೇಣುಕಾಳನ್ನು ಕರೆದಳು. "ನೀವು ಹೊರಟುಹೋಗ್ಬೇಡಿ....ಇರಿ...."

ಆರತಿಯಾದ ಮೇಲೆ, ತಾಂಬೂಲ ತೆಗೆದುಕೊಂಡವರೆಲ್ಲಾ ಹೋದ ಮೇಲೆ 'ಡಾಲಿ' ತನ್ನ ಯಜಮಾನರಿಗಾಗಿ ಕಾಯುತ್ತಾ ಕುಳಿತಳು. ರೇಣುಕಾ ಉಮಾ ಜೊತೆ ಮಾತನಾಡುತ್ತಿದ್ದಳು.

ನಿರ್ಮಲ ಸಮಯ ಸಾಧಿಸಿ ಅಜಯನನ್ನು ಕರೆದಳು. ಎಲ್ಲರೂ ನೋಡುತ್ತಿರುವಂತೆಯೇ ರೇಣುಕಾಳನ್ನು ಕರೆದಳು.

"ನಮಗೆಲ್ಲಾ ಒಂದು ಗುಡ್ ನ್ಯೂಸ್....ಮೀಟ್ ಮಿಸೆಸ್ ಅಜಯ್, ರೇಣುಕಾ....ನನ್ನ ಓರಗಿತ್ತಿ !" ರೇಣುಕಾಳ ಭುಜದ ಸುತ್ತ ಕೈಹಾಕಿದಳು. ಅನಂತ ಹತ್ತಿರದಲ್ಲಿದ್ದ ಮೇಜನ್ನು ಹಿಡಿದನು. ಬಾಯಿಂದ ಮಾತು ಹೊರಡ ಲಿಲ್ಲ. ಅಶೋಕ ಅನಂತನ ಮುಖ ನೋಡಿದ, ಅರವಿಂದ ಅಮರೇಶನ ಮುಖ ನೋಡಿದ.

"ಬಹಳ ಚೆನ್ನಾಗಿದೆ;ಹೀಗೇನಾ ನೀವು ಮನೆ ಸೊಸೇನಾ ಆದರಿಸೋದೂ!" ನಿರ್ಮಲ ಎಚ್ಚರಿಸಿದಾಗ ಮೊದಲು ನಕ್ಕವನು ಅಮರೇಶ.

"ಹಾರ್ಟೀ ಕಂಗ್ರಾಟ್ಸ್ ಅಜಯ್. ನಿನ್ನ ಮದ್ವೆ ಊಟಕ್ಕೆ ಸೊನ್ನೆ ಸುತ್ತಿಬಿಟ್ಟೇ."

ಅಶೋಕ ನಕ್ಕುಬಿಟ್ಟನು. "ಲೋ ಭಡವಾ ! ಯಾಕೋ ಮುಚ್ಚಿ ಟ್ಟಿದ್ದೀ ? ನಾವೇನು ನಿನ್ನ ಹೆಂಡ್ತೀನ ತಿಂದ್ಬಿಡ್ತಿದ್ವಾ ?"

ಅರವಿಂದ ರೇಣುಕಾಳ ಮುಂದೆ ಬಂದು ನಾಟಕೀಯವಾಗಿ "ವೆಲ್ ಕಂ ಹೋಂ" ಎಂದನು.

ವೆಂಕತ್ತೆ ಕಾವೇರಮ್ಮ ಗುಸುಗುಸು ಮಾತನಾಡಿಕೊಂಡರೂ ನಗುತ್ತಿದ್ದ ರಿಂದ ಆಕ್ಷೇಪಣೆ ಇರಲಿಲ್ಲವೆಂದು ತಿಳಿಯಿತು.

ಅನಂತ ನಿಂತವನು ಹಾಗೇ ಕುರ್ಚಿಯಲ್ಲಿ ಕುಳಿತನು. ನಿರ್ಮಲಳ ಕಣ್ಸನ್ನೆಯಂತೆ ಅಜಯ, ರೇಣುಕಾ ಅವನ ಬಳಿಗೆ ಹೋಗಿ ಕಾಲು ಮುಟ್ಟಿ ನಮಸ್ಕರಿಸಿದಾಗ ಅನಂತ ಹಣೆಯ ಮೇಲೆ ಕೈಯಾಡಿಸಿಕೊಂಡು ಹೇಳಿದನು, "ದೇವರು ಒಳ್ಳೆಯದು ಮಾಡಲಿ."

"ಅಷ್ಟರಲ್ಲಿ ಡಾಲಿಯ ಪತಿ ಬಂದಾಗ ಅಮರೇಶ ಹೊರಗೋಡಿದನು. "ಬನ್ನಿ ಡಾಕ್ಟರ್....ಮೀಟ್ ಮೈ ಬ್ರದರ್ಸ್...." ಎಂದು ಹೇಳಿ ಡಾಲಿಯನ್ನೂ ಕರೆದನು. "ಇವನು ಅರವಿಂದ, ಅಜಯ, ಇವನು ಅಶೋಕ, ಇವನು ಅನಂತ, ಇವ್ರು ಡಾಕ್ಟರ್ ಅಚ್ಚಣ್ಣ, ಇವ್ರು ಅವರ ಪತ್ನಿ ಡಾಲಿ....! ಇಬ್ರೂ ನನಗೆ ಅಕ್ಕ ಭಾವ ಇದ್ದ ಹಾಗೆ !"

ಡಾಲಿ ಎಲ್ಲರಿಗೂ ಕೈ ಮುಗಿದು ತಾಂಬೂಲ ಪಡೆದು ನಿರ್ಮಲನಿಗೆ ಹೇಳಿ ಹೊರಟಳು. ಅನಂತ ಹಾಗೆಯೇ ನೋಡುತ್ತಿದ್ದನು.

ತೌರಿಗೆ ಹೆರಿಗೆಗೆ ಕಳುಹಿಸಬೇಕೆಂದು ಕಾವೇರಮ್ಮ ಕೇಳಿದಾಗ ಅರವಿಂದ ಅಮರೇಶ ಅಜಯ ಒಬ್ಬರ ಮುಖ ಒಬ್ಬರು ನೋಡಿಕೊಂಡರು.

"ಹೇಗಪ್ಪಾ ಇರೋದು ಐದಾರು ತಿಂಗಳು ? ನಮ್ಮನ್ನೂ ಕರ್‍ಕೊಂಡು ಹೋಗೋ ಹಾಗಿದ್ರೆ ಅತ್ತಿಗೇನ ಕರ್‍ಕೊಂಡ್ಹೋಗಿ...." ಅಮರೇಶ ಹೇಳಿದ. ಅಶೋಕ "ಇಲ್ಲಿ ಒಳ್ಳೇ ಡಾಕ್ಟರುಗಳು ಇದ್ದಾರೆ. ಹೆಚ್ಚು ಪ್ರಯಾಣ ಆಯಾಸ ಆಗ್ಬಾರದೂ ಅಂದಿದ್ದಾರೆ—ಇಲ್ಲೇ ಇದ್ರೆ ವಾಸಿ...."

"ಆ ಹೊತ್ತಿಗೆ ನೀವೂ ಇಲ್ಲೇ ಇದ್ದು ಬಾಣಂತನ ಮಾಡಿದರಾಯಿತು-ಈ ಮನೆಯೇನು ಬೇರೇನೇ ನಿಮ್ಗೆ ?" ವೆಂಕತ್ತೆ ಹೇಳಿದಾಗ ಅನಂತನೂ ಅನು ಮೋದಿಸಿದನು.

"ಇಲ್ಲೇ ಇರಲಿ. ನೀವೂ ಇಲ್ಲಿಗೆ ಬಂದ್ಬಿಡ್ಬೋದಲ್ಲಾ !"

ನಿರ್ಮಲಳ ತಾಯಿ ಕಾವೇರಮ್ಮ ಕಣ್ಣಲ್ಲಿ ನೀರು ಹಾಕಿಕೊಂಡರೂ ಮಗಳನ್ನು ಕರೆದು ಹೇಳಿದರು. "ನೋಡು, ಇದಕ್ಕೆ ಸಂಸಾರ ಸಾಗರ ಅನ್ನೋದು....ಇದು ಕ್ಷೀರಸಾಗರ-ಹಾಲ್ಗಡಲು ಕಡೆದ ಹಾಗೆ-ವಿಷಾನೂ ಬರುತ್ತೆ, ಜೊತೆಗೆ ಅಮೃತಾನೂ ಬರುತ್ತೆ—ಅಮೃತ ಕಡೆದಿದ್ದೀಯ ನೀನೂ ನಿಮ್ಮೂ !"

"ಅಮ್ಮಾ, ನೀನು ಹೇಳೋದೂ ನಿಜ. ನಂಗೆ ಮೊದಲು ಇಲ್ಲಿಗೆ ಬಂದಾಗ

ಏನಪ್ಪಾ ಈ ಮನೇನ ಒಂಟಿ ಹೆಣ್ಣಾಗಿ ಹೇಗೆ ನೋಡ್ಕೊಳ್ಳೋದೂಂತ ಹೆದರಿದ್ದೆ. ಈಗ ನೋಡೂ....ಒಬ್ರೂ ನನ್ನ ಕಳಿಸಿಕೊಡೋಕೆ ತಯಾರಿಲ್ಲ....ಕಳಿಸಿದ್ರೂ ನಾನು ಬರೋಕೆ ತಯಾರಿಲ್ಲಪ್ಪಾ. ಇವರನ್ನೆಲ್ಲಾ ಬಿಟ್ಟು ಅಷ್ಟೊಂದು ದಿನ ನಂಗಿರೋಕ್ಕೆ ಆಗೋಲ್ಲ!"

"ಚೆನ್ನಾಯ್ತು ಬಿಡು. ಮಂಗಳನ ಮನೇವ್ರು, ನನ್ನ ಮನೆಗೆ ಮಗಳ್ನ ಕಳಿಸೋಲ್ಲ ಅಂತಾ ಅಂದ್ರೆ. ನೀನು ಅವ್ರು ಕಳಿಸಿದ್ರೂ ನಾನು ಬರೋ ಲ್ಲಾಂತೀ!" ಕಾವೇರಮ್ಮನಿಗೆ ಅಳು ನಗು ಎರಡೂ ಒಟ್ಟಿಗೆ ಬಂತು.

ದಿನಗಳೆದಂತೆ ನಿರ್ಮಲನ ಕೈಯ್ಯಲ್ಲಿ ಯಾವ ಕೆಲಸವೂ ಸಾಗುತ್ತಿರಲಿಲ್ಲ. ನಿರ್ಮಲ ಬಲವಂತದಿಂದ ರೇಣುಕಾಳನ್ನು ಮನೆಗೆ ಕರೆದು ತಂದಿದ್ದಳು. "ನಾಲ್ಕು ದಿನ ಕಷ್ಟ ಆಗುತ್ತೆ, ಆಮೇಲೆ ಅವರುಗಳೆಲ್ಲಾ ನಿನ್ನ ಹೊಂದ್ಕೋ ತಾರೆ. ನಾನು ನಿನ್ನ ಹಾಗೇ ಅಂದ್ಕೋತಾ ಇದ್ದೆ! ಈಗ ನೋಡು!"

ಕ್ರಮೇಣ ಅಮರೇಶ, ಅರವಿಂದ, ಅಶೋಕ ರೇಣುಕಾಳನ್ನು ಮನೆ ಯವಳೆಂದು ಒಪ್ಪಿಕೊಂಡು ಆಗಾಗ ಅವಳ ಬಳಿ ಸಲಿಗೆಯಿಂದ ಮಾತನಾಡುತ್ತಿ ದ್ದರು. ಅನಂತ ತನ್ನ ಸೋಲನ್ನಿನ್ನೂ ಒಪ್ಪಿಕೊಳ್ಳಲು ತಯಾರಿರಲಿಲ್ಲ. ಬರು ಬರುತ್ತಾ ಮೌನಿಯಾಗಿರುತ್ತಿದ್ದನು.

ರೇಣುಕ ಕೆಲಸದ ಹೊರೆ ಕೊಂಚ ತೆಗೆದುಕೊಂಡಿದ್ದರಿಂದ ನಿರ್ಮಲಳಿಗೆ ಅಷ್ಟು ತೊಂದರೆಯಾಗುತ್ತಿರಲಿಲ್ಲ. "ಅತ್ತಿಗೆ, ನೀವು ಬೇಕಾಂದ್ರೆ ರೇಣುಕಾ ಕೆಲ್ಸ ಬಿಟ್ಟಿಡ್ತಾಳೆ!" ಅಜಯ್ ಹೇಳಿದಾಗ ನಿರ್ಮಲ ಕೈಯ್ಯಲ್ಲಿ ಹಿಡಿದು ಹೆಣೆಯುತ್ತಿದ್ದ ಸ್ವೆಟರನ್ನು ಕೆಳಗಿಟ್ಟಳು.

"ಮಾಡಲಿ ಬಿಡಿ ಅಜಯ್....ಬುದ್ಧಿವಂತರು ಕೆಲಸ ಬಿಡಬಾರದು. ಅವಳ ಜಾಣತನ ಆಫೀಸ್‌ನಲ್ಲಿ ಉಪಯೋಗಿಸಬೇಕು. ನನ್ನ ನೋಡೀ.... ನಂಗೆ ಆ ಕೆಲ್ಸ ಎಲ್ಲಾ ಬೇಜಾರು. ಮನೇಲಿ ಏನ್ಬೇಕಾದ್ರೂ ಮಾಡ್ತೀನಿ. ಅವಳು ಆಫೀಸಿಗೇ ಭೂಷಣ! ಅದ್ಯಾಕೆ ಕೆಲಸ ಬಿಡಬೇಕು? ಅರವಿಂದನ ಮದ್ವೆಯಾದ್ರೆ ಉಮಾ ಇರ್ತಾಳಲ್ಲಾ ನನ್ನ ಜೊತೆ!"

ನಿರ್ಮಲಳ ಹೆರಿಗೆಯ ಹೊತ್ತಿಗೆ ಕಾವೇರಮ್ಮ, ವೆಂಕತ್ತೆ ಬಂದಿಳಿದರು. ಆಸ್ಪತ್ರೆಯ ಆವರಣದಲ್ಲಿ ಐವರು ಅಣ್ಣತಮ್ಮಂದಿರು ಒಟ್ಟಿಗೆ ಆತಂಕದ ಹೊರೆ ಹೊತ್ತು ಕುಳಿತಿದ್ದುದು ಕಂಡು ವೆಂಕತ್ತೆ ಕಣ್ಣು ಒರೆಸಿಕೊಂಡರು.

ನಿರ್ಮಲ ಹೆಣ್ಣುಮಗುವಿನ ತಾಯಿಯಾದಾಗ ಅವರೆಲ್ಲರಿಗೂ ಸ್ವರ್ಗದ ಬಾಗಿಲೇ ತೆರೆದಂತಾಗಿತ್ತು. ಮಗುವನ್ನು ನೋಡಲು ಮೊದಲು ಬಂದವನು ಅಮರೇಶ.

"ಹಲ್ಲೋ ಬೇಬಿ ಅತ್ತಿಗೆ....ಏಳೂವರೆ ಪೌಂಡಿದ್ದಾಳೆ. ಅಳೋದು ನೋಡಿದ್ರೆ ಅಶೋಕನ ಟೆಂಪರ್ ಹೋಲ್ತಾಳೆ! ಅಂದ್ಹಾಗೆ ಇಲ್ಲಿ ವಾರ್ಡ್‌ನಲ್ಲಿ ಮಲ್ಲಿಕಾಂತ ನರ್ಸ್ ಬರ್ತಾಳೆ....ನೋಡಿ ಎಷ್ಟು ಚೆನ್ನಾಗಿದ್ದಾಳೆ ಗೊತ್ತಾ, ಅವ್ಳ ಮೇಲೆ ಕಣ್ಣಿಟ್ಟಿರಿ. ನಾನು ಅವ್ಳನ್ನೇ ಮದ್ವೆ ಆಗೋಣಾಂತ ಇದ್ದೀನಿ." ಅವನ ಮಾತಿಗೆ ನಿರ್ಮಲ ನಸುನಕ್ಕಳು. "ತಾಳು, ಹನ್ನೊಂದು ದಿನಗಳಲ್ಲಿ ಇನ್ಯಾರು ಸಿಕ್ತಾರೋ ನೋಡೋಣ."

ಅನಂತರ ಬಂದವನು ಅರವಿಂದ "ಅತ್ತಿಗೆ ಮೂಗು, ಬಾಯಿಯೆಲ್ಲಾ ನಮ್ಮ ತಾಯಿದು ಇದ್ಹಾಗೆ ಇದೆ....ಯಾರಿಗ್ಗೊತ್ತು ನಮ್ಮನ್ನೆಲ್ಲಾ ಬಿಟ್ಟಿರಲಾರ್ದೆ ತಿರ್ಗಾ ಮಗುವಾಗಿ ನಮ್ಜೊತೆ ಇರೋಕೆ ಬಂದ್ಲೇನೋ, ಅಲ್ಲಾ ?" ಮಗುವನ್ನು ಕಣ್ತುಂಬಾ ನೋಡಿ ಕೈಗೆ ಮುತ್ತಿಟ್ಟನು.

ಅಜಯ್, ರೇಣುಕಾ ಬಂದು ನುಗುವನ್ನು ನೋಡಿ ಅವಳ ಕೈಗೆ ಬೆಳ್ಳಿಯ ಗಿಲಿಕೆ ಕೊಟ್ಟು, ದಿನ ಹಾಕುವ ಬಟ್ಟೆಗಳ ಪುಟ್ಟ ಗಂಟನ್ನೇ ಮಗುವಿಗಾಗಿ ಇಟ್ಟು ಹೋದರು.

"ನಿಮ್ದು ಯಾವಾಗ ?" ನಿರ್ಮಲ ಕೇಳಿದಾಗ ರೇಣುಕಾ ಉತ್ತರಿಸಿದಳು. "ನಾವು ಕೆಲಸದಲ್ಲಿ ಮಗ್ನರಾಗಿರೋರು; ನಮಗಿನ್ನೂ ಅದರ ಅವಶ್ಯಕತೆಯಿಲ್ಲ. ಇದ್ದಾಳಲ್ಲ ಈ ಸುಂದರಿ ಸಾಕು !" ಮಗುವಿನ ಕೆನ್ನೆಗೆ ಮುತ್ತಿಟ್ಟಳು. ಅನಂತ ಬಾರದೇ ಇದ್ದುದು ಕಂಡು ನಿರ್ಮಲಳ ಮನಸ್ಸು ಮುದುರಿತು. ತನ್ನನ್ನು ಮನೆಯವಳೆಂದು ಒಪ್ಪಿಕೊಳ್ಳಲು ಬಹಳ ದಿನವಾಯಿತು. ಇನ್ನು ಈ ಹೊಸ ಅತಿಥಿಯನ್ನು ಒಪ್ಪಿಕೊಳ್ಳುವನೇ ? ಅದಕ್ಕೂ ಅವರ ಅನುಮತಿ ತೆಗೆದುಕೊಳ್ಳಬೇಕಿತ್ತೇನೊ ? ಪಕ್ಕದಲ್ಲಿ ಮಗಳನ್ನೇ ನೋಡುತ್ತಿದ್ದ ಅಶೋಕನನ್ನು ಕೇಳಿದಳು.

"ಎಲ್ಲಿ ಅನಂತಣ್ಣ ಬರಲಿಲ್ಲವಲ್ಲಾ ! ಮೈ ಚೆನ್ನಾಗಿದೆ ತಾನೇ ?"

"ಬರಬಹುದು. ನೀನು ಆಸ್ಪತ್ರೆಗೆ ಸೇರಿದಾಗಿನಿಂದ ಈ ಊರಲ್ಲಿ ಎಷ್ಟು

ದೇವಸ್ಥಾನಗಳಿವೆಯೋ ಅಷ್ಟಕ್ಕೂ ಹೋಗಿ ಬಂದಾಯ್ತು ! ವಿಚಿತ್ರ ಮನುಷ್ಯ ಅವನು !" ಅಶೋಕ ಮಗಳ ಕೈ ಸವರಿದನು.

ಕೊನೆಗೆ ಅನಂತ ಬಂದಾಗ ನಿರ್ಮಲಳ ಎದೆ ಹಗುರವಾಯಿತು. ಬಂದವನೇ ನಿರ್ಮಲಳ ಕೈಗೆ ದೇವರ ಪ್ರಸಾದವಿತ್ತು ಮಲಗಿದ್ದ ಮಗುವನ್ನು ಕ್ಷಣಕಾಲ ನೋಡಿದನು. ನಿದ್ದೆಯಲ್ಲಿ ಕೈಕಾಲು ಬಡಿದು ಸುಮ್ಮನಾದಾಗ ಅವನ ಮುಖ ಮೃದುವಾಯಿತು. ಅದರ ಕೆನ್ನೆ, ಕೈ ಸವರಿದನು. ಏನನಿಸಿತೋ ಏನೋ, ಬಗ್ಗಿ ಮಗುವನ್ನು ಹೂವಿನಂತೆ ಮೃದುವಾಗಿ ಕೈಗೆತ್ತಿಕೊಂಡು ಎದೆ ಗೊತ್ತಿಕೊಂಡನು.

"ಎಲ್ರೂ ಒಬ್ರೊಬ್ಬರನ್ನ ಜೊತೆಗಾತಿಯಾಗಿ ಹುಡುಕಿಕೊಂಡರು. ನಾನು ಒಬ್ನೇ ಆಗೋದ್ನಲ್ಲಾ ಅಂದ್ಕೊಂಡಿದ್ದೆ....ನೀನು ಬಂದ್ಬಿಟ್ಟೆಲ್ಲಾ ನನ್ನ ಜೊತೆಗಾತಿಯಾಗಿ ! ಇನ್ಮೇಲೆ ನಾನೂ ನೀನೂ ಜೋಡಿ. ನನ್ಬಿಟ್ಟು ಹೋದೀಯ !" ಮಗುವಿನ ಕೆನ್ನೆಗೆ ಕೆನ್ನೆ ತಂದಾಗ ಅನಂತನ ಕಣ್ಣು ತೇವವಾಗಿದ್ದು ನಿರ್ಮಲ ನೋಡಿದಳು. ಅವಳಿಗೆ ಗಂಟಲುಬ್ಬಿ ಬಂದರೂ ಮುಖದಲ್ಲಿ ಮಂದಹಾಸ ಮಿನುಗಿತ್ತು. ಹೀಗೆಯೇ ಸಂಸಾರದಲ್ಲಿ ಹರ್ಷದ ಹೊನಲು ಹರಿಯಲಿ ಎಂದುಕೊಂಡಳು.

# ನಮ್ಮ ಪ್ರಕಟನೆಗಳು

| | | |
|---|---|---|
| ಸ್ವಪ್ನದ ಹೊಳೆ | ಡಾ|| ಶಿವರಾಮ ಕಾರಂತ | 10—00 |
| ಸ್ಮೃತಿಪಟಲದಿಂದ | " | 20—00 |
| ಅದೇ ಊರು; ಅದೇ ಮರ | " | 10—00 |
| ಕನ್ನಡಿಯಲ್ಲಿ ಕಂಡಾತ | " | 9—00 |
| ಮೈಮನಗಳ ಸುಳಿಯಲ್ಲಿ | " | 8—00 |
| ಸರಸಮ್ಮನ ಸಮಾಧಿ | " | 4—00 |
| ಒಂಟಿ ದನಿ | " | 10—00 |
| ಅಪೂರ್ವ ಪಶ್ಚಿಮ | " | 10—00 |
| ಕರುಳಿನ ಕರೆ | " | 8—00 |
| ಚೋಮನ ದುಡಿ | " | 3—00 |
| ಗರ್ಭಗುಡಿ (ನಾಟಕ) | " | 4—00 |
| ನನ್ನ ಭಯಾಗ್ರಫಿ | ಬೀಚಿ | 30—00 |
| ಸಕ್ಕರೆ ಮೂಟೆ | " | 6—00 |
| ಮನೆತನದ ಗೌರವ | " | 6—00 |
| ಮೋಡಮ್ಮನ ಗಂಡ | " | 5—00 |
| ನರಪ್ರಾಣಿ | " | 4—00 |
| ಸತ್ತವನು ಎದ್ದು ಬಂದಾಗ | " | 3—00 |
| ಸತೀ ಸೂಳೆ | " | 6—00 |
| ಅಮ್ಮನವರ ಇಚ್ಛಾ | " | 6—00 |
| ಹರಿದ ಹೊನಲು | ಉಷಾ ನವರತ್ನರಾಮ್ | 4—00 |
| ಹೊಸ ರಾಗ | " | 5—00 |
| ಆಸರೆ | " | 6—00 |
| ಹ್ಯಾಪಿ ಬರ್ತ್‌ಡೇ | " | 6—00 |
| ಬಂಧನ | " | 6—00 |
| ಒಲವಿನ ಬದುಕು | " | 5—00 |
| ಹೊಂಬಿಸಿಲು | " | 6—00 |

| | | |
|---|---|---|
| ಆಂದೋಲನ | ಉಷಾ ನವರತ್ನರಾಮ್ | 6—00 |
| ಆಶ್ವಾಸನ | " | 6—00 |
| ಸವತಿ ಕಸ್ತೂರಿ | ಎಂ. ಸಿ. ಪದ್ಮಾ | 6—00 |
| ಪರಿಣಯ | " | 6—00 |
| ಪ್ರೇಮಮಯಿ | " | 8—00 |
| ಮಂಗಳಯಾತ್ರೆ | " | 6—00 |
| ಸುಪ್ರಭಾತ | " | 6—00 |
| ಮಂಜು ಕರಗಿತು | " | 6—00 |
| ಶಶಿಕಿರಣ | " | 6—00 |
| ಮನ ಬೆಳಗಿತು | " | 6—00 |
| ಪ್ರೇಮ ವಸಂತ | " | 6—00 |
| ಹುತ್ತದ ಸುತ್ತ | ಅಶ್ವಿನಿ | 8—00 |
| ನಾನು ಲೇಖಕಿ ಅಲ್ಲ | " | 4—00 |
| ವಿಜೇತ | " | 6—00 |
| ಮೃಗತೃಷ್ಣಾ | " | 8—00 |
| ಬೆಸುಗೆ | " | 8—00 |
| ಕಪ್ಪುಕೊಳ | " | 6—00 |
| ಮರಳಿ ಜೀವನ | ಪುಷ್ಪಾ ಎನ್. ರಾವ್ | 6—00 |
| ಮುಕುರ | " | 8—00 |
| ವರಪುತ್ರಿ | " | 6—00 |
| ಮಮತಾ ಮಂದಿರ | " | 6—00 |
| ಪರಿವರ್ತಿನಿ | " | 6—00 |
| ಬಂಗಾರದ ಸರಪಣಿ | " | 6—00 |
| ಕಲಾದರ್ಶಿ | ಎಂ. ಕೆ. ಇಂದಿರಾ | 6—00 |
| ಬ್ರಹ್ಮಚಾರಿ | " | 5—00 |
| ತಪೋವನದಲ್ಲಿ | " | 6—00 |
| ಮನ ತುಂಬಿದ ಮಡದಿ | " | 4—00 |

| | | |
|---|---|---|
| ಅನುರಾಗಿಣಿ | ವಿಶಾಲಾಕ್ಷಿ ದಕ್ಷಿಣಾಮೂರ್ತಿ | 6—00 |
| ವಸುಮತಿ | " | 6—00 |
| ದುಂಬಿ ಮುಟ್ಟದ ಹೂ | ಹೆಚ್. ಜಿ. ರಾಧಾದೇವಿ | 6—00 |
| ಮರಳಿ ತುಂಬಿದ ಮಡಿಲು | " | 6—00 |
| ಚಂದನ ಕಸ್ತೂರಿ | " | 6— 00 |
| ಶುಭ ವಸಂತ | " | 6—C0 |
| ಸುವರ್ಣ ಸೇತುವೆ | " | 5—0C |
| ಬೆಳಕಿನೆಡೆಗೆ | ಭಾರತೀಸುತ | 10—00 |
| ಬೆಂಕಿಯ ಮಳೆ | " | 8—00 |
| ಎಡಕಲ್ಲು ಗುಡ್ಡದ ಮೇಲೆ | " | 5—00 |
| ಬಯಲುದಾರಿ | " | 10—00 |
| ಮನೋನಂದನ | ಡಾ॥ ಎಂ. ಶಿವರಾಮ್ | 12—00 |
| ಹರಿದ ಉಯಿಲು | " | 8—00 |
| ಕಾರ್ತೀಕ ಸೋಮವಾರ | " | 5—00 |
| ರೂಪದರ್ಶಿ | ಕೆ. ವಿ. ಅಯ್ಯರ್ | 10—00 |
| ಕೈಲಾಸಂರವರ ಸ್ಮರಣೆ | " | 4—00 |
| ಒದುಕು–ಬೆಳದಿಂಗಳು | ಕೃಷ್ಣಮೂರ್ತಿ ಪುರಾಣಿಕ | 6—00 |
| ಏಕದಾರಿ | " | 6—00 |
| ಸಂಶಯದ ಸುಳಿ | ಮ. ನ. ಮೂರ್ತಿ | 5—00 |
| ಕ್ಷಮೆ ಇರಲಿ ಪ್ರಭುವೆ | ಸೂರ್ಯನಾರಾಯಣ ಚಡಗ | 8—C0 |
| ಹೆಣ್ಣು–ಹೊನ್ನು–ಮಣ್ಣು | " | 8—00 |
| ದೇವರ ಹೆಂಡತಿ | " | 6—00 |
| ಗಾಂಪಾಯಣ | ದಾಶರಥಿ ದೀಕ್ಷಿತ್ | 4—00 |
| ಇಂದ್ರಿ–ಸುಂದ್ರಿ | " | 3—00 |
| ಅನುರಾಗ ಸುಧಾ | " | 4—00 |
| ಗೃಹಿಣಿ | ಶ್ರೀನಿವಾಸರಾವ್ ಕೊರಟಿ | 7—00 |
| ಧರ್ಮದೀಕ್ಷೆ | " | 6—00 |